ಶನಿವಾರ, ಜುಲೈ 26, 2025| ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ದಾಖಲೆ ಮುರಿದ ಮೋದಿ

ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಸತತ 4078 ದಿನ ಪೂರೈಸಿದ್ದಾರೆ. ಈ ಮೂಲಕ ಮಾಜಿ ಪ್ರಧಾನಿ ಇಂದಿರಾ ಗಾಂಧಿ (4077 ದಿನ) ಅವರ ಹೆಸರಲ್ಲಿದ್ದ ದಾಖಲೆಯನ್ನು ಮುರಿದಿದ್ದಾರೆ



ರೂಟ್ ಶತಕ

ಭಾರತ ವಿರುದ್ಧದ ನಾಲ್ಕನೇ ಟೆಸ್ಟ್‌ನಲ್ಲಿ ಇಂಗ್ಲೆಂಡ್‌ನ ಜೋ ರೂಟ್ 38ನೇ ಶತಕ ದಾಖಲಿಸಿದರು. ಈ ಮೂಲಕ ಟೆಸ್ಟ್ ಕ್ರಿಕೆಟ್ ರನ್ ಗಳಿಕೆಯಲ್ಲಿ ಎರಡನೇ ಸ್ಥಾನಕ್ಕೆ ಏರಿದರು



150	248
ರನ್	ಎಸೆತ


YESHWANTHPUR, BENGALURU
RERA No: PRM/KA/RERA/1251/309/PR/110625/007817, available at website: http://rera.karnataka.gov.in.
GODREJ TIARA
Discover an exquisite grand clubhouse where leisure sparkles effortlessly
GODREJ TIARA
YESHWANTHPUR, BENGALURU
Lavish 3 BHK residences starting at ₹3.51 Cr*
Artist's impression and not actual site image.
Excellent Connectivity
Exquisite Sky Level Amenities
Perennial Green Views
Infinity Pool
SCAN TO KNOW MORE
CREDAI BENGALURU
8506047779 / 8506048487
Godrej | PROPERTIES
The Project is Registered as "GODREJ TIARA" with RERA No: PRM/KA/RERA/1251/309/PR/110625/007817, available at website: http://rera.karnataka.gov.in.Site Address: GODREJ TIARA, MUNICIPAL NO : 8/9(OLD NO. 4,5,6,7,8,9 & 12), CTS NO.473 & 474, TUMKUR MAIN ROAD, CTS NO.473 & 474, TUMKUR MAIN ROAD, WARD NO.38, PID NO.11-50-8/9, BANGALORE, BENGALURU NORTH, BENGALURU URBAN, KARNATAKA - 560022. The images contain artist's impression for representative purpose only. The Sale is subject to terms of Application Form and Agreement for Sale. All specifications of the unit shall be as per the final agreement between the Parties. Recipients are advised to apprise themselves of the necessary and relevant information of the project prior to making any purchase decisions. The official website of Godrej Properties Ltd. is www.godrejproperties.com. Please do not rely on the information provided on any other website. *T&C apply

ಶನಿವಾರ, ಜುಲೈ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 206 | ಪುಟ 24

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

'ಯಾವ ಹುದ್ದೆಯೂ ಬೇಡ'

ನಿವೃತ್ತಿ ಬಳಿಕ ತಾವು ಯಾವುದೇ ಸರ್ಕಾರಿ ಹುದ್ದೆಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಹೇಳಿದರು. ಈ ವರ್ಷ ನವೆಂಬರ್‌ನಲ್ಲಿ ಅವರು ನಿವೃತ್ತಿ ಹೊಂದಲಿದ್ದಾರೆ



ಆನೆ ದಾಳಿಗೆ ತುತ್ತಾದವರು

ಆನೆಗಳ ದಾಳಿಯಿಂದಾಗಿ, ಭಾರತದಲ್ಲಿ 2019ರಿಂದ 2023ರ ಅವಧಿಯದಲ್ಲಿ ಒಟ್ಟು 2,869 ಮಂದಿ ಸಾವಿಗೆ ಈಡಾಗಿದ್ದಾರೆ. ಕರ್ನಾಟಕದಲ್ಲಿ 160 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ



ಸೆನ್ಸೆಕ್ಸ್ 81,463 | ನಿಫ್ಟಿ 24,837 | $/₹ 86.52 | ಚಿನ್ನ (Std. 10g) ₹1,03,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,22,500 (ಬೆಂಗಳೂರು)

'ವಿದ್ಯಾರ್ಥಿ ಆತ್ಮಹತ್ಯೆ ತಪ್ಪಿಸಿ'

15 ಅಂಶಗಳ ಮಾರ್ಗಸೂಚಿ ರೂಪಿಸಲು ಸಂಬಂಧಪಟ್ಟವರಿಗೆ 'ಸುಪ್ರೀಂ' ನಿರ್ದೇಶನ

ನವದೆಹಲಿ (ಪಿಟಿಐ): ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳ ಹೆಚ್ಚಳವನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್, ದೇಶದಾದ್ಯಂತ ಜಾರಿಯಾಗುವ ಮಾರ್ಗಸೂಚಿಗಳನ್ನು ಶುಕ್ರವಾರ ಬಿಡುಗಡೆ ಮಾಡಿದೆ.

'ಶಿಕ್ಷಣ ಸಂಸ್ಥೆಗಳು, ಕೋಚಿಂಗ್ ಸೆಂಟರ್‌ಗಳು ಮತ್ತು ವಿದ್ಯಾರ್ಥಿ ಕೇಂದ್ರಿತ ಪರಿಸರಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗಟ್ಟುವಿಕೆಗೆ ದೇಶದಲ್ಲಿ ಶಾಸನ ಮತ್ತು ನಿಯಂತ್ರಣ ವ್ಯವಸ್ಥೆ ಇಲ್ಲ' ಎಂದು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಗೊಂಡ ಪೀಠ ಹೇಳಿದೆ.



ಸಂಬಂಧಪಟ್ಟ ಪ್ರಾಧಿಕಾರವು ಸೂಕ್ತ ಕಾನೂನು ಅಥವಾ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವವರೆಗೂ ತಾನು ಹೊರಡಿಸಿರುವ 15 ಮಾರ್ಗಸೂಚಿಗಳು ಜಾರಿಯಲ್ಲಿರಲಿವೆ ಎಂದು ಪೀಠವು ಸ್ಪಷ್ಟಪಡಿಸಿದೆ.

ಉಮ್ಮೀದ್ ಕರಡು ಮಾರ್ಗಸೂಚಿಗಳು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗೆ ಜಾರಿಯಲ್ಲಿರುವ 'ಮನೋದರ್ಪಣ' ಕಾರ್ಯಕ್ರಮ ಮತ್ತು ಆತ್ಮಹತ್ಯೆ ತಡೆ ರಾಷ್ಟ್ರೀಯ ಕಾರ್ಯತಂತ್ರದಲ್ಲಿರುವ ಅಂಶಗಳನ್ನು ಪಡೆದು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಏಕರೂಪದ ನೀತಿಯನ್ನು ಅಳವಡಿಸಿಕೊಳ್ಳಲು ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶಿಸಿದೆ.

ಈ ನೀತಿಯನ್ನು ಪ್ರತಿವರ್ಷವೂ ಪರಿಶೀಲಿಸಿ ಪರಿಷ್ಕರಿಸಲಾಗುತ್ತದೆ ಮತ್ತು ಎಲ್ಲ ಶಿಕ್ಷಣ ಸಂಸ್ಥೆಗಳು ತಮ್ಮ ವೆಬ್‌ಸೈಟ್‌ಗಳು ಹಾಗೂ ಸಂಸ್ಥೆಗಳ ಸೂಚನಾ ಫಲಕಗಳಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಕಟಿಸಬೇಕು ಎಂದು ಹೇಳಿದೆ.

ಕೋವಿಡ್-19 ಸಮಯದಲ್ಲಿ ಹಾಗೂ ಆ ಬಳಿಕ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಯೋಗ-ಕ್ಷೇಮಕ್ಕಾಗಿ ಶಿಕ್ಷಣ ಸಚಿವಾಲಯವು 'ಮನೋದರ್ಪಣ' ಕಾರ್ಯಕ್ರಮ ಹಾಗೂ ಶಾಲಾ ವಿದ್ಯಾರ್ಥಿಗಳ ಆತ್ಮಹತ್ಯೆಯನ್ನು ತಡೆಗಟ್ಟುವ ಉದ್ದೇಶದಿಂದ 2023ರಲ್ಲಿ 'ಉಮ್ಮೀದ್' ಕಾರ್ಯಕ್ರಮ ಪ್ರಾರಂಭಿಸಿದೆ ಎಂದು ಪೀಠ ತಿಳಿಸಿದೆ.

▶5

ಮಾರ್ಗಸೂಚಿಯ ಪ್ರಮುಖ ಅಂಶಗಳು

- 100 ಅಥವಾ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳು ಕನಿಷ್ಠ ಒಬ್ಬ ಮನಃಶಾಸ್ತ್ರಜ್ಞ, ಕೌನ್ಸೆಲರ್ ಅಥವಾ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯದ ಬಗ್ಗೆ ತಿಳಿವಳಿಕೆ ಹೊಂದಿರುವ ಸಮಾಜ ಸೇವಕನನ್ನು ನೇಮಿಸಬೇಕು
- ಕಡಿಮೆ ವಿದ್ಯಾರ್ಥಿಗಳನ್ನು ಹೊಂದಿರುವ ಸಂಸ್ಥೆಗಳು ಮಾನಸಿಕ ಆರೋಗ್ಯ ವೃತ್ತಿಪರರೊಂದಿಗೆ ಸಂಪರ್ಕದಲ್ಲಿದ್ದು, ಅವರ ಸೇವೆ ಬಳಸಿಕೊಳ್ಳಬೇಕು
- ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯ ನೀಡುವ ಎಲ್ಲ ಸಂಸ್ಥೆಗಳು ಟ್ಯಾಂಪರ್ ಪ್ರೂಫ್ ಸೀಲಿಂಗ್ ಫ್ಯಾನ್‌ಗಳು ಅಥವಾ ಅದಕ್ಕೆ ಸಮನಾದ ಸುರಕ್ಷತೆ ಹೊಂದಿರುವ ಸಾಧನ ಅಳವಡಿಸಬೇಕು. ಚಾವಣಿಗಳು, ಬಾಲ್ಕನಿಗಳು ಸೇರಿದಂತೆ ಅಪಾಯಕ್ಕೆ ಆಹ್ವಾನ ನೀಡುವ ಪ್ರದೇಶಗಳಿಗೆ ಪ್ರವೇಶವನ್ನು ನಿರ್ಬಂಧಿಸಬೇಕು
- ಎಲ್ಲಾ ಶಿಕ್ಷಣ ಸಂಸ್ಥೆಗಳು ಅದರಲ್ಲೂ ಮುಖ್ಯವಾಗಿ ಕೋಚಿಂಗ್ ಸೆಂಟರ್‌ಗಳು ವಿದ್ಯಾರ್ಥಿಗಳನ್ನು ಶೈಕ್ಷಣಿಕ ಸಾಧನೆ, ಅಂಕಗಳ ಆಧಾರದ ಮೇಲೆ ಪ್ರತ್ಯೇಕ ಬ್ಯಾಚ್‌ಗಳನ್ನಾಗಿ ವಿಂಗಡಿಸಿ ಅವಮಾನಕ್ಕೆ ಗುರಿಪಡಿಸಬಾರದು
- ಲೈಂಗಿಕ ದೌರ್ಜನ್ಯ, ಕಿರುಕುಳ, ರ‍್ಯಾಗಿಂಗ್ ಮತ್ತು ಜಾತಿ, ವರ್ಗ, ಲಿಂಗ, ಅಂಗವೈಕಲ್ಯ, ಧರ್ಮ ಅಥವಾ ಜನಾಂಗೀಯತೆಯ ಆಧಾರದ ಮೇಲೆ ನಡೆಯುವ ತಾರತಮ್ಯ ಪ್ರಕರಣಗಳನ್ನು ತಡೆಗಟ್ಟಲು ಎಲ್ಲಾ ಶಿಕ್ಷಣ ಸಂಸ್ಥೆಗಳು ದೃಢವಾದ, ಗೋಪ್ಯ ಮತ್ತು ಎಲ್ಲರಿಗೂ ಸುಲಭವಾಗಿ ಲಭ್ಯವಾಗುವ ಕಾರ್ಯವಿಧಾನಗಳನ್ನು ಸ್ಥಾಪಿಸಬೇಕು
- ಈ ಎಲ್ಲ ಘಟನೆಗಳು ವರದಿಯಾದ ಸಂದರ್ಭಗಳಲ್ಲಿ ತರಬೇತಿ ಪಡೆದ ಮಾನಸಿಕ ಆರೋಗ್ಯ ವೃತ್ತಿಪರರ ತಕ್ಷಣದ ನೆರವು ಖಚಿತಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಸುರಕ್ಷತೆಗೆ ಆದ್ಯತೆ ನೀಡಬೇಕು
- ಅಂತಹ ಸಂದರ್ಭಗಳಲ್ಲಿ ಸಕಾಲಿಕ ಮತ್ತು ಸಮರ್ಪಕ ಕ್ರಮ ತೆಗೆದುಕೊಳ್ಳಲು ವಿಫಲವಾದರೆ, ಸಂಸ್ಥೆಯ ನಿರ್ಲಕ್ಷ್ಯದಿಂದ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾದರೆ ಅದನ್ನು ಸಾಂಸ್ಥಿಕ ಅಪರಾಧವೆಂದು ಪರಿಗಣಿಸಲಾಗುತ್ತದೆ. ಆ ಬಳಿಕ ಎದುರಾಗುವ ಕಾನೂನು ಪರಿಣಾಮಗಳಿಗೆ ಆಡಳಿತ ಮಂಡಳಿಯನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ

ರಾಜಸ್ಥಾನ: ಶಾಲಾ ಕಟ್ಟಡ ಕುಸಿತ 7 ಮಕ್ಕಳು ಬಲಿ

ಝಾಲಾವಾಢ (ರಾಜಸ್ಥಾನ) (ಪಿಟಿಐ): ಇಲ್ಲಿನ ಸರ್ಕಾರಿ ಶಾಲೆಯಲ್ಲಿ ಶುಕ್ರವಾರ ಬೆಳಿಗ್ಗೆ ಪ್ರಾರ್ಥನೆಗೆಂದು ಮಕ್ಕಳು ಸೇರಿದ್ದ ಸಂದರ್ಭದಲ್ಲೇ ಕಟ್ಟಡದ ಒಂದು ಭಾಗ ಕುಸಿದಿದ್ದು, ಮಣ್ಣಿನಡಿಯಲ್ಲಿ ಸಿಲುಕಿ 7 ಮಂದಿ ಮಕ್ಕಳು ಮೃತಪಟ್ಟು, 28 ಮಂದಿ ಗಾಯಗೊಂಡಿದ್ದಾರೆ.

ಪಿಪಲೋದಿ ಸರ್ಕಾರಿ ಶಾಲೆಯ 6 ಹಾಗೂ 7ನೇ ತರಗತಿಯ ವಿದ್ಯಾರ್ಥಿಗಳ ಕೊಠಡಿಗಳು ಕುಸಿದು, 35ಕ್ಕೂ ಅಧಿಕ ಮಂದಿ ಅವಶೇಷಗಳಡಿಯಲ್ಲಿ ಸಿಲುಕಿಕೊಂಡರು. ಕಾಂಕ್ರೀಟ್ ಸ್ಲ್ಯಾಬ್‌ಗಳು, ಕಲ್ಲುಗಳನ್ನು ಸ್ಥಳೀಯರು, ಪೋಷಕರು ಹಾಗೂ ಶಿಕ್ಷಕರು ತೆರವುಗೊಳಿಸಿ, ಮಣ್ಣಿನಡಿಯಲ್ಲಿ ಸಿಲುಕಿದ್ದ ಮಕ್ಕಳನ್ನು ಹೊರತೆಗೆಯಲು ಅವಿರತ ಶ್ರಮಿಸಿದರು.

▶9

ಅಧಿಕಾರಿಗಳ ವಿರುದ್ಧ ಸ್ಥಳೀಯರ ಆಕ್ರೋಶ

'ಶಾಲೆಯ ದುಃಸ್ಥಿತಿ ಕುರಿತಂತೆ ಈ ಹಿಂದೆಯೇ ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗೆ ಮಾಹಿತಿ ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ' ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದ್ದಾರೆ.

▶9

ಅಭ್ಯರ್ಥಿ ಆಯ್ಕೆಗೆ ಕಸರತ್ತು ಶುರು

ನವದೆಹಲಿ (ಪಿಟಿಐ): ಉಪರಾಷ್ಟ್ರಪತಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭವಾಗುತ್ತಿದ್ದಂತೆ, ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳ ಮೈತ್ರಿಕೂಟದಲ್ಲೂ ಚಟುವಟಿಕೆಗಳು ಗರಿಗೆದರಿವೆ.

ವಿವರ ▶5

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಒಬಿಸಿ ಸಮಸ್ಯೆ ಅರಿತಿದ್ದರೆ ಮೊದಲೇ ಜಾತಿಗಣತಿ: ರಾಹುಲ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಈ ಹಿಂದೆ ಇತಿಹಾಸ ತಿಳಿದುಕೊಳ್ಳದೇ ಇದ್ದಿದ್ದು ನನ್ನ ತಪ್ಪು. ನನಗೆ ಮೊದಲೇ ಒಬಿಸಿ ಸಮುದಾಯದ ಸಮಸ್ಯೆಗಳ ಅರಿವಿದ್ದಿದ್ದರೆ, ಬಹಳ ಹಿಂದೆಯೇ ಜಾತಿ ಜನಗಣತಿಯನ್ನು ನಡೆಸುತ್ತಿದ್ದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಪಕ್ಷದ ಒಬಿಸಿ ಘಟಕ ಶುಕ್ರವಾರ ಇಲ್ಲಿ ಏರ್ಪಡಿಸಿದ್ದ ಒಬಿಸಿಯ 'ಭಾಗೀದಾರಿ ನ್ಯಾಯ ಸಮ್ಮೇಳನ'ದಲ್ಲಿ ಪಾಲ್ಗೊಂಡಿದ್ದ ಅವರು, ಒಬಿಸಿಯವರ ಸಮಸ್ಯೆಗಳು ಗೌಪ್ಯವಾಗಿರುತ್ತವೆ ಮತ್ತು ಸುಲಭವಾಗಿ ಕಾಣಿಸುವುದಿಲ್ಲ ಎಂದರು.



ಸಮ್ಮೇಳನದಲ್ಲಿ ರಾಹುಲ್ ಗಾಂಧಿ–ಸಿದ್ದರಾಮಯ್ಯ ಆಪ್ತ ಮಾತುಕತೆ...

▶9

ಎಸ್‌ಐಟಿ ಚಟುವಟಿಕೆ ಚುರುಕು

ಪ್ರಜಾವಾಣಿ ವಾರ್ತೆ

ಮಂಗಳೂರು/ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದಲ್ಲಿ ವರ್ಷಗಳ ಹಿಂದೆ ನಡೆದಿದೆ ಎನ್ನಲಾದ ಅಸಹಜ ಸಾವು ಪ್ರಕರಣಗಳಿಗೆ ಸಂಬಂಧಿಸಿದ ತನಿಖೆಗೆ ನಿಯೋಜನೆಗೊಂಡಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಶುಕ್ರವಾರ ಕಾರ್ಯಾಚರಣೆ ಆರಂಭಿಸಿದ್ದು ಸತತ ಸಭೆಗಳನ್ನು ನಡೆಸಿದೆ.

ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಲಾಗಿದೆ. ಪೊಲೀಸ್ ನೇಮಕಾತಿ ವಿಭಾಗದ ಡಿಐಜಿ ಎಂ.ಎನ್.ಅನುಚೇತ್ ಮತ್ತು ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ ಸದಸ್ಯರಾಗಿದ್ದಾರೆ.



ಎಸ್‌ಐಟಿ ತನಿಖೆಗೆ ಕಚೇರಿ ತೆರೆಯಲು ಬೆಳ್ತಂಗಡಿಯಲ್ಲಿ ಗುರುತಿಸಲಾದ ಪೊಲೀಸ್ ಇಲಾಖೆ ಕಟ್ಟಡ

▶8

ಸೂರ್ಯೋದಯ: 6:04 ಸೂರ್ಯಾಸ್ತ : 6:49 ಚಂದ್ರೋದಯ: ಬೆ. 6:21 ಚಂದ್ರಾಸ್ತ: ರಾ. 7:28 | ಶುಕ್ರವಾರದ ಉಷ್ಣಾಂಶ : ಗರಿಷ್ಠ 27° ಕನಿಷ್ಠ 20°
ಶನಿವಾರ ● ಜುಲೈ 26, 2025
ಶನಿವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ ಭಾನುವಾರ 29° : 20° ಸೋಮವಾರ 29° : 20° ಮಂಗಳವಾರ 29° : 20°
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ಸಾಧಾರಣ ಮಳೆ ಸಾಧ್ಯತೆ

ಉದ್ಯಾನಗಳಲ್ಲಿ ಎಲೆ ಗೊಬ್ಬರ ತಯಾರಿಕಾ ಘಟಕ

ಬೆಂಗಳೂರು: ನಗರದ ಎಲ್ಲ ಉದ್ಯಾನಗಳಲ್ಲಿ ಎಲೆ ಗೊಬ್ಬರ ತಯಾರಿಕಾ ಘಟಕಗಳನ್ನು ನಿರ್ಮಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ ದಕ್ಷಿಣ ವಲಯದ ಕಚೇರಿಯಲ್ಲಿ ನಾಗರಿಕರಿಂದ ದೂರು ಸ್ವೀಕರಿಸಿದ ಅವರು, ಉದ್ಯಾನದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮೂಲದಲ್ಲಿಯೇ ಸಂಸ್ಕರಿಸಿ ಗೊಬ್ಬರ ಮಾಡಿ, ಉದ್ಯಾನಗಳಿಗೆ ಬಳಸಿಕೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು.

ವಲಯಕ್ಕೊಂದು 'ಶ್ರೆಡ್ಡರ್' ಯಂತ್ರಗಳನ್ನು ಅಳವಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ವಿವಿ ಪುರದ ಸಜ್ಜನ್ ರಾವ್ ವೃತ್ತದಲ್ಲಿ ಬಿಡಾಡಿ ದನಗಳ, ಪಾರಿವಾಳಗಳ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಪರಿಶೀಲನಾ ವರದಿ ನೀಡುವಂತೆ ಅಧಿಕಾರಿಗಳಿಗೆ ಮಹೇಶ್ವರ್ ರಾವ್ ಸೂಚಿಸಿದರು.

ಗಾಂಧಿಬಜಾರ್ ಕಾರ್ ಪಾರ್ಕಿಂಗ್ ಕಟ್ಟಡ ಸಿದ್ಧ

ಬೀದಿ ಬದಿ ವ್ಯಾಪಾರಿಗಳಿಗೆ ಒಂದೇ ರೀತಿಯ ಛತ್ರಿ ನೀಡಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಸ್ಮಾರ್ಟ್ ಸಿಟಿ' ಯೋಜನೆ ವತಿಯಿಂದ ಗಾಂಧಿಬಜಾರ್‌ನಲ್ಲಿ ನಿರ್ಮಿಸಲಾಗಿರುವ ಬಹು ಅಂತಸ್ತಿನ ಕಾರ್ ಪಾರ್ಕಿಂಗ್ ಸಿದ್ಧಗೊಂಡಿದ್ದು, ಶೀಘ್ರವೇ ಸಾರ್ವಜನಿಕರಿಗೆ ಲಭ್ಯವಾಗಲಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಶುಕ್ರವಾರ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿ, 'ಉಪ ಮುಖ್ಯಮಂತ್ರಿಯವರ ಸಮಯ ನಿಗದಿಪಡಿಸಿಕೊಂಡು, ಬಹು ಅಂತಸ್ತಿನ ಕಾರ್ ಪಾರ್ಕಿಂಗ್ ಕಟ್ಟಡದ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು' ಎಂದರು.

₹22 ಕೋಟಿ ವೆಚ್ಚದಲ್ಲಿ ಬಹು ಅಂತಸ್ತಿನ ಕಾರ್ ಪಾರ್ಕಿಂಗ್ ನಿರ್ಮಾಣವಾಗಿದೆ. ತಳಮಹಡಿ ಹಾಗೂ ನೆಲಮಹಡಿಯಲ್ಲಿ ವ್ಯಾಪಾರಕ್ಕಾಗಿ 50 ಮಳಿಗೆಗಳನ್ನು ನಿರ್ಮಿಸಲಾಗಿದೆ. ಮೊದಲನೇ ಅಂತಸ್ತಿನಿಂದ ನಾಲ್ಕನೇ ಅಂತಸ್ತಿನವರೆಗೆ ಪ್ರತಿ ಅಂತಸ್ತಿಗೆ 31 ವಾಹನದಂತೆ, ಒಟ್ಟು 124 ವಾಹನಗಳ ನಿಲುಗಡೆಗೆ ಅವಕಾಶವಿದೆ. ಒಂದು ಲಿಫ್ಟ್, ಆರು ಶೌಚಾಲಯ, ಚಾವಣಿಯಲ್ಲಿ ಟೆನ್ಸೈಲ್ ರೂಫಿಂಗ್ ನಿರ್ಮಿಸಲಾಗಿದೆ ಎಂದು ಮಾಹಿತಿ ನೀಡಿದರು.

ಗಾಂಧಿಬಜಾರ್ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಬೊಲಾರ್ಡ್ಸ್ ಹಾಗೂ ವೈಟ್ ಟಾಪಿಂಗ್ ಕಾಮಗಾರಿಯನ್ನು ಪರಿಶೀಲಿಸಿ, ಸಮಗ್ರವಾಗಿ ಅಭಿವೃದ್ಧಿ ಮಾಡಿರುವುದಕ್ಕೆ ಮಹೇಶ್ವರ್ ರಾವ್ ಪ್ರಶಂಸೆ ವ್ಯಕ್ತಪಡಿಸಿದರು.


ಗಾಂಧಿಬಜಾರ್‌ನಲ್ಲಿ ಸಿದ್ಧಗೊಂಡಿರುವ ಬಹು ಅಂತಸ್ತಿನ ಕಾರು ಪಾರ್ಕಿಂಗ್ ಕಟ್ಟಡ


ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಗಾಂಧಿಬಜಾರ್‌ನಲ್ಲಿ ಸಾರ್ವಜನಿಕರ ಸಮಸ್ಯೆ ಆಲಿಸಿದರು

ಮುಖ್ಯಾಂಶಗಳು
- ₹22 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣ
- ಎರಡು ಅಂತಸ್ತಿನಲ್ಲಿ ವ್ಯಾಪಾರಕ್ಕಾಗಿ 50 ಮಳಿಗೆ
- 124 ಕಾರುಗಳ ನಿಲುಗಡೆಗೆ ಅವಕಾಶ

ಗಾಂಧಿಬಜಾರ್ ರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಗಡಿಗಳನ್ನು ನಿಗದಿಪಡಿಸಿದ್ದು, ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುವವರ ಮೇಲೆ ಕ್ರಮ ಕೈಗೊಳ್ಳಬೇಕು. ಪಾದಚಾರಿ ಮಾರ್ಗಗಳಲ್ಲಿ ಪಾರ್ಕಿಂಗ್ ಮಾಡುವುದನ್ನು ತಡೆಯಬೇಕು. ಮಾರುಕಟ್ಟೆ ಆಕರ್ಷಕವಾಗಿ ಕಾಣಲು ಎಲ್ಲ ವ್ಯಾಪಾರಿಗಳಿಗೆ ಒಂದೇ ಮಾದರಿಯ ಛತ್ರಿಯನ್ನು ವಿನ್ಯಾಸಗೊಳಿಸಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕಸ-ರಸ ಘಟಕ: ಕೋರಮಂಗಲದಲ್ಲಿರುವ ಕಸ-ರಸ ಘಟಕವನ್ನು ಮಾದರಿ ಸ್ಥಳವನ್ನಾಗಿ ರೂಪಿಸಬೇಕು. ಕಸ-ರಸ ಘಟಕದಲ್ಲಿ ಪುನರ್ಬಳಕೆ ಮಾಡಬಹುದಾದ ಸಾಮಗ್ರಿಗಳ ಸಂಗ್ರಹ ಘಟಕ, ಒಣತ್ಯಾಜ್ಯ ಸಂಗ್ರಹಣಾ ಘಟಕ, ಜೈವಿಕ ಅನಿಲ ಘಟಕ ಹಾಗೂ ಮಿನಿ ಟ್ರಾನ್ಸಫರ್ ಸ್ಟೇಷನ್ ಇದ್ದು, ಅದನ್ನು ಸರಿಯಾಗಿ ನಿರ್ವಹಣೆ ಮಾಡಬೇಕು ಹಾಗೂ ದುರ್ವಾಸನೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು ಎಂದರು.

ವಲಯ ಆಯುಕ್ತ ದಿಗ್ವಿಜಯ್ ಬೋಡ್ಕೆ, ಜಂಟಿ ಆಯುಕ್ತ ಡಾ. ಮಧು, ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ, ಉಪ ಆಯುಕ್ತೆ ಗಗನಾ, ತೋಟಗಾರಿಕಾ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ್ ಉಪಸ್ಥಿತರಿದ್ದರು.

ಆಗಸ್ಟ್ 1ಕ್ಕೆ ದೆಹಲಿ ಚಲೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಮಾಡುತ್ತಿರುವ ಅನ್ಯಾಯವನ್ನು ಖಂಡಿಸಿ ಆಗಸ್ಟ್ 1 ಮತ್ತು 2ರಂದು ದೆಹಲಿ ಚಲೋ ನಡೆಸಲಾಗುತ್ತದೆ' ಎಂದು ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಸಿ.ಎಂ. ಧನಂಜಯ ಹೇಳಿದರು.



'ದೆಹಲಿಯ ಜಂತರ್ ಮಂತರ್‌ನಲ್ಲಿ ಎರಡು ದಿನದ ಸಮಾವೇಶ ಆಯೋಜಿಸಲಾಗಿದೆ. ರಾಜ್ಯದ 250 ಮಂದಿ ಆ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ. ರಾಜ್ಯದ ಪರವಾಗಿ ಸಂಸತ್ತಿನಲ್ಲಿ ದನಿ ಎತ್ತಿ ಎಂದು ರಾಜ್ಯದ ಸಂಸದರನ್ನು ಒತ್ತಾಯಿಸಲಾಗುತ್ತದೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸುಧಾ, ಮಯೂರ ಓದಿರಿ

ಗೌರಿ ಲಂಕೇಶ್ ಹತ್ಯೆ: ವಿಶೇಷ ನ್ಯಾಯಾಲಯ ಸ್ಥಾಪನೆಗೆ ಒತ್ತಾಯ

ಗೌರಿ ಫೈಲ್ಸ್– ಪತ್ರಕರ್ತೆಯೊಬ್ಬರ ಹತ್ಯೆ, ಪರಿಣಾಮ: ಸಂವಾದ

ಪ್ರಜಾವಾಣಿ ವಾರ್ತೆ



ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ನಡೆದ ಸಂವಾದದಲ್ಲಿ ಲೇಖಕ ರೋಲೋ ರೋಮಿಗ್ ಮಾತನಾಡಿದರು. ಪುಷ್ಪಮಾಲಾ ಮತ್ತು ಶಿವಸುಂದರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕೆಂಬುದು ಅವರ ಅಭಿಮಾನಿಗಳು, ಹಿತೈಷಿಗಳು ಮತ್ತು ಒಡನಾಡಿಗಳ ಒತ್ತಾಯವಾಗಿದೆ' ಎಂದು ಅಂಕಣಕಾರ ಶಿವಸುಂದರ್ ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಶುಕ್ರವಾರ ರೋಲೋ ರೋಮಿಗ್ ಅವರ 'ಐ ಆ್ಯಮ್ ಆನ್ ದಿ ಹಿಟ್ ಲಿಸ್ಟ್' ಎಂಬ ಪುಸ್ತಕ ಕುರಿತು ಹಾಗೂ ಗೌರಿ ಫೈಲ್ಸ್- ಪತ್ರಕರ್ತೆಯೊಬ್ಬರ ಹತ್ಯೆ ಮತ್ತು ಅದರ ಪರಿಣಾಮಗಳ ಕುರಿತು ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'2017ರಲ್ಲಿ ಗೌರಿ ಲಂಕೇಶ್ ಹತ್ಯೆಯಾಯಿತು. 18 ಆರೋಪಿಗಳನ್ನು ಬಂಧಿಸಿದ್ದು, ಒಬ್ಬ ಆರೋಪಿ ಮಾತ್ರ ತಲೆಮರೆಸಿಕೊಂಡಿದ್ದಾನೆ. 2022ರಲ್ಲಿ ವಿಚಾರಣೆ ಆರಂಭವಾಯಿತು. ವಿಚಾರಣೆ ವಿಳಂಬವಾದ ಕಾರಣ ಎಲ್ಲಾ ಆರೋಪಿಗಳಿಗೂ ಜಾಮೀನು ದೊರೆತಿದ್ದು, ಈ ಪೈಕಿ ಕೆಲ ಆರೋಪಿಗಳು ಸಾಕ್ಷಿಗಳಿಗೆ ಬೆದರಿಕೆ ಹಾಕುತ್ತಿದ್ದಾರೆ' ಎಂದು ತಿಳಿಸಿದರು.

'ವಿಚಾರಣೆ ತ್ವರಿತವಾಗಿ ನಡೆಯಲು ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡುವಂತೆ ಹೈಕೋರ್ಟ್‌ಗೆ ಸರ್ಕಾರ ಪತ್ರ ಬರೆದಿತ್ತು. ಆದರೆ ನ್ಯಾಯಾಲಯ ಇದನ್ನು ಪರಿಗಣಿಸಲಿಲ್ಲ. 80 ಸಾಕ್ಷಿಗಳ ವಿಚಾರಣೆ ಬಾಕಿ ಇದೆ. ತಿಂಗಳಲ್ಲಿ 4–5 ದಿನ ವಿಚಾರಣೆ ನಡೆಯುತ್ತದೆ. ನ್ಯಾಯ ಸಿಗುವುದು ವಿಳಂಬವಾಗುತ್ತದೆ' ಎಂದು ಬೇಸರ ವ್ಯಕ್ತಪಡಿಸಿದರು.

ಲೇಖಕ ರೋಲೋ ರೋಮಿಗ್ ಮಾತನಾಡಿ, 'ದಕ್ಷಿಣ ಭಾರತದಲ್ಲಿ ವರದಿಗಾರನಾಗಿ ಕೆಲಸ ಮಾಡಿದ್ದರಿಂದ ಗೌರಿ ಲಂಕೇಶ್ ಹತ್ಯೆ ಕುರಿತು ಪುಸ್ತಕ ಬರೆದೆ. ಅವರು ತಮಗೆ ಅನಿಸಿದ್ದನ್ನು ನೇರವಾಗಿ ಬರೆಯುತ್ತಿದ್ದರು. ಸಮಾಜದಲ್ಲಿ ಬದಲಾವಣೆಗೆ ಕಾರಣರಾಗಿದ್ದರು. ಹಲವು ಗ್ರಂಥಾಲಯಗಳಿಗೆ ಭೇಟಿ ನೀಡಿ ಅನುವಾದಕರ ನೆರವು ಪಡೆದು ಅವರ ಕುರಿತು ಪ್ರಕಟಗೊಂಡಿದ್ದ ಲೇಖನಗಳನ್ನು ಓದಿ, ಮಾಹಿತಿ ಪಡೆದೆ. ಆಕೆಯ ಹತ್ಯೆಯ ಸುದ್ದಿ ಅಂತರರಾಷ್ಟ್ರೀಯ ಮಾಧ್ಯಮಗಳಲ್ಲೂ ಪ್ರಕಟಗೊಂಡಿತು' ಎಂದು ವಿವರಿಸಿದರು.

'ಭಾರತ ದೇಶದಲ್ಲಿ ಮುಸ್ಲಿಮರು ದಾಳಿಗೆ ಒಳಗಾಗುತ್ತಿದ್ದಾರೆ. ವಿಶೇಷವಾಗಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮುಸ್ಲಿಂ ಸಮುದಾಯದ ಮೇಲೆ ದಾಳಿ ಮಾಡುತ್ತಿದ್ದಾರೆ. ಮುಸ್ಲಿಂ ಪರ ಧ್ವನಿ ಎತ್ತುವ ಕೆಲಸ ಕೆಲವರು ಮಾತ್ರ ಮಾಡುತ್ತಿದ್ದು, ಅವರು ಟೀಕೆಗೆ ಒಳಗಾಗುತ್ತಿದ್ದಾರೆ. ಧ್ವನಿ ಎತ್ತುವ ಕೆಲಸವನ್ನು ಪತ್ರಕರ್ತರು ಮಾಡಬೇಕು. ಗೌರಿ ಅದನ್ನೇ ಮಾಡಿದ್ದರು' ಎಂದರು.

ಗೌರಿ ಲಂಕೇಶ್ ಅವರ ಜತೆಗಿನ ಒಡನಾಟಗಳನ್ನು ಸ್ಮರಿಸಿಕೊಂಡ ಕಲಾವಿದೆ ಎನ್.ಪುಷ್ಪಮಾಲಾ, 'ನಾವಿಬ್ಬರೂ ಒಟ್ಟಿಗೆ ಸಭೆ, ಸಮಾರಂಭಗಳಿಗೆ ಹೋಗುತ್ತಿದ್ದೆವು. ಎಲ್ಲರೂ ಅಂದುಕೊಂಡಂತೆ ಗೌರಿ ನಾಸ್ತಿಕಳಲ್ಲ. ಅವರ ಮನೆಯ ಪೂಜಾ ಕೊಠಡಿಯಲ್ಲಿ ಶಿವ ಲಿಂಗವನ್ನು ಪೂಜೆ ಮಾಡುತ್ತಿದ್ದಳು. ಅವರ ತಂದೆಯ ನಿಧನದ ಬಳಿಕ ಪತ್ರಿಕೆ ನಡೆಸುವ ಜವಾಬ್ದಾರಿ ಹೊತ್ತುಕೊಂಡಳು. ಪತ್ರಿಕೆ ನಷ್ಟದಲ್ಲಿದ್ದರಿಂದ ಸಿಬ್ಬಂದಿಗೆ ಸಂಬಳ ನೀಡಲು ಕಷ್ಟವಾಗಿತ್ತು. ಆದಿವಾಸಿಗಳನ್ನು ಒಕ್ಕಲೆಬ್ಬಿಸುವುದನ್ನು ವಿರೋಧಿಸಿದ್ದಳು' ಎಂದು ತಿಳಿಸಿದರು.

ಒಳಮೀಸಲಾತಿ: ಜಾರಿಗೆ ಆಗ್ರಹಿಸಿ ಪ್ರತಿಭಟನೆ ಆ.18ಕ್ಕೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಆಗಸ್ಟ್ 18ರಂದು ಬೆಳಿಗ್ಗೆ 11 ಗಂಟೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾದಿಗ ದಂಡೋರ ಸಂಘಟನೆಯು ಪ್ರತಿಭಟನೆ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಸಂಘಟನೆ ರಾಜ್ಯ ಘಟಕ ಅಧ್ಯಕ್ಷ ಬಿ. ನರಸಪ್ಪ ದಂಡೋರ, 'ಒಳಮೀಸಲಾತಿ ಜಾರಿಗೊಳಿಸುವಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿ ಆ.1ಕ್ಕೆ ವರ್ಷವಾಗುತ್ತದೆ. ಆದರೆ, ರಾಜ್ಯ ಸರ್ಕಾರ ವಿನಾಕಾರಣ ಒಳಮೀಸಲಾತಿ ವಿಳಂಬ ಮಾಡುತ್ತಿದೆ. ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ಅವರ ನೇತೃತ್ವದ ಆಯೋಗವೂ ಮಂದಗತಿಯಲ್ಲಿ ವರದಿಯನ್ನು ತಯಾರಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. 'ಈಗಾಗಲೇ ಹರಿಯಾಣ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಒಳಮೀಸಲಾತಿ ಜಾರಿ ಮಾಡಲಾಗಿದೆ. ಆದರೆ, ರಾಜ್ಯದಲ್ಲಿ ಈವರೆಗೂ ಒಳಮೀಸಲಾತಿ ಜಾರಿ ಮಾಡಿಲ್ಲ. ಹೀಗಾಗಿ, ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಅಂದು ನಮ್ಮ ಸಂಘಟನೆಯ ಮುಖ್ಯಸ್ಥ ಮಂದಕೃಷ್ಣ ಮಾದಿಗ ಉಪಸ್ಥಿತರಿರುತ್ತಾರೆ' ಎಂದು ಹೇಳಿದರು.

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064

ವೆಬ್‌ಸೈಟ್: www.rwf.indianrailways.gov.in.

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/ಪಿ1/006/2025–26 ದಿನಾಂಕ: 24.07.25

ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಕೆಳಕಂಡ ಐಟಂಗಳನ್ನು ಸರಬರಾಜು ಮಾಡಲು ಭಾರತೀಯ ರೈಲ್ವೆ ಇ–ಪೋರ್ಟಲ್ www.ireps.gov.in ಮೂಲಕ ಆಸಕ್ತಿಯುಳ್ಳ ಸರಬರಾಜುದಾರರಿಂದ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಾಖಲಾತಿಗಳು ಮತ್ತು ಟೆಂಡರ್‌ನ ತಿದ್ದುಪಡಿ ಯಾವುದೇ ಇದ್ದಲ್ಲಿ ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುವುದು.

ಕ್ರಮ ಸಂಖ್ಯೆ	ಟೆಂಡರ್ ಸಂಖ್ಯೆ	ಕೊನೆಯ ದಿನಾಂಕ	ಸಂಕ್ಷಿಪ್ತ ವಿವರ / ಪ್ರಮಾಣ
1	ಪಿ1251617	18/08/25	ಆರ್‌ಡಬ್ಲ್ಯೂಎಫ್ ಡ್ರಾಯಿಂಗ್ ಪ್ರಕಾರ ಹೆಚ್‌ಡಿಪಿಇ ಬಾಕ್ಸ್ ಎನ್ ಬಾಡಿ ಪ್ಯಾಕಿಂಗ್. ಪ್ರಮಾಣ: 94780 ಸಂಖ್ಯೆ
2	ಪಿ1252086	20/08/25	ಐಎಸ್–435/1973 ಕ್ಕೆ ದೃಢಪಡಿಸುವ ಕ್ಯಾಸ್ಟರ್ ಆಯಿಲ್. ಪ್ರಮಾಣ: 31000 ಕೆಜಿಗಳು
3	ಪಿ1252098	20/08/25	ಆರ್‌ಡಬ್ಲ್ಯೂಎಫ್ ವೈಶಿಷ್ಟ್ಯತೆಯಂತೆ ಪೋರಿಂಗ್ ಟ್ಯೂಬ್‌ಗಾಗಿ ಗ್ಲೇಜ್ (ಅಭಿವೃದ್ಧಿ ಟೆಂಡರ್) ಪ್ರಮಾಣ: 1151 ಲೀಟರ್
4	ಪಿ1251656	20/10/25	ಆರ್‌ಡಬ್ಲ್ಯೂಎಫ್ ವೈಶಿಷ್ಟ್ಯತೆಯಂತೆ ಸ್ಟೀಲ್ ಬೂಮ್ 300ಮಿಮೀ ಆರ್–43. ಪ್ರಮಾಣ: 420 ಎಂಟಿ
5	ಪಿ1251657	27/10/25	ಆರ್‌ಡಬ್ಲ್ಯೂಎಫ್ ವೈಶಿಷ್ಟ್ಯತೆಯಂತೆ ಸ್ಟೀಲ್ ಬೂಮ್‌ಗಳು 300 ಮಿಮೀ ಚ (ರೈಲು 18). ಪ್ರಮಾಣ: 2046 ಎಂಟಿ
6	ಪಿ1251585	03/11/25	ಆರ್‌ಡಬ್ಲ್ಯೂಎಫ್ ವೈಶಿಷ್ಟ್ಯತೆಯಂತೆ ಕ್ಯಾಲ್ಸೈನ್ಡ್ ಲೈಮ್. ಪ್ರಮಾಣ: 13275 ಎಂಟಿ

ಟೆಂಡರ್ ಪ್ರಕಟಣೆ ಸಂಖ್ಯೆ. ಆರ್‌ಡಬ್ಲ್ಯೂಎಫ್/ಎಸ್/ಪಿ1/002/2025–26 ದಿ: 13.05.25 ರ ತಿದ್ದುಪಡಿ ಗ್ಲೋಬಲ್ ಟೆಂಡರ್ ಸಂಖ್ಯೆ : ಪಿ12517127 ಸಂಕ್ಷಿಪ್ತ ವಿವರ : ಆರ್‌ಡಬ್ಲ್ಯೂಎಫ್ ವೈಶಿಷ್ಟ್ಯತೆಯಂತೆ ಗ್ರಾಫೈಟ್ ಮೌಲ್ಡ್ ಬ್ಲಾಂಕ್ಸ್ 43.2" X 22.6". ಪ್ರಮಾಣ: 390 ಸಂಖ್ಯೆಗಳು. ಅಸ್ತಿತ್ವದಲಿರುವ ದಿನಾಂಕ : 21/07/25. ವಿಸ್ತರಿಸಿದ ದಿನಾಂಕ : 20/08/25..

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

Government of Karnataka
WATER RESOURCES DEPARTMENT

Office of the Engineer in Chief, DSO, Ananda Rao Circle, Bengaluru - 09.
Ph / Fax: 080-22877513, Email: cedsobengaluru@gmail.com

No: CE/DSO/Bengaluru/Driver/2025-26/602 Date: 25.07.2025

NOTIFICATION

The Engineer-In Chief, Dam Safety Organisation, Bengaluru invites **Quotations for Procurement of 6 Nos. Drivers to State Dam Safety Organisation for the year 2025-26 at Bengaluru and KERS, Mandya from 01.08.2025 to 31.07.2026 on Outsource basis under World Bank National Shopping Procedure.**

1) Last date for submission of Quotations : **04.08.2025 upto 15.30 hrs.** **2)** Format for Quotation may be collected from O/o Engineer in Chief, Dam Safety Organisation, Ananda Rao Circle, Bengaluru, Karnataka **on or before 01.08.2025 upto 16.30 hrs. 3)** Date of opening of Quotations: **05.08.2025 at 12.30 pm.** Further details may be obtained from above office during office hours.

Sd/- Engineer-In Chief
Dam Safety Organisation
Ananda Rao Circle, Bengaluru.

ಟಾಟಾ ಮೆಮೋರಿಯಲ್ ಸೆಂಟರ್

ಆಧುನಿಕ ಕ್ಯಾನ್ಸರ್ ಚಿಕಿತ್ಸೆ, ಸಂಶೋಧನೆ ಮತ್ತು ಶಿಕ್ಷಣ ಕೇಂದ್ರ (ಎಸಿಟಿಆರ್‌ಇಸಿ)
ಸೆಕ್ಟರ್–22, ಖರ್‌ಘರ್, ನವಿ ಮುಂಬೈ 410210
ಭಾರತ ಸರ್ಕಾರದ ಅಣುಶಕ್ತಿ ಇಲಾಖೆ ಅಡಿಯಲ್ಲಿನ ಒಂದು ಅನುದಾನಿತ ಸಂಸ್ಥೆ

ಜಾಹೀರಾತು ಸಂ. ಎಸಿಟಿಆರ್‌ಇಸಿ/ಎಡಿವಿಟಿ/ಎ–11/ಎ–12/2025 22/07/2025

ಲಭ್ಯವಿರುವ ಹುದ್ದೆಗಳು

ಸಕ್ಷಮ ಪ್ರಾಧಿಕಾರ ಅನುಮೋದಿಸಿರುವ ಕೆಳಕಂಡ ಹುದ್ದೆಗಳಿಗಾಗಿ ಎಸಿಟಿಆರ್‌ಇಸಿ ಇವರು ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

ಕ್ರ. ಸಂ.	ಹುದ್ದೆ ಹೆಸರು
1.	ಅಸಿಸ್ಟಂಟ್ ಪ್ರೊಫೆಸರ್ 'ಇ' (ಪ್ಯಾಥೊಲಾಜಿ) (1–ಯುಆರ್)
2.	ಕನ್ಸಲ್ಟಂಟ್ 'ಡಿ' (ಪ್ಯಾಥೊಲಾಜಿ) (2–ಯುಆರ್)
3.	ಸೈಂಟಿಫಿಕ್ ಆಫೀಸರ್ 'ಇ' (ಟ್ರಾನ್ಸ್‌ಪ್ಲಾಂಟ್ ಇಮ್ಯುನಾಲಜಿ ಮತ್ತು ಇಮ್ಯುನೊಜೆನೆಟಿಕ್ಸ್ ಲ್ಯಾಬೋರೇಟರಿ) (1–ಯುಆರ್)
4.	ಸೈಂಟಿಫಿಕ್ ಆಫೀಸರ್ 'ಸಿ' (ಸೆಂಟರ್ ಫಾರ್ ಕ್ಯಾನ್ಸರ್ ಎಪಿಡೆಮಿಯಾಲಜಿ) (1–ಒಬಿಸಿ)
5.	ಸೈಂಟಿಫಿಕ್ ಆಫೀಸರ್ 'ಸಿ' (ಇನ್ಫಾರ್ಮೇಶನ್ ಟೆಕ್ನಾಲಜಿ–ನೆಟ್‌ವರ್ಕಿಂಗ್) (1–ಒಬಿಸಿ)
6.	ಸೈಂಟಿಫಿಕ್ ಅಸಿಸ್ಟಂಟ್ 'ಬಿ' (ನ್ಯೂಕ್ಲಿಯರ್ ಮೆಡಿಸಿನ್) (1–ಯುಆರ್, 1–ಎಸ್‌ಸಿ, 1–ಒಬಿಸಿ)
7.	ಸೈಂಟಿಫಿಕ್ ಅಸಿಸ್ಟಂಟ್ 'ಬಿ' (ಕ್ಯಾನ್ಸರ್ ಸೈಟೊಜೆನೆಟಿಕ್ ಲ್ಯಾಬ್) (1–ಒಬಿಸಿ)
8.	ಸೈಂಟಿಫಿಕ್ ಅಸಿಸ್ಟಂಟ್ 'ಬಿ' (ಅನಿಮಲ್ ಸೈನ್ಸಸ್) (1–ಯುಆರ್)
9.	ಕೊ–ಆರ್ಡಿನೇಟರ್ 'ಬಿ' (ಮೆಡಿಕಲ್ ಪರ್ಚೇಸ್/ಸ್ಟೋರ್ಸ್) (1–ಒಬಿಸಿ)
10.	ಕೊ–ಆರ್ಡಿನೇಟರ್ 'ಬಿ' (ಮೆಡಿಕಲ್ ಅಡ್ಮಿನಿಸ್ಟ್ರೇಷನ್) (1–ಎಸ್‌ಸಿ)
11.	ಟೆಕ್ನಿಷಿಯನ್ 'ಎ' (ಸಿಆರ್‌ಐ ಲ್ಯಾಬ್ಸ್) (4–ಯುಆರ್)

ದಿನಾಂಕ 22/07/2025 ರಿಂದ 22/08/2025 ರವರೆಗೆ ಅರ್ಜಿಗಳ ಆನ್‌ಲೈನ್ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 22/08/2025 ರಂದು ಸಂಜೆ 05.30 ಗಂಟೆವರೆಗೆ (ಭಾರತೀಯ ಕಾಲಮಾನದ ಪ್ರಕಾರ). ವಿವರಗಳಿಗಾಗಿ ದಯವಿಟ್ಟು ನಮ್ಮ https://actrec.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಈ ಜಾಹೀರಾತಿಗೆ ಸಂಬಂಧಿಸಿದಂತೆ ಆನ್‌ಲೈನ್ ಅರ್ಜಿಸಲ್ಲಿಸುವುದು ಕಡ್ಡಾಯ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಮುಖ್ಯ ಆಡಳಿತಾಧಿಕಾರಿ,
ಎಸಿಟಿಆರ್‌ಇಸಿ

CBC 48160/12/0001/2526

ನೈರುತ್ಯ ರೈಲ್ವೆ

ಇ–(ಐಆರ್‌ಇಪಿಎಸ್) ಟೆಂಡರ್ ಪ್ರಕಟಣೆ ಸಂಖ್ಯೆ. 22ಯುಬಿಎಲ್ 2025–26ದಿನಾಂಕ: 18.07.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗಾಗಿ ಇ–ಟೆಂಡರ್ (ಐಆರ್‌ಇಪಿಎಸ್) ಅನ್ನು ಆಹ್ವಾನಿಸಿದ್ದಾರ

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	**ಹುಬ್ಬಳ್ಳಿ ವಿಭಾಗ:** ಕರಜಗಿ–ಧಾರವಾಡ (ಕೆಜೆಜಿ–ಡಿಡಬ್ಲ್ಯೂಆರ್) ವಿಭಾಗ–130ಕೆಎಂಪಿಎಚ್ (ಕೆ ಎಂ471/100–0 ನಲ್ಲಿ) ವಿಭಾಗೀಯ ವೇಗವನ್ನು ಹೆಚ್ಚಿಸುವ ಸುರಕ್ಷತೆಯ ದೃಷ್ಟಿಯಿಂದ ಪಾದಚಾರಿ ಮಾರ್ಗ/ದ್ವಿಚಕ್ರ ವಾಹನ ಸಬ್‌ವೇ ನಿರ್ಮಾಣ 01 ಸಂಖ್ಯೆ.	ರೂ. 2,65,53,459.00
2	**ಹುಬ್ಬಳ್ಳಿ ವಿಭಾಗ:** ಹುಬ್ಬಳ್ಳಿ–ಲೋಂಡಾ ವಿಭಾಗದಲ್ಲಿ ಮುಗದ– ಕುಂಬಾರಗಣವಿ (ಎಂಜಿಡಿ–ಕೆಬಿಐ) ನಿಲ್ದಾಣಗಳ ನಡುವೆ ಆರ್‌ಸಿಸಿ ಬಾಕ್ಸ್ ಸೇತುವೆಯೊಂದಿಗೆ ಕಿ ಮೀ 504/607 ನಲ್ಲಿ ಬ್ರಿಡ್ಜ್ ಸಂಖ್ಯೆ 203 ಮತ್ತು ಕೆ ಎಂ.504/223 ನಲ್ಲಿ ಬ್ರಿಡ್ಜ್ ಸಂಖ್ಯೆ 204 ರಲ್ಲಿ ಪ್ರಸ್ತಾವಿತ ರಿಹ್ಯಾಬಿಲಿಟೇಶನ್ ಮತ್ತು ರಿಪ್ಲೇಸ್‌ಮೆಂಟ್	ರೂ. 1,54,38,216.00
3	**ಹುಬ್ಬಳ್ಳಿ ವಿಭಾಗ:** ಉಪ ಕಾಮಗಾರಿ-I) ಗದಗ–ಹೊಟಗಿ (ಜಿಡಿಜಿ–ಎಚ್‌ಜಿ) ವಿಭಾಗ–ಟಿಎಫ್‌ಆರ್– 88.55 ಟಿಕೆಎಂ. ಉಪ ಕೆಲಸ-II) ಗದಗ–ಹೊಟಗಿ (ಜಿಡಿಜಿ–ಎಚ್‌ಜಿ) ವಿಭಾಗ–12 ಸಂಖ್ಯೆಯ ಪಾಯಿಂಟ್‌ಗಾಗಿ ಟಿಡಬ್ಲ್ಯೂಎಸ್ ಜೊತೆಗೆ ಟಿಟಿಆರ್ ಹಾಗೂ ಜುಮನಾಳ (ಜೆಎಂಎಲ್) ಯಾರ್ಡ್ ಮತ್ತು ಮುಳವಾಡ (ಎಂವಿಡಿ) ಯಾರ್ಡ್‌ನಲ್ಲಿ ಮುಖ್ಯ ಮಾರ್ಗಗಳಲ್ಲಿ ಕ್ರಾಸಿಂಗ್.	ರೂ. 1,54,08,088.00
4	**ಹುಬ್ಬಳ್ಳಿ ವಿಭಾಗ:** ಉಪ ಕಾಮಗಾರಿ-I) ವ್ಯಾಸ ಕಾಲೊನಿ–ಕೊಟ್ಟೂರು (ವಿಸಿ–ಕೆಟಿವೈ) ವಿಭಾಗ : 0.925 ಟಿಕೆಎಂ ಉದ್ದದ ಸಿಟಿಆರ್(ಪಿ). ಉಪ ಕಾಮಗಾರಿ-II) **ಹುಬ್ಬಳ್ಳಿ ವಿಭಾಗ:** ವ್ಯಾಸ ಕಾಲೋನಿ–ಕೊಟ್ಟೂರು (ವಿಸಿ–ಕೆಟಿವೈ) **ವಿಭಾಗ:** ಟಿಎಫ್‌ಆರ್ (ಇಆರ್‌ಸಿ ಇಲ್ಲದೆ)–22.640 ಟಿಕೆಎಂ.	ರೂ. 80,64,501.00
5	**ಹುಬ್ಬಳ್ಳಿ ವಿಭಾಗ:** ಉಪ ಕಾಮಗಾರಿ-I) ವ್ಯಾಸ ಕಾಲೊನಿ–ಕೊಟ್ಟೂರು **ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಎಂಜಿನಿಯರ್/ಬಳ್ಳಾರಿ ವ್ಯಾಪ್ತಿಯಲ್ಲಿರುವ ವಸತಿ ಗೃಹಗಳು ಮತ್ತು ಸೇವಾ ಕಟ್ಟಡಗಳ ಇತರೆ ಮತ್ತು ವಾರ್ಷಿಕ ನಿರ್ವಹಣಾ ಚಟುವಟಿಕೆಗಳು. (ವಿಶೇಷ ಕಾರ್ಯಗಳು–1).	ರೂ. 1,45,69,143.00
6	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಎಂಜಿನಿಯರ್/ಗದಗ ವ್ಯಾಪ್ತಿಯಲ್ಲಿ ವಸತಿಗೃಹ/ಸೇವಾ ಕಟ್ಟಡಗಳ ಇತರೆ ಮತ್ತು ವಾರ್ಷಿಕ ನಿರ್ವಹಣಾ ಕಾಮಗಾರಿಗಳು. (ವಿಶೇಷ ಕಾಮಗಾರಿಗಳು–2)	ರೂ. 1,24,59,072.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–08–2025 ರಂದು 11.00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಎಂಜಿನಿಯರ್/ಸಮನ್ವಯ, ಹುಬ್ಬಳ್ಳಿ

ಪಿಯುಬಿ/326/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblieಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR SWRRLY @SWRAILWAYHQ @sw_railways

ಕೋಚಿಮುಲ್ ಹಾಲು ಉತ್ಪಾದಕರ, ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಾಮಾನ್ಯ ಕಲ್ಯಾಣ ಟ್ರಸ್ಟ್ (ನೋಂದಣಿ), ಕೋಲಾರ.

ಎನ್.ಹೆಚ್.–75, ಹುತ್ತೂರು ಅಂಚೆ. ಕೋಲಾರ–563 102.

ಕ್ರ.ಸಂ.ಕೋಹಾಒ/ಶೇ.ತಾಂ./ಟ್ರಸ್ಟ್/ಇ ಟೆಂಡರ್/ಗು.ವಿ/1956/2025–26 ದಿ:21.07.2025

ಅಲ್ಪಾವಧಿ ಇ–ಟೆಂಡರ್

ಕೋಚಿಮುಲ್ ಹಾಲು ಉತ್ಪಾದಕರ, ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಾಮಾನ್ಯ ಕಲ್ಯಾಣ ಟ್ರಸ್ಟ್ ಎನ್.ಹೆಚ್–75, ಹುತ್ತೂರು ಅಂಚೆ, ಕೋಲಾರ–563102. ರವರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು, ಸಕ್ರಿಯ ಸದಸ್ಯರು, ಸಂಘದ ನೌಕರರು/ ಸಿಬ್ಬಂದಿಯವರು ಮತ್ತು ಅವರ ಅವಲಂಬಿತರ ಗುಂಪು ಜೀವ ವಿಮಾ ಸೌಲಭ್ಯವನ್ನು ಒಂದು ವರ್ಷದ ಅವಧಿಗೆ ಆಸಕ್ತಿಯುಳ್ಳ ಮತ್ತು IRDAI ನಲ್ಲಿ ನೋಂದಣಿಯಾಗಿರುವ ಅರ್ಹ ಜೀವ ವಿಮಾ ಕಂಪನಿಗಳಿಂದ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ಗಳನ್ನು ಅಲ್ಪಾವಧಿ ಇ–ಟೆಂಡರ್ ಮೂಲಕ ಅಹ್ವಾನಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ

1	ಇ–ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ	ದಿನಾಂಕ: 23.07.2025 ರಿಂದ 30.07.2025 ಸಂಜೆ 5:30 ಗಂಟೆಯವರೆಗೆ.
2	ಟೆಂಡರ್ ಬಗ್ಗೆ ಸ್ಪಷ್ಟನೆ/ ಅಕ್ಷೇಪಣೆ ಪಡೆಯುವ ಕೊನೆಯ ದಿನಾಂಕ: ಮತ್ತು ಸಮಯ	ದಿನಾಂಕ: 28.07.2025 ರಂದು ಸಂಜೆ 5:30 ಗಂಟೆಯವರೆಗೆ.
3	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 30.07.2025 ರಂದು ಸಂಜೆ 5:30 ಗಂಟೆಯ ಒಳಗೆ.
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ 01.08.2025 ರಂದು ಬೆಳಗ್ಗೆ 10.00 ಗಂಟೆಯ ನಂತರ.
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 02.08.2025 ರಂದು ಬೆಳಗ್ಗೆ 10.00 ಗಂಟೆಯ ನಂತರ
6	ತಾಂತ್ರಿಕ /ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ	ಕೋಲಾರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಮಂಡಳಿ ಸಭಾಂಗಣ ಕೋಲಾರ ಡೇರಿ, ಎನ್.ಹೆಚ್.–75, ಹುತ್ತೂರು ಅಂಚೆ, ಕೋಲಾರ–563102.

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ ಮೊತ್ತ, ಭದ್ರತಾ ಠೇವಣೆ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ https;//www.kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/–ಮ್ಯಾನೇಂಜಿಗ್ ಟ್ರಸ್ಟೀ
(ಕೋಮುಲ್ ಟ್ರಸ್ಟ್) ಇ–ಟೆಂಡರ್ ಅಹ್ವಾನ ಪ್ರಾಧಿಕಾರ

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/CA, ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ।।, ಬೆಂಗಳೂರು ದಕ್ಷಿಣ ಜಿಲ್ಲೆ. ದೂ : 080–29762005/29762006. ಇ–ಮೇಲ್:kkpaplan@gmail.com

ಸಂಖ್ಯೆ: ಕಯೋಪ್ರಾ/69(2)ಭೂಉ/02/2025–26/1347 ದಿನಾಂಕ: 18.07.2025

ಸಾರ್ವಜನಿಕ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ: 07.08.2015 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಈ ಕೆಳಕಂಡ ಅರ್ಜಿದಾರರು ಮಹಾಯೋಜನೆಯಲ್ಲಿ ನಿಗಧಿಪಡಿಸಿರುವ ಭೂ ಉಪಯೋಗಗಳನ್ನು ಮರುನಿಗಧಿಪಡಿಸಲು ಕೆಟಿಸಿಪಿ ಕಾಯ್ದೆ 1961ರ ಕಲಂ 69 ರಡಿಯಲ್ಲಿ ಕೋರಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಠಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ/ಸಲಹೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಶಿವಮ್ಮ ಕೋಂ ಶಿವಸ್ವಾಮಿ	ಕನಕಪುರ	ಸಾತನೂರು	ಸಾತನೂರು	185/11	0–20	ಉದ್ಯಾನವನ ಮತ್ತು ಬಯಲು ಜಾಗ	ವಾಣಿಜ್ಯ
					ಒಟ್ಟು	0–20		

ಸಹಿ/–
ಜಂಟಿ ನಿರ್ದೇಶಕರು
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

DIPR/BSD/252/SA/2025-26

ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್

(ಹಿಂದೆ ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್)
538, 539, 542 & 543, ಪೀಣ್ಯ 4ನೇ ಹಂತದ ಕೈಗಾರಿಕಾ ಪ್ರದೇಶದ 7ನೇ ಮುಖ್ಯ ರಸ್ತೆ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಕರ್ನಾಟಕ, ಭಾರತ, 560058
ISO 9001-2015 & AS 9100 Rev D ಪ್ರಮಾಣೀಕರಿಸಲಾಗಿದೆ
GSTIN: 29AABCU9719Q1ZC CIN: L30305KA2016PLC095712
companysecretary@unimechaerospace.com ದೂರವಾಣಿ: 080-42046782, www.unimechaerospace.com

ಜೂನ್ 30, 2025 ಕ್ಕೆ ಕೊನೆಗೊಂಡ ತ್ರೈಮಾಸಿಕ ಕ್ರೋಢೀಕೃತ ಲೆಕ್ಕಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶಗಳ ವಿವರ

(ರೂ. ಲಕ್ಷಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಅಂತ್ಯವಾದ	
	30-ಜೂನ್-2025	30-ಜೂನ್-2024
ಒಟ್ಟು ಆದಾಯ	7,442.66	6,102.29
ಅವಧಿಯ ನಿವ್ವಳ ಲಾಭ/ನಷ್ಟ (ತೆರಿಗೆಯ ಮೊದಲು)	2,420.00	2,499.48
ಅವಧಿಯ ನಿವ್ವಳ ಲಾಭ/ನಷ್ಟ ತೆರಿಗೆಯ ನಂತರ	1,916.41	2,062.97
ಒಟ್ಟಾರೆ ವ್ಯಾಪಕ ಅವಧಿಯ ಆದಾಯ [ಅವಧಿಯ ಲಾಭ (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	1,889.33	2,051.33
ಈಕ್ವಿಟಿ ಷೇರು ಬಂಡವಾಳ	2,542.84	2,200.26
ಪ್ರತಿ ಷೇರಿಗೆ ಗಳಿಕೆ (ಪ್ರತಿ ರೂ. 5/-)		
1. ಮೂಲ:	3.76	4.69
2. ದುರ್ಬಲ:	3.76	4.69
ಟಿಪ್ಪಣಿಗಳು:		
1. ಪ್ರಮುಖ ಪ್ರತ್ಯೇಕ ವಿವರಗಳು		
ಒಟ್ಟು ಆದಾಯ	2,287.06	1,626.25
ಲಾಭ ತೆರಿಗೆಯ ಮೊದಲು	1,180.58	328.86
ಲಾಭ ತೆರಿಗೆಯ ನಂತರ	886.20	270.77
ಒಟ್ಟಾರೆ ವ್ಯಾಪಕ ಅವಧಿಯ ಆದಾಯ [ಅವಧಿಯ ಲಾಭ (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	882.14	263.89

2. ಮೇಲಿನವು SEBI (LODR) ನಿಯಮಗಳು, 2015ರ ನಿಯಮ 33ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಲಾದ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಪೂರ್ಣ ಸ್ವರೂಪವು BSE ಮತ್ತು NSE ವೆಬ್‌ಸೈಟ್ ಮತ್ತು ಕಂಪನಿಯ ವೆಬ್‌ಸೈಟ್ www.unimechaerospace.com ನಲ್ಲಿ ಲಭ್ಯವಿದೆ ಮತ್ತು ಅದನ್ನು ಕೆಳಗೆ ಒದಗಿಸಲಾದ QR ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕವೂ ಪ್ರವೇಶಿಸಬಹುದು.

3. ಕಂಪನಿಯ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳನ್ನು ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 133ರ ಅಡಿಯಲ್ಲಿ ಸೂಚಿಸಲಾದ ಭಾರತೀಯ ಲೆಕ್ಕಪತ್ರ ಮಾನದಂಡಗಳು ("Ind AS") ಮತ್ತು 2015ರ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳೊಂದಿಗೆ ತಿದ್ದುಪಡಿ ಮಾಡಿದಂತೆ ಓದಲಾಗಿದೆ.

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 25, 2025

ನಿರ್ದೇಶಕರ ಮಂಡಳಿಯ ಪರವಾಗಿ
ಯುನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್
ಅನಿಲ್ ಕುಮಾರ್ ಪಿ
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ

ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎನ್‌ಐಎಎನ್‌ಪಿ/ಎಡಿವಿ–07–ಸಿಡಿಎನ್/2024–25 (ವಿಸ್ತರಣೆ)

ಈ ಸಂಸ್ಥೆಯಲ್ಲಿ ತಾತ್ಕಾಲಿಕ ಆಧಾರದ ಮೇರೆಗೆ ಒಂದು ವರ್ಷದ ಅವಧಿಗೆ ಒಂದು ಯಂಗ್ ಪ್ರೊಫೆಷನಲ್–I ಹುದ್ದೆಗೆ ತೊಡಗಿಸಿಕೊಳ್ಳಲು 06.08.2025 (ಬುಧವಾರ) ರಂದು ಬೆಳಗ್ಗೆ 10.30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. **ಕ್ರೋಢೀಕೃತ ಮಾಸಿಕ ಸಂಭಾವನೆ: ರೂ.30,000/–. ವಿದ್ಯಾರ್ಹತೆ:** ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಬಿಸಿಎ/ಬಿ.ಎಸ್ಸಿ/ಬಿ.ಇ/ಬಿ.ಟೆಕ್ ಅಥವಾ ತತ್ಸಮಾನ. **ವಯೋಮಿತಿ:** 21 ರಿಂದ 45 ವರ್ಷ. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು **05.08.2025** ರೊಳಗೆ **nainpcnd@gmail.com** ವಿಳಾಸಕ್ಕೆ ಇಮೇಲ್ ಮುಖಾಂತರ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದು. ಆಸಕ್ತಿಯುಳ್ಳ ಅಭ್ಯರ್ಥಿಗಳು, ನೇರ ಸಂದರ್ಶನಕ್ಕೆ ಹಾಜರಾಗುವ ಸಮಯದಲ್ಲಿ ತಮ್ಮ ಎಲ್ಲಾ ಮೂಲಕ ಪ್ರಮಾಣಪತ್ರಗಳನ್ನು ಹಾಗೂ ದಾಖಲಾತಿಗಳನ್ನು ಹಾಜರುಪಡಿಸುವುದು ಕಡ್ಡಾಯ. **ಅರ್ಜಿ ನಮೂನೆಗಾಗಿ ಮತ್ತು ವಿವರವಾದ ಜಾಹೀರಾತಿಗಾಗಿ,** ದಯವಿಟ್ಟು ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/–
ಪ್ರಭಾರಿ ಆಡಳಿತಾಧಿಕಾರಿ

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್ ಕಾಂಪ್ಲೆಕ್ಸ್, ಮೊದಲನೇ ಮಹಡಿ, ಟೌನ್ ಪೊಲೀಸ್ ಸ್ಟೇಷನ್ ಎದುರು, ಡಿ ಕ್ರಾಸ್, ದೊಡ್ಡಬಳ್ಳಾಪುರ, ಬೆಂಗಳೂರು–561203
ದೂ.ಸಂ:080–2956 2046 ಇ–ಮೇಲ್:dpa.dbpura2018@gmail.com

ಅಲ್ಪಾವಧಿ ಇ–ಹರಾಜು ಪ್ರಕಟಣೆ

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಮೊತ್ತ ರೂ. 7.00 ಕೋಟಿಗಳನ್ನು ಒಂದು ವರ್ಷದ ಅವಧಿಗೆ ಮೀರದಂತೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವ ಸಲುವಾಗಿ ಅರ್ಹ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ TPA/2025-26/AUCTION46 ರಲ್ಲಿ ಇ–ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಆಸಕ್ತಿಯುಳ್ಳ ಅರ್ಹ ರಾಷ್ಟ್ರೀಕೃತ ಬ್ಯಾಂಕಿನವರು **ದಿನಾಂಕ:25.07.2025 ರಿಂದ ದಿನಾಂಕ: 02.08.2025ರ ಸಮಯ ಸಂಜೆ 4.00 ಗಂಟೆಯ ಒಳಗೆ** ಇ–ಹರಾಜು ಪೋರ್ಟಲ್‌ನಲ್ಲಿ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ: **https://kppp.karnataka.gov.in** ನಲ್ಲಿ ಪರಿಶೀಲಿಸಿಕೊಳ್ಳಬಹುದು.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ- 561203

ಸಂ.: DPA/TP/CLU/14/2025-26 ದಿನಾಂಕ: 25.07.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಬಿಐಎಎಪಿಎ ಯೋಜನಾ ಪ್ರಾಧಿಕಾರದ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಆಂಜಿನಪ್ಪ ಪಿ. ಬಿನ್ ಲೇಟ್।। ಪುಟ್ಟಪ್ಪ	ಯಲಹಂಕ	ಹೆಸರುಘಟ್ಟ–2	ನೆಲ್ಲುಕುಂಟೆ	11/4	0–25.50	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಪ/799 ರಿಂದ 807/2024–25/1247
ದಿನಾಂಕ : 24.07.2025

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ಮೇ।। ರಾಧಾ ಸ್ವಾಮಿ ಸತ್ಸಂಗ್ ಬೀಯಾಸ್ ಪರವಾಗಿ ಆಥರೈಸ್ಡ್ ಸಿಗ್ನೆಟರಿ ಶ್ರೀ ಧಲ್ಬೀರ್ ಸಿಂಗ್ ಹನ್ಸಪಾಲ್ & ಶ್ರೀಚಂದ್ರಶೇಖರ್.ಎನ್.ವಿ ರವರು, ದೇವನಹಳ್ಳಿ ತಾಲ್ಲೂಕು, ವಿಜಯಪುರ ಹೋಬಳಿ, ಮುದುಗುರ್ಕಿ ಗ್ರಾಮದ ಸರ್ವೆ ನಂ.61/1ರಲ್ಲಿ 0ಎ–11ಗು, 64/1ರಲ್ಲಿ 0ಎ–36ಗು, 64/2 ರಲ್ಲಿ 0ಎ–28ಗು, 64/3 ರಲ್ಲಿ 1ಎ–21ಗು, 67/3 ರಲ್ಲಿ 2ಎ–20ಗು, 68/3ರಲ್ಲಿ 1ಎ–05ಗು, 68/4ರಲ್ಲಿ 0ಎ–04ಗು, 69/2ರಲ್ಲಿ 1ಎ–37ಗು, & 59/5ರಲ್ಲಿ 2ಎ–09ಗು, ಒಟ್ಟು 11ಎ–11ಗು ವಿಸ್ತೀರ್ಣದ ಜಮೀನುಗಳನ್ನು "ಪೂಜಾ ಸ್ಥಳಗಳು (Worship Places)" ಉದ್ದೇಶಕ್ಕಾಗಿ ಭೂಪರಿವರ್ತನೆ ಕೋರಿರುತ್ತಾರೆ. ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ, ನಂ.333/1, 1ನೇ ಮಹಡಿ, ವಿ.ಜೆ.ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110 ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಸಂಇ/ಸಿಪಿ/ಎಎಎ/2041/2025–26

ಭಾರತೀಯ ಬುಡಕಟ್ಟು ಸಹಕಾರಿ ಮಾರಾಟ ಅಭಿವೃದ್ಧಿ ಒಕ್ಕೂಟ ನಿಗಮ (ಟ್ರೈಫೆಡ್)

(ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ)
ಪ್ರಧಾನ ಕಚೇರಿ: ಎನ್‌ಎಸ್‌ಐಸಿ ಬಿಜಿನೆಸ್ ಪಾರ್ಕ್, ಎನ್‌ಎಸ್‌ಐಸಿ ಎಸ್ಟೇಟ್, ಓಖ್ಲಾ ಫೇಸ್–3, ಓಖ್ಲಾ ಕೈಗಾರಿಕಾ ಪ್ರದೇಶ, ನವದೆಹಲಿ–110020

ಟ್ರೈಫೆಡ್ ಇವರಿಂದ ಬಿಡ್‌ಗಳಿಗೆ ಆಹ್ವಾನ (ಜೆಮ್/225/ಬಿ/6417734)

ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿನ ಭಾರತೀಯ ಬುಡಕಟ್ಟು ಸಹಕಾರಿ ಮಾರಾಟ ಅಭಿವೃದ್ಧಿ ಒಕ್ಕೂಟ ನಿಗಮ (ಟ್ರೈಫೆಡ್) ಇವರು, ಮೂರನೇ–ಪಕ್ಷಗಾರ ಮೌಲ್ಯಮಾಪನ ಅಧ್ಯಯನಕ್ಕಾಗಿ ಒಂದು ಸಂಸ್ಥೆಯನ್ನು ನೇಮಕ ಮಾಡಿಕೊಳ್ಳಲು ಪ್ರಸ್ತಾವನೆಗಾಗಿ ಮನವಿ (ಆರ್‌ಎಫ್‌ಪಿ) ಪ್ರಕಟಿಸಿರುತ್ತಾರೆ:

1. ಕೆಳಕಂಡ ಕೇಂದ್ರಿಯ ಕ್ಷೇತ್ರ ಯೋಜನೆಗಳ ಪರಿಣಾಮಕಾರತ್ವ ಮೌಲ್ಯಮಾಪನಕ್ಕಾಗಿ: ಪ್ರಧಾನಮಂತ್ರಿ ಜನಜಾತೀಯ ವಿಕಾಸ ಮಿಷನ್ (ಪಿಎಂಜೆವಿಎಂ), ಪ್ರಧಾನಮಂತ್ರಿ ಜನಜಾತೀಯ ಆದಿವಾಸಿ ನ್ಯಾಯ ಮಹಾ ಅಭಿಯಾನ (ಪಿಎಂಜೆಎಎನ್‌ಎಂಎಎನ್) ಮತ್ತು ಈಶಾನ್ಯ ಪ್ರದೇಶದಿಂದ ಬುಡಕಟ್ಟು ಉತ್ಪನ್ನಗಳ ಪ್ರೋತ್ಸಾಹ (ಪಿಟಿಪಿ–ಎನ್‌ಇಆರ್).
2. ಟ್ರೈಬ್ಸ್ ಇಂಡಿಯಾ ಮಳಿಗೆಗಳ ಅವಶ್ಯಕ ಮೌಲ್ಯಮಾಪನ ಅಧ್ಯಯನ ಕೈಗೊಳ್ಳುವುದು

ಕಾರ್ಯವ್ಯಾಪ್ತಿ, ಕಾಲಮಿತಿಗಳು, ಅರ್ಹತಾ ಮಾನದಂಡ ಮತ್ತು ಬಿಡ್ ಸಲ್ಲಿಕೆಯ ಮಾರ್ಗಸೂಚಿ ಕುರಿತಾದ ಸಂಪೂರ್ಣ ವಿವರಗಳಿಗಾಗಿ https://trifed.tribal.gov.in / www.gem.gov.in ವೆಬ್‌ಸೈಟ್‌ಗಳಿಗೆ ಭೇಟಿ ಕೊಡಿ.

CBC 43104/12/0007/2526


Happy Birthday
ಬಿಜೆಪಿ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷರು,
ಹಾಗೂ KRIDL ಮಾಜಿ ಅಧ್ಯಕ್ಷರಾದ
ಶ್ರೀ ಎಂ. ರುದ್ರೇಶ್
ಅವರಿಗೆ ಜನ್ಮದಿನದ
ಪ್ರೀತಿಯ ಶುಭಾಶಯಗಳು
26.07.2025
ಶುಭ ಕೋರುವವರು
ಬಿಜೆಪಿ ಮುಖಂಡರು,
ಯಶವಂತಪುರ
ವಿಧಾನ ಸಭಾ ಕ್ಷೇತ್ರ


Happy Birthday
MR GROUP
ಬಿಜೆಪಿ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷರು,
ಹಾಗೂ KRIDL ಮಾಜಿ ಅಧ್ಯಕ್ಷರಾದ
ಶ್ರೀ ಎಂ. ರುದ್ರೇಶ್
ಅವರಿಗೆ ಜನ್ಮದಿನದ
ಪ್ರೀತಿಯ ಶುಭಾಶಯಗಳು
Happy Birthday
ACE TRACTORS
Ozatal
RR RAVISHING RETREAT
ಶುಭ ಕೋರುವವರು
ಎಂ. ರುದ್ರೇಶ್ ಅವರ ಅಭಿಮಾನಿಗಳ ಬಳಗ

ನಾಲ್ಕು ಸಾವಿರ ನಿವೇಶನ ಹಂಚಿಕೆಗೆ ತಯಾರಿ

ಸೂರ್ಯನಗರದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಅಭಿವೃದ್ಧಿ

• ಎ.ಎಂ.ಸುರೇಶ

ಬೆಂಗಳೂರು: ಸೂರ್ಯನಗರದ ನಾಲ್ಕನೇ ಹಂತದಲ್ಲಿ ನಾಲ್ಕು ಸಾವಿರ ನಿವೇಶನಗಳ ಅಭಿವೃದ್ಧಿಪಡಿಸಿರುವ ಕರ್ನಾಟಕ ಗೃಹ ಮಂಡಳಿಯು (ಕೆಎಚ್‌ಬಿ), ಮುಂದಿನ ತಿಂಗಳಲ್ಲಿ ಲಾಟರಿ ಮೂಲಕ ನಾಗರಿಕರಿಗೆ ಹಂಚಿಕೆ ಮಾಡಲು ತಯಾರಿ ನಡೆಸಿದೆ.

1200 ಎಕರೆ ಪ್ರದೇಶದಲ್ಲಿ ಮಂಡಳಿಯು ಬಡಾವಣೆ ಅಭಿವೃದ್ಧಿಪಡಿಸಿದ್ದು, 50:50ರ ಅನುಪಾತದಲ್ಲಿ ನಿವೇಶನಗಳು ಹಂಚಿಕೆಯಾಗಲಿವೆ. ಶೇ 50ರಷ್ಟು ನಿವೇಶನಗಳನ್ನು ಭೂಮಿ ನೀಡಿದ ರೈತರಿಗೆ ನೀಡಲಾಗುತ್ತದೆ. ಇನ್ನುಳಿದ 50ರಷ್ಟು ನಿವೇಶನಗಳನ್ನು ನಾಗರಿಕರಿಗೆ ಹಂಚಿಕೆ ಮಾಡಲಾಗುತ್ತದೆ.

ರೈತರ ಪಾಲಿನ ನಿವೇಶನಗಳು ಈಗಾಗಲೇ ಹಂಚಿಕೆಯಾಗಿವೆ. ನಾಗರಿಕರಿಗೆ ಮೀಸಲಾದ ನಿವೇಶನಗಳಿಗಾಗಿ ಒಟ್ಟು 17 ಸಾವಿರ ಅರ್ಜಿಗಳು ಬಂದಿದ್ದು, ನಾಲ್ಕು ಸಾವಿರ ಮಂದಿಗೆ ಅಷ್ಟೇ ನಿವೇಶನಗಳು ಲಭ್ಯವಾಗಲಿವೆ. ಶೇ 15ರಷ್ಟು ನಿವೇಶನಗಳನ್ನು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಹಂಚಿಕೆ ಮಾಡಲಾಗುತ್ತದೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ನಿವೇಶನಗಳ ಹಂಚಿಕೆಗೆ 2017–18ರಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಭೂಸ್ವಾಧೀನ, ಕಾನೂನು ತೊಡಕುಗಳು ಬಗೆಹರಿದ ಬಳಿಕ, ಅಂತಿಮವಾಗಿ ಈಗ ಬಡಾವಣೆ ಸಿದ್ಧವಾಗಿದೆ. 20X30, 30X40, 30X50, 40X60, 50X80 ಅಡಿ ಅಳತೆಯ ನಿವೇಶನಗಳನ್ನು ಅಭಿವೃದ್ಧಿಪಡಿಸಿದ್ದು, ಚದರ ಅಡಿಗೆ ₹2,200 ದರ ನಿಗದಿಪಡಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಶೇ 50ರಷ್ಟು ರಿಯಾಯಿತಿ ನೀಡಲಾಗುತ್ತದೆ. ಸೂರ್ಯನಗರ ನಾಲ್ಕನೇ ಹಂತದಲ್ಲಿ ಮಂಡಳಿಗೆ ಸೇರಿದ ಇನ್ನೂ 600 ಎಕರೆ ಜಾಗವಿದ್ದು, ಮುಂದಿನ ದಿನಗಳಲ್ಲಿ 3–4 ಸಾವಿರ ನಿವೇಶನಗಳು ಹಂಚಿಕೆಗೆ ಲಭ್ಯವಾಗಲಿವೆ. ಈಗ ಹಂಚಿಕೆಗೆ ಲಭ್ಯವಾಗಿರುವ ನಿವೇಶನಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂದು ವಿವರಿಸಿದರು.

ಮುಖ್ಯಾಂಶಗಳು

- ಕೆಂಗೇರಿ, ಸೂರ್ಯನಗರದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ
- ಬೇಡಿಕೆ ಆಧರಿಸಿ ವಿಲ್ಲಾಗಳ ನಿರ್ಮಾಣಕ್ಕೆ ಒತ್ತು
- ಕೈಗೆಟುಕುವ ದರದಲ್ಲಿ ನಾಗರಿಕರಿಗೆ ನಿವೇಶನ

ವಿಲ್ಲಾಗಳ ನಿರ್ಮಾಣ

ಗೃಹ ಮಂಡಳಿಯು ಒಂದು ಸಾವಿರ ವಿಲ್ಲಾಗಳನ್ನು ನಿರ್ಮಿಸಲು ತೀರ್ಮಾನಿಸಿದೆ. ಮೊದಲ ಹಂತದಲ್ಲಿ ಸೂರ್ಯನಗರದಲ್ಲಿ 100 ವಿಲ್ಲಾಗಳನ್ನು ನಿರ್ಮಿಸಲಾಗುತ್ತದೆ. ಉಳಿದ ವಿಲ್ಲಾಗಳನ್ನು ಜನರಿಂದ ಬರುವ ಬೇಡಿಕೆ ಆಧರಿಸಿ ಹಂತ ಹಂತವಾಗಿ ನಿರ್ಮಿಸಲಾಗುತ್ತದೆ.

35X40, 35X50, 45X60 ಅಡಿ ಜಾಗದಲ್ಲಿ ವಿಲ್ಲಾಗಳನ್ನು ನಿರ್ಮಾಣ ಮಾಡಲಾಗುತ್ತದೆ. ಇವುಗಳಿಗೆ ಕ್ರಮವಾಗಿ ₹99 ಲಕ್ಷ, ₹1.40 ಕೋಟಿ ಹಾಗೂ ₹1.85 ಕೋಟಿ ದರ ನಿಗದಿಪಡಿಸಲಾಗಿದೆ. ಈಗಾಗಲೇ 100ಕ್ಕೂ ಅಧಿಕ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಈ ತಿಂಗಳ 31ರವರೆಗೂ ಅರ್ಜಿ ಸಲ್ಲಿಸಲು ಅವಕಾಶ ಇದ್ದು ಇನ್ನಷ್ಟು ಅರ್ಜಿಗಳು ಬರುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಉದ್ಯಾನ, ಇ.ವಿ.ಚಾರ್ಜಿಂಗ್, ಮಳೆ ನೀರು ಸಂಗ್ರಹ, ಭದ್ರತಾ ವ್ಯವಸ್ಥೆ ಸೇರಿದಂತೆ ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. 'ಸೂರ್ಯನಗರ ನಿಸರ್ಗ ವ್ಯಾಲಿ ಟೌನ್‌ಶಿಪ್' ಎಂದು ಇದಕ್ಕೆ ಹೆಸರಿಡಲಾಗಿದೆ.

ಮೈಸೂರು ರಸ್ತೆಯ ದೊಡ್ಡ ಆಲದ ಮರ ಬಳಿಯ ಚುಂಚನಕುಪ್ಪೆಯಲ್ಲಿ ಇದೇ ರೀತಿ ವಿಲ್ಲಾಗಳನ್ನು ನಿರ್ಮಿಸುವ ಉದ್ದೇಶವಿದೆ. ಜನರಿಂದ ಬರುವ ಬೇಡಿಕೆ ಆಧರಿಸಿ ಮಂಡಳಿಯ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

ಅಪಾರ್ಟ್‌ಮೆಂಟ್‌ಗಳ ನಿರ್ಮಾಣ

ಸೂರ್ಯನಗರ ಮೊದಲ ಹಂತದಲ್ಲಿ 2 ಬಿಎಚ್‌ಕೆಗೆ ಸೇರಿದ 40 ಹಾಗೂ 3 ಬಿಎಚ್‌ಕೆಗೆ ಸೇರಿದ 50 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್ ನಿರ್ಮಿಸಲಾಗುತ್ತದೆ. ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಕೆಲಸ ಶುರುವಾಗಿದೆ.

ಬೇಡಿಕೆ ಬಂದರೆ ಬೇರೆ ಕಡೆಯೂ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಲಾಗುತ್ತದೆ. 2 ಬಿಎಚ್‌ಕೆಗೆ ₹88 ಲಕ್ಷ ಹಾಗೂ 3 ಬಿಎಚ್‌ಕೆಗೆ ₹1.60 ಕೋಟಿ ದರ ನಿಗದಿಪಡಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

3 ಪಾಳಿ ಖಂಡಿಸಿ ಆ.1ರಿಂದ ಆಂಬುಲೆನ್ಸ್ ನೌಕರರ ಮುಷ್ಕರ

ಬೆಂಗಳೂರು: ಎರಡು ಪಾಳಿಯಲ್ಲಿ ಕಾರ್ಯನಿರ್ವಹಣೆಗೆ ಅವಕಾಶ ನೀಡುವಂತೆ ಆಗ್ರಹಿಸಿರುವ '108-ಆರೋಗ್ಯ ಕವಚ' ಯೋಜನೆಯ ಆಂಬುಲೆನ್ಸ್ ನೌಕರರು, ಬೇಡಿಕೆ ಈಡೇರಿಸದಿದ್ದರೆ ಆಗಸ್ಟ್ 1ರಿಂದ ಮುಷ್ಕರ ಕೈಗೊಳ್ಳುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುವರ್ಣ ಕರ್ನಾಟಕ ಆರೋಗ್ಯ ಕವಚ (108) ನೌಕರರ ಸಂಘದ ಉಪಾಧ್ಯಕ್ಷ ಪರಮಶಿವ, 'ಯೋಜನೆಯಡಿ 3,500 ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಜನವರಿ 1ರಿಂದ ಸರ್ಕಾರದ ಆದೇಶಾನುಸಾರ ನೌಕರರು ಮೂರು ಪಾಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿಂದೆ 12 ಗಂಟೆಗಳ ಎರಡು ಪಾಳಿಯಿತ್ತು. ಈಗ 8 ಗಂಟೆಗಳ ಮೂರು ಪಾಳಿ ನಿಗದಿ ಮಾಡಿ, ವೇತನ ಕಡಿತ ಮಾಡಲಾಗಿದೆ. ಇದರಿಂದ ನೌಕರರಿಗೆ ತುಂಬಾ ಸಮಸ್ಯೆಯಾಗುತ್ತಿದೆ. ಬೆಳಿಗ್ಗೆ 6 ಗಂಟೆ ಮತ್ತು ರಾತ್ರಿ 10 ಗಂಟೆಯ ಪಾಳಿಗೆ ಹಾಜರಾಗುವ ನೌಕರರು ಸಾರಿಗೆ ವ್ಯವಸ್ಥೆಯಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ' ಎಂದು ಹೇಳಿದರು.

'ಯೋಜನೆಯಡಿ ಶೇ 33ರಷ್ಟು ಮಹಿಳಾ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಜತೆಗೆ ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯೂ ಮೂರು ಪಾಳಿಗಳಿಂದ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಸಾರಿಗೆ ವ್ಯವಸ್ಥೆ ಹಾಗೂ ಮೂಲಸೌಕರ್ಯವನ್ನು ಒದಗಿಸುವ ಜತೆಗೆ ವೇತನ ಹೆಚ್ಚಿಸಬೇಕು. ಅದು ಸಾಧ್ಯವಾಗದಿದ್ದಲ್ಲಿ ಈ ಮೊದಲಿನಂತೆ ಎರಡು ಪಾಳಿಯಲ್ಲಿ ಸಮಯ ನಿಗದಿ ಮಾಡಬೇಕು. ಈ ಬಗ್ಗೆ ಜುಲೈ 31ರೊಳಗೆ ನಿರ್ಧಾರ ತೆಗೆದುಕೊಳ್ಳದಿದ್ದರೆ, ಆ.1ರಿಂದ ಕರ್ತವ್ಯಕ್ಕೆ ಗೈರಾಗುವ ಮೂಲಕ ಮುಷ್ಕರ ಕೈಗೊಳ್ಳಲಾಗುವುದು' ಎಂದರು.

ಸರ್ಕಾರಿ ಶಾಲೆಗಳಿಗೆ ಮಳೆ ನೀರು ಸಂಗ್ರಹ ವ್ಯವಸ್ಥೆ



ಬೆಂಗಳೂರು: ಗೋಕಲ್ ದಾಸ್ ಎಕ್ಸ್‌ಪೋರ್ಟ್ಸ್ ಫೌಂಡೇಷನ್ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಚಿಕ್ಕ ಬಿದಿರುಕಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಮಲ್ಲಸಂದ್ರದ ಸರ್ಕಾರಿ ಪ್ರೌಢಶಾಲೆಯಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಫೌಂಡೇಷನ್‌ನ ಸಿಎಸ್‌ಆರ್ ಉಪಾಧ್ಯಕ್ಷ ಪ್ರಾಂಜಲ್, 'ಮಳೆ ನೀರು ಸಂಗ್ರಹ ವ್ಯವಸ್ಥೆಯಿಂದ ಸಂಗ್ರಹವಾದ ನೀರನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಈ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಿದೆ' ಎಂದು ಹೇಳಿದರು.

ಫೌಂಡೇಷನ್‌ನ ರಾಜೇಂದ್ರ ಪ್ರಸಾದ್, 'ಮಳೆ ನೀರು ಸಂಗ್ರಹ ವ್ಯವಸ್ಥೆ ಕೇವಲ ನೀರಿನ ಸಂಗ್ರಹಣೆಗೆ ಸಂಬಂಧಿಸಿದ್ದಲ್ಲ, ಅಂತರ್ಜಲವನ್ನು ಮರುಪೂರಣ ಮಾಡಲು ಸಹಕಾರಿಯಾಗಿದೆ. ನೀರಿಗೆ ಸಂಬಂಧಿಸಿದಂತೆ ಬಾಹ್ಯ ಮೂಲಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲಿದೆ' ಎಂದರು. ಶಾಲೆಯ ಮುಖ್ಯೋಪಾಧ್ಯಾಯ ರಾಮಲಿಂಗೇಗೌಡ ಅವರು ಈ ವ್ಯವಸ್ಥೆ ಅಳವಡಿಕೆ ಸಂಬಂಧಿಸಿದಂತೆ ಫೌಂಡೇಷನ್‌ಗೆ ಕೃತಜ್ಞತೆ ಸಲ್ಲಿಸಿದರು.

ಚಿಟಿಕೆ ಸುದ್ದಿ

'ನಮ್ಮ ಯಾತ್ರಿ'ಯಿಂದ 'ನಮ್ಮ ಸಾರಿಗೆ'

ಬೆಂಗಳೂರು: ನಮ್ಮ ಮೆಟ್ರೊ ಮತ್ತು ಆಟೊ ಸಂಚಾರವನ್ನು ನೈಜ ಸಮಯದಲ್ಲಿ ಟ್ರ್ಯಾಕ್ ಮಾಡುವ 'ನಮ್ಮ ಸಾರಿಗೆ' ಆ್ಯಪ್ ಅನ್ನು 'ನಮ್ಮ ಯಾತ್ರಿ' ಬಿಡುಗಡೆ ಮಾಡಿದೆ.

'ನಮ್ಮ ಸಾರಿಗೆ' ಆ್ಯಪ್ ವೈಯಕ್ತಿಕ ಸಾರಿಗೆ ಸಹಾಯಕವಾಗುತ್ತದೆ. ಯಾವ ಮೆಟ್ರೊ ನಿಲ್ದಾಣಕ್ಕೆ ಹೋಗಬೇಕು, ಯಾವ ಪ್ಲಾಟ್‌ಫಾರ್ಮ್ ಮತ್ತು ಗೇಟ್ ಅನ್ನು ಬಳಸಬೇಕು, ಯಾವಾಗ ಮೋಡ್‌ಗಳನ್ನು ಬದಲಾಯಿಸಬೇಕು ಎಂಬುದನ್ನು ತೋರಿಸುತ್ತದೆ. ಮುಂದಿನ ರೈಲಿಗೆ ಕೌಂಟ್‌ಡೌನ್, ನಿಲ್ದಾಣದ ನಿರ್ಗಮನಗಳಲ್ಲಿನ ನಿರ್ದೇಶನಗಳನ್ನು ಪ್ರಯಾಣಿಕರಿಗೆ ನೀಡಲಿದೆ' ಎಂದು 'ನಮ್ಮ ಯಾತ್ರಿ'ಯ ಸಂಸ್ಥಾಪಕರಾದ ಮಗಿರ್ಯಾನ್ ಮತ್ತು ಶಾನ್ ಮಾಹಿತಿ ನೀಡಿದರು.

ಆ್ಯಪ್‌ಗೆ ಚಾಲನೆ ನೀಡಿ ಮಾತನಾಡಿದ ಸಂಸದ ತೇಜಸ್ವಿ ಸೂರ್ಯ, 'ಸಾರ್ವಜನಿಕ ಸಾರಿಗೆಯು ಖಾಸಗಿ ಅಭ್ಯಾಸವನ್ನು ಮೀರಿದಾಗ ನಮ್ಮ ಬೆಂಗಳೂರು ಗೆಲ್ಲುತ್ತದೆ. ಮೆಟ್ರೊವನ್ನು ವಿಸ್ತರಿಸೋಣ, ಪ್ರತಿ ಫೀಡರ್ ಅನ್ನು ವಿದ್ಯುದ್ದೀಕರಿಸೋಣ' ಎಂದು ಹೇಳಿದರು.

'ನಮ್ಮ ಯಾತ್ರಿ ಮೇಡ್‌ಫಾರ್ ಬಿಎಲ್‌ಆರ್: ನಮ್ಮ ಮೊಬಿಲಿಟಿ ಬ್ಲೂಪ್ರಿಂಟ್- 2030' ಅನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಸ್ಪರ್ಧಾತ್ಮಕ ಪರೀಕ್ಷೆ ತರಬೇತಿಗೆ ಅರ್ಜಿ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) 2026ನೇ ಸಾಲಿನ ಪೂರ್ವಭಾವಿ ಪರೀಕ್ಷೆ ಮತ್ತು ಮುಖ್ಯ ಪರೀಕ್ಷೆಗೆ ಮಾರ್ಗದರ್ಶನ ಹಾಗೂ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಆಗಸ್ಟ್ 18ರಿಂದ ತರಗತಿಗಳು ಪ್ರಾರಂಭವಾಗಲಿವೆ. ಅರ್ಹ ಅಭ್ಯರ್ಥಿಗಳಿಗೆ ವಿದ್ಯಾರ್ಥಿ ವೇತನದ ಮೂಲಕ ಕೋರ್ಸ್ ಶುಲ್ಕದಲ್ಲಿ ರಿಯಾಯಿತಿಯನ್ನು ಒದಗಿಸಲಾಗುತ್ತದೆ. ಪುರುಷರಿಗೆ ವಿದ್ಯಾರ್ಥಿ ವಸತಿನಿಲಯ ಲಭ್ಯವಿದೆ. ಆಗಸ್ಟ್ 16 ಅರ್ಜಿ ಸಲ್ಲಿಕೆಗೆ ಕಡೆಯ ದಿನವಾಗಿದೆ.

ಈ ತರಗತಿಗಳು ಆನ್‌ಲೈನ್/ಆಫ್‌ಲೈನ್ ಎರಡೂ ವಿಧಾನದನಗಳಲ್ಲಿ ನಡೆಯುತ್ತವೆ. ಆಫ್‌ಲೈನ್ ತರಗತಿಗಳು ವಿಜಯನಗರದ ಚಂದ್ರಾಲೇಔಟ್‌ನಲ್ಲಿರುವ ಕೆಎಸ್‌ಎಫ್ ಅಕಾಡೆಮಿ ಹಾಗೂ ಎಚ್‌ಎಎಲ್ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಫೌಂಡೇಷನ್‌ನ ಕೇಂದ್ರ ಕಚೇರಿಯಲ್ಲಿ ನಡೆಯಲಿವೆ ಎಂದು ಫೌಂಡೇಷನ್ ಕಾರ್ಯದರ್ಶಿ ಟಿ. ತಿಮ್ಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 25202299 ಅಥವಾ 7625000990/9845318599

ಉದ್ಯೋಗ ಭದ್ರತೆಗೆ ಎನ್‌ಎಚ್‌ಎಂ ಸಿಬ್ಬಂದಿ: ಆಗ್ರಹ

ಬೆಂಗಳೂರು: 'ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಸಿಬ್ಬಂದಿಯನ್ನು 'ಕಾರ್ಯಕ್ಷಮತೆ ಮೌಲ್ಯಮಾಪನ'ದ ಹೆಸರಿನಲ್ಲಿ ವಜಾಗೊಳಿಸಬಾರದು' ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘವು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.

ಸಂಘದ ರಾಜ್ಯಾಧ್ಯಕ್ಷ ಶ್ರೀಕಾಂತ್ ಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪತ್ರ ಬರೆದಿದ್ದಾರೆ.

'ಎನ್‌ಎಚ್‌ಎಂ ಅಡಿ 30 ಸಾವಿರ ಸಿಬ್ಬಂದಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ನೌಕರರ ಗುತ್ತಿಗೆ ನವೀಕರಣದ ಬಗ್ಗೆ ನಿರ್ಧಾರ ಕೈಗೊಂಡಿಲ್ಲ. ನೌಕರರು ಉದ್ಯೋಗ ಭದ್ರತೆ ಇಲ್ಲದೆ ಆತಂಕಕ್ಕೆ ಒಳಗಾಗಿದ್ದಾರೆ. 'ಕಾರ್ಯಕ್ಷಮತೆ ಮೌಲ್ಯಮಾಪನ'ದ ನೆಪದಲ್ಲಿ ದೀರ್ಘ ಕಾಲದಿಂದ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ವಜಾಗೊಳಿಸಲು ಕ್ರಮಕೈಗೊಳ್ಳಬಾರದು' ಎಂದು ಆಗ್ರಹಿಸಿದ್ದಾರೆ.

ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆಲಸದ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಯಾಗಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ನಿರಾಕರಿಸಿದೆ.

ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಶುಕ್ರವಾರ ಪ್ರಕಟಿಸಿದರು.

'ಹೊಳೆನರಸೀಪುರ ಕ್ಷೇತ್ರದ ಶಾಸಕ ಎಚ್.ಡಿ.ರೇವಣ್ಣ ಮತ್ತು ಇವರ ಪುತ್ರ ಪ್ರಜ್ವಲ್ ರೇವಣ್ಣ 2019ರ ಜನವರಿ 1ರಿಂದ 2022ರ ಜನವರಿ 1ರ ಮಧ್ಯದ ಅವಧಿಯಲ್ಲಿ ಹಲವು ಬಾರಿ ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಅವರ ಮನೆ ಕೆಲಸ ಮಾಡುತ್ತಿದ್ದ ಮಧ್ಯವಯಸ್ಸಿನ ಮಹಿಳೆ (47) ಮತ್ತು ಅವರ ಮಗಳು ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪೊಲೀಸರು ಭಾರತೀಯ ದಂಡ ಸಂಹಿತೆ–1860ರ ಕಲಂ 154 (ಎ), 354 (ಡಿ), 506 ಮತ್ತು 509 ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ಶಾಸಕ ಎಚ್.ಡಿ.ರೇವಣ್ಣ ವಿರುದ್ಧದ ತನಿಖೆಗೆ ಹೈಕೋರ್ಟ್ ಈಗಾಗಲೇ ಮಧ್ಯಂತರ ತಡೆ ನೀಡಿದೆ. ಪ್ರಾಸಿಕ್ಯೂಷನ್ ಪರ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.

ಹೈಕೋರ್ಟ್ ಸುದ್ದಿ

ವಿಧಾನ ಪರಿಷತ್ ಸದಸ್ಯ ರವಿಕುಮಾರ್ ವಿರುದ್ಧದ ಪ್ರಕರಣಕ್ಕೆ ತಡೆ

'ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಎನ್.ರವಿಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಅವರ ವಾದ ಪುರಸ್ಕರಿಸಿದ ನ್ಯಾಯಪೀಠ ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿ ಆದೇಶಿಸಿತು. ದೂರುದಾರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣವೇನು?: 'ಬಿಜೆಪಿಯಿಂದ ಜುಲೈ 1ರಂದು ವಿಧಾನಸೌಧ ಆವರಣದ ಮಹಾತ್ಮ ಗಾಂಧಿ ಪ್ರತಿಮೆಯ ಬಳಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ರವಿಕುಮಾರ್ ಅವರು ಶಾಲಿನಿ ರಜನೀಶ್ ಕುರಿತು ಅಸಂಸದೀಯ ಪದ ಬಳಸಿ ಮಾತನಾಡಿದ್ದಾರೆ' ಎಂದು ಆರೋಪಿಸಿ ಜೆ.ಪಿ. ನಗರದ ನಿವಾಸಿ, 'ನಂದಾದೀಪಾ ಮಹಿಳಾ ಸಂಘ'ದ ಅಧ್ಯಕ್ಷೆ ನಗರ್ತನಾ ನೀಡಿದ ದೂರಿನಡಿ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪೋಕ್ಸೊ: ಸ್ವಇಚ್ಛೆ ಮದುವೆಗೆ ಸಮ್ಮತಿ

'ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸು ತ್ತಿರುವ ಯುವಕನನ್ನು ಸ್ವಇಚ್ಛೆಯಿಂದ ಮದುವೆಯಾಗಿದ್ದೇನೆ' ಎಂಬ ಸಂತ್ರಸ್ತ ವಯಸ್ಕ ತರುಣಿಯ ಹೇಳಿಕೆಯನ್ನು ಪರಿಗಣಿಸಿರುವ ಹೈಕೋರ್ಟ್ ಈ ಕುರಿತ ಪ್ರಕರಣದಲ್ಲಿ ಯುವಕನ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ತಡೆ ನೀಡಿದೆ.

ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಪ್ರಕರಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಾಲ ಮಂದಿರದಲ್ಲಿ ಸಕ್ಷಮ ಪ್ರಾಧಿಕಾರದ ವಶದಲ್ಲಿದ್ದ ಯುವತಿ ಮತ್ತು ಆಕೆಯ ಚಿಕ್ಕಪ್ಪನನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರ ಚೇಂಬರ್‌ನಲ್ಲಿ ಖುದ್ದು ಹಾಜರುಪಡಿಸಿದ ವೇಳೆ ಯುವತಿ ಈ ಕುರಿತಂತೆ ನೀಡಿದ ಗೋಪ್ಯ ಹೇಳಿಕೆ ಮತ್ತು ದಾಖಲೆಯನ್ನು ನ್ಯಾಯಮೂರ್ತಿಗಳು ಪರಿಗಣಿಸಿದ್ದಾರೆ.

ವಿಚಾರಣೆ ವೇಳೆ ಸಂತ್ರಸ್ತ ಯುವತಿ, 'ನಾನೀಗ ವಯಸ್ಕಳಾಗಿದ್ದೇನೆ. ಆರೋಪಿ ಯುವಕನ ಜೊತೆ ಧರ್ಮಸ್ಥಳದಲ್ಲಿ ಮದುವೆಯಾಗಿದ್ದೇನೆ. ಬಿ.ಕಾಂ ಪದವಿಯ ಅಂತಿಮ ವರ್ಷದಲ್ಲಿ ಕಲಿಯುತ್ತಿದ್ದೇನೆ' ಎಂಬ ಪ್ರಮುಖ ಅಂಶವನ್ನು ಪರಿಗಣಿಸಿದ ನ್ಯಾಯಮೂರ್ತಿಗಳು, 'ಯುವತಿಯನ್ನು ತಕ್ಷಣವೇ ಬಾಲ ಮಂದಿರದಿಂದ ಬಿಡುಗಡೆ ಮಾಡಬೇಕು. ಆಕೆ ಇಚ್ಛಿಸಿದ ಹಾಸ್ಟೆಲ್‌ನಲ್ಲಿ ಉಳಿಯಲು ಅವಕಾಶ ಕಲ್ಪಿಸಬೇಕು' ಎಂದು ಆದೇಶಿಸಿದ್ದಾರೆ.

'ಅರ್ಜಿದಾರ ಯುವಕ ಮತ್ತು ಸಂತ್ರಸ್ತೆ ವಿಚಾರಣಾ ನ್ಯಾಯಾಲಯದಲ್ಲಿ ಒಟ್ಟಾಗಿ ಭಾಗಿಯಾಗಬೇಕು ಎಂಬ ಷರತ್ತಿಗೆ ಒಳಪಟ್ಟು ಸಂತ್ರಸ್ತೆಯು ಯುವಕನ ಜೊತೆ ಹೊರಡಲು ಪೊಲೀಸರು ವ್ಯವಸ್ಥೆ ಮಾಡಬೇಕು. ಸಂತ್ರಸ್ತೆಯ ಚಿಕ್ಕಪ್ಪ ತಮ್ಮ ವಕೀಲರು ಮತ್ತು ಪೊಲೀಸರ ಸಮ್ಮುಖದಲ್ಲಿ ಸಂತ್ರಸ್ತೆಯನ್ನು ಭೇಟಿ ಮಾಡಬಹುದು' ಎಂದು ಆದೇಶಿಸಿದ ನ್ಯಾಯಮೂರ್ತಿಗಳು, ಯುವಕ ಮತ್ತು ಯುವತಿಯನ್ನು ಸೆಪ್ಟೆಂಬರ್ 3ರಂದು ನಡೆಯುವ ವಿಚಾರಣೆಗೆ ಖುದ್ದು ಹಾಜರಾಗಲು ನಿರ್ದೇಶಿಸಿ ವಿಚಾರಣೆ ಮುಂದೂಡಿದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ.ಸಲೀಂ ಆದೇಶ

ಬಿಎನ್‌ಎಸ್: ಮೇಲಧಿಕಾರಿ ಅನುಮತಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ವರ್ತಮಾನ ವರದಿಯಲ್ಲಿ (ಎಫ್‌ಐಆರ್) ಹಾಗೂ ತನಿಖೆಯಲ್ಲಿ ಭಾರತ ನ್ಯಾಯ ಸಂಹಿತೆಯ ಸೆಕ್ಷನ್ 304, 103(2), 111 ಹಾಗೂ 113(ಬಿ) ಅನ್ನು ಅಳವಡಿಸಿಕೊಳ್ಳುವ ಮುನ್ನ ಎಲ್ಲ ಠಾಣೆಗಳ ತನಿಖಾಧಿಕಾರಿಗಳು ತಮ್ಮ ವ್ಯಾಪ್ತಿಯ ಮೇಲಧಿಕಾರಿಗಳ ಅನುಮೋದನೆ ಪಡೆದುಕೊಳ್ಳಬೇಕು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಆದೇಶದಲ್ಲಿ ತಿಳಿಸಿದ್ದಾರೆ.

304 (ಚರ ಆಸ್ತಿಯನ್ನು ದೋಚುವುದು ಅಥವಾ ಕಸಿದುಕೊಳ್ಳುವುದು), 103(2) (ನಿರ್ದಿಷ್ಟವಾಗಿ ಜನಾಂಗ, ಜಾತಿ, ಸಮುದಾಯ, ಲಿಂಗ, ಜನ್ಮಸ್ಥಳ, ಭಾಷೆ ಅಥವಾ ವೈಯಕ್ತಿಕ ನಂಬಿಕೆಯಂತಹ ಅಂಶಗಳ ಆಧಾರದಲ್ಲಿ ಐದು ಅಥವಾ ಅದಕ್ಕಿತ ಹೆಚ್ಚು ವ್ಯಕ್ತಿಗಳ ಗುಂಪು ಒಟ್ಟಾಗಿ ವರ್ತಿಸಿ ಮಾಡುವ ಹತ್ಯೆ), 111 (ಸಂಘಟಿತ ಅಪರಾಧ, ಇಬ್ಬರು ಅಥವಾ ಹೆಚ್ಚಿನವರ ಗುಂಪು ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗುವುದು), 113(ಬಿ) (ಭಾರತದ ಏಕತೆ, ಸಮಗ್ರತೆ, ಸಾರ್ವಭೌಮತ್ವ, ಭದ್ರತೆ ಅಥವಾ ಆರ್ಥಿಕ ಭದ್ರತೆಗೆ ಬೆದರಿಕೆ ಹಾಕುವ ಉದ್ದೇಶ ಹೊಂದಿರುವ ಕೃತ್ಯಗಳಲ್ಲಿ ಭಾಗಿ ಆಗುವುದು). ಈ ಸೆಕ್ಷನ್‌ಗಳನ್ನು ಅಳವಡಿಸಿಕೊಳ್ಳುವ ಮುನ್ನ ಮೇಲಧಿಕಾರಿಗಳ ಅನುಮತಿ ಪಡೆದುಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಜಿಲ್ಲಾಮಟ್ಟದಲ್ಲಿ ಎಸ್‌ಪಿ ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ಡಿಸಿಪಿ ಒಳಗೊಂಡ ಮೇಲಾ ಧಿಕಾರಿಯಿಂದ ಲಿಖಿತ ಅನುಮತಿ ಪಡೆದಿರಬೇಕು. ತುರ್ತು ಕಾರ್ಯಗಳ ನಿಮಿತ್ತ ಮೌಖಿಕ ಆದೇಶ ಪಡೆದರೆ, 24 ಗಂಟೆ ಒಳಗೆ ಲಿಖಿತ ಅನುಮತಿ ಪಡೆಯಬೇಕು. ಹಿರಿಯ ಪೊಲೀಸ್ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಆ ಕಾಯ್ದೆಗಳಡಿ ಎಫ್‌ಐಆರ್ ದಾಖಲಿಸಲು ಸೂಚಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆಯಲ್ಲಿ ಇರುವ ಕೆಲವು ಕಾಯ್ದೆಗಳ ದುರ್ಬಳಕೆ ತಡೆಗಟ್ಟಲು ಈ ಕ್ರಮಕ್ಕೆ ಇಲಾಖೆ ಮುಂದಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ತೆರಿಗೆ ಪಾವತಿಸದ ಐಷಾರಾಮಿ ಕಾರು ಮಾಲೀಕರಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೆ ರಾಜ್ಯಗಳಲ್ಲಿ ನೋಂದಣಿ ಮಾಡಿಕೊಂಡು ರಾಜ್ಯದ ತೆರಿಗೆ ತಪ್ಪಿಸಿ ಸಂಚರಿಸುತ್ತಿದ್ದ ಎರಡು ಕಾರುಗಳ ಮಾಲೀಕರಿಂದ ದಂಡ ಸಹಿತ ತೆರಿಗೆಯನ್ನು ಸಾರಿಗೆ ಅಧಿಕಾರಿಗಳು ವಸೂಲಿ ಮಾಡಿದ್ದಾರೆ.

ಪುದುಚೇರಿಯಲ್ಲಿ ನೋಂದಣಿಯಾಗಿದ್ದ ಮರ್ಸಿಡಿಸ್ ಬೆಂಜ್ ಮತ್ತು ಜಾರ್ಖಂಡ್‌ನಲ್ಲಿ ನೋಂದಣಿಯಾಗಿದ್ದ ಫೆರಾರಿ 812 ಸೂಪರ್ ಫಾಸ್ಟ್ ಕಾರು ರಾಜ್ಯದಲ್ಲಿ ಓಡಾಡುತ್ತಿರುವುದನ್ನು ಸಾರಿಗೆ ಅಧಿಕಾರಿಗಳು ಕಳೆದ ಮಾರ್ಚ್‌ನಲ್ಲೇ ಪತ್ತೆ ಹಚ್ಚಿ ನೋಟಿಸ್ ನೀಡಿದ್ದರು. ಆದರೆ, ಕಾರು ತಂದು ಮೂರು ತಿಂಗಳು ಆಗಿರುವುದು ಎಂದು ಮಾಲೀಕರು ಉತ್ತರಿಸಿದ್ದರು.

ಕಾರು ಎಷ್ಟು ಸಮಯದಿಂದ ಎಲ್ಲೆಲ್ಲಿ ಓಡಾಡಿದೆ ಎಂಬುದನ್ನು ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್‌ನಿಂದ ಮಾಹಿತಿ ಪಡೆದಾಗ 12 ತಿಂಗಳು ದಾಟಿರುವುದು ಗೊತ್ತಾಗಿದೆ. ಅದರಂತೆ ಶುಕ್ರವಾರ ಕಾರ್ಯಾಚರಣೆ ನಡೆಸಿ ದಂಡ ಸಹಿತ ತೆರಿಗೆ ಪಾವತಿಸುವಂತೆ ತಿಳಿಸಿದ್ದರು. ಕಾರು ಮಾಲೀಕರಾಗಿರುವ ಈಸ್ಟ್ ಪಾಯಿಂಟ್ ಗ್ರೂಪ್ ಸಿಇಒ ರಾಜೀವ್ ಗೌಡ ಅವರು ಒಂದು ಕಾರಿಗೆ ₹37.03 ಲಕ್ಷ, ಇನ್ನೊಂದು ಕಾರಿಗೆ ₹61.94 ಲಕ್ಷ ಪಾವತಿಸಿದರು.

ಜಯನಗರ ಆರ್‌ಟಿಒ ವಿ.ಪಿ. ರಮೇಶ್, ಕೇಂದ್ರ ಆರ್‌ಟಿಒ ದೀಪಕ್, ಸಿಬ್ಬಂದಿ ಗಿರಿಧರ್ ಟಿ.ಎಸ್., ಅಸಾದುಲ್ಲ ಬೇಗ್, ಸೌಮ್ಯಾ ಎಚ್.ಆರ್., ಎ.ಎ. ಖಾನ್, ಕೆಂಪರಾಜು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

'ಸಲಾಹುದ್ದೀನ್ ಘೋಷಿತ ಅಪರಾಧಿ'

ಶ್ರೀನಗರ(ಪಿಟಿಐ): ಪಾಕಿಸ್ತಾನ ಮೂಲದ ಹಿಜ್ಬುಲ್ ಮುಜಾಹಿದೀನ್ ಉಗ್ರ ಸಂಘಟನೆ ಮುಖ್ಯಸ್ಥ ಮೊಹಮ್ಮದ್ ಯೂಸುಫ್ ಶಾ ಅಲಿಯಾಸ್ ಸೈಯದ್ ಸಲಾಹುದ್ದೀನ್ 'ಯುಎಪಿಎ ಕಾಯ್ದೆ' ಅಡಿ 'ಘೋಷಿತ ಅಪರಾಧಿ' ಎಂದು ಎನ್‌ಐಎ ನ್ಯಾಯಾಲಯ ಶುಕ್ರವಾರ ಹೇಳಿದೆ.

ಸಲಾಹುದ್ದೀನ್ ಬಂಧನಕ್ಕೆ ಸಂಬಂಧಿಸಿ ಹಲವು ಬಾರಿ ವಾರಂಟ್ ಹೊರಡಿಸಲಾಗಿದ್ದರೂ ಆತನ ಪತ್ತೆ ಸಾಧ್ಯವಾಗಿಲ್ಲ ಎಂದು ಎನ್‌ಐಎ ವರದಿ ಸಲ್ಲಿಸಿತ್ತು. ಆಗಸ್ಟ್ 30ರ ಒಳಗಾಗಿ ಇಲ್ಲವೇ ಅದೇ ದಿನ ನ್ಯಾಯಾಲಯಕ್ಕೆ ಸಲಾಹುದ್ದೀನ್ ಹಾಜರಾಗಬೇಕು ಎಂದು ಆದೇಶಿಸಿದೆ.

ಆನೆಗಳಿಗೆ ಕ್ವಾರಂಟೈನ್ • ಚಲನವಲನ ಮೇಲೆ ನಿಗಾ


ಜಪಾನ್ ತಲುಪಿದ ಬನ್ನೇರುಘಟ್ಟ ಗಜಪಡೆ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಜಪಾನ್ ದೇಶಕ್ಕೆ ಪ್ರಾಣಿ ವಿನಿಮಯ ಯೋಜನೆಯಡಿ ಪ್ರಯಾಣ ಬೆಳೆಸಿದ ಗಜಪಡೆ ಸುರಕ್ಷಿತವಾಗಿ ತಲುಪಿದೆ.

ಸುರೇಶ್ (8 ವರ್ಷ), ಗೌರಿ (9), ಶ್ರುತಿ (7) ಹಾಗೂ ತುಳಸಿ (5) ಆನೆಗಳು ಕತಾರ್ ಏರ್‌ವೇಸ್ ಸರಕು ಸಾಗಣೆ ವಿಮಾನ ಮೂಲಕ ಶುಕ್ರವಾರ ಬೆಳಗ್ಗೆ ಜಪಾನ್ ಓಸಾಕ ವಿಮಾನ ನಿಲ್ದಾಣ ತಲುಪಿದವು.

> ಪ್ರಾಣಿ ವಿನಿಮಯ ಯೋಜನೆ ಅಡಿ ಜಪಾನ್‌ನ ಹಿಮೇಜಿ ಸಫಾರಿ ಉದ್ಯಾನಕ್ಕೆ ವಿಮಾನದ ಮೂಲಕ ಕಳುಹಿಸಿರುವ ನಾಲ್ಕು ಆನೆಗಳು ಸುರಕ್ಷಿತವಾಗಿ ತಲುಪಿವೆ
> **ಸೂರ್ಯಸೇನ್,** ಇ.ಡಿ, ಬನ್ನೇರುಘಟ್ಟ ಜೈವಿಕ ಉದ್ಯಾನ



ಜಪಾನ್‌ಗೆ ಆನೆಗಳನ್ನು ಸಾಗಿಸಿದ ಪೆಟ್ಟಿಗೆಯೊಂದಿಗೆ ಬನ್ನೇರುಘಟ್ಟ ಜೈವಿಕ ಉದ್ಯಾನದ ಮಾವುತರು ಮತ್ತು ಸಿಬ್ಬಂದಿ

ಆನೆಗಳಿಗಾಗಿಯೇ ತಯಾರಿಸಿದ್ದ ಪೆಟ್ಟಿಗೆಯಲ್ಲಿ (ಕ್ರಾಲ್)ಪ್ರತ್ಯೇಕವಾಗಿ ಸಾಗಿಸಲಾಯಿತು. ವಿಮಾನ ನಿಲ್ದಾಣ ತಲುಪಿದ ಬಳಿಕ ಪೆಟ್ಟಿಗೆಗಳನ್ನು ಲಾರಿಯಲ್ಲಿ ಇರಿಸಿ ಅಲ್ಲಿನ ಹಿಮೇಜಿ ಪಾರ್ಕ್‌ಗೆ ಸಾಗಿಸಲಾಯಿತು.

ಆನೆಗಳನ್ನು ಕ್ವಾರಂಟೈನ್ ಮಾಡಲಾಗಿದ್ದು, ಅವುಗಳ ಚಲನವಲನ ಮೇಲೆ ನಿಗಾ ವಹಿಸಲಾಗಿದೆ. ಜಪಾನ್‌ಗೆ ತೆರಳಿದ ಕೆಲ ದಿನ ಆನೆಗಳಿಗೆ ಭಾರತ ಶೈಲಿಯ ಆಹಾರವನ್ನೇ ನೀಡಲಾಗುತ್ತದೆ. ಇದಕ್ಕಾಗಿ ರಾಗಿ ಮತ್ತು ಅಕ್ಕಿಯನ್ನು ಕೊಂಡೊಯ್ಯಲಾಗಿದೆ.

ಬೆಂಗಳೂರು ರೇಸ್

ಟ್ರೈಮ್ ಅಂಡ್ ಟ್ರೈಡ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಸಿಟಿ ಸ್ಪ್ರಿಂಟ್ ಚಾಂಪಿಯನ್‌ಷಿಪ್ ಗೋಲ್ಡ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟ್ರೈಮ್ ಅಂಡ್ ಟ್ರೈಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹೈಲ್ಯಾಂಡ್ ಡ್ರೀಮ್ 1, ಡಬಲ್ ಸ್ಕಾಚ್ 4
2ನೇ ರೇಸ್: ಎಫ್‌ಫಿಕೆಸಿ 1, ಜೆರ್ಸಿ ಗಾರ್ಡನ್ 2, ಮಿಡ್‌ನೈಟ್ ಬ್ಲೂ 4
3ನೇ ರೇಸ್: ಸೂಪರ್ ಕೈಂಡ್ 3, ಗ್ಯಾಂಡೊಲ್ಫಿನಿ 9, ಡಬಲ್ ವಿಷನ್ 8
4ನೇ ರೇಸ್: ನಾಟಿ ಸ್ಕಾಟಿ 5, ಡಿಫೆನ್ಸ್ ಕೌನ್ಸೆಲ್ 9, ಫೆಲಿಸ 2
5ನೇ ರೇಸ್: ಗ್ಲೋರಿಯಸ್‌ನೆಸ್ 7, ವಿರ್ಲ್‌ವಿಂಡ್ 9, ನಾಟಿ ಬ್ಲಶ್ 1
6ನೇ ರೇಸ್: ಟ್ರೈಮ್ ಅಂಡ್ ಟ್ರೈಡ್ 5, ಕ್ರೌನ್ ಡ್ರೈವ್ 2, ಆಲ್ಡ್‌ಗೇಟ್ 1
7ನೇ ರೇಸ್: ಕಿಸ್ ಆಫ್ ಗ್ರೇ 2, ಥ್ರಿಲ್ ಆಫ್ ಬ್ರೆಜಿಲ್ 5, ಸನ್‌ಲಿಟ್ ಪಾತ್ 3

ಉತ್ತಮ ಬೆಟ್: ಎಫ್‌ಫಿಕೆಸಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ವಿಮಾ ಪರಿಹಾರ ವಿತರಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಲಹೆ

ಹಣವಿಲ್ಲದಿದ್ದರೆ ಯಾರೂ ಇಲ್ಲ...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಣವಿದ್ದರೆ ಎಲ್ಲರೂ ನೆಂಟರೇ. ಹಣ ಖಾಲಿಯಾದ ಮೇಲೆ ಯಾರೂ ಇರುವುದಿಲ್ಲ. ಹಾಗಾಗಿ ವಿಮಾ ಪರಿಹಾರವನ್ನು ಪಡೆದವರು ಎಚ್ಚರಿಕೆಯಿಂದ ಹಣವನ್ನು ಸದ್ಬಳಕೆ ಮಾಡಬೇಕು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಅಪಘಾತದಲ್ಲಿ ಮೃತಪಟ್ಟ ಸಿಬ್ಬಂದಿಯ ಕುಟುಂಬಕ್ಕೆ ₹ 1 ಕೋಟಿ, ಇತರೆ ಕಾರಣದಿಂದ ಮೃತಪಟ್ಟ 26 ಸಿಬ್ಬಂದಿಯ ಅವಲಂಬಿತರಿಗೆ ತಲಾ ₹ 10 ಲಕ್ಷ ವಿಮಾ ಪರಿಹಾರ, ಅನುಕಂಪದ ಆಧಾರದಲ್ಲಿ ನೇಮಕಗೊಂಡ 45 ಸಿಬ್ಬಂದಿಗೆ ನೇಮಕಾತಿ ಆದೇಶ ಪತ್ರ ವಿತರಿಸಿ ಅವರು ಮಾತನಾಡಿದರು.

ಮಕ್ಕಳ ವಿದ್ಯಾಭ್ಯಾಸ, ಮನೆ ನಿರ್ಮಾಣ ಮುಂತಾದ ಅಗತ್ಯ ಕಾರ್ಯಗಳಿಗೆ ಬಳಸಿ. ಬಡ್ಡಿಯ ವ್ಯಾಮೋಹದಿಂದ ಯಾರಿಗೋ ಹಣ ನೀಡಿ ಕಳೆದುಕೊಳ್ಳಬೇಡಿ ಎಂದರು.

ನಿಗಮಗಳಲ್ಲಿ ಅನುಕಂಪದ ಆಧಾರದ ನೇಮಕಾತಿ 10 ವರ್ಷಗಳಿಂದ ಸ್ಥಗಿತಗೊಂಡಿತ್ತು. ಈ ಪ್ರಕ್ರಿಯೆಗೆ ಮತ್ತೆ ಚಾಲನೆ ನೀಡಿ ಕಳೆದ ಒಂದು ವರ್ಷದಲ್ಲಿ 271 ಮಂದಿಯನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. ನಾಲ್ಕು ನಿಗಮಗಳಲ್ಲಿ ಒಟ್ಟು 1,000 ಮಂದಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲಾಗುವುದು ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ಮೊಹಮ್ಮದ್ ರಿಜ್ವಾನ್ ನವಾಬ್, ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ಎನ್‌ಡಬ್ಲ್ಯುಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ., ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಸುಶೀಲಾ ಹಾಜರಿದ್ದರು.



ಅನುಕಂಪದ ಆಧಾರದ ಮೇಲೆ ನೇಮಕಗೊಂಡ 45 ಅಭ್ಯರ್ಥಿಗಳಿಗೆ ರಾಮಲಿಂಗಾರೆಡ್ಡಿ ನೇಮಕಾತಿ ಆದೇಶ ಪತ್ರ ವಿತರಿಸಿದರು. ಪ್ರಜಾವಾಣಿ ಚಿತ್ರ

ಬಿಎಂಟಿಸಿ ಸಿಬ್ಬಂದಿಗೆ ₹1 ಕೋಟಿ ವಿಮೆ

ಸಿಬ್ಬಂದಿ ಅಪಘಾತದಿಂದ ಮೃತಪಟ್ಟರೆ ಅವರ ಕುಟುಂಬಕ್ಕೆ ಆರ್ಥಿಕ ಭದ್ರತೆ ಒದಗಿಸಲು ಬ್ಯಾಂಕ್ ಆಫ್ ಬರೋಡ ಜೊತೆಗೆ ಬಿಎಂಟಿಸಿ ಒಡಂಬಡಿಕೆ ಮಾಡಿಕೊಂಡಿದೆ.

ಕರ್ತವ್ಯ ನಿರ್ವಹಣೆ ವೇಳೆ ಅಪಘಾತದಿಂದ ಮರಣ ಹೊಂದಿದರೆ ₹ 1.25 ಕೋಟಿ, ಬೇರೆ ಸಮಯದಲ್ಲಿ ಅಪಘಾತದಿಂದ ಮೃತಪಟ್ಟರೆ ₹1 ಕೋಟಿ, ವಿಮಾನ ಅಪಘಾತದಲ್ಲಿ ಮೃತಪಟ್ಟರೆ ₹1 ಕೋಟಿ, ಶಾಶ್ವತ ಪೂರ್ಣ ಅಂಗವೈಕಲ್ಯ ಉಂಟಾದರೆ ₹1 ಕೋಟಿ, ಶಾಶ್ವತವಾಗಿ ಭಾಗಶಃ ಅಂಗವೈಕಲ್ಯ ಉಂಟಾದರೆ ₹ 75 ಲಕ್ಷ ಹಾಗೂ ಸ್ವಾಭಾವಿಕ ಮರಣ ಉಂಟಾದರೆ ₹ 10 ಲಕ್ಷ ವಿಮಾ ಪರಿಹಾರ ದೊರೆಯಲಿದೆ.

ಐದು ವರ್ಷಗಳ ಅವಧಿಯ ಒಪ್ಪಂದಕ್ಕೆ ಎರಡು ಸಂಸ್ಥೆಗಳು ಸಹಿ ಹಾಕಿದವು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಬ್ಯಾಂಕ್ ಆಫ್ ಬರೋಡದ ಪ್ರಧಾನ ಮಹಾಪ್ರಬಂಧಕ ಮನೋಜ್ ಚಾಯಾಣಿ ಒಡಂಬಡಿಕೆಯ ಪತ್ರ ವಿನಿಮಯ ಮಾಡಿಕೊಂಡರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ಉಪಾಧ್ಯಕ್ಷ ಮೊಹಮ್ಮದ್ ರಿಜ್ವಾನ್ ನವಾಬ್, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ಬ್ಯಾಂಕ್ ಆಫ್ ಬರೋಡದ ಉಪ ಮಹಾಪ್ರಬಂಧಕರಾದ ಶೈಲೇಂದ್ರಕುಮಾರ ಸಿಂಗ್, ಸುಮಿತ್ ಕುಮಾರ್ ಮಿಶ್ರಾ, ವೆಂಕಟ್ರಮಣಿ ಶ್ರೀಪೂರ್ಣಾ ಉಪಸ್ಥಿತರಿದ್ದರು.

ಐರಾವತ ಕ್ಲಬ್ ಕ್ಲಾಸ್ ಬಸ್‌ಗೆ ಚಾಲನೆ

20 ವೋಲ್ವೊ ಐರಾವತ ಕ್ಲಬ್‌ಕ್ಲಾಸ್–2.0 ಬಸ್‌ಗಳಿಗೆ ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದ್ದರು. ಅದರ ಮುಂದುವರಿದ ಭಾಗವಾಗಿ ಐದು ಬಸ್‌ಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು .

ಬೆಂಗಳೂರು–ತಿರುಪತಿ ನಡುವೆ 1, ಮಂಗಳೂರು–ಬೆಂಗಳೂರು ಮಾರ್ಗದಲ್ಲಿ 2, ಮೈಸೂರು–ಮಂತ್ರಾಲಯ ಮಾರ್ಗದಲ್ಲಿ 2 ಬಸ್‌ಗಳು ಸಂಚರಿಸಲಿವೆ.

ಚಿಟಿಕೆ ಸುದ್ದಿ

‘ಬಮುಲ್‌ಗೆ ಇ.ಡಿ ನೋಟಿಸ್: ಸೂಕ್ತ ಉತ್ತರ’

ದೊಡ್ಡಬಳ್ಳಾಪುರ: ಬಮುಲ್‌ನಲ್ಲಿ ಹಣಕಾಸು ವಹಿವಾಟಿನ ಬಗ್ಗೆ ಇ.ಡಿ ನೋಟಿಸ್ ನೀಡಿದ್ದು, ವ್ಯವಸ್ಥಾಪಕರು ವಿವರಣೆ ನೀಡುವಂತೆ ಸೂಚಿಸಿದೆ. ಅಧಿಕಾರಿಗಳು ಸೂಕ್ತ ಉತ್ತರ ನೀಡಲಿದ್ದಾರೆ ಎಂದು ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

‘ತನಿಖಾ ಸಂಸ್ಥೆಗಳು ಇದ್ದಾಗಲೇ ಪಾರ-ದರ್ಶಕವಾಗಿ ಕೆಲಸ ಮಾಡಲು ಸಾಧ್ಯ. ಆದರೆ, ನಾನು ಬಮಲ್ ಅಧ್ಯಕ್ಷನಾಗಿದ್ದಕ್ಕೆ ನೋಟಿಸ್ ನೀಡಲಾಗಿದೆ ಎನ್ನುವುದು ಸುಳ್ಳು’ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪಿಯುಸಿ ಪ್ರವೇಶಕ್ಕೆ 31ರವರೆಗೆ ಅವಕಾಶ

ಬೆಂಗಳೂರು: ಪ್ರಥಮ ಪಿಯುಸಿ ತರಗತಿಗಳ ಪ್ರವೇಶಕ್ಕೆ ದಾಖಲಾತಿ ದಿನಾಂಕವನ್ನು ಜುಲೈ 31ರವರೆಗೆ ವಿಸ್ತರಿಸಿ ಶಾಲಾ ಶಿಕ್ಷಣ ಇಲಾಖೆಯು (ಪದವಿ ಪೂರ್ವ) ಆದೇಶಿಸಿದೆ.

ಈ ತರಗತಿಗಳ ಪ್ರವೇಶಕ್ಕೆ ಕೊನೆಯ ದಿನಾಂಕವನ್ನು ಹಲವು ಬಾರಿ ವಿಸ್ತರಿಸಲಾ-ಗಿತ್ತು. ಆದರೆ ಪ್ರವೇಶಾತಿ ಬಯಸಿ ವಿದ್ಯಾರ್ಥಿಗಳು ಇನ್ನೂ ಬರುತ್ತಿರುವ ಕಾರಣ, ಕೊನೆಯ ದಿನಾಂಕವನ್ನು ಮತ್ತೆ ವಿಸ್ತರಿಸಲಾಗಿದೆ ಎಂದು ಇಲಾಖೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ದಂಡ ಶುಲ್ಕ ₹670 ಮತ್ತು ವಿಶೇಷ ದಂಡ ಶುಲ್ಕ ₹2,220 ಸೇರಿ ಒಟ್ಟು ₹2,890 ಪಾವತಿಸಿ, ಪ್ರವೇಶ ಪಡೆಯಬಹುದೆಂದು ಇಲಾಖೆ ಹೇಳಿದೆ.

ದಟ್ಟಣೆ: ಸಂಚಾರ ಮಾರ್ಪಾಡು

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವರ್ತೂರು ಕೋಡಿಯಿಂದ ಮಾರತ್‌ಹಳ್ಳಿ ಕಡೆಗೆ ಮತ್ತು ಮಾರತ್‌ಹಳ್ಳಿಯಿಂದ ವರ್ತೂರು ಕೋಡಿ ಕಡೆಗೆ ಸಂಚಾರ ದಟ್ಟಣೆ ನಿಯಂತ್ರಿಸಲು ಪ್ರಾಯೋಗಿಕವಾಗಿ ಸಂಚಾರ ಮಾರ್ಪಾಡು ಮಾಡಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ವಿಬ್‌ಗಯಾರ್ ‘ಯು’ ಟರ್ನ್ ನಿರ್ಬಂಧಿಸಲಾಗಿದೆ.

ಮಾರತ್‌ಹಳ್ಳಿ ಮತ್ತು ಕುಂದಲ-ಹಳ್ಳಿಯಿಂದ ವಿಬ್‌ಗಯಾರ್ ರಸ್ತೆ ಕಡೆಗೆ ಸಂಚರಿಸುವ ವಾಹನಗಳು ತೂಬರಹಳ್ಳಿ ಬಳಿ ಯು ಟರ್ನ್ ಪಡೆದು ಸಂಚರಿಸಬಹುದು ಎಂದು ಹೇಳಿದ್ದಾರೆ.

ಪ್ರಮುಖ ಆರೋಪಿ ಪರಾರಿ ದೃಶ್ಯ ಸೆರೆ

ರೌಡಿ ಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣ: ಎರಡೂವರೆ ತಾಸು 15 ಆರೋಪಿಗಳ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆಯಾದ 15 ನಿಮಿಷದಲ್ಲಿ ಜಗದೀಶ್ ಅಲಿಯಾಸ್ ಜಗ್ಗ ಪರಾರಿ ಆಗಿದ್ದ ಎಂಬುದು ಭಾರತಿನಗರ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಹಲಸೂರಿನಲ್ಲಿ ಜುಲೈ 15ರಂದು ರಾತ್ರಿ 8ರ ಸುಮಾರಿಗೆ ಆರೋಪಿಗಳು ಶಿವಪ್ರಕಾಶ್ ಅವರನ್ನು ಕೊಲೆ ಮಾಡಿದ್ದರು. ಬಳಿಕ ಅದೇ ದಿನ ರಾತ್ರಿ 8.15ರ ಸುಮಾರಿಗೆ ಆರೋಪಿ ಜಗದೀಶ್, ಹೆಣ್ಣೂರಿನ ತನ್ನ ಅಪಾರ್ಟ್‌ಮೆಂಟ್‌ನಿಂದ ಪರಾರಿ ಆಗುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹೊಸೂರು ಟೋಲ್ ಮೂಲಕ ಹೋಗುತ್ತಿರುವ ದೃಶ್ಯ ಸೆರೆಯಾಗಿದೆ.

ಕೃತ್ಯ ನಡೆಯುವುದಕ್ಕೂ ಮುನ್ನ ಆರೋಪಿಗಳ ಜತೆಗೆ ರಾಮಮೂರ್ತಿ-ನಗರದ ಹೋಟೆಲ್‌ನಲ್ಲಿ ಜಗ್ಗ ಸಭೆ ನಡೆಸಿದ್ದ. ಹೋಟೆಲ್‌ನಲ್ಲಿ ಕುಳಿತಿರುವ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಸಂಗ್ರಹಿಸಿದ್ದಾರೆ. ಕಾರು ಹತ್ತಿ ಆರೋಪಿ ಪರಾರಿ ಆಗುತ್ತಿರುವ ಫೋಟೊಗಳೂ ತನಿಖಾ ತಂಡಕ್ಕೆ ಸಿಕ್ಕಿವೆ. ಶಿವು ಅವರನ್ನು ಹತ್ಯೆ ಮಾಡುವುದಕ್ಕೂ ಮುನ್ನ ಹೋಟೆಲ್‌ನಲ್ಲಿ 15 ಆರೋಪಿಗಳು ಎರಡೂವರೆ ತಾಸು ಸಭೆ ನಡೆಸಿದ್ದರು ಎಂಬ ಮಾಹಿತಿ ಪೊಲೀಸರಿಗೆ ಸಿಕ್ಕಿದೆ.


ಕಿರಣ್

ಕೊಲೆ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿ ಕೊಂಡಿದ್ದ ಆರೋಪಿ ಕಿರಣ್ (23) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 16ಕ್ಕೆ ಏರಿಕೆಯಾಗಿದೆ.

ಮಾಲೂರು ಮೂಲದ ಆರೋಪಿಯು ಬಂಧನ ಭೀತಿಯಿಂದ ಚಿಕ್ಕ ತಿರುಪತಿಯ ಲಾಡ್ಜ್‌ವೊಂದರಲ್ಲಿ ತಲೆಮರೆಸಿಕೊಂಡಿದ್ದ. ಖಚಿತ ಮಾಹಿತಿ ಮೇರೆಗೆ ಆರೋಪಿಯನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕೃತ್ಯಕ್ಕೆ ಸುಪಾರಿ ಪಡೆದಿದ್ದ ನಾಲ್ವರ ಜತೆಗೆ ಕಿರಣ್ ಗುರುತಿಸಿಕೊಂಡಿದ್ದ. ಬಿಕ್ಲು ಶಿವನನ್ನು ಹತ್ಯೆ ಮಾಡಲು ₹30 ಸಾವಿರ ಹಣ ಪಡೆದುಕೊಂಡಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕಿರಣ್ ವಿರುದ್ಧ ಮಾಲೂರು ಪೊಲೀಸ್ ಠಾಣೆಯಲ್ಲಿ ಈ ಹಿಂದೆಯೂ ಕೊಲೆ ಪ್ರಕರಣ ದಾಖಲಾಗಿದೆ. ಈತನ ವಿರುದ್ಧ ರೌಡಿಪಟ್ಟಿ ತೆರೆಯಲಾಗಿತ್ತು’ ಎಂದು ಪೊಲೀಸರು ಹೇಳಿದರು.

ತನಿಖಾಧಿಕಾರಿಗಳ ನೇಮಕ: ಕೊಲೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ. ಭಾರತಿನಗರ ಪೊಲೀಸರು ಇದುವರೆಗೂ ನಡೆಸಿದ ತನಿಖಾ ಕಡತಗಳನ್ನು ಸಿಐಡಿಗೆ ಅಧಿಕೃತವಾಗಿ ಹಸ್ತಾಂತರಿಸಲು ಸಿದ್ಧತೆ ನಡೆಸಿದ್ದಾರೆ. ಅಲ್ಲದೇ ತನಿಖೆಗೆ ಸಿಐಡಿ ತಂಡ ಸಹ ರಚಿಸಲಾಗಿದೆ. ಡಿವೈಎಸ್ಪಿ ಉಮೇಶ್, ಇನ್‌ಸ್ಪೆಕ್ಟರ್‌ಗಳಾದ ಸಂದೀಪ್ ಮೇಟಿ, ಆರ್. ಮಂಜುನಾಥ್ ಹಾಗೂ ರಾಘವೇಂದ್ರ ತನಿಖಾ ತಂಡದಲ್ಲಿ ಇರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಲೆಮರೆಸಿಕೊಂಡಿರುವ ಪ್ರಮುಖ ಆರೋಪಿ ಜಗದೀಶ್ ಬಂಧನಕ್ಕೆ ಮತ್ತೊಂದೆಡೆ ಪೊಲೀಸರು ಬಲೆ ಬೀಸಿದ್ದಾರೆ. ಆದರೂ ಈವರೆಗೆ ಪತ್ತೆಯಾಗಿಲ್ಲ. ಆರೋಪಿ ವಿರುದ್ಧ ಭಾರತೀನಗರ ಠಾಣೆ ಪೊಲೀಸರು ಲುಕ್ ಔಟ್ ನೋಟಿಸ್ ಜಾರಿ ಮಾಡಿದ್ದಾರೆ ಎಂದು ಗೊತ್ತಾಗಿದೆ. ಮತ್ತೊಬ್ಬ ಆರೋಪಿ ಧನುಷ್ ಗಾಗಿ ಶೋಧ ನಡೆಸಲಾಗುತ್ತಿದೆ.

ನ್ಯಾಯಾಂಗ ಬಂಧನ: ಬಂಧಿತರನ್ನು ಶುಕ್ರವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ಆರೋಪಿಗಳಿಗೆ ಆಗಸ್ಟ್ 4ರ ವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

9 ಮಂದಿ ವಿರುದ್ಧ ರೌಡಿಪಟ್ಟಿ

ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳ ಪೈಕಿ 9 ಮಂದಿ ವಿರುದ್ಧ ಭಾರತಿನಗರ ಠಾಣೆ ಪೊಲೀಸರು ರೌಡಿಪಟ್ಟಿ ತೆರೆದಿದ್ದಾರೆ.

ಆರೋಪಿಗಳಾದ ಕಿರಣ್, ಮದನ್, ವಿಮಲ್, ಪ್ರದೀಪ್, ಸ್ಯಾಮ್ಯುವೆಲ್ ಪ್ಯಾಟ್ರಿಕ್ ಸೇರಿದಂತೆ 9 ಮಂದಿಯನ್ನು ರೌಡಿ ಪಟ್ಟಿಗೆ ಸೇರಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ವಿದೇಶಕ್ಕೆ ಪರಾರಿಯಾಗಿರುವ ಜಗದೀಶ್ ಅಲಿಯಾಸ್ ಜಗ್ಗನನ್ನು ಮತ್ತೆ ರೌಡಿ ಪಟ್ಟಿಗೆ ಸೇರಿಸಲು ತೀರ್ಮಾನಿಸಲಾಗಿದೆ. ಜಗ್ಗನ ವಿರುದ್ಧ ಇಂದಿರಾನಗರ, ಜೆ.ಬಿ.ನಗರ, ಜೆ.ಪಿ.ನಗರ, ಕೆ.ಆರ್.ಪುರ ಸೇರಿದಂತೆ ಹಲವು ಠಾಣೆಗಳಲ್ಲಿ ಅಪರಾಧ ಪ್ರಕರಣಗಳು ದಾಖಲಾಗಿವೆ. ಜಗದೀಶ್‌ನ ಹೆಸರು ಈ ಹಿಂದೆ ರೌಡಿ ಪಟ್ಟಿಯಲ್ಲಿತ್ತು. ಇತ್ತೀಚೆಗೆ ಆತನ ಹೆಸರನ್ನು ರೌಡಿ ಪಟ್ಟಿಯಿಂದ ಕೈಬಿಡಲಾಗಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಶಾಸಕ ಬೈರತಿ ಬಸವರಾಜ್ ಪಿಎಗೆ ನೋಟಿಸ್

ಪ್ರಕರಣದ 5ನೇ ಆರೋಪಿಯಾಗಿರುವ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರ ಆಪ್ತ ಸಹಾಯಕ ಹನುಮಂತು ಅವರಿಗೆ ಪೊಲೀಸರು ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಿದ್ದಾರೆ.

ಕೊಲೆ ಆರೋಪಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದ ಹನುಮಂತು, ಅವರ ಮೊಬೈಲ್‌ಗೆ ಕರೆ ಮಾಡಿ ಮಾತನಾಡಿರುವ ಬಗ್ಗೆ ಮಾಹಿತಿ ಸಂಗ್ರ-ಹಿಸಲಾಗಿದೆ ಎಂದು ಪೊಲೀಸರು ಹೇಳಿದರು.


ಪಾದಚಾರಿ ಮಾರ್ಗದ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ನಾಲ್ಕು ವಲಯಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ, ಅನಧಿಕೃತ ಜಾಹೀರಾತು ತೆರವು ಕಾರ್ಯಾಚರಣೆ ಹಾಗೂ ಸಾಮೂಹಿಕ ಸ್ವಚ್ಛತಾ ಕಾರ್ಯವನ್ನು ಶುಕ್ರವಾರ ನಡೆಸಲಾಯಿತು.

ಪೂರ್ವ ವಲಯದಲ್ಲಿ ಆಯಾ ವಿಭಾಗಗಳ ಕಾರ್ಯಪಾಲಕ ಎಂಜಿನಿಯರ್ ನೇತೃತ್ವದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಹಾಗೂ ಪವರ್ ವಾಶರ್ ಬಳಸಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಪೇಂಟಿಂಗ್‌ನಿಂದ ಕಾಂಪೌಂಡ್‌ಗಳನ್ನು ಸೌಂದರೀಕರಿಸಲಾಯಿತು.

ಆರ್.ಟಿ ನಗರದ ಅಂಚೆ ಕಚೇರಿಯಿಂದ ಬಸ್ ನಿಲುಗಡೆ ಸ್ಥಳದವರೆಗೆ, ಪುಲಕೇಶಿನಗರ ವಿಭಾಗದ ವಾರ್ಡ್ 61ರ ಎಸ್.ಕೆ. ಗಾರ್ಡನ್ ರಸ್ತೆಯಲ್ಲಿ, ಶಿವಾಜಿನಗರ ವಿಭಾಗದಲ್ಲಿ ಎಚ್‌ಕೆಪಿ ರಸ್ತೆಯಲ್ಲಿ, ಸರ್ವಜ್ಞ ನಗರ ವಿಭಾಗದಲ್ಲಿ ಬಾಣಸವಾಡಿ ಮುಖ್ಯ ರಸ್ತೆಯ ಸಿಂಧೂರ್ ಹೋಟೆಲ್‌ನಿಂದ ವೇಮಣ್ಣ ರಸ್ತೆಯವರೆಗೆ, ಶಾಂತಿನಗರ ವಿಭಾಗದ ವಾರ್ಡ್ 112ರ ಪರಮಹಂಸ ಯೋಗಾನಂದ ರಸ್ತೆಯಲ್ಲಿ ಪಾದಚಾರಿ ಪಥ ಒತ್ತುವರಿ ತೆರವು ಹಾಗೂ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು.

ಪಶ್ಚಿಮ ವಲಯದಲ್ಲಿ ರಾಜಾಜಿನಗರ ವಿಭಾಗದಲ್ಲಿ 1ನೇ ಮುಖ್ಯರಸ್ತೆ ಬಸವೇಶ್ವರ ನಗರ, ಮಹಾಲಕ್ಷ್ಮಿಪುರ ವಿಭಾಗದ ಪೈಪ್‌ಲೈನ್ ರಸ್ತೆ ಹಾಗೂ ವಾರ್ಡ್ 49ರ ನಾಗಾಪುರ, ಚಾಮರಾಜಪೇಟೆ ವಿಭಾಗದ ವಾರ್ಡ್ 138ರ ಚಲವಾದಿಪಾಳ್ಯದಲ್ಲಿ, ಗಾಂಧಿನಗರ ವಿಭಾಗದ ಚಿಕ್ಕಪೇಟೆಯ ಪಾರ್ಕ್ ರಸ್ತೆ, ಗೋವಿಂದರಾಜನಗರ ವಿಭಾಗದ ವಾರ್ಡ್ 139 ಮೂಡಲಪಾಳ್ಯ ಚಂದ್ರ ಲೇಔಟ್‌ನಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಮಾಡಲಾಯಿತು.

ರಾಜರಾಜೇಶ್ವರಿ ವಿಭಾಗದ ಕೆಂಪೇಗೌಡ ಡಬಲ್ ರಸ್ತೆ, ರಾಜರಾಜೇಶ್ವರಿನಗರ ಕೆಂಪೇಗೌಡ ವೃತ್ತದಿಂದ ಕನಕದಾಸ ವೃತ್ತ, ಕೆಂಗೇರಿ ಉಪನಗರದ 1ನೇ ‘ಡಿ’ ಮುಖ್ಯರಸ್ತೆಯಿಂದ 8ನೇ ಅಡ್ಡರಸ್ತೆ, 1ನೇ ‘ಡಿ’ ಮುಖ್ಯರಸ್ತೆ ಒತ್ತುವರಿ ತೆರವು ಮಾಡಲಾಯಿತು.

ಪಾನಿಪುರಿ ತಿನ್ನುವಾಗ ಗಲಾಟೆ: ಹಲ್ಲೆಯಿಂದ ಯುವಕ ಸಾವು

ಬೆಂಗಳೂರು: ರಾಜಗೋಪಾಲನಗರದ ಬಳಿಯ ಲವಕುಶ ನಗರದಲ್ಲಿ ದುಷ್ಕರ್ಮಿಗಳಿಂದ ಹಲ್ಲೆಯಿಂದ ಗಾಯಗೊಂಡಿದ್ದ ಅರುಣ್‌ಕುಮಾರ್ (24) ಅವರು ಶುಕ್ರವಾರ ಮೃತಪಟ್ಟಿದ್ದಾರೆ.

ಅರುಣ್‌ಕುಮಾರ್ ಅವರ ತಾಯಿ ನೀಡಿದ ದೂರಿನ ಮೇರೆಗೆ ಕಾರ್ತಿಕ್, ಕುಶಾಲ್ ಮತು ದರ್ಶನ್ ಎಂಬುವರನ್ನು ಬಂಧಿಸಲಾಗಿದೆ. ಲವಕುಶನಗರದ ಅರುಣ್‌ಕುಮಾರ್ ಅವರು ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದರು.

ಜುಲೈ 19ರಂದು ಸ್ನೇಹಿತ ರೋಹಿತ್ ಅವರ ಜತೆಗೆ ಪಾನಿಪುರಿ ತಿನ್ನಲು ಅರುಣ್‌ಕುಮಾರ್ ಹೋಗಿದ್ದರು. ಆ ಸಂದರ್ಭದಲ್ಲಿ ಗಲಾಟೆ ನಡೆದಿತ್ತು. ಅರುಣ್‌ಕುಮಾರ್ ಅವರ ಮೇಲೆ ದುಷ್ಕರ್ಮಿಗಳು, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಅರುಣ್‌ಕುಮಾರ್ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆಸ್ಪತ್ರೆಯಲ್ಲಿ ಅವರು ಶುಕ್ರವಾರ ಮೃತಪಟ್ಟಿದ್ದಾರೆ. ಲವಕುಶ ನಗರದ ಆರೋಪಿಗಳು ಪಾನಮತ್ತರಾಗಿ ಅರುಣ್‌ಕುಮಾರ್ ಮತ್ತು ರೋಹಿತ್‌ನ ಜತೆಗೆ ಗಲಾಟೆ ಮಾಡಿ ಹಲ್ಲೆ ನಡೆಸಿದ್ದರು ಎಂದು ಪೊಲೀಸರು ಹೇಳಿದರು.

ಸಹ ಪ್ರಯಾಣಿಕನ ಬ್ಯಾಗ್‌ನಲ್ಲಿ 3.5 ಕೆಜಿ ಚಿನ್ನ ಇಟ್ಟು ಆರೋಪಿ ಪರಾರಿ

ದೇವನಹಳ್ಳಿ: ದುಬೈಯಿಂದ ದಾಖಲೆ ಇಲ್ಲದೆ ಅಕ್ರಮವಾಗಿ ತಂದಿದ್ದ 3.5 ಕೆ.ಜಿ ಚಿನ್ನವನ್ನು ಆರೋಪಿಯೊಬ್ಬ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರೊಬ್ಬರ ಲಗ್ಗೇಜ್‌ನಲ್ಲಿ ಇಟ್ಟು ಪರಾರಿಯಾಗಿದ್ದಾನೆ.

ವಿಮಾನ ನಿಲ್ದಾಣದಲ್ಲಿ ಶುಕ್ರವಾರ ದುಬೈನಿಂದ ಬಂದಿದ್ದ ಆರೋಪಿ 3.5 ಕೆ.ಜಿ ಚಿನ್ನದ ಬಿಸ್ಕತ್ ಕಳ್ಳ ಸಾಗಣೆಗೆ ಯತ್ನಿಸಿದ್ದ. ಕಸ್ಟಮ್ಸ್ ಅಧಿಕಾರಿಗಳು ಪರಿಶೀಲನೆಯಿಂದ ತಪ್ಪಿಸಿಕೊಳ್ಳಲು ಚಿನ್ನದ ಬಿಸ್ಕತ್ ಇದ್ದ ಚೀಲವನ್ನು ಸಹ ಪ್ರಯಾಣಿಕರೊಬ್ಬರ ಲಗೇಜ್ ಟ್ರಾಲಿಯಲ್ಲಿ ಇರಿಸಿ ಪರಾರಿಯಾಗಿದ್ದ.

ಚೀಲ ಗಮನಿಸಿದ ಸಹ ಪ್ರಯಾಣಿಕ ಭದ್ರತಾ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದ. ನಂತರ ಅಧಿಕಾರಿಗಳು ಚಿನ್ನ ವಶಪಡಿಸಿಕೊಂಡಿದ್ದಾರೆ. ಬ್ಯಾಗ್ ಇಟ್ಟ ವ್ಯಕ್ತಿಯನ್ನು ಗುರುತಿಸಲು ತನಿಖೆ ಕೈಗೊಂಡಿದ್ದಾರೆ.

ವರದಕ್ಷಿಣೆ ಕಿರುಕುಳದ ಪ್ರಕರಣ ದಾಖಲು

ಯುವತಿ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪ್ರೀತಿಸಿ ಮದುವೆಯಾಗಿದ್ದ ಯುವತಿ ಅನುಮಾನಾಸ್ಪದ ರೀತಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಅಂಚೆಪಾಳ್ಯದಲ್ಲಿ ಗುರುವಾರ ರಾತ್ರಿ ಮೃತಪಟ್ಟಿದ್ದಾರೆ.


ಅಭಿಷೇಕ್ ಮತ್ತು ಸ್ಪಂದನ ದಂಪತಿ

ಸ್ಪಂದನಾ (24) ಮೃತಪಟ್ಟವರು. ಪೋಷಕರ ವಿರೋಧದ ನಡುವೆ ಅಭಿಷೇಕ್‌ರೊಂದಿಗೆ ಒಂದು ವರ್ಷದ ಹಿಂದೆ ಮದುವೆ-ಯಾಗಿದ್ದರು. ಬಳಿಕ ವರದ-ಕ್ಷಿಣೆಗಾಗಿ ಅಭಿಷೇಕ್ ಕಿರುಕುಳ ನೀಡುತ್ತಿದ್ದ. ಇದು ಗೊತ್ತಾಗಿ ಸ್ಪಂದನಾರ ತಂದೆ ಚಂದ್ರ ಅವರು ಇಬ್ಬರಲ್ಲಿ ರಾಜಿ ಮಾಡಿ ₹ 5 ಲಕ್ಷ ಹಣ ನೀಡಿದ್ದರು.

ಅಪರಾಧ ಸುದ್ದಿ

ಗುರುವಾರ ಭೀಮನ ಅಮಾವಾಸ್ಯೆ ಇದ್ದ ಕಾರಣ ಪತಿಯ ಪಾದಪೂಜೆಯನ್ನು ಸ್ಪಂದನಾ ಮಾಡಿದ್ದರು. ಗುರುವಾರ ರಾತ್ರಿ ತಂದೆಗೆ ಸ್ಪಂದನಾ ಕರೆ ಮಾಡಿದ್ದು, ಕಿರುಕುಳದ ಬಗ್ಗೆ ತಿಳಿಸಿ ಕಣ್ಣೀರಿಟ್ಟಿದ್ದರು. ಇದಾಗಿ ಸ್ವಲ್ಪ ಸಮಯದ ನಂತರ ಸಾವಿನ ಸುದ್ದಿಯನ್ನು ಅಭಿಷೇಕ್ ಮನೆಯವರು ಸ್ಪಂದನಾ ತಂದೆಗೆ ತಿಳಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸ್ಪಂದನಾ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಯುತ್ತಿದೆ. ಮಾದನಾಯಕನಹಳ್ಳಿ ಪೊಲೀಸರು ವರದಕ್ಷಿಣೆ ಕಿರುಕುಳದಿಂದ ಸಾವು ಪ್ರಕರಣ ದಾಖಲಿಸಿಕೊಂಡಿದ್ದು, ಅಭಿಷೇಕ್‌ನನ್ನು ಬಂಧಿಸಿರುವುದಾಗಿ ಹೇಳಿದ್ದಾರೆ. ಅತ್ತೆ ಬೇಬಿ ಮಾಲಮ್ಮ ಅವರನ್ನು ವಿಚಾರಣೆ ನಡೆಸಲಾಗುತ್ತಿದೆ. ಡಿವೈಎಸ್ಪಿ ಜಗದೀಶ್ ನೇತೃತ್ವದಲ್ಲಿ ವಿಚಾರಣೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ವಿದ್ಯಾರ್ಥಿನಿ ಆತ್ಮಹತ್ಯೆ

ನೆಲಮಂಗಲ: ಮಾಗಡಿ ರಸ್ತೆ ಬ್ಯಾಡರಹಳ್ಳಿ ಸರ್ಕಾರಿ ಶಾಲೆ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ತನುಶ್ರೀ

ರವಿ ಮತ್ತು ಶ್ವೇತಾ ದಂಪತಿಯ ಮಗಳು ತನುಶ್ರೀ(17) ಆತ್ಮಹತ್ಯೆ ಮಾಡಿಕೊಂಡವರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎರಡು ಬಾರಿ ಅನುತ್ತೀರ್ಣಗೊಂಡಿದ್ದರು. ಮೂರನೇ ಬಾರಿ ಪರೀಕ್ಷೆ ಬರೆದಿದ್ದು, ಅದರ ಫಲಿತಾಂಶ ಗುರುವಾರ ಪ್ರಕಟವಾಗಿತ್ತು. ಅದರಲ್ಲಿಯೂ ಅನುತ್ತೀರ್ಣರಾಗಿರುವುದು ಗೊತ್ತಾಗಿ ಈ ಕೃತ್ಯ ಎಸಗಿದ್ದಾರೆ ಎಂದು ಶಂಕಿಸಲಾಗಿದೆ.ಮಾದನಾಯಕನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎಲ್ಲರಿಗೂ ಎ ಖಾತಾ: ಅಧಿಸೂಚನೆ

ಬೆಂಳೂರು: ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024’ ವ್ಯಾಪ್ತಿಯಲ್ಲಿ ಮಾನ್ಯತೆ ಸಿಗದೆ, ಕಟ್ಟಡ ಕಟ್ಟಲು ನಕ್ಷೆ ಲಭಿಸದ ‘ಬಿ ಖಾತಾ’ ಹೊಂದಿರುವ ಹಾಗೂ ಹೊಂದಿರದ ಆಸ್ತಿಗಳಿಗೆ ಎ–ಖಾತಾ ನೀಡಲು ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಬಿ ಖಾತಾ (ಯಾವುದೇ ಅನುಮೋದನೆ ಪಡೆಯದ ಬಡಾವಣೆಗಳಲ್ಲಿ ನಿರ್ಮಿಸಿದ ನಿವೇಶನ ಹಾಗೂ ಕಟ್ಟಡ) ಆಸ್ತಿ ಹೊಂದಿದವರು, ತಮ್ಮ ಆಸ್ತಿಯನ್ನೇ ಕಳೆದುಕೊಳ್ಳುವ ಭೀತಿಯಲ್ಲಿದ್ದರು. ಅದಕ್ಕೆ, ಪರಿಹಾರ ಕಲ್ಪಿಸಲು ಎಲ್ಲರಿಗೂ ಎ ಖಾತಾ ನೀಡಲು ಜುಲೈ 17ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಅದರಂತೆ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ನಿವೇಶನಗಳು ಎ ಖಾತಾದ ಸಕಲ ಸೌಲಭ್ಯಗಳನ್ನು ಪಡೆಯಲು ಅರ್ಹವಾಗಿದ್ದು, ಮಾರ್ಗಸೂಚಿ ದರದಂತೆ ಅಗತ್ಯವಾದ ಶುಲ್ಕ, ಅಭಿವೃದ್ಧಿ ಶುಲ್ಕವನ್ನು ಬಿಬಿಎಂಪಿಗೆ ಪಾವತಿಸಬೇಕು. ಶುಲ್ಕ ಪಾವತಿ ನಂತರ, ಇ–ಖಾತಾ ಸೇರಿದಂತೆ ಕಟ್ಟಡ ನಕ್ಷೆಯೂ ಲಭ್ಯವಾಗಲಿದೆ.

‘ಬಿ’ ಖಾತಾ ಹೊಂದಿರುವ ಅಥವಾ ಯಾವುದೇ ಖಾತಾ ಹೊಂದಿರದ ನಿವೇಶನಗಳಿಗೆ ಆನ್‌ಲೈನ್‌ನಲ್ಲೇ ‘ಎ’ ಖಾತಾ, ‘ಇ’ ಖಾತಾ ನೀಡುವ ‘ಸಮಗ್ರ ತಂತ್ರಾಂಶ’ವನ್ನು ಬಿಬಿಎಂಪಿ ಅಳವಡಿಸಿಕೊಳ್ಳಲಿದೆ. ಕಾವೇರಿ ತಂತ್ರಾಂಶದೊಂದಿಗೆ ಮಾಹಿತಿ ಕಲೆಹಾಕುವುದು ಸೇರಿದಂತೆ ಕಂದಾಯ ಇಲಾಖೆ, ಬಿಬಿಎಂಪಿಯ ಕಂದಾಯ ವಿಭಾಗ, ನಗರ ಯೋಜನೆಯ ಅಧಿಕಾರಿಗಳು ‘ಸಮಗ್ರ ತಂತ್ರಾಂಶ’ ಮೂಲಕವೇ ಎಲ್ಲ ರೀತಿಯ ಅನುಮೋದನೆಯನ್ನು ನೀಡಲಿದ್ದಾರೆ.

ನಿವೇಶನ ‘ಎ’ ಖಾತಾವಾಗಿ ಕಾನೂನುಬದ್ಧವಾಗಲು ಪಾವತಿಸಬೇಕಾದ ಶುಲ್ಕದ ಲೆಕ್ಕಾಚಾರವೂ ಆನ್‌ಲೈನ್‌ನಲ್ಲೇ ಆಗಲಿದೆ. ಈ ಪ್ರಕ್ರಿಯೆ ಆಗಸ್ಟ್ 15ರ ವೇಳೆಗೆ ಜಾರಿಯಾಗಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದ್ದಾರೆ.

ಲಂಚದ ಆರೋಪ: ಇಬ್ಬರು ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಮಣ್ಯಪುರ ಠಾಣೆಯ ಪಿಎಸ್‌ಐ ಬೈರಪ್ಪ ಹಾಗೂ ಕೆಂಗೇರಿ ಪೊಲೀಸ್ ಠಾಣೆಯ ಪಿಎಸ್‌ಐ ಮುರಳಿ ಮೋಹನ್ ಅವರನ್ನು ಅಮಾನತು ಮಾಡಿ ನಗರ ಪೊಲೀಸ್ ಕಮಿಷನರ್ ಆದೇಶಿಸಿದ್ದಾರೆ.

ಲಂಚ ಕೇಳಿದ ಆರೋಪದಡಿ ಬೈರಪ್ಪ ಹಾಗೂ ಮುರಳಿ ಮೋಹನ್ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಲೋಕಾಯುಕ್ತ ವರದಿ ಆಧರಿಸಿ ಇಬ್ಬರು ಪಿಎಸ್‌ಐಗಳನ್ನು ಅಮಾನತು ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಶಾಂತ್ ನಗರದ ನಿವಾಸಿ ಶಿವಕುಮಾರ್ ಎಂಬುವರು ನೀಡಿದ ದೂರು ಆಧರಿಸಿ ಇಬ್ಬರು ಪಿಎಸ್‌ಐಗಳ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಈ ಕುರಿತು ಲೋಕಾಯುಕ್ತ ಕಚೇರಿಯಿಂದ ನಗರ ಪೊಲೀಸ್ ಕಮಿಷನರ್‌ಗೆ ಪತ್ರ ಬರೆದು ಮಾಹಿತಿ ಕೋರಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಶಿವಕುಮಾರ್ ಅವರು ರಿಯಲ್ ಎಸ್ಟೇಟ್ ಕೆಲಸ ಮಾಡುತ್ತಿದ್ದಾರೆ. ಇವರ ಸಂಬಂಧಿ ಪುಟ್ಟಸ್ವಾಮಿ ಅವರಿಗೆ ಸೇರಿದ ನಿವೇಶನದ ಸುತ್ತ ನಿರ್ಮಿಸಿದ್ದ ಕಾಂಪೌಂಡ್ ಅನ್ನು ಕೆಲವು ವ್ಯಕ್ತಿಗಳು ತೆರವು ಮಾಡಿ ಅತಿಕ್ರಮಣ-ಕ್ಕೆ ಮುಂದಾಗಿದ್ದರು. ಆ ಪ್ರಕರಣದಲ್ಲಿ ಇಬ್ಬರು ಅಧಿಕಾರಿಗಳು ಲಂಚ ಕೇಳಿದ್ದರು ಎಂಬ ಆರೋಪವಿದೆ.

‘ನಿವೇಶನವನ್ನು ಸುಪರ್ದಿಗೆ ಕೊಡಿಸಲು ಇಬ್ಬರು ಅಧಿಕಾರಿಗಳು ₹ 10 ಲಕ್ಷ ಕೇಳಿದ್ದರು ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದೆ.

ಇಲಾಖೆ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಎತ್ತರದ ಕಟ್ಟಡಗಳಿಗೆ ಶೇ 1ರಷ್ಟು ‘ಫೈರ್ ಸೆಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹಾಲಿ ಇರುವ ಮತ್ತು ಹೊಸದಾಗಿ ನಿರ್ಮಾಣವಾಗುವ ಬಹುಮಹಡಿ ಕಟ್ಟಡಗಳ ಆಸ್ತಿ ತೆರಿಗೆಯೊಂದಿಗೆ ಶೇ 1 ರ ದರದಲ್ಲಿ ‘ಫೈರ್ ಸೆಸ್’ ವಸೂಲು ಮಾಡಲು ಸರ್ಕಾರ ತೀರ್ಮಾನಿಸಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಇದಕ್ಕಾಗಿ ಕರ್ನಾಟಕ ಅಗ್ನಿಶಾಮಕ (ತಿದ್ದುಪಡಿ) ಮಸೂದೆ 2025 ಕ್ಕೆ ಅನುಮೋದನೆ ನೀಡಲಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಹುಮಹಡಿ ಕಟ್ಟಡಗಳು, ಆಸ್ಪತ್ರೆ, ಕೈಗಾರಿಕೆಗಳು ಸೇರಿ ಅಗ್ನಿ ಸುರಕ್ಷತಾ ಕಾಯ್ದೆ ಅನ್ವಯ ಆಗುವ ಎಲ್ಲ ಕಟ್ಟಡಗಳಿಂದಲೂ ಸೆಸ್ ಸಂಗ್ರಹಿಸಲಾಗುತ್ತದೆ ಎಂದು ಅವರು ವಿವರಿಸಿದರು.

ಈ ಮಸೂದೆಯನ್ನು ಮುಂಬರುವ ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಹೇಳಿದರು.

‘ಚಿಂತೆಯೆಂಬ ಚಿತೆಗೆ ವಚನ ಪರಿಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವರಿದ್ದಾನೋ ಇಲ್ಲವೋ ಎಂಬ ಚಿಂತೆಯೂ ಸೇರಿದಂತೆ ಹತ್ತಾರು ಚಿಂತೆಗಳೆಂಬ ಚಿತೆಯಲ್ಲಿ ವಚನಗಳು ಪರಿಹಾರವಾಗಿವೆ’ ಎಂದು ಸಂಸ್ಕೃತಿ ಚಿಂತಕ ಎಸ್. ಷಡಕ್ಷರಿ ಹೇಳಿದರು.

ವಿಜಯನಗರದ ಡಾ. ಮುನಿರಾಜಪ್ಪನವರ ‘ಹೊಂಬೆಳಕು‘ನಲ್ಲಿ ನಡೆದ ವಚನಜ್ಯೋತಿ ಬಳಗದ ವಚನ ಶ್ರಾವಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉಪನ್ಯಾಸ ನೀಡಿದ 5ನೇ ತರಗತಿ ವಿದ್ಯಾರ್ಥಿನಿ ಶ್ರಾವಣಿ ಹಣ್ಣಿ, ‘ವಚನವೆಂದರೆ ಬರಿ ಮಾತಲ್ಲ, ಅದು ಪ್ರಮಾಣ. ನಡೆಯೊಳಗೆ ನುಡಿಯ ಪೂರೈಸುವುದೇ ವಚನ’ ಎಂದು ವಿವರಿಸಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ, ‘ಹೆಚ್ಚುತ್ತಿರುವ ಮೌಢ್ಯಾಚ-ರಣೆಗಳ ಕುರಿತು ಅರಿವು ಮೂಡಿಸಿ ಸರಳ ಶುದ್ದ ಬದುಕನ್ನು ರೂಢಿಸಿಕೊಳ್ಳಬೇಕೆಂಬ ಬಸವಾದಿ ಪ್ರಮಥರ ಸಂದೇಶವನ್ನು ಜನಸಾಮಾನ್ಯರಿಗೆ, ವಿಶೇಷವಾಗಿ ವಿದ್ಯಾ-ರ್ಥಿಗಳಿಗೆ ತಲುಪಿಸಲು ವಚನ ಶ್ರಾವಣ ಆಯೋಜಿಸಲಾಗಿದೆ’ ಎಂದು ಹೇಳಿದರು.


ವಚನ ಶ್ರಾವಣ ಉದ್ಘಾಟನೆಯಲ್ಲಿ ವಿದ್ಯಾರ್ಥಿನಿ ಶ್ರಾವಣಿ ಹಣ್ಣಿ ಉಪನ್ಯಾಸ ನೀಡಿದರು. ಷಡಕ್ಷರಿ, ಮಹೇಶ ಬೆಲ್ಲದ, ಪಿನಾಕಪಾಣಿ, ಮುನಿರಾಜಪ್ಪ ಉಪಸ್ಥಿತರಿದ್ದರು

ಪಂ. ದೇವೇಂದ್ರಕುಮಾರ ಪತ್ತಾರ್, ಸರಸ್ವತಿ ಹೆಗಡೆ, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಈರಯ್ಯ ಚಿಕ್ಕಮಠ್, ಸವಿತಾ ಅಮರೇಶ್, ಚೇತನಾ ಮುಧೋಳ್, ಸಿದ್ದರಾಮ ಕೇಸಾಪುರ, ಚಂದ್ರಮತಿ ಗಿರೀಶ್, ಪೂರ್ಣಿಕ ಆರಾಧ್ಯ ವಚನಗಳನ್ನು ಮನದುಂಬಿ ಹಾಡುವುದರ ಮೂಲಕ ವಚನ ಶ್ರಾವಣಕ್ಕೆ ಮೆರಗು ನೀಡಿದರು.

ಬಳಗದ ಪ್ರಭು, ರಾಜಾ ಗುರುಪ್ರಸಾದ್, ಗಂಗಾಂಬಿಕೆ ಮುನಿರಾಜಪ್ಪ, ಡಾ. ಶಿವದೇವ್, ಎಲೆ ಶಶಿಧರ್, ವಚನ ಕಲಿಕಾ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಗರದಲ್ಲಿ ಇಂದು

‘ಆರೋಹಣ’ ಸ್ವಾಗತ ಸಮಾರಂಭ: **ಅತಿಥಿಗಳು**: ದಿವ್ಯಾ ಆಲೂರ್, ಜೂನಿಯರ್ ರಾಜ್‌ಕುಮಾರ್, ಜೂನಿಯರ್ ಶಂಕರ್‌ನಾಗ್, ಜೂನಿಯರ್ ವಿಷ್ಣುವರ್ಧನ್, ಆಯೋಜನೆ ಮತ್ತು ಸ್ಥಳ: ಅಸೆಂಟ್ ಪದವಿ ಪೂರ್ವ ಕಾಲೇಜು, ಹೆಸರಘಟ್ಟ ಮುಖ್ಯರಸ್ತೆ, ಬೆಳಿಗ್ಗೆ 9

ವಾಗ್ಗೇಯಕಾರ ದಿನಾಚರಣೆ, ಗುರುಸ್ಮೃತಿ ಹಾಗೂ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನ: ಆರ್. ಚಂದ್ರಿಕ ಅವರ ಸ್ಮರಣಾರ್ಥ ಪುರಂದರದಾಸರ ನವರತ್ನ ಮತ್ತು ತ್ಯಾಗರಾಜರ ಪಂಚರತ್ನ ಕೃತಿ ಗೋಷ್ಠಿ ಗಾಯನ ಹಾಗೂ ವಾದನ, ಆಯೋಜನೆ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 9

ಆರ್ಟ್ ಎಕ್ಸ್‌ಪೋ: ಅತಿಥಿಗಳು: ಗಣಪತಿ ಎಸ್. ಹೆಗಡೆ, ಹಸನ್ ಅಲಿ, ಮೊಹಮ್ಮದ್ ಇರ್ಫಾನ್ ಹೈದರ್, ಅನೀಜ್ ಜೇಹ್ರಾ, ಅನುರಾಧ ಎಸ್. ರಾಜು, ಆಯೋಜನೆ ಮತ್ತು ಸ್ಥಳ: ದಿ ಸಲೋನಿ ಸ್ಕೂಲ್, ವಿ.ಪಿ. ನಗರ, ಬೇಗೂರು, ಬೆಳಿಗ್ಗೆ 9.30

‘ಬಸ್ತರ್ 1862’ ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಘ್, ‘ಬುಡಕಟ್ಟು ಇತಿಹಾಸ ಮತ್ತು ಅಭಿವೃದ್ಧಿ’ ಕುರಿತು ವಿಚಾರಸಂಕಿರಣ, ಉಪಸ್ಥಿತಿ: ಎಸ್.ಕೆ. ಅರುಣಿ, ಪ್ರವೀರ್ ಕೃಷ್ಣ, ಆಯೋಜನೆ: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ವೈದ್ಯಕೀಯ ಮತ್ತು ಪತ್ರಿಕಾ ದಿನಾಚರಣೆ ಅಂಗವಾಗಿ 17ನೇ ಸಾಂಸ್ಕೃತಿಕ ಸಿಂಚನ: ಬೆಳಿಗ್ಗೆ 10ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 6.30ಕ್ಕೆ ಉಪನ್ಯಾಸ ಸಭಾ ಕಾರ್ಯಕ್ರಮ ಉದ್ಘಾಟನೆ: ಸಂತೋಷ್ ಹೆಗ್ಡೆ, ಬಿ. ವೀರಪ್ಪ, ಅಧ್ಯಕ್ಷತೆ: ಭವಾನಿ ರಾಜ್, ಆಯೋಜನೆ: ಇದು ನಿಮ್ಮ ವಾಹಿನಿ ಕಲಾ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ

ಕುಂದಾಪ್ರ ಕನ್ನಡ ಹಬ್ಬ: ಬೆಳಿಗ್ಗೆ 9.30ರಿಂದ ಕುಂದಾಪುರದ ವೈಶಿಷ್ಟ್ಯ ಬಿಂಬಿಸುವ ವಿವಿಧ ಕಾರ್ಯಕ್ರಮಗಳು, ಸಂಜೆ 5ಕ್ಕೆ ಉದ್ಘಾಟನೆ: ಸಿದ್ದಾರಾಮಯ್ಯ, ಗೌರವ ಪುರಸ್ಕಾರ: ಸುದರ್ಶನ್ ಬಲ್ಲಾಳ್, ಅತಿಥಿಗಳು: ಯು.ಟಿ. ಖಾದರ್, ಡಿ.ಕೆ. ಸುರೇಶ್, ಕಿರಣ್‌ಕುಮಾರ್ ಕೊಡ್ಗಿ, ಗುರ್ಮೆ ಸುರೇಶ ಶೆಟ್ಟಿ, ಜಯಪ್ರಕಾಶ್ ಹೆಗ್ಡೆ, ರಾಜು ಮೊಗವೀರ, ಆನಂದ ಸಿ. ಕುಂದರ್, ಕೆ. ಗೋಪಾಲ್ ಶೆಟ್ಟಿ, ರವಿ ಬಸ್ರೂರು, ರಕ್ಷಿತಾ ಪ್ರೇಮ್, ಕಿಶೋರ್ ಹೆಗ್ಡೆ, ಅಂಜಲಿ ವಿಜಯ್, ಸತೀಶ್ ಶೆಟ್ಟಿ, ಆಯೋಜನೆ: ಕುಂದಾಪ್ರ ಕನ್ನಡ ಪ್ರತಿಷ್ಠಾನ, ಸ್ಥಳ: ನಂದಿನಿ ಲಿಂಕ್ ಗ್ರೌಂಡ್, ಹೊಸಕೆರೆಹಳ್ಳಿ ನೈಸ್ ರೋಡ್ ಜಂಕ್ಷನ್


ಡಾ.ಸುದರ್ಶನ್ ಬಲ್ಲಾಳ್

ವೀರಗಲ್ಲಿನ ಲೋಕಾರ್ಪಣೆ ಹಾಗೂ ಕಾರ್ಗಿಲ್ ವಿಜಯ ದಿವಸ್ ಆಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಶೋಭಾ ಕರಂದ್ಲಾಜೆ, ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಆಯೋಜನೆ: ರಾಷ್ಟ್ರೀಯ ಸೈನಿಕ ಸ್ಮಾರಕ ಮ್ಯಾನೇಜ್‌ಮೆಂಟ್ ಟ್ರಸ್ಟ್, ಸ್ಥಳ: ರಾಷ್ಟ್ರೀಯ ಸೈನಿಕ ಸ್ಮಾರಕ, ಜವಾಹರಲಾಲ್ ನೆಹರು ತಾರಾಲಯದ ಎದುರು, ಬೆಳಿಗ್ಗೆ 10

ಸತ್ಯಮೇವ ಜಯತೇ: ಮಹಾತ್ಮಗಾಂಧಿ, ಬಾಬಾಸಾಹೇಬ ಅಂಬೇಡ್ಕರ್ ಹಾಗೂ ರಾಮಮನೋಹರ ಲೋಹಿಯಾ ಚಿಂತನೆ ಮತ್ತು ಜಾತಿ ವಿಮೋಚನೆ ಮಾರ್ಗಗಳ ಕಾರ್ಯಾಗಾರ: ಎಸ್. ಚಂದ್ರಶೇಖರ್, ಜಯರಾಮ ರಾಯಪುರ, ಎಂ.ಸಿ. ನರೇಂದ್ರ, ಕೆ.ಸಿ. ಶಿವಾರೆಡ್ಡಿ, ಕೈವೈ. ನಾರಾಯಣಸ್ವಾಮಿ, ಜ್ಯೋತಿ, ಆಯೋಜನೆ: ಸಮಾಜಮುಖಿ, ಸ್ಥಳ: ಪೂರ್ಣಚಂದ್ರ ಕನ್ನಡ ಸಾಂಸ್ಕೃತಿಕ ಅಧ್ಯಯನ ಕೇಂದ್ರ, ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ ಗೊಟ್ಟಿಗೆರೆ, ಬೆಳಿಗ್ಗೆ 10

‘ಭಾರತೀಯ ನಾರಿ- ವ್ಯಕ್ತಿ ಮತ್ತು ಶಕ್ತಿ’ ಪ್ರಾಂತ ಮಾತೃಶಕ್ತಿ ಸಮ್ಮೇಳನ: ಅತಿಥಿಗಳು: ರೇವತಿ ಕಾಮತ್, ಸುಚೇಂದ್ರ ಪ್ರಸಾದ್, ಕರುಣಾ ವಿಜಯೇಂದ್ರ, ‘ಭಾರತೀಯ ನಾರಿ, ವ್ಯಕ್ತಿತ್ವ ಮತ್ತು ಪರಂಪರೆ’ ಉಪನ್ಯಾಸ: ಅಹಲ್ಯಾ ಶರ್ಮಾ, ‘ಭಾರತೀಯ ನಾರಿ, ಕರ್ತೃತ್ವ ಮತ್ತು ಅನುಷ್ಠಾನ’ ಉಪನ್ಯಾಸ: ನಿರ್ಮಲಾ ಅಮರನಾಥ, ಆಯೋಜನೆ: ಸಂಸ್ಕಾರ ಭಾರತೀ ಕರ್ನಾಟಕ–ದಕ್ಷಿಣ ಪ್ರಾಂತ, ಸ್ಥಳ: ಅಮೃತ ಶಿಶು ನಿವಾಸ, ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು ಎದುರು, ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಶಾಹುಮಹಾರಾಜರ 151ನೇ ಜನ್ಮದಿನದ ಪ್ರಯುಕ್ತ ‘ಪ್ರಸ್ತುತ ಮೀಸಲಾತಿ ಮತ್ತು ಇಂದಿನ ಸವಾಲುಗಳು’ ಚರ್ಚೆ ಹಾಗೂ ಜಾಗೃತಿ ಸಮಾವೇಶ: ಅತಿಥಿಗಳು: ಸಿ.ಎಂ. ಇಬ್ರಾಹಿಂ, ಕೋಡಿಹಳ್ಳಿ ಚಂದ್ರಶೇಖರ್, ಎಂ. ಗೋಪಿನಾಥ್, ಮಾರಸಂದ್ರ ಮುನಿಯಪ್ಪ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ–ಕರ್ನಾಟಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ–ಭೀಮವಾದ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11

ಮಾಸಿಕ ಜನ ಸಂಪರ್ಕ ಸಭೆ, ಸಂಚಾರ ಸಂಪರ್ಕ ದಿನ: ಭಾಗವಹಿಸುವವರು: ಸೀಮಂತ್ ಕುಮಾರ್ ಸಿಂಗ್, ಕಾರ್ತಿಕ್ ರೆಡ್ಡಿ, ಬಿ.ಎಸ್. ನೇಮಗೌಡ, ಜಯಪ್ರಕಾಶ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಸುವರ್ಣ ಭವನ, ಜಲಮಂಡಳಿ, 18ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 11

‘ಜನೋಪಕಾರಿ ದೊಡ್ಡಣ್ಣಶೆಟ್ಟರ ಕಲಾಸಿಪಾಳ್ಯ ಬಸ್ ನಿಲ್ದಾಣ’ ಮರುನಾಮಕರಣ ನಾಮಫಲಕ ಅನಾವರಣ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಸ್ಥಳ: ಕಲಾಸಿಪಾಳ್ಯ ಬಸ್ ನಿಲ್ದಾಣ, ಬೆಳಿಗ್ಗೆ 11

ಸಂಸ್ಕೃತಿ ಸಭಾಂಗಣ ಉದ್ಘಾಟನೆ: ನಳಿನ್ ಕುಮಾರ್ ಕಟೀಲ್, ಉಪಸ್ಥಿತಿ: ದೇವರಾಜ್, ಸುಜಾತ ದೇವರಾಜ್, ಲಕ್ಷ್ಮೀಶ್ ಹೆಗಡೆ, ಆಯೋಜನೆ ಮತ್ತು ಸ್ಥಳ: ರಾಯಲ್ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 11

ಗುರುವಂದನಾ ಸಮಾರಂಭ: ಅತಿಥಿಗಳು: ಬಿ.ಆರ್.ಶಂಕರಾನಂದ, ಶಂಕರಪ್ಪ ವಿ. ಹಲ್ಸೆ, ಅಶೋಕ್ ಆಲೂರು, ಟಿ.ಸಿ. ತಾರಾನಾಥ್, ನಿರಂಜನ ವಾನಳ್ಳಿ, ಎಂ.ಆರ್. ಗಂಗಾಧರ್, ಸತೀಶ್. ವಿ. ಕೈಲಾಸ್, ಅಧ್ಯಕ್ಷತೆ: ಸೌಂದರ್ಯ ಮಂಜಪ್ಪ, ಉಪಸ್ಥಿತಿ: ಸುನೀತಾ ಮಂಜಪ್ಪ, ಕೀರ್ತನ್ ಕುಮಾರ್.ಎಂ, ವರುಣ ಕುಮಾರ್ ಎಂ., ಆಯೋಜನೆ: ಭಾರತೀಯ ಶಿಕ್ಷಣ ಮಂಡಳಿ–ಕರ್ನಾಟಕ ದಕ್ಷಿಣ, ಸೌಂದರ್ಯ ಸಮೂಹ ಸಂಸ್ಥೆ, ಸ್ಥಳ: ಸೌಂದರ್ಯ ಸೀತಾ ಸಭಾಂಗಣ, ಸೌಂದರ್ಯ ಪದವಿಪೂರ್ವ ಕಾಲೇಜು, ಬೆಳಿಗ್ಗೆ 11

‘ಸಂಭ್ರಮ’ ನೂತನ ಶಾಲಾ ಸಭಾಂಗಣದ ಉದ್ಘಾಟನೆ: ಪೀಟರ್ ಮಚಾದೊ, ಅತಿಥಿ: ದಿನೇಶ್ ಗುಂಡೂರಾವ್, ಕೆ.ಜಿ. ರಾಘವನ್, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾ ಭವನ–ಬಿಬಿಎಂಪಿ ಪಬ್ಲಿಕ್ ಸ್ಕೂಲ್, ನಂ.21, ವಾರ್ಡ್ ನಂ. 97, ಐದನೇ ಮುಖ್ಯ ರಸ್ತೆ, ಕ್ರಾಂತಿ ಕವಿ ಸರ್ವಜ್ಞ ರಸ್ತೆ, ಶ್ರೀರಾಮಪುರ, ಬೆಳಿಗ್ಗೆ 11

ರಾಷ್ಟ್ರೀಯ ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಮಂಡಳಿಯ (ಎನ್‌ಐಆರ್‌ಡಿಸಿ) ದಕ್ಷಿಣ ಭಾರತದ ಪ್ರಾದೇಶಿಕ ಕಚೇರಿ ಉದ್ಘಾಟನೆ: ಶೋಭಾ ಕರಂದ್ಲಾಜೆ, ಅತಿಥಿಗಳು: ಶರಣಬಸಪ್ಪ ದರ್ಶನಾಪುರ, ರಾಮಲಿಂಗಾರೆಡ್ಡಿ, ಪ್ರಿಯಾಂಕ್ ಖರ್ಗೆ, ತೇಜಸ್ವಿ ಸೂರ್ಯ, ಕೌಸಲ್ಯ, ಕೆ.ಜಿ. ಅನಿಲ್ ಕುಮಾರ್, ಅಶೋಕ್ ಎ.ಎನ್., ಸ್ಥಳ: ಎನ್‌ಐಆರ್‌ಡಿಸಿ ದಕ್ಷಿಣ ಭಾರತದ ಪ್ರಾದೇಶಿಕ ಕಚೇರಿ, ಮೊದಲನೇ ಬ್ಲಾಕ್, ಕೊರಮಂಗಲ, ಬೆಳಿಗ್ಗೆ 11.30

ಕೃಷ್ಣ ಸಂಗೀತ ಸಂಜೆ: ಗಾಯಕ: ಅಮೇಯಾ ದಾಬ್ಲಿ, ತಂಡ: ಕೃಷ್ಣ-ಮ್ಯೂಸಿಕ್, ಬ್ಲಿಸ್ ಆ್ಯಂಡ್ ಬಿಯಾಂಡ್, ಸ್ಥಳ: ಎಂಎಲ್‌ಆರ್ ಕನ್ವೆನ್ಷನ್ ಸೆಂಟರ್, ಕಾವೇರಿ ನಗರ, ವೈಟ್‌ಫೀಲ್ಡ್, ಸಂಜೆ 4

ಎಚ್.ಎಸ್.ವಿ. ನುಡಿ ನಮನ ಮತ್ತು ಕನ್ನಡ ಕಣ್ಮಣಿ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಆರ್. ಅಶೋಕ, ಅಧ್ಯಕ್ಷತೆ: ಕಿಕ್ಕೇರಿ ಕೃಷ್ಣಮೂರ್ತಿ, ಅತಿಥಿಗಳು: ಎನ್. ಲಕ್ಷ್ಮೀಕಾಂತ್, ನಗರ ಶ್ರೀನಿವಾಸ ಉಡುಪ, ಪಿ.ಶಿವಶಂಕರ್, ಆಯೋಜನೆ: ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ: ಆರ್. ಅಶೋಕ ಅವರ ಶಾಸಕರ ಕಚೇರಿ ಆವರಣ, ಸುಚಿತ್ರ ಫಿಲ್ಮ್ ಸೊಸೈಟಿ ಪಕ್ಕ, ಬನಶಂಕರಿ, ಸಂಜೆ 5

ಕಾರ್ಗಿಲ್ ವಿಜಯ ದಿವಸ: ಅತಿಥಿಗಳು: ರಾಜ್ ಶರ್ಮಾ, ಮಿಲನ್ ಜಾಧವ, ಅಧ್ಯಕ್ಷತೆ: ಎನ್. ಎಸ್. ಸತೀಶ್, ಆಯೋಜನೆ: ಶೇಷಾದ್ರಿಪುರಂ ಸಂಜೆ ಕಾಲೇಜು, ಸ್ಥಳ: ಕುವೆಂಪು ರಂಗಮಂದಿರ, ಶೇಷಾದ್ರಿಪುರ, ಸಂಜೆ 5

‘ಲಕ್ಷ್ಮೀ ಕಟಾಕ್ಷ’ ನಾಟಕ ಪ್ರದರ್ಶನ: ನಿರ್ದೇಶನ: ಕಿಶೋರ್ ಕುಮಾರ್, ತಂಡ: ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ವೈದ್ಯಕೀಯ ಕೋರ್ಸ್ ಶುಲ್ಕ ಪ್ರಕಟ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, 2025–26ನೇ ಸಾಲಿನ ವೈದ್ಯಕೀಯ ಕೋರ್ಸ್‌ಗಳ ಶುಲ್ಕದ ವಿವರವನ್ನು ಪ್ರಕಟಿಸಿದೆ. ಸರ್ಕಾರಿ ಕಾಲೇಜುಗಳ, ಖಾಸಗಿ ಕಾಲೇಜುಗಳ ಸರ್ಕಾರಿ ಕೋಟಾ ಮತ್ತು ಖಾಸಗಿ ಸೀಟುಗಳಿಗೆ ಈ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಇದ್ದಷ್ಟೇ ವಾರ್ಷಿಕ ಶುಲ್ಕವನ್ನು, ಈ ಸಾಲಿಗೂ ಮುಂದುವರೆಸಿದೆ.

ವಿಶ್ವವಿದ್ಯಾಲಯಗಳ ನೋಂದಣಿ ಶುಲ್ಕ ಸೇರಿ, ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸೀಟುಗಳಿಗೆ ₹64,350 ಶುಲ್ಕ ನಿಗದಿ ಮಾಡಲಾಗಿದೆ. ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳಿಗೆ ₹1.53 ಲಕ್ಷ ಶುಲ್ಕ ನಿಗದಿಪಡಿಸಲಾಗಿದೆ. ಈ ಶುಲ್ಕದಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಖಾಸಗಿ ಕಾಲೇಜುಗಳ ಖಾಸಗಿ ಕೋಟಾದ ಸೀಟುಗಳಿಗೆ ಈ ಹಿಂದಿನ ಸಾಲಿನಲ್ಲಿದ್ದ ₹12 ಲಕ್ಷ ವಾರ್ಷಿಕ ಶುಲ್ಕವನ್ನೇ, ಈ ಸಾಲಿಗೂ ಉಳಿಸಿಕೊಳ್ಳಲಾಗಿದೆ. ಈ ಸೀಟುಗಳ ಶುಲ್ಕವನ್ನು ಹೆಚ್ಚಿಸುವಂತೆ, ಖಾಸಗಿ ಕಾಲೇಜುಗಳು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು. ಆದರೆ ಈ ಸೀಟುಗಳ ಶುಲ್ಕವನ್ನು ಹೆಚ್ಚಿಸುವುದಿಲ್ಲ ಎಂದು ಸರ್ಕಾರ ಹೇಳಿತ್ತು.

ಮ್ಯಾನೇಜ್‌ಮೆಂಟ್, ಎನ್‌ಆರ್‌ಐ ಸೀಟುಗಳು ತುಟ್ಟಿ: ಖಾಸಗಿ ಕಾಲೇಜುಗಳು ಮ್ಯಾನೇಜ್‌ಮೆಂಟ್ ಮತ್ತು ಎನ್‌ಆರ್‌ಐ ಕೋಟಾ ಸೀಟುಗಳ ಶುಲ್ಕವನ್ನು ಹೆಚ್ಚಿಸಿವೆ. ಈ ಹಿಂದಿನ ಶೈಕ್ಷಣಿಕ ವರ್ಷಕ್ಕೆ ಹೋಲಿಸಿದರೆ, ವಿವಿಧ ಕಾಲೇಜುಗಳಲ್ಲಿ ಈ ಸೀಟುಗಳ ಶುಲ್ಕದಲ್ಲಿ ₹1 ಲಕ್ಷದಿಂದ ₹6 ಲಕ್ಷದವರೆಗೆ ಏರಿಕೆಯಾಗಿದೆ. ಮ್ಯಾನೇಜ್‌ಮೆಂಟ್ ಮತ್ತು ಎನ್‌ಆರ್‌ಐ ಕೋಟಾದ ಸೀಟುಗಳ ವಾರ್ಷಿಕ ಶುಲ್ಕವು ₹45 ಲಕ್ಷವನ್ನು ಮೀರಬಾರದು ಎಂದು ಸರ್ಕಾರವು ತನ್ನ ಆದೇಶದಲ್ಲಿ ಸೂಚಿಸಿತ್ತು. ರಾಜ್ಯಕ್ಕೆ ಲಭ್ಯವಿರುವ ಒಟ್ಟು ವೈದ್ಯಕೀಯ ಸೀಟುಗಳಲ್ಲಿ ಶೇ 40ರಷ್ಟು ಸರ್ಕಾರಿ ಕೋಟಾ, ಶೇ 40ರಷ್ಟು ಖಾಸಗಿ ಕೋಟಾ ಸೀಟುಗಳು. ಶೇ 15ರಷ್ಟು ಸೀಟುಗಳನ್ನು ಎನ್‌ಆರ್‌ಐ ಕೋಟಾ ಮತ್ತು ಶೇ 5ರಷ್ಟು ಸೀಟುಗಳು ಮ್ಯಾನೇಜ್‌ಮೆಂಟ್ ಕೋಟಾದ ಅಡಿ ಬರುತ್ತವೆ.

‘ಯೂರಿಯಾ ಬೇಡಿಕೆ ಹೆಚ್ಚಳವೇ ಸಮಸ್ಯೆ’

ಎಲ್ಲಿಯೂ ಕೊರತೆ ಆಗಿಲ್ಲ: ಕೃಷಿ ಸಚಿವ ಎನ್.ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ



ಚಲುವರಾಯ ಸ್ವಾಮಿ

ಬೆಂಗಳೂರು: ಈ ವರ್ಷ ಮುಂಗಾರು ಬೇಗ ಆರಂಭವಾಗಿದ್ದರಿಂದ ಮತ್ತು ಸುಮಾರು 2 ಲಕ್ಷ ಹೆಕ್ಟೇರ್ ಮುಸುಕಿನ ಜೋಳ ಪ್ರದೇಶ ವಿಸ್ತರಣೆಯಾದ ಕಾರಣ ಯೂರಿಯಾ ಗೊಬ್ಬರಕ್ಕೆ ಬೇಡಿಕೆ ಹೆಚ್ಚಾಯಿತು. ಇದರಿಂದ ಐದಾರು ಜಿಲ್ಲೆಗಳಲ್ಲಿ ಸಮಸ್ಯೆ ಆಗಿದೆ. ಉಳಿದಂತೆ ಎಲ್ಲಿಯೂ ರಸಗೊಬ್ಬರ ಕೊರತೆ ಆಗಿಲ್ಲ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ರಾಜ್ಯದಲ್ಲಿ ನಮ್ಮ ಬೇಡಿಕೆಗಿಂತ ಹೆಚ್ಚಿನ ದಾಸ್ತಾನು ಲಭ್ಯವಿದೆ. ಜುಲೈ ತಿಂಗಳ ಬೇಡಿಕೆಗೆ ಅನುಗುಣವಾಗಿ ವಿತರಣೆ ಮಾಡಿದ ಬಳಿಕವೂ ದಾಸ್ತಾನು ಉಳಿಕೆ ಇದೆ. ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಯೂರಿಯಾ ಸೇರಿದಂತೆ ರಸಗೊಬ್ಬರದ ಕೊರತೆ ಕಂಡುಬಂದರೆ, ಉಳಿಕೆಯಿಂದ ಹೆಚ್ಚುವರಿಯಾಗಿರುವ ಜಿಲ್ಲೆಗಳಿಂದ ಮರುವಿಂಗಡಣೆ ಮಾಡಿ, ಸರಬರಾಜು ಮಾಡಲಾಗುವುದು’ ಎಂದರು.

ಕೆಲವು ರೈತರು ಆತಂಕದಿಂದ ಆಗಸ್ಟ್– ಸೆಪ್ಟೆಂಬರ್‌ವರೆಗೆ ಬೇಕಾದ ಗೊಬ್ಬರವನ್ನು ಈಗಲೇ ಖರೀದಿಸಲು ಮುಂದಾಗಿರುವುದೂ ಸಹ ತಕ್ಷಣ ಬೇಡಿಕೆ ಹೆಚ್ಚಲು ಕಾರಣವಾಗಿರಬಹುದು ಎಂದು ಅಭಿಪ್ರಾಯಪಟ್ಟರು.

ಜುಲೈ ತಿಂಗಳವರೆಗೆ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ 5,34,009 ಟನ್ ರಸಗೊಬ್ಬರ ಹಂಚಿಕೆಯಾಗಿದೆ. ಇದರಲ್ಲಿ ಈವರೆಗೆ 4,30,633 ಟನ್ ಸರಬರಾಜಾಗಿದೆ. ಏಪ್ರಿಲ್‌ನಿಂದ ಜುಲೈವರೆಗೆ ರಾಜ್ಯದಲ್ಲಿ 6,80,655 ಟನ್ ಯೂರಿಯಾ ಬೇಡಿಕೆ ಇದ್ದು, ಕೇಂದ್ರ ಸರ್ಕಾರದಿಂದ 6,82,500 ಟನ್ ಹಂಚಿಕೆಯಾಗಿದೆ. ಇದರಲ್ಲಿ 5,26,817 ಟನ್ ಸರಬರಾಜಾಗಿದೆ ಎಂದರು.

ರಾಜ್ಯದಲ್ಲಿ ಉಳಿಕೆಯಾಗಿದ್ದ 3,46,499 ಟನ್ ಯೂರಿಯಾ ದಾಸ್ತಾನು ಇದ್ದು, ಕೇಂದ್ರದಿಂದ ಸರಬರಾಜಾದ ಯೂರಿಯಾ ಸೇರಿ 8,73,315 ಟನ್ ಲಭ್ಯತೆ ಇತ್ತು. ಇದರಲ್ಲಿ 7,08,859 ಟನ್ ಯೂರಿಯಾವನ್ನು ವಿವಿಧ ಜಿಲ್ಲೆಗಳಿಗೆ ವಿತರಿಸಿದ್ದು, ರೈತರಿಗೂ ಮಾರಾಟ ಮಾಡಲಾಗಿದೆ. ಇನ್ನು 1,64,567 ಟನ್ ಯೂರಿಯಾ ದಾಸ್ತಾನು ಉಳಿಕೆಯಿದೆ. ಅಲ್ಲದೇ, ಕೇಂದ್ರದಿಂದ ಹಂತ ಹಂತವಾಗಿ ಪೂರೈಕೆಯಾಗುವ ರಸಗೊಬ್ಬರವನ್ನು ಆಗಿಂದಾಗಲೇ ಹಂಚಿಕೆ ಮಾಡಿ ವರ್ಗಾವಣೆ ಮಾಡಲಾಗುವುದು ಎಂದು ಅವರು ಹೇಳಿದರು.

‘ನ್ಯಾನೊ ಯೂರಿಯಾ ಬಳಕೆ ಮಾಡಿ’

ರಾಜ್ಯದಲ್ಲಿ ಅಧಿಕ ಪ್ರಮಾಣದಲ್ಲಿ ನ್ಯಾನೊ ಯೂರಿಯಾ ಲಭ್ಯವಿದೆ. ಇದು ಹೆಚ್ಚು ಪರಿಣಾಮಕಾರಿ ಮತ್ತು ಲಾಭದಾಯಕ ಎಂಬುದು ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು ಮತ್ತು ರೈತರು ನಡೆಸಿದ ಪ್ರಯೋಗಗಳಿಂದ ಸಾಬೀತಾಗಿದೆ. ಇದರಿಂದ ಉಳಿತಾಯ ಕೂಡ ಆಗಲಿದೆ. ಆದ್ದರಿಂದ ಕೃಷಿಕರು ನ್ಯಾನೊ ಯೂರಿಯಾ ಬಳಕೆ ಬಗ್ಗೆ ಗಮನಹರಿಸಬೇಕು ಎಂದು ಚಲುವರಾಯಸ್ವಾಮಿ ಹೇಳಿದರು.

ಅತಿಯಾದ ರಸಗೊಬ್ಬರ ಬಳಕೆ ಭೂಮಿಯ ಫಲವತ್ತತೆ ಮತ್ತು ಮಾನವನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಮುಂದಿನ ಜನಾಂಗದ ಭವಿಷ್ಯದ ದೃಷ್ಟಿಯಿಂದ ರಸಗೊಬ್ಬರಗಳ ಬಳಕೆ ಕಡಿಮೆ ಮಾಡಿ, ಹಸಿರು ಗೊಬ್ಬರ, ಜೈವಿಕ ಗೊಬ್ಬರಗಳ ಬಳಕೆ ಹೆಚ್ಚಿಸುವುದು ಅಗತ್ಯವಿದೆ. ಈ ಬಗ್ಗೆಯೂ ರೈತರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದಾದ್ಯಂತ ಉತ್ತಮ ಮಳೆಯಾಗಿದ್ದು ಶೇ 75 ರಷ್ಟು ಬಿತ್ತನೆಯಾಗಿದೆ. ಶೇ 100 ರಷ್ಟು ಗುರಿ ಸಾಧನೆ ನಿರೀಕ್ಷೆ ಹೊಂದಲಾಗಿದೆ ಎಂದು ವಿವರಿಸಿದರು.

ಹೆಚ್ಚಿನ ಪ್ರಮಾಣದಲ್ಲಿ ಯೂರಿಯಾವನ್ನು ಶೀಘ್ರವೇ ಪೂರೈಕೆ ಮಾಡುವಂತೆ ಮುಖ್ಯಮಂತ್ರಿಯವರು ಕೇಂದ್ರಕ್ಕೆ ಪತ್ರ ಬರೆದು ಮನವಿ ಮಾಡಿದ್ದಾರೆ ಎಂದರು.

ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು

ಅಜ್ಜಗೊಂಡನಹಳ್ಳಿ, ರಾ.ಹೆ–04, ಕೋರಾ ಹತ್ತಿರ, ತುಮಕೂರು –572128.
E-mail- npktumkur@gmail.com Phone: 0816-2970033 ಮೊ.ಸಂ:8277802662

ಸಂಖ್ಯೆ:ನಿಪಕೇತು/ಹೊ.ಸಂ/ಟೆಂಡರ್/ಸಿಆರ್/05/2025–26. ದಿನಾಂಕ: 21–07–2025

ಕ್ರ. ಸಂ.	ವಿವರ	ಟೆಂಡರ್ ಪ್ರಕಟಣೆಯ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ಲಕ್ಷಗಳಲ್ಲಿ)
01	2025–26 ಮತ್ತು 2026–27ನೇ ಸಾಲಿನ ಅವಧಿಗೆ ನಿರಾಶ್ರಿತರ ಪರಿಹಾರ ಕೇಂದ್ರ ಹಾಗೂ ವಿದೇಶಿ ಮಹಿಳಾ ವಲಸಿಗರ ಬಂಧನ ಕೇಂದ್ರ ತುಮಕೂರು ಈ ಎರಡು ಕೇಂದ್ರಗಳ ಕಾರ್ಯನಿರ್ವಹಣೆಗಾಗಿ ಅಗತ್ಯವಿರುವ ಸಿಬ್ಬಂದಿಗಳ ಮಾನವ ಸೇವೆಯನ್ನು ಹೊರಸಂಪನ್ಮೂಲದಿಂದ ಪಡೆಯುವ ಬಗ್ಗೆ.	ಸಂಖ್ಯೆ:ನಿಪಕೇತು/ಹೊ.ಸಂ/ಟೆಂಡರ್/ಸಿಆರ್/05/ 2025–26 ದಿನಾಂಕ : 21.07.2025	83.50	1.67

ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ: 20.08.2025 ಸಂಜೆ 04.00 ಗಂಟೆಯೊಳಗೆ

ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 22.08.2025 ಬೆಳಿಗ್ಗೆ 11.00 ಗಂಟೆಗೆ

ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ: 25.08.2025 ಬೆಳಿಗ್ಗೆ 11.00 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ:– ಅಧೀಕ್ಷಕರು, ನಿರಾಶ್ರಿತರ ಪರಿಹಾರ ಕೇಂದ್ರ ಅಜ್ಜಗೊಂಡನಹಳ್ಳಿ ರಾ.ಹೆ.4 ಕೋರಾ ಹತ್ತಿರ ತುಮಕೂರು–572128. **e-mail- npktumkur@gmail.com.**

ಸಹಿ/– ಅಧೀಕ್ಷಕರು
ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು, ಜಿಲ್ಲೆ

DIPR/TUM/RO-79/25-26/Oysters

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ, ಸಯ್ಯಾಜಿರಾವ್ ರಸ್ತೆ, ಮೈಸೂರು.

ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–11/2025–26 ದಿನಾಂಕ: 24.07.2025

ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: ಬೆಳಿಗ್ಗೆ 11.00 ರ ನಂತರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಸಂಜೆ 5.30ರ ವರೆಗೆ	ಟೆಂಡರ್ ತೆರೆಯುವ ದಿನಾಂಕ ಸಂಜೆ–5.30
1.	ಟೆಂ.ಪ್ರ.ಸಂ: ಕಾ.ಅ(ಪೂ&ಪ)/ಟಿ.ಎನ್–25/ 2025–26 ದಿನಾಂಕ: 22.07.2025	21	463.98	23.07.2025	07.08.2025	08.08.2025
2.	ಟೆಂ.ಪ್ರ.ಸಂ: ಕಾ.ಅ(ಪೂ&ಪ)/ಟಿ.ಎನ್–28/ 2025–26 ದಿನಾಂಕ: 24.07.2025	04	111.00	24.07.2025	11.08.2025	12.08.2025
3.	ಟೆಂ.ಪ್ರ.ಸಂ: ಕಾ.ಅ(ಪೂ&ಪ)/ಟಿ.ಎನ್–29/ 2025–26 ದಿನಾಂಕ: 24.07.2025	03	136.941	27.07.2025	11.08.2025	12.08.2025
	ಸರ್ವಿಸ್ ಟೆಂಡರ್					
4.	ಟೆಂ.ಪ್ರ.ಸಂ: ಕಾ.ಅ(ಪೂ)/ಟಿ.ಎನ್–27/ 2025–26 ದಿನಾಂಕ: 24–07–2025.	01	59.00	24.07.2025	31.07.2025	01.08.2025

ಅರ್ಹ ಗುತ್ತಿಗೆದಾರರು **(https://kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂರ್ವ ಮತ್ತು ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (**https://kppp.karnataka.gov.in**) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು(ಪ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/697/25-26

(ಕರ್ನಾಟಕ ಸರ್ಕಾರ)

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:09/2025–26 ದಿನಾಂಕ:24.07.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಹಾಸನ ಉಪ ವಿಭಾಗ ವ್ಯಾಪ್ತಿಯ 2024–25ನೇ ಸಾಲಿನ 5054 ಮಳೆಹಾನಿ ಯೋಜನೆಯಡಿಯ ಲೆಕ್ಕಶೀರ್ಷಿಕೆಯಡಿಯ 1)ಹಾಸನ ತಾಲ್ಲೂಕು, ಕಸಬಾ ಹೋಬಳಿ, ತೇಜೂರು ಗ್ರಾಮದ ಪರಿಮಿತಿಯಲ್ಲಿ, ದೊಡ್ಡಕೊಂಡಗುಳ ಗ್ರಾಮದ ಪರಿಮಿತಿಯಲ್ಲಿ, ಗ್ಯಾರಳ್ಳಿ ಗ್ರಾಮದ ಪರಿಮಿತಿಯಲ್ಲಿ, ತವರದೇವರಕೊಪ್ಪಲು ಗ್ರಾಮದ ಪರಿಮಿತಿಯಲ್ಲಿ, ಹಾಚಗೋಡನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಕಂಚಮಾರನಹಳ್ಳಿ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಸನ ತಾಲ್ಲೂಕು, ಸಾಲಗಾಮೆ ಹೋಬಳಿ, ನಿಟ್ಟೂರು ಗ್ರಾಮದ ಪರಿಮಿತಿಯಲ್ಲಿ, ಉಬ್ಬೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ರಂಗೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಸಿಂಗಟಗೆರೆ ಗ್ರಾಮದ ಪರಿಮಿತಿಯಲ್ಲಿ, ಹೊಸೂರು ಗ್ರಾಮದ ಪರಿಮಿತಿಯಲ್ಲಿ, ನಿಟ್ಟೂರು ಗ್ರಾಮದ ಶ್ರೀ ಬೂದೇಶ್ವರ ಮಠದ ಪರಿಮಿತಿಯಲ್ಲಿ, ಬೀಕನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಬೊಮ್ಮೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಚೌಡೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ ಬಸರೀಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಐದಳ್ಳಕಾವಲು ಎ ತಾಂಡ್ಯ ಗ್ರಾಮದ ಪರಿಮಿತಿಯಲ್ಲಿ, ಐದಳ್ಳಕಾವಲು ಬಿ ತಾಂಡ್ಯ ಗ್ರಾಮದ ಪರಿಮಿತಿಯಲ್ಲಿ, ಐದಳ್ಳಕಾವಲು ಸಿ ತಾಂಡ್ಯ ಗ್ರಾಮದ ಪರಿಮಿತಿಯಲ್ಲಿ, ಕೆಲವತ್ತಿ ಗ್ರಾಮದ ಪರಿಮಿತಿಯಲ್ಲಿ, ಸಜ್ಜೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಮಂಡಿಗನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ರಾಮದೇವರಪುರ ಗ್ರಾಮದ ಪರಿಮಿತಿಯಲ್ಲಿ, ನಾಗೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಸೊಪ್ಪಿನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಯಲಗುಂದ ಗ್ರಾಮದ ಪರಿಮಿತಿಯಲ್ಲಿ, ಮಲ್ಲನಾಯಕನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಸಾಲಗಾಮೆ ಗ್ರಾಮದ ಪರಿಮಿತಿಯಲ್ಲಿ, ಆಲದಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಆಲದಹಳ್ಳಿ ಕೊಪ್ಪಲು ಗ್ರಾಮದ ಪರಿಮಿತಿಯಲ್ಲಿ, ಹೊಮ್ಮಗೋಡನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಕಕ್ಕೇಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಕಡಗ ಗ್ರಾಮದ ಪರಿಮಿತಿಯಲ್ಲಿ, ನರಸೀಪುರ ಗ್ರಾಮದ ಪರಿಮಿತಿಯಲ್ಲಿ, ತಿಮ್ಮನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಯಲಗೋಡನಹಳ್ಳಿ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ ರೂ.209.11ಲಕ್ಷಗಳು ಇಂಡೆಂಟ್ ಸಂಖ್ಯೆ: RDPR/2025-26/RD/WORK_INDENT15514Call2, ಹಾಗೂ 2)ಹಾಸನ ತಾಲ್ಲೂಕು, ಸಾಲಗಾಮೆ ಹೋಬಳಿ, ಶಂಖ ಗ್ರಾಮದ ಪರಿಮಿತಿಯಲ್ಲಿ, ಶಂಖದ ಕೊಪ್ಪಲು ಗ್ರಾಮದ ಪರಿಮಿತಿಯಲ್ಲಿ, ಶ್ರೀರಾಂಪುರ ಗ್ರಾಮದ ಪರಿಮಿತಿಯಲ್ಲಿ, ಹಲಸಿನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಗೋವಿಂದಪುರ ಗ್ರಾಮದ ಪರಿಮಿತಿಯಲ್ಲಿ, ಸೀಗೆ ಗ್ರಾಮದ ಪರಿಮಿತಿಯಲ್ಲಿ, ವೀರಾಪುರ ಗ್ರಾಮದ ಪರಿಮಿತಿಯಲ್ಲಿ, ಬಲ್ಲೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ದೇವಿಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಕಡದರವಳ್ಳಿ ಗ್ರಾಮದ ಪರಿಮಿತಿಯಲ್ಲಿ, ಕಲ್ಲುದೇವರಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಕೊಂಡಜ್ಜಿ ಗ್ರಾಮದ ಪರಿಮಿತಿಯಲ್ಲಿ, ಕೊಂಡಜ್ಜಿ ಕೊಪ್ಪಲು ಗ್ರಾಮದ ಪರಿಮಿತಿಯಲ್ಲಿ, ಮಾದಿಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ರಾಯಪುರ ಗ್ರಾಮದ ಪರಿಮಿತಿಯಲ್ಲಿ, ಉಗನೆ ಗ್ರಾಮದ ಪರಿಮಿತಿಯಲ್ಲಿ, ಬೊಮ್ಮೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಚಿಕ್ಕಗದ್ದವಳ್ಳಿ ಗ್ರಾಮದ ಪರಿಮಿತಿಯಲ್ಲಿ, ದೊಡ್ಡಗದ್ದವಳ್ಳಿ ಗ್ರಾಮದ ಪರಿಮಿತಿಯಲ್ಲಿ, ಚಿನ್ನೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಇಬ್ಬಾಣೆ ಗ್ರಾಮದ ಪರಿಮಿತಿಯಲ್ಲಿ, ಮಾರನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಮಲ್ಲೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಸಾಣೇನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಸೀಗೆಗುಡ್ಡದಕಾವಲು ಗ್ರಾಮದ ಪರಿಮಿತಿಯಲ್ಲಿ, ತಿಮ್ಮನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಗಿರಿಮರಡಿ ಗ್ರಾಮದ ಪರಿಮಿತಿಯಲ್ಲಿ, ಲಕ್ಷ್ಮೀಪುರ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಹಾಸನ ತಾಲ್ಲೂಕು, ಕಸಬಾ ಹೋಬಳಿ,ಕಂದಲಿ ಗ್ರಾಮದ ಪರಿಮಿತಿಯಲ್ಲಿ, ಅಣಚೀಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಈಚಲಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಎತ್ತಿನಕಟ್ಟೆ ಗ್ರಾಮದ ಪರಿಮಿತಿಯಲ್ಲಿ, ಹೊಳೆತಿಮ್ಮನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ರಾಗಿಮುದ್ದನಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಅರೆಕಲ್ಲು ಹೊಸಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಎ.ಕಾಟೀಹಳ್ಳಿ ಗ್ರಾಮದ ಪರಿಮಿತಿಯಲ್ಲಿ, ಅಗಲಹಳ್ಳಿ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ ರೂ.209.28 ಲಕ್ಷಗಳು ಇಂಡೆಂಟ್ ಸಂಖ್ಯೆ: RDPR/2025-26/RD/WORK_INDENT15518call-2 ಕಾಮಗಾರಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ಅಡಿ kw-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 24.07.2025 ರಿಂದ ದಿ:31.07.2025 ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka. gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:31.07.2025 ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:30.07.2025 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:01.08.2025 ರಂದು ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ
ಇಂಜಿನಿಯರ್, ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/384/ಕೆಎಸ್‌ಎಂಸಿಎ/2025–26

ಬನ್ನೇರುಘಟ್ಟ ಜೈವಿಕ ಉದ್ಯಾನವನ

ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ: ಎ3/ಬಜಪಾ/ತಿಂಡಿ ತಿನಿಸು ಅಂಗಡಿ/2025–26 ದಿನಾಂಕ: 23–07–2025

ಟೆಂಡರ್ ಪ್ರಕಟಣೆ

ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ಇಲ್ಲಿನ ಮೃಗಾಲಯದ ಒಳಗಡೆ ಆದಾಯ ಹಂಚಿಕೆಯ ಆಧಾರದ ಮೇಲೆ ಸುವರ್ಣಮುಖಿ ಕೆಫೆ (ಫುಡ್ ಕೋರ್ಟ್) ತಿಂಡಿ ತಿನಿಸು ಅಂಗಡಿ ನಡೆಸಲು ಅರ್ಹ ಟೆಂಡರ್‌ದಾರರಿಂದ ಕಾರ್ಯಾದೇಶ ಪಡೆದ ದಿನದಿಂದ 5 ವರ್ಷದ ಅವಧಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **24–07–2025 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ನ ವಿಚಾರಣೆಗಳು ಮತ್ತು ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ ಮತ್ತು ಸಮಯ: **05–08–2025**. ನಿಗಧಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **06–08–2025 ರ ಸಂಜೆ 4.00 ಗಂಟೆವರೆಗೆ.** ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **08–08–2025 ರ ಬೆಳಿಗ್ಗೆ 11.30 ಗಂಟೆಗೆ.**

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/2030/ಅಡ್ವರ್ಟೋರ್/2025–26

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS

ISO 9001 : 2008

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
1ನೇ ಮಹಡಿ ಸಂಖ್ಯೆ 59, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರೋಡ್, ಶೇಷಾದ್ರಿಪುರಂ, ಬೆಂಗಳೂರು 560020

ಸಂಖ್ಯೆ: KSEDCL/ITS-HR/HIG/SEMI/2025-26 ದಿನಾಂಕ: 26.07.2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), 1. Empanelment of Agencies for Providing Highly Skilled and Skilled ICT Human Resource Services to Karnataka State Electronics Development Corporation Limited(KEONICS) (Call-2), ಸಂಸ್ಥೆಗಳನ್ನು ಆಯ್ಕೆ ಮಾಡಲು 12 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in**ನಲ್ಲಿ ವಿವರವನ್ನು ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವಂತೆ ವಿಸ್ತರಿಸಲಾಗಿದೆ, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ವಿಸ್ತರಿಸಲಾದ ಕೊನೆಯ ದಿನಾಂಕ
1	KEONICS/ 2025-26/ SE0118	1. Empanelment of Agencies for Providing Highly Skilled and Skilled ICT Human Resource Services to Karnataka State Electronics Development Corporation Limited (KEONICS)(CALL-2)	05.08.2025

DIPR/CP/2045/SA/2025-26

ಸಹಿ/– ನಿರ್ದೇಶಕರು (ಹಣಕಾಸು)

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್

ಅಧೀಕ್ಷಕ ಅಭಿಯಂತರವರ ಕಚೇರಿ, (ಬಿ–ಸ್ಮೈಲ್),
ಎನ್.ಆರ್. ಚೌಕ, ಬೆಂಗಳೂರು – 560002

ಸಂಖ್ಯೆ:ಬಿ-ಸ್ಮೈಲ್/ಎಸ್‌ಇ/ಟೆಂಡರ್/05/2025-26 ದಿನಾಂಕ: 25-07-2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)

(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್ **https://kppp.karnataka.gov.in**

ಅಧೀಕ್ಷಕ ಅಭಿಯಂತರವರು, ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ನಲ್ಲಿ ಅಥವಾ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ಎಂಇಎಸ್/ ರೈಲ್ವೇಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	**ಹೆಬ್ಬಾಳ ಮಿಲಿಟರಿ ಪ್ರದೇಶ (ಸರೋವರ ಲೇಔಟ್) ನಿಂದ ಥಣಿಸಂದ್ರ ಮುಖ್ಯ ರಸ್ತೆಯುವರೆಗೆ ಸೇವಾ ರಸ್ತೆ ರಚನೆ ಸೇರಿದಂತೆ ರಾಜಕಾಲುವೆ / ಬಫರ್ ವಲಯದ ರಕ್ಷಣೆ, ಸುಧಾರಣಾ ಕಾಮಗಾರಿ. ಟೆಂಡರ್‌ಗೆ ಇಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ).: 2159.00** (ಜಿಎಸ್‌ಟಿ ಹೊರತುಪಡಿಸಿ). **ಇಎಂಡಿ ಮೊತ್ತ (ಲಕ್ಷ ರೂ.ಗಳಲ್ಲಿ): ರೂ. 21.60 ಲಕ್ಷಗಳು** (ರೂ.1 ಲಕ್ಷ ಕೆಪಿಪಿ ಪೋರ್ಟಲ್ ಇ-ಪಾವತಿ ಮೂಲಕ ಮತ್ತು ಬಾಕಿ ಮೊತ್ತ ರೂ.20.60 ಲಕ್ಷಗಳು ಬಿಜಿ/ಇ-ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ).
2)	**ಥಣಿಸಂದ್ರ ಮುಖ್ಯ ರಸ್ತೆಯಿಂದ ಹೆಣ್ಣೂರು ಮುಖ್ಯ ರಸ್ತೆಯುವರೆಗೆ ಸೇವಾ ರಸ್ತೆ ರಚನೆ ಸೇರಿದಂತೆ ರಾಜಕಾಲುವೆ ಬಫರ್ ವಲಯದ ರಕ್ಷಣೆ, ಸುಧಾರಣಾ ಕಾಮಗಾರಿ. ಟೆಂಡರ್‌ಗೆ ಇಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ).: 1927.00** (ಜಿಎಸ್‌ಟಿ ಹೊರತುಪಡಿಸಿ). **ಇಎಂಡಿ ಮೊತ್ತ (ಲಕ್ಷ ರೂ.ಗಳಲ್ಲಿ): ರೂ.19.27 ಲಕ್ಷಗಳು** (ರೂ. 1 ಲಕ್ಷ ಕೆಪಿಪಿ ಪೋರ್ಟಲ್ ಇ-ಪಾವತಿ ಮೂಲಕ ಮತ್ತು ಬಾಕಿ ಮೊತ್ತ ರೂ.18.27 ಲಕ್ಷಗಳು ಬಿಜಿ/ಇ-ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ).
3)	**ವಿ-ಲೆಗಸಿ ರಸ್ತೆಯಿಂದ ಆರ್.ಆರ್.ನಗರ ಆರ್ಚ್‌ನವರೆಗೆ ಕೆರೆಕೊಡಿ ರಸ್ತೆ ರಚನೆ ಸೇರಿದಂತೆ ರಾಜಕಾಲುವೆ/ಬಫರ್ ವಲಯದ ರಕ್ಷಣೆ, ಸುಧಾರಣಾ ಕಾಮಗಾರಿ. ಟೆಂಡರ್‌ಗೆ ಇಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ).: 2295.00** (ಜಿಎಸ್‌ಟಿ ಹೊರತುಪಡಿಸಿ). **ಇಎಂಡಿ ಮೊತ್ತ (ಲಕ್ಷ ರೂ.ಗಳಲ್ಲಿ): ರೂ.22.95 ಲಕ್ಷಗಳು** (ರೂ. 1 ಲಕ್ಷ ಕೆಪಿಪಿ ಪೋರ್ಟಲ್ ಇ-ಪಾವತಿ ಮೂಲಕ ಮತ್ತು ಬಾಕಿ ಮೊತ್ತ ರೂ.21.95 ಲಕ್ಷಗಳು ಬಿಜಿ/ಇ-ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ).
4)	**ನಾಯಂಡನಹಳ್ಳಿ ವೃತ್ತದಿಂದ ವಿ-ಲೆಗಸಿ ರಸ್ತೆಯುವರೆಗೆ ಸೇವಾ ರಸ್ತೆ ರಚನೆ ಸೇರಿದಂತೆ ರಾಜಕಾಲುವೆ/ಬಫರ್ ವಲಯದ ರಕ್ಷಣೆ, ಸುಧಾರಣಾ ಕಾಮಗಾರಿ. ಟೆಂಡರ್‌ಗೆ ಇಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ).: 1166.00** (ಜಿಎಸ್‌ಟಿ ಹೊರತುಪಡಿಸಿ). **ಇಎಂಡಿ ಮೊತ್ತ (ಲಕ್ಷ ರೂ.ಗಳಲ್ಲಿ): ರೂ.11.67 ಲಕ್ಷಗಳು** (ರೂ. 1 ಲಕ್ಷ ಕೆಪಿಪಿ ಪೋರ್ಟಲ್ ಇ-ಪಾವತಿ ಮೂಲಕ ಮತ್ತು ಬಾಕಿ ಮೊತ್ತ ರೂ.10.67 ಲಕ್ಷಗಳು ಬಿಜಿ/ಇ-ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ).

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ದಾಖಲೆಗಳು ದೊರೆಯುವ **ದಿನಾಂಕ: 28–07–2025 ಸಂಜೆ 5.30 ಗಂಟೆಯ ನಂತರ. 2)** ಪೂರ್ವ ಬಿಡ್ ಸಭೆಯನ್ನು **05–08–2025 ಸಂಜೆ 3:00 ಗಂಟೆಗೆ** ನಡೆಸಲಾಗುವುದು. **3)** ಟೆಂಡರ್ ಸ್ವೀಕರಿಸುವ ಕೊನೆಯ **ದಿನಾಂಕ: 14–08–2025 ಸಂಜೆ 4.00 ಗಂಟೆಯವರೆಗೆ. 4)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 16.08.2025 ಸಂಜೆ 4.30 ಗಂಟೆಗೆ. 5)** ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ಪಡೆದ ನಂತರ ತಿಳಿಸಲಾಗುವುದು.

ಸಹಿ/– ಅಧೀಕ್ಷಕ ಅಭಿಯಂತರರು,
ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್.

ಮಹಿಳೆಯರ ಉದ್ಯೋಗ ಪ್ರಮಾಣ ಹೆಚ್ಚಿಸಿದ ‘ಶಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿ ಯೋಜನೆಯಡಿ ಮಹಿಳೆಯರು ಬಸ್‌ಗಳಲ್ಲಿ ಉಚಿತವಾಗಿ ಓಡಾಡಲು ಆರಂಭಿಸಿದ ಬಳಿಕ, ಬೆಂಗಳೂರು, ಹುಬ್ಬಳ್ಳಿ–ಧಾರವಾಡದಲ್ಲಿ ಉದ್ಯೋಗಸ್ಥ ಮಹಿಳೆಯರ ಪ್ರಮಾಣ ಹೆಚ್ಚಾಗಿದೆ ಎಂದು ಸಸ್ಟೈನೇಬಲ್ ಮೊಬಿಲಿಟಿ ನೆಟ್‌ವರ್ಕ್ ನಡೆಸಿದ ಸಮೀಕ್ಷಾ ವರದಿ ಹೇಳಿದೆ.

ಬೆಂಗಳೂರಿನ ಸಾಮಾಜಿಕ ಪರಿಣಾಮ ಸಲಹೆಗಾರ ಸಂಸ್ಥೆ ‘ಅಸರ್’ ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ಸಮಾನ ಮನಸ್ಕ ಸಂಸ್ಥೆಗಳ ಒಕ್ಕೂಟವಾಗಿರುವ ಸಸ್ಟೈನೇಬಲ್ ಮೊಬಿಲಿಟಿ ನೆಟ್‌ವರ್ಕ್ ಮತ್ತು ನವದೆಹಲಿಯ ಆರ್ಥಿಕ ಸಂಶೋಧನೆ ಮತ್ತು ನೀತಿ ಸಲಹಾ ಥಿಂಕ್-ಟ್ಯಾಂಕ್ ನಿಕೋರ್ ಅಸೋಸಿಯೇಟ್ಸ್ ಅಧ್ಯಯನ ನಡೆಸಿದ್ದವು.

‘ಶಕ್ತಿ’ ಯೋಜನೆಯಿಂದಾಗಿ ಮಹಿಳೆಯರ ಔದ್ಯೋಗಿಕ ದರವು ಬೆಂಗಳೂರಿನಲ್ಲಿ ಶೇ 23 ಮತ್ತು ಹುಬ್ಬಳ್ಳಿ-ಧಾರವಾಡದಲ್ಲಿ ಶೇ 21ರಷ್ಟು ಏರಿಕೆಯಾಗಿರುವುದು ಅಧ್ಯಯನದಿಂದ ಗೊತ್ತಾಗಿದೆ. ಶಕ್ತಿ ಯೋಜನೆಯ ಮಾದರಿಯಲ್ಲಿಯೇ ಇತರ ರಾಜ್ಯಗಳು ಸರ್ಕಾರಿ ಸಾರಿಗೆಯಲ್ಲಿ ಉಚಿತ ಪ್ರಯಾಣ, ಶೇ 50 ರಿಯಾಯಿತಿ ದರದಲ್ಲಿ ಪ್ರಯಾಣ ಮುಂತಾದ ಯೋಜನೆಗಳನ್ನು ಜಾರಿಗೆ ತಂದಿದ್ದರೂ ರಾಜ್ಯದ ಸಾಧನೆ ಉನ್ನತಮಟ್ಟದಲ್ಲಿದೆ ಎಂದು ಸಮೀಕ್ಷೆಯ ವರದಿ ತಿಳಿಸಿದೆ.

ಉಚಿತ ಪ್ರಯಾಣ ಯೋಜನೆ ಹೊಂದಿರುವ ದೆಹಲಿ, ಕರ್ನಾಟಕ, ಉಚಿತ ಯೋಜನೆ ಇಲ್ಲದ ಪಶ್ಚಿಮ ಬಂಗಾಳ, ಕೇರಳ, ರಿಯಾಯಿತಿ ನೀಡಿರುವ ಮಹಾರಾಷ್ಟ್ರ ರಾಜ್ಯಗಳ ಹತ್ತು ನಗರಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು.

‘ಶಕ್ತಿ ಯೋಜನೆ ಜಾರಿಯಾಗುವ ಮೊದಲು ಬೇರೆ ಸಾರಿಗೆ ವ್ಯವಸ್ಥೆಯಲ್ಲಿ ಸಂಚರಿಸುತ್ತಿದ್ದೆವು. ಶೇ 30ರಿಂದ ಶೇ 50ರಷ್ಟು ವೆಚ್ಚ ಉಳಿತಾಯವಾಗಿದೆ’ ಎಂದು ಮಹಿಳೆಯರು ಸಮೀಕ್ಷೆಯಲ್ಲಿ ಹೇಳಿಕೊಂಡಿದ್ದಾರೆ.

‘ಶಕ್ತಿ ಯೋಜನೆಯು ಮಹಿಳೆಯರಿಗೆ ಉತ್ತಮ ಉದ್ಯೋಗಾವಕಾಶಗಳು, ಉತ್ತಮ ವೇತನ ಮತ್ತು ಉದ್ಯಮಿಗಳಾಗಿ ರೂಪುಗೊಳ್ಳಲು, ಉತ್ತಮ ಮಾರುಕಟ್ಟೆಯ ಸೌಲಭ್ಯಗಳನ್ನು ಕಂಡುಕೊಳ್ಳಲು ಸಹಾಯ ಮಾಡಿದೆ’ ಎಂದು ಲೋಕನೀತಿಯ ಹಿರಿಯ ಸಲಹೆಗಾರ್ತಿ ತಾರಾ ಕೃಷ್ಣಸ್ವಾಮಿ, ನಿಕೋರ್ ಅಸೋಸಿಯೇಟ್ಸ್ ಸಂಸ್ಥೆಯ ಸಂಸ್ಥಾಪಕಿ ಮಿತಾಲಿ ನಿಕೋರ್ ತಿಳಿಸಿದ್ದಾರೆ.

‘ಬಸ್‌ಗಳಲ್ಲಿ ಮಹಿಳೆಯರನ್ನು ಉಚಿತವಾಗಿ ಕರೆದುಕೊಂಡು ಬರುವುದರ ಜೊತೆಗೆ ಸುರಕ್ಷತೆ ಮತ್ತು ಮೂಲಸೌಕರ್ಯ ನೀಡುವುದು ಅಗತ್ಯ’ ಎಂದು ಸಸ್ಟೈನೇಬಲ್ ಮೊಬಿಲಿಟಿ ನೆಟ್‌ವರ್ಕ್ ಸಂಸ್ಥೆಯ ಯೋಜನಾ ಮುಖ್ಯಸ್ಥೆ ರಿಯಾ ಕರಣ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆವಿಕಂ BESCOM

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ವಿಚಾರಣೆ. ಸಂಖ್ಯೆ: BESCOM/2025-26/EL/WORK_INDENT541.

ಬೆವಿಕಂ ರವರು ಬೆಂಗಳೂರು ಗ್ರಾಮಾಂತರ ಕ್ಷೇತ್ರ ವಲಯ ಹೊಸಕೋಟೆ ವಿಭಾಗದ ದೇವನಹಳ್ಳಿ ಉಪ–ವಿಭಾಗ ವ್ಯಾಪ್ತಿಯ ವಿಜಯಪುರ ನಗರದಲ್ಲಿರುವ ಎಲ್‌ಟಿ ಮೇಲ್ಮಾರ್ಗಗಳನ್ನು ಏರಿಯಲ್ ಬಂಚ್ಡ್ ಕೇಬಲ್ (LT AB Cable) ಗಳಾಗಿ ಬದಲಾಯಿಸುವ ಕಾಮಗಾರಿ ನಿರ್ವಹಿಸಲು ಶೇಕಡವಾರು ಆಧಾರದ ಮೇಲೆ ಟೆಂಡರ್ ಗಳನ್ನು ಆಹ್ವಾನಿಸಿದೆ. **ಬಿಡ್ ದಾಖಲೆಗಳ ಲಭ್ಯತೆ:** 30.07.2025 ರಿಂದ. **ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ:** 30.08.2025 @ 15:00 ಗಂಟೆಗೆ. **ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:** 01.09.2025 @ 15:30 ಗಂಟೆಗೆ. **ಬಿಡ್ ಪೂರ್ವಭಾವಿ ಸಭೆ ದಿನಾಂಕ:** 14.08.2025 @ 11:00 ಗಂಟೆಗೆ. **ಸ್ಥಳ:** ಸಮ್ಮೇಳನ ಸಭಾಂಗಣ, 3ನೇ ಮಹಡಿ, ಬೆಳಕು ಭವನ, ಕಾರ್ಪೊರೇಟ್ ಕಚೇರಿ, ಬೆವಿಕಂ, ಕೆ.ಆರ್. ವೃತ್ತ, ಬೆಂಗಳೂರು–560001. ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮತ್ತು ಅಗತ್ಯ ಸಹಾಯವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) **https://kppp.karnataka.gov.in** ಮೂಲಕ ಪಡೆಯಬಹುದು. **ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ:** +91–8046010000, +91–8068948777, ಇಮೇಲ್: **support@eprochelpdesk.com**. ಆಕಾಂಕ್ಷಿ ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) ನಲ್ಲಿ ನೋಂದಾಯಿಸಿಕೊಳ್ಳಬೇಕು. ಬಿಡ್‌ದಾರರು ಕೆಲಸದ ಸಮಯದಲ್ಲಿ ಕೆಪಿಪಿಯಿಂದ ಸಹಾಯ ಪಡೆಯಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
"ಬೆಸ್ಕಾಂ ಮಿತ್ರ" Mobile APP
ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು, ವಿದ್ಯುತ್, ಪ್ರಾಜೆಕ್ಟ್ಸ್, ಬೆಸ್ಕಾಂ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ



(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91–80–22977666/276/433/216/217,
ಟೆಲಿ–ಫ್ಯಾಕ್ಸ್:080–26534625/477 । ಇ–ಮೇಲ್: director.sjicr@gmail.com

No. SJICR/2025-26/SE0023 Date: 24.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಎಸ್‌ಜೆಐಸಿಆರ್‌ನಲ್ಲಿರುವ ಸಿಆರ್ ಬ್ಲಾಕ್ ಸೇರಿದಂತೆ ಇನ್ಫೋಸಿಸ್ ಕಟ್ಟಡಕ್ಕೆ ಸ್ಟ್ಯಾಂಡರ್ಡ್ ಫೈರ್, ವಿಶೇಷ ಅಪಾಯಗಳು ಮತ್ತು ಕಳ್ಳತನ ಮತ್ತು ಭಯೋತ್ಪಾದಕ ಅಪಾಯ, ಭೂಕಂಪವನ್ನು ತಡೆಗಟ್ಟುವುದು ಸೇರಿದಂತೆ ವೈದ್ಯಕೀಯ ಉಪಕರಣಗಳು, ಪೀಠೋಪಕರಣಗಳು & ಫಿಕ್ಚರ್ಸ್ ಮತ್ತು ವಿದ್ಯುತ್ ಉಪಕೇಂದ್ರ ಮತ್ತು ಸಂಬಂಧಿತ ಉಪಕರಣಗಳಿಗೆ ವಿಮೆ ಒದಗಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದೆ.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ: 25.07.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **02.08.2025ರ ಸಂಜೆ 4.00 ಗಂಟೆಯವರೆಗೆ.**
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **04.08.2025 ಸಂಜೆ 4:00 ಗಂಟೆಗೆ.**
3. ಇ.ಎಂ.ಡಿ. : **ಟೆಂಡರ್ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ.**
4. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology.com** ನ್ನು ನೋಡಬಹುದು.
5. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ ತಿರಸ್ಕರಿಸುವ / ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು.

Office of the Mission Director, National Livelihood Mission Skill Development, Entrepreneurship and Livelihood Dept.,

4, 2nd Floor, MYSUGAR Building, J.C. Road, Near Town Hall, Bengaluru-560002. email: nrlmkarnataka@gmail.com

EXTENSION OF DATE

1) **Sub:** Extension of Last Date for Submission of Expression of Interest (EoI) under DDU-GKY 2.0 program – Reg.
   Ref: This office Letter No. KSRLPS/DDU-GKY 2.0/Regular/EoI/01/2025-26 dated 15.05.2025 and 03.06.2025
2) **Sub:** Extension of Last Date for Submission of Expression of Interest (EoI) under DDU-GKY 2.0 Captive Employment program – Reg.
   Ref: This office Letter No. KSRLPS/DDU-GKY 2.0/Captive/EoI/01/2025-26 dated 15.05.2025 and 03.06.2025

With reference to the subject cited above, the advertisement inviting Expression of Interest (EoI) published in this newspaper on 16.05.2025, it is hereby informed that, due to unavoidable circumstances, the last date for submission of online proposals through the Ministry of Rural Development (MoRD) designated portal **http://kaushal.rural.gov.in** has been **extended from 25.07.2025 to 30.08.2025**. All other terms and conditions specified in the original notification remain unchanged.

Sd/-
Mission Director
National Livelihood Mission
Karnataka

DIPR/CP/2029/AKAR/2025-26

ಚುಟುಕು ಸುದ್ದಿ

ಕೊಡಗು: ಭೂಕುಸಿತ ತಡೆಗೆ ₹ 50 ಕೋಟಿ

ಮಡಿಕೇರಿ: ಕೊಡಗಿನಲ್ಲಿ ಭೂಕುಸಿತ ತಡೆಯಲು ₹ 50 ಕೋಟಿ ಅನುದಾನಕ್ಕೆ ಕ್ರಿಯಾಯೋಜನೆ ಸಲ್ಲಿಸಲು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರಿಗೆ ಸೂಚಿಸಿರುವೆ. ಬಳಿಕ ಸಂಭಾವ್ಯ ಭೂಕುಸಿತ ಪ್ರದೇಶಗಳಲ್ಲಿ ರಕ್ಷಣಾ ಕಾಮಗಾರಿ ಆರಂಭಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ 67,857 ಪ್ರಕರಣ ಇದ್ದವು. ಈಗ 19,219ಕ್ಕೆ ಇಳಿದಿವೆ. ಹಾಗೆಯೇ, ತಹಶೀಲ್ದಾರ್‌ರ ನ್ಯಾಯಾಲಯದಲ್ಲಿ 10,776 ಪ್ರಕರಣಗಳಿದ್ದವು. ಈಗ 446 ಕ್ಕೆ ಇಳಿಕೆಯಾಗಿದೆ. ನಮ್ಮ ಸರ್ಕಾರ ಬಂದ ಮೇಲೆ ಇಲಾಖೆಯ ಕೆಲಸಗಳು ವೇಗವಾಗಿ ನಡೆಯುತ್ತಿವೆ’ ಎಂದರು.

‘ಆಳ್ವಾಸ್ ಪ್ರಗತಿ’ 16 ಸಾವಿರ ಉದ್ಯೋಗಾವಕಾಶ

ಮಂಗಳೂರು: ‘ಆಳ್ವಾಸ್ ಪ್ರಗತಿ’ 15ನೇ ಆವೃತ್ತಿಯ ಉದ್ಯೋಗ ಮೇಳವು ಆಗಸ್ಟ್ 1 ಹಾಗೂ 2ರಂದು ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಸಂಸ್ಥೆಯ ಕ್ಯಾಂಪಸ್‌ನಲ್ಲಿ ನಡೆಯಲಿದೆ. ವಿವಿಧ ವಲಯಗಳ 300ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, 15,900ಕ್ಕೂ ಅಧಿಕ ಉದ್ಯೋಗಾವಕಾಶಗಳು ತೆರೆದುಕೊಂಡಿವೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಮ್ಯಾನ್ಯುಫ್ಯಾಕ್ಚರಿಂಗ್, ಲಾಜಿಸ್ಟಿಕ್ಸ್, ಐಟಿ, ಐಟಿಇಎಸ್, ಬ್ಯಾಂಕಿಂಗ್ ಹಾಗೂ ಹಣಕಾಸು, ಹೆಲ್ತ್‌ಕೇರ್, ಫಾರ್ಮಾ, ಮಾಧ್ಯಮ, ಮಾರಾಟ ಮತ್ತು ಚಿಲ್ಲರೆ, ಆತಿಥ್ಯ ವಲಯಗಳ ಪ್ರಮುಖ ಕಂಪನಿಗಳು ಈಗಾಗಲೇ ನೋಂದಣಿ ಮಾಡಿಕೊಂಡಿವೆ’ ಎಂದರು.

ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಉದ್ಯೋಗಾಕಾಂಕ್ಷಿಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಬರುವವರಿಗೆ ಜುಲೈ 31ರಿಂದ ಉಚಿತ ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ. ನೋಂದಣಿ ಹಾಗೂ ಪಾಲ್ಗೊಳ್ಳುವ ಕಂಪನಿಗಳ ವಿವರಕ್ಕೆ www.alvaspragati.com ಈ ತಾಣಕ್ಕೆ ಭೇಟಿ ನೀಡಬಹುದು ಎಂದು ಹೇಳಿದರು. ಮಾಹಿತಿಗೆ ಸಂಪರ್ಕ ಸಂಖ್ಯೆ: 9741440490, 7975223865

‘ಗೀತೆಯ ಸಂದೇಶ ಸಮಾಜಕ್ಕೆ ದಾರಿದೀಪ’

ಶ್ರೀಕೃಷ್ಣ ಜನ್ಮಾಷ್ಟಮಿ ಮಂಡಲೋತ್ಸವಕ್ಕೆ ರಾಜ್ಯಪಾಲರಿಂದ ಚಾಲನೆ

ಪ್ರಮುಖ ಅಂಶಗಳು

- ವಾದ್ಯಮೇಳಗಳೊಂದಿಗೆ ರಾಜ್ಯಪಾಲರಿಗೆ ಸ್ವಾಗತ
- ಮಹಿಳೆಯರಿಂದ ಭಜನಾ ಕಾರ್ಯಕ್ರಮ
- ಪರ್ಯಾಯ ಪುತ್ತಿಗೆ ಮಠದ ವತಿಯಿಂದ ಜನ್ಮಾಷ್ಟಮಿ

ಪ್ರಜಾವಾಣಿ ವಾರ್ತೆ



ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಮಡಿಕೆ ಒಡೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

ಉಡುಪಿ: ‘ಸಮಾಜದಲ್ಲಿ ಅಸಹಿಷ್ಣುತೆ, ಆತ್ಮವಿಸ್ಮೃತಿಯ ಭಾವನೆ ಹೆಚ್ಚಾಗುತ್ತಿದ್ದು, ಇದರಿಂದ ಹೊರಬರಲು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ನೀಡಿರುವ ಸಂದೇಶ ನಮಗೆ ದಾರಿದೀಪವಾಗಿದೆ’ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಹೇಳಿದರು.

ಇಲ್ಲಿನ ಶ್ರೀಕೃಷ್ಣ ಮಠದಲ್ಲಿ ಪರ್ಯಾಯ ಪುತ್ತಿಗೆ ಮಠದ ವತಿಯಿಂದ ಹಮ್ಮಿಕೊಂಡಿರುವ ಶ್ರೀಕೃಷ್ಣ ಜನ್ಮಾಷ್ಟಮಿ ಮಂಡಲೋತ್ಸವ ಕಾರ್ಯಕ್ರಮವನ್ನು ಶುಕ್ರವಾರ ರಾಜಾಂಗಣದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಯೋಗ, ಧ್ಯಾನಯೋಗ, ಭಕ್ತಿಯೋಗ ಮಾಧ್ಯಮದ ಮೂಲಕ ಶ್ರೀಕೃಷ್ಣನು ನಮಗೆ ನಿಷ್ಕಾಮ ಭಾವದಿಂದ ಕರ್ತವ್ಯ ನಿರ್ವಹಿಸುವಂತೆ ಸಂದೇಶ ನೀಡಿದ್ದಾನೆ ಎಂದರು.

ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಸ್ವಾಮೀಜಿ ಅವರು ಅಮೆರಿಕ, ಕೆನಡಾ, ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿ ಸನಾತನ ಧರ್ಮದ ಪ್ರಚಾರ ಮಾಡುತ್ತ ವಿಶ್ವವನ್ನು ಭಾರತೀಯ ಸಂಸ್ಕೃತಿಯೊಂದಿಗೆ ಜೋಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಸ್ವಾಮೀಜಿ ಮಾತನಾಡಿ, ‘ಸಂಸ್ಕೃತವು ಇಂಗ್ಲಿಷ್ ಸೇರಿದಂತೆ ಸರ್ವ ಭಾಷೆಗಳ ಮೂಲ ಭಾಷೆಯಾಗಿದೆ. ಕನ್ನಡವು ರಾಜ್ಯ ಭಾಷೆಯಾದರೆ, ಹಿಂದಿ ರಾಷ್ಟ್ರ ಭಾಷೆಯಾಗಿದೆ. ಇಂಗ್ಲಿಷ್ ಅಂತರ-ರಾಷ್ಟ್ರೀಯ ಭಾಷೆಯಾಗಿದೆ. ಉತ್ತರ ಭಾರತವು ದೇವರ ನಾಡಾದರೆ, ದಕ್ಷಿಣ ಭಾರತವು ಭಕ್ತರ ನಾಡಾಗಿದೆ’ ಎಂದರು.

ಪುತ್ತಿಗೆ ಪರ್ಯಾಯ ಮಠದ ಕಿರಿಯ ಯತಿ ಸುಶ್ರೀಂದ್ರತೀರ್ಥ ಸ್ವಾಮೀಜಿ, ಶಾಸಕ ಯಶ್‌ಪಾಲ್ ಸುವರ್ಣ, ಮಣಿಪಾಲದ ಮಾಹೆಯ ಸಹ ಕುಲಾಧಿಪತಿ ಎಚ್.ಎಸ್. ಬಲ್ಲಾಳ್, ಉದ್ಯಮಿ ಬಾಳೆಕುದ್ರು ರಾಮಚಂದ್ರ ಉಪಾಧ್ಯಾಯ, ಉದ್ಯಮಿ ರಾಘವೇಂದ್ರ ರಾವ್ ಉಪಸ್ಥಿತರಿದ್ದರು. ಬಿ. ಗೋಪಾಲಾಚಾರ್ಯ ಕಾರ್ಯಕ್ರಮ ನಿರೂಪಿಸಿದರು.

ವಿದ್ಯುತ್ ತಂತಿ ಬಿದ್ದು ವಿದ್ಯಾರ್ಥಿ ಸಾವು

ಹಾವೇರಿ: ಜಿಲ್ಲೆಯ ಹಂಸಬಾವಿಯ ಶಿವಯೋಗೇಶ್ವರ ಪ್ರೌಢಶಾಲೆ ಆವರಣದಲ್ಲಿ ವಿದ್ಯುತ್ ತಂತಿ ಮೈ ಮೇಲೆ ಬಿದ್ದು ಮೊಹಮ್ಮದ್ ಶಾ ಕಲಂದರ್ ಎಂಬ ಬಾಲಕ ಮೃತಪಟ್ಟಿದ್ದಾರೆ.

‘ಮೊಹಮ್ಮದ್ ಶಾ, 4ನೇ ತರಗತಿಯಲ್ಲಿ ಓದುತ್ತಿದ್ದರು. ಶುಕ್ರವಾರ ಮಧ್ಯಾಹ್ನ ಊಟದ ವಿರಾಮದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ. ಇನ್ನಿಬ್ಬರು ಬಾಲಕರು ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಶಾಲೆ ಆವರಣದ ತೆಂಗಿನ ಮರಕ್ಕೆ ತಾಗಿಕೊಂಡು ವಿದ್ಯುತ್ ತಂತಿ ಹಾದು ಹೋಗಿದೆ. ಮೃತ ವಿದ್ಯಾರ್ಥಿ ಹಾಗೂ ಇನ್ನಿಬ್ಬರು ಸ್ನೇಹಿತರು ಮಧ್ಯಾಹ್ನ ಊಟದ ಅವಧಿಯಲ್ಲಿದ್ದಾಗ ವಿದ್ಯುತ್ ತಂತಿ ಸಮೇತ ತೆಂಗಿನ ಮರ ಬಿದ್ದಿತು. ವಿದ್ಯುತ್ ತಂತಿಯು ಮೊಹಮ್ಮದ್ ಶಾ ಮೈ ಮೇಲೆ ಬಿತ್ತು. ಇದೇ ವೇಳೆ ಅಕ್ಕ-ಪಕ್ಕದಲ್ಲಿದ್ದ ಸ್ನೇಹಿತರಿಬ್ಬರಿಗೂ ವಿದ್ಯುತ್ ತಂತಿ ತಗುಲಿತು’ ಎಂದರು.

‘ಮೂವರೂ ವಿದ್ಯಾರ್ಥಿಗಳನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮೊಹಮ್ಮದ್ ಶಾ ಮೃತಪಟ್ಟಿದ್ದು, ಇಬ್ಬರು ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಅವರು ಹೇಳಿದರು.

ಯುಜಿಸಿಇಟಿ/ನೀಟ್: ಮೊದಲ ಸುತ್ತಿನ ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ಅಣಕು ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಶುಕ್ರವಾರ ಪ್ರಕಟಿಸಿದೆ.

ಅರ್ಹ ಅಭ್ಯರ್ಥಿಗಳು ದಾಖಲಿಸಿರುವ ಆಯ್ಕೆಗಳನ್ನು ದಾಖಲಿಸಿ, ಮೆರಿಟ್, ರೋಸ್ಟರ್ ಪದ್ಧತಿ ಅನುಸಾರ ಅಣಕು ಸೀಟು ಹಂಚಿಕೆ ಫಲಿತಾಂಶವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಬಿಎಸ್‌ಸಿ (ನರ್ಸಿಂಗ್), ಬಿ-ಫಾರ್ಮ, ಫಾರ್ಮಾ-ಡಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಜುಲೈ 22ರ ಸಂಜೆ 6ಗಂಟೆವರೆಗೆ ದಾಖಲಿಸಿರುವ ಆಯ್ಕೆಗಳನ್ನು ಅಣಕು ಸೀಟು ಹಂಚಿಕೆ ಫಲಿತಾಂಶಕ್ಕೆ ಪರಿಗಣಿಸಲಾಗಿದೆ.

ಆಯುರ್ವೇದ, ಯುನಾನಿ, ನ್ಯಾಚುರೋಪತಿ, ಯೋಗ, ಹೋಮಿಯೋಪತಿ ಕೋರ್ಸ್‌ಗಳಿಗೆ ಸೀಟ್ ಮ್ಯಾಟ್ರಿಕ್ಸ್ ಇನ್ನೂ ಬಂದಿರದ ಕಾರಣ ಅಣಕು ಸೀಟು ಹಂಚಿಕೆಗೆ ಈ ಕೋರ್ಸ್‌ಗಳನ್ನು ಪರಿಗಣಿಸಿಲ್ಲ. ಸೀಟ್ ಮ್ಯಾಟ್ರಿಕ್ಸ್ ಬಂದ ನಂತರ ಆಯ್ಕೆಗಳನ್ನು ದಾಖಲಿಸಲು ಅವಕಾಶ ನೀಡಲಾಗುವುದು ಎಂದು ವಿವರಿಸಿದ್ದಾರೆ.

ಅಣಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ ನಂತರ ಮೊದಲನೇ ಸುತ್ತಿನ ಸೀಟು ಹಂಚಿಕೆಗೆ ಆಯ್ಕೆಗಳನ್ನು ಹೊಸದಾಗಿ ಸೇರಿಸಲು, ಮಾರ್ಪಡಿಸಲು ಜುಲೈ 26ರಿಂದ ಜುಲೈ 29ರ ಸಂಜೆ 5ಗಂಟೆವರೆಗೆ ಅವಕಾಶ ನೀಡಲಾಗಿದೆ. ಆಗಸ್ಟ್ 1ರಂದು ಬೆಳಿಗ್ಗೆ 11ಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಪ್ರಕಟಿಸಲಾಗುವುದು. ಆಗಸ್ಟ್ 2ರಂದು ಮಧ್ಯಾಹ್ನ 2ಕ್ಕೆ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಇದುವರೆಗೂ ಆಯ್ಕೆಗಳನ್ನು ದಾಖಲಿಸದೇ ಇರುವ ಅಭ್ಯರ್ಥಿಗಳು ₹750 ರೂಪಾಯಿ ಪಾವತಿಸಿ, ಆಯ್ಕೆ ದಾಖಲಿಸಬಹುದು. ಕೊನೆ ದಿನಾಂಕದ ನಂತರ ಯಾವುದೇ ಸುತ್ತಿಗೆ ಆಯ್ಕೆಗಳನ್ನು ದಾಖಲಿಸಲು ಅವಕಾಶ ಇರುವುದಿಲ್ಲ. ಹೀಗಾಗಿ, ಕೋರ್ಸ್ ಶುಲ್ಕ ಇತ್ಯಾದಿ ನೋಡಿಕೊಂಡು, ಈಗಲೇ ತಮಗೆ ಇಷ್ಟವಾದ ಕಾಲೇಜು, ಕೋರ್ಸ್‌ಗಳಿಗೆ ಆಯ್ಕೆ ದಾಖಲಿಸಬಹುದು ಎಂದರು.

ನಿಧನ ವಾರ್ತೆ

ಡಾ.ಬಿ.ಎಸ್.ರಾವ್



ಡಾ.ಬಿ.ಎಸ್. ರಾವ್

ಕಾಸರಗೋಡು: ನಗರದ ವೈದ್ಯ ಡಾ.ಬಿ.ಎಸ್. ರಾವ್ (ಬಾಯಾರು ಶಂಕರನಾರಾಯಣ ರಾವ್) ಶುಕ್ರವಾರ ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು.

ಅವರಿಗೆ ಪತ್ನಿ ಪದ್ಮಾವತಿ ರಾವ್, ಮಕ್ಕಳಾದ ಡಾ.ಶಿವಪ್ರಸಾದ್ ರಾವ್, ಡಾ.ರೇಖಾ ಮಯ್ಯ, ರೂಪಾ ರಾವ್ ಇದ್ದಾರೆ.

ವೈದ್ಯ ವೃತ್ತಿಯ ಜೊತೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವರು ಸಕ್ರಿಯರಾಗಿದ್ದರು.

ಮಧೂರು ಮದನಂತೇಶ್ವರ ಸಿದ್ಧಿವಿನಾಯಕ ದೇವಾಲಯದಲ್ಲಿ ನಡೆದ ಐತಿಹಾಸಿಕ ಎರಡು ಮೂಡಪ್ಪ ಸೇವೆ ಕಾರ್ಯಕ್ರಮಗಳಲ್ಲಿ ಪದಾಧಿಕಾರಿಯಾಗಿ ಮುಂಚೂಣಿಯಲ್ಲಿದ್ದರು.

ಎಡನೀರು ಮಠದ ಜೊತೆ ನಿಕಟ ಸಂಬಂಧ ಹೊಂದಿದ್ದರು. ಕಲೆಯ ಆರಾಧಕರಾಗಿದ್ದ ಅವರು, ಮನೆಯನ್ನೇ ದೊಡ್ಡ ಕಲಾ ಆಲಯವನ್ನಾಗಿಸಿಕೊಂಡಿದ್ದರು.

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ

ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ-ಆರ್‌ಡಿ 116 ಜಿಆರ್‌ಸಿ 2025 ದಿನಾಂಕ: 24.07.2025

ಅಧಿಸೂಚನೆ

ಆರಕ್ಷಕ ನಿರೀಕ್ಷಕರು, ಸಿ.ಇ.ಎನ್ ಕ್ರೈಮ್ ಪೋಲೀಸ್ ಠಾಣೆ, ಮೈಸೂರು ನಗರ, ಇವರ ವರದಿಗಳನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ದೂರುಗಳ ಬಗ್ಗೆ ಯುಕ್ತ ತನಿಖೆಯ ತರುವಾಯ ಯೂನಿವರ್ಸಲ್ ಡೆವಲಪರ್ಸ್, ಮೈಸೂರು ನಗರ ಇವರು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಯೂನಿವರ್ಸಲ್ ಡೆವಲಪರ್ಸ್, ಮೈಸೂರು ನಗರ ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುಗಳನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಯೂನಿವರ್ಸಲ್ ಡೆವಲಪರ್ಸ್, ಮೈಸೂರು ನಗರ ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಯೂನಿವರ್ಸಲ್ ಡೆವಲಪರ್ಸ್, ಮೈಸೂರು ನಗರ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ಆರಕ್ಷಕ ನಿರೀಕ್ಷಕರು, ಸಂಘಟಿತ ಅಪರಾಧ ಮತ್ತು ರೌಡಿ ಪ್ರತಿಬಂಧಕ ದಳ, ಮೈಸೂರು ನಗರ ಇವರ ವರದಿಯನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005)ರ ಕರ್ನಾಟಕ ಅಧಿನಿಯಮ, 30) ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

“ಆದೇಶ”

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲೆ ನಿರೂಪಿಸಲಾದ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಯೂನಿವರ್ಸಲ್ ಡೆವಲಪರ್ಸ್, ಮೈಸೂರು ನಗರ ಸಂಸ್ಥೆಗೆ ಸೇರಿದೆ ಎನ್ನಲಾದ ಸ್ಥಿರ ಮತ್ತು ಚರಾಸ್ತಿಗಳನ್ನು ಜಪ್ತಿ ಮಾಡುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪರ್ಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಯೂನಿವರ್ಸಲ್ ಡೆವಲಪರ್ಸ್, ಮೈಸೂರು ನಗರ ಸಂಸ್ಥೆಯು ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಆರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧ-1, 2, 3, 4 ಮತ್ತು 5 ರಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಸ್ಥಿರಾ ಮತ್ತು ಚರಾಸ್ತಿಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಸ್ಥಿರ ಮತ್ತು ಚರ ಜಸ್ವತ್ತುಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/-
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು- 1 ಭೂಮಾಪನ & ವಿಶೇಷ ಕೋಶ)**

ಅನುಬಂಧ-1

ಕ್ರಮ ಸಂ.	ಸ್ವತ್ತಿನ ವಿವರ (ಚಕ್ಕುಬಂದಿ ಒಳಗೊಂಡಂತೆ)	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಖರೀದಿ ದರ (ರೂ.ಗಳಲ್ಲಿ)	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಷರಾ
1	ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕೈಲಾಂಚ-2 ಹೋಬಳಿ, ಚನ್ನಮಾನಹಳ್ಳಿ ಗ್ರಾಮದ ಸ.ನಂ. 116/1 ಒಟ್ಟು ಖುಷ್ಕಿ ಜಮೀನಿನ ವಿಸ್ತೀರ್ಣ : 0-31 ಗುಂಟೆ ಜಮೀನು. ಚೆಕ್ಕುಬಂದಿ : ಪೂರ್ವಕ್ಕೆ: ರಜತ್ ಡಿ.ಜೆ ರವರ ಜಮೀನು ಮತ್ತು ಇದೇ ಸರ್ವೆ ನಂಬರ್ ಜಮೀನಿನಲ್ಲಿ ಬಿಟ್ಟಿರುವ ರಸ್ತೆ. ಪಶ್ಚಿಮಕ್ಕೆ: ಸರ್ಕಾರಿ ಕೆರೆ. ಉತ್ತರಕ್ಕೆ: ಪುಟ್ಟುಸ್ವಾಮಯ್ಯ ರವರ ಜಮೀನು ದಕ್ಷಿಣಕ್ಕೆ: ಕೆಂಚಯ್ಯ ಉಳವಯ್ಯ ರವರ ಜಮೀನು.	ಯೂನಿವರ್ಸಲ್ ಡೆವಲಪರ್ಸ	ಉಪನೊಂದಣಾಧಿಕಾರಿ ರವರ ಕಛೇರಿ ರಾಮನಗರ RMN-1-02927-2022-23 CDV No. RMND 1284, ದಿನಾಂಕ:23-06-2022 ರಂದು ನೋಂದಣಿಯಾಗಿರುತ್ತದೆ.	15,00,000/-	***	*** ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯಮಾಪಕರಿಂದ ಸದರಿ ಸ್ವತಿನ ಮೌಲ್ಯ ಪಾಪನ ಮಾಡಿಸಿ ಮಾರುಕಟ್ಟೆ ದರವನ್ನು ನಿಗದಿಪಡಿಸಲು ಕ್ರಮ ವಹಿಸಲಾಗುವುದು.
2	ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕೈಲಾಂಚ-2 ಹೋಬಳಿ, ಚನ್ನಮಾನಹಳ್ಳಿ ಗ್ರಾಮದ ಸ.ನಂ. 117/2 ಒಟ್ಟು ಖುಷ್ಕಿ ಜಮೀನಿನ ವಿಸ್ತೀರ್ಣ : 0-21 ಗುಂಟೆ ಜಮೀನು. ಚೆಕ್ಕುಬಂದಿ : ಪೂರ್ವಕ್ಕೆ: ಬನ್ನಿಕುಪ್ಪೆ ರಸ್ತೆ. ಪಶ್ಚಿಮಕ್ಕೆ: ಸ.ನಂ. 116/1 ರ ಕ್ರಯದಾರರಾದ ನಿಮ್ಮ ಬಾಬ್ತು ಜಮೀನು. ಉತ್ತರಕ್ಕೆ: ಪುಟ್ಟುಸ್ವಾಮಯ್ಯ ರವರ ಜಮೀನು ದಕ್ಷಿಣಕ್ಕೆ: ಕೆಂಚಯ್ಯ ಉ ಎಳವಯ್ಯ ರವರ ಜಮೀನು.	ಯೂನಿವರ್ಸಲ್ ಡೆವಲಪರ್ಸ	ಉಪನೊಂದಣಾಧಿಕಾರಿ ರವರ ಕಛೇರಿ ರಾಮನಗರ RMN-1-07735-2022-23 CDV No. RMND 1401, ದಿನಾಂಕ:14-11-2022 ರಂದು ನೋಂದಣಿಯಾಗಿರುತ್ತದೆ.	15,00,000/-	***	*** ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯಮಾಪಕರಿಂದ ಸದರಿ ಸ್ವತಿನ ಮೌಲ್ಯ ಪಾಪನ ಮಾಡಿಸಿ ಮಾರುಕಟ್ಟೆ ದರವನ್ನು ನಿಗದಿಪಡಿಸಲು ಕ್ರಮ ವಹಿಸಲಾಗುವುದು.
3	ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು, ಉಪನೋಂಧಣಾಧಿಕಾರಿಗಳವರ ಸರಹದ್ದಿಗೆ ಸೇರಿ ಸಕಲೇಶಪುರ ತಾಲ್ಲೂಕು ಯಸಳೂರು ಹೋಬಳಿ, ಉಚ್ಚಂಗಿ ಗ್ರಾಮದ ಸ.ನಂ. 193/2 ಖುಷ್ಕಿ-ಕಾಫಿ, ವಿಸ್ತೀರ್ಣ 4-04 ಗುಂಟೆ ಜಮೀನು. ಚೆಕ್ಕುಬಂದಿ : ಪೂರ್ವಕ್ಕೆ: ಬಿ.ಎ ಗಿರೀಶ್ ರವರ ಸ.ನಂ. 102ರ ಜಮೀನು ಪಶ್ಚಿಮಕ್ಕೆ: ಕಟ್ಟಿಂಗ್ ಹಾಗೂ ತಂತಿ ಬೇಲಿ ನಂತರ ಸ.ನಂ.102 ರಲ್ಲಿ ಯು.ಟಿ. ಮಲ್ಲಪ್ಪ ರವರ ಸ್ವಾಧೀನ ಇರುವ ಪ್ರವೇಶ ಉತ್ತರಕ್ಕೆ: ಪೂರ್ವದಿಂದ ಮಠದಕೇರಿ ರಸ್ತೆ ನಂತರ ನಾರಾಯಣ ರವರ ಮನೆ ನಂತರ ಗ್ರಾಮ ಠಾಣ. ದಕ್ಷಿಣಕ್ಕೆ: ಇದೇ ಸ.ನಂ. 193 ರಲ್ಲಿ ಉಳಿಕೆ ಜಮೀನು (ಸಿದ್ದಲಿಂಗಮ್ಮ ನವರ ಜಮೀನು)	ಪ್ರಶಾಂತ ಕುಮಾರ್ ಗೌಡ ಎಂ. ಎಸ್ ಬಿನ್ ಎಂ.ಎಸ್ ಸಣ್ಣಯ್ಯ ಮುದಿಗೆರೆ ಗ್ರಾಮ, ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕು.	ಉಪನೊಂದಣಾಧಿಕಾರಿ ರವರ ಕಛೇರಿ ಸಕಲೇಶಪುರ SAK-1-01994-2023-24 ದಿನಾಂಕ:17.11.2023 ರಂದು ನೋಂದಣಿಯಾಗಿರುತ್ತದೆ.	40,00,000/-	***	*** ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯಮಾಪಕರಿಂದ ಸದರಿ ಸ್ವತಿನ ಮೌಲ್ಯ ಪಾಪನ ಮಾಡಿಸಿ ಮಾರುಕಟ್ಟೆ ದರವನ್ನು ನಿಗದಿಪಡಿಸಲು ಕ್ರಮ ವಹಿಸಲಾಗುವುದು.
4	ಸ.ನಂ. 98/6, RNG Elite Palm Springs Apartment, ಬ್ಲಾಕ್-ಎ, ನೆಲಮಹಡಿ ಎ-002, ಯಲಹಂಕ ಹೋಬಳಿ, ಬೆಂಗಳೂರು ಉತ್ತರ. ವಿಸ್ತೀರ್ಣ: 1450 ಚ. ಅಡಿ ಚೆಕ್ಕುಬಂದಿ : ಪೂರ್ವಕ್ಕೆ: ಖಾಸಗಿ ಸ್ವತ್ತು ಶ್ರೀ ಮಲ್ಲೇಶಪ್ಪ ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ: ಖಾಸಗಿ ಸ್ವತ್ತು ಶ್ರೀ ನಂಜಮ್ಮ ದಕ್ಷಿಣಕ್ಕೆ: ಖಾಸಗಿ ಸ್ವತ್ತು ಶ್ರೀ ಮಲ್ಲೇಶಪ್ಪ	ಶ್ರೀಮತಿ ಗೀತಾ ಎಂ.ಯು ಕೋಂ ಉಮೇಶ್ ಎಸ್	ಹಿರಿಯ ಉಪ ನೋಂದಣಾಧಿಕಾರಿ ಕಛೇರಿ ಮಲ್ಲೇಶ್ವರಂ, ಬೆಂಗಳೂರು MLS-1-01919-2022-23 CDV No. MLSD 1075, ದಿನಾಂಕ: 15.09.2022 ರಂತೆ ನೋಂದಣಿಯಾಗಿರುತ್ತದೆ.	48,20,000/-	***	*** ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯಮಾಪಕರಿಂದ ಸದರಿ ಸ್ವತಿನ ಮೌಲ್ಯ ಪಾಪನ ಮಾಡಿಸಿ ಮಾರುಕಟ್ಟೆ ದರವನ್ನು ನಿಗದಿಪಡಿಸಲು ಕ್ರಮ ವಹಿಸಲಾಗುವುದು.
5	ನಂಜನಗೂಡು ತಾಲ್ಲೂಕು, ನಂಜನಗೂಡು ನಗರ ಸಭೆ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನ ಅಸಸ್ ಮೆಂಟ್ ನಂ. 16403/4866/2869/52 ವಿಸ್ತೀರ್ಣ: 30x40 ಒಟ್ಟು 1200 ಚ.ಅಡಿ ಚೆಕ್ಕುಬಂದಿ : ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ: ಸೈಟ್ ಸಂಖ್ಯೆ:25 ಉತ್ತರಕ್ಕೆ: ಸೈಟ್ ಸಂಖ್ಯೆ:51 ದಕ್ಷಿಣಕ್ಕೆ: ಸೈಟ್ ಸಂಖ್ಯೆ:53	ಮಾದಪ್ಪ ಎಸ್ ಬಿನ್ ಶಿವಣ್ಣ	ಹಿರಿಯ ಉಪನೋಂದಣಾಧಿಕಾರಿ ರವರ ಕಛೇರಿ ನಂಜನಗೂಡು ತಾಲ್ಲೂಕು NJG-1-11943-2021-22 CDV No. NJGD 978, ದಿನಾಂಕ: 23.03.2022 ರಂತೆ ನೋಂದಣಿಯಾಗಿರುತ್ತದೆ.	9,65,000/-	***	*** ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯಮಾಪಕರಿಂದ ಸದರಿ ಸ್ವತಿನ ಮೌಲ್ಯ ಪಾಪನ ಮಾಡಿಸಿ ಮಾರುಕಟ್ಟೆ ದರವನ್ನು ನಿಗದಿಪಡಿಸಲು ಕ್ರಮ ವಹಿಸಲಾಗುವುದು.
6	Residential Apartment Bearing No. 6326 3rd Floor, Block 6 C, “Trendz-Whispering Woods” Madagalli Village, Elavala Hobli, Mysore Taluk. ವಿಸ್ತೀರ್ಣ: 1534 ಚ. ಅಡಿ ಚೆಕ್ಕುಬಂದಿ : ಪೂರ್ವಕ್ಕೆ: Internal Access ಪಶ್ಚಿಮಕ್ಕೆ: Internal Access ಉತ್ತರಕ್ಕೆ: Flat No. 6327 ದಕ್ಷಿಣಕ್ಕೆ: Flat No. 6325	ರಾಜಕುಮಾರ್ ಎಸ್. ಎನ್ ಬಿನ್ ನರಸಿಂಹಯ್ಯ	ಉಪನೊಂದಣಾಧಿಕಾರಿ ಮೈಸೂರು ಪಶ್ಚಿಮ ಸಂಖ್ಯೆ:MYW-1-10003-2023-24 ದಿನಾಂಕ:22.09.2023 ರಂದು ನೋಂದಣಿಯಾಗಿರುತ್ತದೆ.	64,75,000/-	***	*** ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯಮಾಪಕರಿಂದ ಸದರಿ ಸ್ವತಿನ ಮೌಲ್ಯ ಪಾಪನ ಮಾಡಿಸಿ ಮಾರುಕಟ್ಟೆ ದರವನ್ನು ನಿಗದಿಪಡಿಸಲು ಕ್ರಮ ವಹಿಸಲಾಗುವುದು.
7	ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಕೋಟೆಕೆರೆ ಗ್ರಾಮ ಸ.ನಂ. 78/1 ರಲ್ಲಿ 1-16 ಗುಂಟೆ ಜಮೀನು ಚೆಕ್ಕುಬಂದಿ : ಪೂರ್ವಕ್ಕೆ: ಲಾ ನಂ -77 ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಬ್ಲಾಕ್-01	ಉಮಾಮಹೇಶ್ ಬಿನ್ ಗುರುಮಲ್ಲಪ್ಪ, ಗುಂಡ್ಲಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಚಾಮರಾಜ ನಗರ ಜಿಲ್ಲೆ.	ಉಪನೊಂದಣಾಧಿಕಾರಿ ರವರ ಕಛೇರಿ ಗುಂಡ್ಲುಪೇಟೆ ಸಂಖ್ಯೆ:GUN-1-05296-2022-23. CDV ಸಂಖ್ಯೆ: GUND 1062 ದಿನಾಂಕ: 17.11.2022 ರಂದು ನೋಂದಣಿಯಾಗಿರುತ್ತದೆ.	4,43,000/-	***	*** ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯಮಾಪಕರಿಂದ ಸದರಿ ಸ್ವತಿನ ಮೌಲ್ಯ ಪಾಪನ ಮಾಡಿಸಿ ಮಾರುಕಟ್ಟೆ ದರವನ್ನು ನಿಗದಿಪಡಿಸಲು ಕ್ರಮ ವಹಿಸಲಾಗುವುದು.

ಅನುಬಂಧ-2

Sl. No	Name and Address of the Bank	Details of the Bank Account Number	Name and address of the Account Holder	Closing Balance	Remarks
1	HDFC Bank, No. 128/B.N Block, Kuvempunagara, Mysore City	Current Account No. 501000765526891 IFSC-HDFC0003733	Umesh S S/o Sannamallppa No. 4281, 11th B Main, J Block, Kanakadasa Nagara, Dattagalli, 3rd Stage, Mysuru city	Rs. 1,31,809/-	Belongs to accused Umesh.S

ಅನುಬಂಧ-3

Details of Seized Vehicles

Sl. No	Registration No.	Vehicle Details	Present market value(in Rs.)	Remarks
1	KA-12-Z-6531	White Color Maruthi Suzuki Ciaz Car Engine No. D13A2764250 Chassis No. MA3FXEB1S00194473	Rs. 4,00,000/-	The car belongs to Accused Umesh.S
2	KA-09-MH-3853	White Color MG Hector Plus Car Engine No. 463445924229650 Chassis No. MZ7BD1S2A6H101706	Rs. 25,00,000/-	The car belongs to Geetha M. U W/o Umesh. S
3	KA-09-JG-8113	Blue Color TVS Company Jupiter Scooter Engine No. GGSNM1408228 Chassis No. MD626EG58M1N08828	Rs. 40,000/-	The Scooter belongs to Sumeetha w/o Mallikarjuna.

ಅನುಬಂಧ-4

Sl. No	Details of the Gold Ornaments Seized	Weight	Present Market Value	Remarks
1	One Pair of Earing's	12 Grams 720 MG	Market value will be ascertained by obtaining the valuation report from the valuator	The ornaments were confiscated in the house of the accused Umesh.S vide PF No. 110/2023
2	One Bangle	14 Grams 590 MG		
3	Double Design Chain	29 Grams 920 MG		
4	Long Chain with dollar	61 Grams 310 MG		

ಅನುಬಂಧ-5

Sl. No	Description of the Seized Movable Items	Present Market Value
1	Furniture and Electronic Items seized.	Rs. 1,40,300/-

**ಸಹಿ/-
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-1, ಭೂಮಾಪನ ಮತ್ತು ವಿಶೇಷ ಕೋಶ)**

ವಾಸಾಸಂಇ/ವಾಪ್ರ/2055/2025-26

ಕಾಂಗ್ರೆಸ್ ನಾಯಕರಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಪ್ರಶ್ನೆ

‘ಅಕ್ರಮ ನಡೆದಿದ್ದರೆ 136 ಸ್ಥಾನ ಸಿಗುತ್ತಿತ್ತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ಅಕ್ರಮ ನಡೆದಿದ್ದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ 136 ಸ್ಥಾನಗಳನ್ನು ಗೆದ್ದು ಅಧಿಕಾರ ಹಿಡಿಯಲು ಸಾಧ್ಯವಿತ್ತೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.


ವಿಜಯೇಂದ್ರ

ತಮ್ಮ ಸಹೋದರ ಡಿ.ಕೆ.ಸುರೇಶ್ ಚುನಾವಣಾ ಅಕ್ರಮದಿಂದ ಸೋತಿದ್ದಾಗಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಇದಕ್ಕಾಗಿ ಶಿವಕುಮಾರ್ ರಾಜ್ಯದ ಜನರ ಕ್ಷಮೆ ಯಾಚಿಸಬೇಕು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಚುನಾವಣಾ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆ. ರಾಹುಲ್ ಗಾಂಧಿ ಮತ್ತಿತರರು ಇಂಥ ಸಾಂವಿಧಾನಿಕ ಸಂಸ್ಥೆ ಬಗ್ಗೆ ಅನುಮಾನ ವ್ಯಕ್ತಪಡಿಸುವುದು ಚುನಾವಣಾ ಆಯೋಗಕ್ಕೆ ಮಾಡುವ ಅಪಮಾನ ಮಾತ್ರವಲ್ಲ, ಪ್ರಜಾಪ್ರಭುತ್ವ ವಿರೋಧಿ ನಡೆಯೂ ಹೌದು ಎಂದರು.

> **ಯತೀಂದ್ರ ಅವರು ತಮ್ಮ ತಂದೆಯ ಮೇಲಿನ ಅಪಾರ ಅಭಿಮಾನದಿಂದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಜತೆ ಹೋಲಿಕೆ ಮಾಡಿದ್ದಾರೆ. ಇದು ಹಾಸ್ಯಾಸ್ಪದ, ಅಸಂಬದ್ಧ ಮತ್ತು ಒಡೆಯರ್‌ಗೆ ಮಾಡಿದ ಘೋರ ಅಪಮಾನ**
>
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

‘ಕೇಂದ್ರ ಸರ್ಕಾರ, ನರೇಂದ್ರ ಮೋದಿಯವರು ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡಿದ್ದರೆ ಸಿದ್ದರಾಮಯ್ಯ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿಯಾಗಲು ಸಾಧ್ಯವಿತ್ತೇ? ಈಚೆಗೆ ನಡೆದ ಮೂರು ಉಪಚುನಾವಣೆಗಳಲ್ಲಿ ಕಾಂಗ್ರೆಸ್‌ನವರು ಗೆದ್ದರಲ್ಲವೇ, ಆಗ ಚುನಾವಣಾ ಆಯೋಗದಿಂದ ದುರ್ಬಳಕೆ ಆಗಿಲ್ಲವೇ’ ಎಂದು ವಿಜಯೇಂದ್ರ ಪ್ರಶ್ನಿಸಿದರು.

ಚುನಾವಣಾ ಆಯೋಗದ ಕುರಿತಂತೆ ರಾಹುಲ್‌ಗಾಂಧಿ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಅಪಾಯಕಾರಿ ಬೆಳವಣಿಗೆ. ಕಾಂಗ್ರೆಸ್ ನಾಯಕರ ತುರ್ತುಪರಿಸ್ಥಿತಿಯ ಮನಸ್ಥಿತಿ ಇಂದಿಗೂ ಬದಲಾಗಿಲ್ಲ ಎಂಬುದಕ್ಕೆ ಇದು ಮತ್ತೊಂದು ನಿದರ್ಶನ ಎಂದು ಟೀಕಿಸಿದರು.

ರಾಜ್ಯದ ಹಿತ ಬಲಿ ಕೊಡುವುದಿಲ್ಲ: ‘ಮಹದಾಯಿ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ರಾಜ್ಯ ಬಿಜೆಪಿ ಸದಾ ರಾಜ್ಯದೊಂದಿಗೆ ಇರುತ್ತದೆ. ಗೋವಾ ಮುಖ್ಯಮಂತ್ರಿ ಹೇಳಿಕೆಯನ್ನು ಗಮನಿಸಿದ್ದೇನೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಹೇಳಿಕೆಯನ್ನೂ ಗಮನಿಸಬೇಕು. ಕರ್ನಾಟಕ ಹಿತ ಬಲಿಕೊಡಲು ಅವಕಾಶ ನೀಡುವುದಿಲ್ಲ’ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು 4,078 ದಿನಗಳ ಆಡಳಿತ ನಡೆಸಿದ್ದಾರೆ. ಇದೊಂದು ದಾಖಲೆ ಎಂದರು.

ಚುನಾವಣಾ ಅಕ್ರಮ ನಡೆಸಿ 9ರಲ್ಲಿ ‘ಕೈ’ ಗೆಲುವು: ಸಿ.ಟಿ. ರವಿ

ನವದೆಹಲಿ: ‘2024ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಚುನಾವಣಾ ಅಕ್ರಮ ನಡೆಸಿ ಕಾಂಗ್ರೆಸ್ 9 ಸ್ಥಾನಗಳಲ್ಲಿ ಗೆಲುವು ಸಾಧಿಸಿರುವ ಅನುಮಾನ ಇದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ.ರವಿ ಆಗ್ರಹಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘2019ರ ಚುನಾವಣೆಯಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿಕೂಟ ಮಾಡಿಕೊಂಡು ಸ್ಪರ್ಧಿಸಿದಾಗ ಈ ಪಕ್ಷಗಳು ಒಂದೊಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದವು. 2024ರ ಚುನಾವಣೆಯಲ್ಲಿ ಕಾಂಗ್ರೆಸ್ ಏಕಾಂಗಿಯಾಗಿ ಸ್ಪರ್ಧಿಸಿತ್ತು. ಹಾಗಿದ್ದರೂ 9ರಲ್ಲಿ ಗೆದ್ದಿದ್ದು ಹೇಗೆ? ಕಲಬುರಗಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಳಿಯ ಗೆದ್ದಿದ್ದು ಹೇಗೆ’ ಎಂದು ಅವರು ಪ್ರಶ್ನಿಸಿದರು.

‘ಭಾರತೀಯ ಚುನಾವಣಾ ಆಯೋಗಕ್ಕೆ ಅದರದ್ದೇ ಆದ ಅಧಿಕಾರಿಗಳ ಜಾಲ ಇರುವುದಿಲ್ಲ. ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಶಾಲಾ ಶಿಕ್ಷಕರನ್ನು ಬಳಸಿಕೊಂಡು ಚುನಾವಣೆ ನಡೆಸುತ್ತದೆ. 2024ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಅಧಿಕಾರಿಗಳನ್ನು ಕಾಂಗ್ರೆಸ್ ಸರ್ಕಾರ ದುರ್ಬಳಕೆ ಮಾಡಿಕೊಂಡು ಮತದಾರರ ಪಟ್ಟಿ ಪರಿಷ್ಕರಣೆ ಮಾಡಿರುವ ಸಾಧ್ಯತೆ ಇದೆ’ ಎಂದು ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ ಕನಿಷ್ಠ 4 ಲಕ್ಷ ಮತಗಳ ಅಂತರದಿಂದ ಗೆಲ್ಲಬೇಕಿತ್ತು. ಇಲ್ಲಿ ಕಾಂಗ್ರೆಸ್ ಸರ್ಕಾರ ಅಕ್ರಮ ನಡೆಸಿದ್ದರಿಂದ ಗೆಲುವಿನ ಅಂತರ 2 ಲಕ್ಷಕ್ಕೆ ಇಳಿಯಿತು. ಮೈಸೂರಿನಲ್ಲೂ 3.75 ಲಕ್ಷ ಮತಗಳ ಅಂತರದಿಂದ ಗೆಲ್ಲಬೇಕಿತ್ತು ಎಂದರು.

‘ಚಿಕ್ಕಮಗಳೂರು ಕ್ಷೇತ್ರದಲ್ಲಿ ₹5 ಸಾವಿರ ಕೋಟಿ ಕಾಮಗಾರಿ ಮಾಡಿಸಿದ್ದೆ. ಕ್ಷೇತ್ರಕ್ಕೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿಸಿದ್ದೆ. ನನ್ನನ್ನು ಸೋಲಿಸಲು ಸಾಧ್ಯವೇ ಇಲ್ಲ ಎಂದು ಜನರು ಹೇಳುತ್ತಿದ್ದರು. ಕಾಂಗ್ರೆಸ್ ಮಾಡಿರುವ ಅಕ್ರಮದಿಂದ ನಾನು ಸೋತಿರುವ ಸಾಧ್ಯತೆ ಇದೆ’ ಎಂದರು.

ಸೂಲಿಬೆಲೆ ವಿರುದ್ಧದ ಪ್ರಕರಣ ರದ್ದು

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ‘ಅಯೋಗ್ಯ’ ಎಂದು ಕರೆದಿದ್ದಕ್ಕಾಗಿ ಚಕ್ರವರ್ತಿ ಸೂಲಿಬೆಲೆ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಮೊಕದ್ದಮೆಗಳನ್ನು ಸುಪ್ರೀಂ ಕೋರ್ಟ್ ಶುಕ್ರವಾರ ರದ್ದುಗೊಳಿಸಿದೆ.

ಕರ್ನಾಟಕ ಹೈಕೋರ್ಟ್‌ನ 2024ರ ಸೆಪ್ಟೆಂಬರ್ 27ರ ಆದೇಶ ಪ್ರಶ್ನಿಸಿ ಸೂಲಿಬೆಲೆ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಎನ್.ಕೋಟೀಶ್ವರ ಸಿಂಗ್ ಅವರ ಪೀಠವು ಈ ಆದೇಶ ನೀಡಿತು.

ಯುವ ಬ್ರಿಗೇಡ್‌ನಿಂದ ಸಿರಾವರದಲ್ಲಿ 2024ರ ಜನವರಿ 18ರಂದು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಸೂಲಿಬೆಲೆ ಅವರು ಖರ್ಗೆ ಅವರನ್ನು ಅಯೋಗ್ಯ ಎಂದು ಕರೆದಿದ್ದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.95	15,468	12,905
ಹಾರಂಗಿ	2,859	2,855.98	8,496	10,508
ಕಬಿನಿ	2,284.00	2,283.82	19,201	12,000
ಹೇಮಾವತಿ	2,922	2,921.03	8,347	8,286
ಲಿಂಗನಮಕ್ಕಿ	1,819	1,806.40	40,415	4,864
ಸೂಪಾ (ಮೀ)	564	548.10	20,139.5	3,267.66
ಮಾಣಿ	595	588.63	6,669	0
ತುಂಗಭದ್ರಾ	1,633	1,625.48	26,478	28,246
ಮಲಪ್ರಭಾ	2,079.5	2,073.30	2,354	1,244
ಘಟಪ್ರಭಾ	2175	2,169.43	7,615	4,266
ಭದ್ರಾ *	186	180.6	20,407	8,914
ಆಲಮಟ್ಟಿ (ಮೀ)	519.6	518.07	32,932	43,140
ನಾರಾಯಣಪುರ(ಮೀ)	492.25	491.98	45,000	54,600

* ನೆಲಮಟ್ಟದಿಂದ

ಸಿಎಂ– ಡಿಸಿಎಂ ‘ವಿಶೇಷ’ ಅಧಿಕಾರಿಗಳ ಜಟಾಪಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಧಿಕಾರ ಹಸ್ತಾಂತರದ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ಶೀತಲ ಸಮರ ನಡೆಯುತ್ತಿದ್ದರೆ, ಅವರ ಆಪ್ತ ಅಧಿಕಾರಿಗಳಿಬ್ಬರು ರಾಷ್ಟ್ರ ರಾಜಧಾನಿಯಲ್ಲಿ ಬಹಿರಂಗವಾಗಿ ಜಟಾಪಟಿ ನಡೆಸಿದ್ದಾರೆ.

ಸಿದ್ದರಾಮಯ್ಯ ಅವರ ವಿಶೇಷ ಕರ್ತವ್ಯ ಅಧಿಕಾರಿಯೂ ಆಗಿರುವ ಕರ್ನಾಟಕ ಭವನದ ಸಹಾಯಕ ನಿವಾಸಿ ಆಯುಕ್ತ ಮೋಹನ್ ಕುಮಾರ್ ಸಿ. ಹಾಗೂ ಶಿವಕುಮಾರ್ ಅವರ ವಿಶೇಷ ಅಧಿಕಾರಿ ಎಚ್.ಆಂಜನೇಯ ನಡುವಿನ ಗಲಾಟೆಯ ದೂರು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ನಿವಾಸಿ ಆಯುಕ್ತರಿಗೆ ತಲುಪಿದೆ. ಮೋಹನ್ ವಿರುದ್ಧ ಇಲಾಖಾ ವಿಚಾರಣೆ ನಡೆಸಬೇಕು ಎಂದು ಆಂಜನೇಯ ದೂರಿತ್ತಿದ್ದಾರೆ.

‘ಸಹಾಯಕ ನಿವಾಸಿ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ದಿನದಿಂದ ಮೋಹನ್ ಅವರು ಕರ್ತವ್ಯಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಬೂಟು ಕಳಚಿ ಹೊಡೆಯುತ್ತೇನೆ ಎಂದು ಅವರ ಕಚೇರಿಯಲ್ಲಿ ಬೆದರಿಕೆ ಹಾಕಿದ್ದರು. ನನಗೆ ಏನಾದರೂ ಅಪಘಾತವಾದರೆ ಮೋಹನ್ ಅವರೇ ಹೊಣೆ’ ಎಂದು ಆಂಜನೇಯ ದೂರಿನಲ್ಲಿ ತಿಳಿಸಿದ್ದಾರೆ.

‘ಈ ಅಧಿಕಾರಿಯು ಈ ಹಿಂದೆ ಎಂ.ಎಂ. ಜೋಷಿ ಅವರಿಗೆ ಹಲ್ಲೆ ಮಾಡಿದ್ದರು. ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯ ಅಧಿಕಾರಿ ಎಂಬ ಅಹಂನಲ್ಲಿ ತಾನು ಹೇಳಿದ ರೀತಿಯಲ್ಲಿ ಕರ್ನಾಟಕ ಭವನದ ಆಡಳಿತ ನಡೆಯಬೇಕು ಎಂದು ಹೇಳುತ್ತಿದ್ದಾರೆ. ಇದೇ ಕಾರಣಕ್ಕೆ ಕಚೇರಿ ಅಧೀಕ್ಷಕ–ಆಡಳಿತ ಹುದ್ದೆಯಿಂದ ನನ್ನನ್ನು ವರ್ಗಾವಣೆ ಮಾಡಿಸಿದ್ದಾರೆ. ಸೇವಾ ಹಿರಿತನದಲ್ಲಿ ಹಿರಿಯನಿದ್ದರೂ ಲೆಕ್ಕಾಧಿಕಾರಿಯಾಗಿ (ಪ್ರಭಾರ) ಕರ್ತವ್ಯ ನಿರ್ವಹಿಸದಂತೆ ತಡೆದಿದ್ದಾರೆ. ಹೀಗಾಗಿ, ಅವರ ಸೇವಾ ಅವಧಿಯಲ್ಲಿ ನಡೆದಿರುವ ಇಲಾಖಾ ವಿಚಾರಣೆ, ಮುಂಬಡ್ತಿ ಪಡೆದಿರುವ ಕುರಿತು ವಿಚಾರಣೆ ನಡೆಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಇಬ್ಬರ ನಡುವೆ ಏನೋ ಆಗಿದೆಯಂತೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು’ ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ಆಂಜನೇಯ ಅವರನ್ನು ಕರೆಸಿ ವಿವರಣೆ ಕೇಳಿದೆ. ಬೂಟ್‌ನಿಂದ ಹೊಡೆಯುತ್ತೇನೆ ಎಂದು ಬೆದರಿಕೆ ಹಾಕಿಲ್ಲ’ ಎಂದು ಮೋಹನ್ ಕುಮಾರ್ ಸ್ಪಷ್ಟಪಡಿಸಿದರು.

‘ಭವನದ ಮಹಿಳೆಯರ ಜತೆಗೆ ಆಂಜನೇಯ ಅಸಭ್ಯವಾಗಿ ನಡೆದುಕೊಂಡಿದ್ದಾರೆ. ಈ ಬಗ್ಗೆ ಮಹಿಳಾ ಸಿಬ್ಬಂದಿ ಮಹಿಳಾ ಆಯೋಗಕ್ಕೂ ದೂರು ನೀಡಿದ್ದಾರೆ’ ಎಂದರು.

ಕುರಿಗಾಹಿ ಮೇಲೆ ಬಲ್ಡೋಟಾ ಭದ್ರತಾ ಸಿಬ್ಬಂದಿ ಹಲ್ಲೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲಾ ಕೇಂದ್ರದ ಸಮೀಪದಲ್ಲಿ ಬಲ್ಡೋಟಾ ಕಂಪನಿ ತನ್ನ ಉಕ್ಕಿನ ಕಾರ್ಖಾನೆ ವಿಸ್ತರಿಸಲು ಕಾಂಪೌಂಡ್ ಹಾಕಿಕೊಂಡಿರುವ ಜಾಗದಲ್ಲಿ ಕೆರೆಯಿದ್ದು, ಅಲ್ಲಿ ಕುರಿಗಳಿಗೆ ನೀರು ಕುಡಿಸಲು ಹೋದ ಕುರಿಗಾಹಿ ಮೇಲೆ ಕಂಪನಿಯ ಭದ್ರತಾ ಸಿಬ್ಬಂದಿ ಶುಕ್ರವಾರ ಹಲ್ಲೆ ಮಾಡಿದ್ದಾರೆ.

ಜಾನುವಾರು ನೀರು ಕುಡಿಯಲು ಕೆರೆಯಲ್ಲಿ ಅವಕಾಶ ಕೊಡಬೇಕು ಎಂದು ಕೊಪ್ಪಳ ಬಚಾವೊ ಜನಾಂದೋಲನ ಸಮಿತಿ ವತಿಯಿಂದ ಎರಡು ದಿನಗಳ ಹಿಂದೆ ಪ್ರತಿಭಟನೆ ನಡೆದಿತ್ತು. ಶುಕ್ರವಾರ ಬೆಳಿಗ್ಗೆ ಬಸಾಪುರ ಗ್ರಾಮದ ಕುರಿಗಾಹಿ ದೇವಪ್ಪ ಹಾಲಹಳ್ಳಿ ಕುರಿಗಳಿಗೆ ನೀರು ಕುಡಿಸಲು ಹೋದಾಗ ಭದ್ರತಾ ಸಿಬ್ಬಂದಿ ಹಲ್ಲೆ ಮಾಡಿದ್ದಾರೆ. ಬಳಿಕ ಹೋರಾಟಗಾರರು ಹಾಗೂ ಭದ್ರತಾ ಸಿಬ್ಬಂದಿ ನಡುವೆ ಮಾತಿನ ಚಕಮಕಿ ನಡೆದಿದೆ.

‘ಜನೌಷಧಿ ಕೇಂದ್ರ ಮುಚ್ಚದಂತೆ ಪತ್ರ’

ನವದೆಹಲಿ: ಕರ್ನಾಟಕದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧಿ ಕೇಂದ್ರಗಳನ್ನು ಮುಚ್ಚದಂತೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಲೋಕಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಸಂಸದ ಜಗದೀಶ ಶೆಟ್ಟರ್ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ರಾಸಾಯನಿಕ ಹಾಗೂ ರಸಗೊಬ್ಬರ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್, ‘ನಿರ್ಧಾರವನ್ನು ಮರುಪರಿಶೀಲಿಸುವಂತೆ ಮುಖ್ಯಮಂತ್ರಿ ಅವರಿಗೆ ಸಚಿವ ಜೆ.ಪಿ.ನಡ್ಡಾ ಪತ್ರ ಬರೆದಿದ್ದಾರೆ’ ಎಂದಿದ್ದಾರೆ.

ಜನೌಷಧಿ ಕೇಂದ್ರದಲ್ಲಿ ಗುಣಮಟ್ಟದ ಔಷಧಿಗಳು ಕಡಿಮೆ ಬೆಲೆಗೆ ಸಿಗುತ್ತಿದ್ದು ರಾಜ್ಯದ ನಾಗರಿಕರಿಗೆ ಕಳೆದ 10 ವರ್ಷಗಳಲ್ಲಿ ₹5,700 ಕೋಟಿ ಉಳಿತಾಯ ಆಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ನಡ್ಡಾ ಪತ್ರ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಈ ಬಗ್ಗೆ ಮಾಹಿತಿ ಪಡೆದು ಪ್ರತಿಕ್ರಿಯೆ ನೀಡುತ್ತೇನೆ’ ಎಂದರು.

ಕ್ವಿಂಟಲ್ ಜೋಳ ಹೊತ್ತು 13 ಕಿ.ಮೀ ಕ್ರಮಿಸಿದ ‘ಬಾಹುಬಲಿ’!

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ನಾಗರಪಂಚಮಿ ಹಬ್ಬದ ಅಂಗವಾಗಿ ಏರ್ಪಡಿಸಿದ್ದ ಭಾರ ಹೊರುವ ಸ್ಪರ್ಧೆಯಲ್ಲಿ ತಾಲ್ಲೂಕಿನ ಇಟಗಾ (ಎಸ್) ಗ್ರಾಮದ ಯುವಕ ನಾಗರಾಜ ಈರಣ್ಣ ದೊಡ್ಮನಿ ಒಂದು ಕ್ವಿಂಟಲ್ ಜೋಳದ ಚೀಲ ಹೊತ್ತುಕೊಂಡು 13 ಕಿ.ಮೀ ಕ್ರಮಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ನಾಗರಪಂಚಮಿ ಅಂಗವಾಗಿ ಗೆಳೆಯರು ಸೇರಿಕೊಂಡು ಭಾರ ಹೊರುವ ಸ್ಪರ್ಧೆ ಏರ್ಪಡಿಸಿದ್ದರು. ನಾಗರಾಜ ಇಟಗಾ (ಎಸ್) ಗ್ರಾಮದಿಂದ ಶಹಾಪುರ ನಗರದ ಹನುಮಾನ ದೇವಾಲಯದವರೆಗೂ (13 ಕಿ.ಮೀ) ಒಂದು ಕ್ವಿಂಟಲ್ ಜೋಳದ ಚೀಲವನ್ನು ಭುಜದ ಮೇಲೆ ಹೊತ್ತುಕೊಂಡು ಬಂದು ₹ 50 ಸಾವಿರ ನಗದು ಬಹುಮಾನ ಪಡೆದಿದ್ದಾರೆ. ಈ ದೂರವನ್ನು ಕ್ರಮಿಸಲು ಏಳು ಗಂಟೆ ಸಮಯದ ಮಿತಿ ನಿಗದಿಪಡಿಸಲಾಗಿತ್ತು. ಆದರೆ, ಅವಧಿಗೆ ಮುನ್ನವೇ ಕೇವಲ ಆರು ಗಂಟೆಗಳಲ್ಲಿ ತಮ್ಮ ಗುರಿಯನ್ನು ತಲುಪಿದರು. ನಾಗರಾಜ ಅವರಿಗೆ ಅವರ ಗೆಳೆಯರು, ಗ್ರಾಮಸ್ಥರು ಹುರಿದುಂಬಿಸಿದರು.

ಅಷ್ಟೂ ದೂರವನ್ನು ನಾಗರಾಜ ಬರಿಗಾಲಿನಲ್ಲಿ ಕ್ರಮಿಸಿದ್ದು ವಿಶೇಷ.

ರಾಬಕೊವಿ: ರಾಘವೇಂದ್ರ ಹಿಟ್ನಾಳ್ ಅಧ್ಯಕ್ಷ

ಸತ್ಯನಾರಾಯಣ ಉಪಾಧ್ಯಕ್ಷ; ಭೀಮಾ ನಾಯ್ಕ್‌ಗೆ ಮುಖಭಂಗ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ರಾಯಚೂರು, ಬಳ್ಳಾರಿ, ಕೊಪ್ಪಳ, ವಿಜಯನಗರ (ರಾಬಕೊವಿ) ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಶುಕ್ರವಾರ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಕೊಪ್ಪಳದ ಎನ್. ಸತ್ಯನಾರಾಯಣ ಆಯ್ಕೆಯಾದರು.

ಒಕ್ಕೂಟದ ಅಧ್ಯಕ್ಷರಾಗಬೇಕು ಎಂದು ಬಯಸಿದ್ದ ಮಾಜಿ ಶಾಸಕ, ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್)ದ ಮಾಜಿ ಅಧ್ಯಕ್ಷರೂ ಆದ ಭೀಮನಾಯ್ಕ, ಸಂಖ್ಯಾಬಲದ ಕೊರತೆಯಿಂದಾಗಿ ಸ್ಪರ್ಧಾಕಣದಿಂದಲೇ ದೂರ ಉಳಿದರು.

ತಾಕತ್ತು ತೋರಿಸಿದ್ದೇನೆ: ಚುನಾವಣೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಾಘವೇಂದ್ರ ಹಿಟ್ನಾಳ್, ‘ಒಕ್ಕೂಟಕ್ಕೆ ಬರಲು ತಾಕತ್ತು ಇದೆಯೇ ಎಂದು ಹಿಂದಿನ ಅಧ್ಯಕ್ಷರು ಸವಾಲು ಹಿಟ್ನಾಳ ಎಸೆದಿದ್ದರು. ಆ ಸವಾಲು ಸ್ವೀಕರಿಸಿ ನನ್ನ ಧಮ್ಮು ತಾಕತ್ತು ಪ್ರದರ್ಶನ ಮಾಡಿದ್ದೇನೆ. ಒಕ್ಕೂಟದಲ್ಲಿ ಬಳ್ಳಾರಿಗೆ ಪ್ರಾತಿನಿಧ್ಯ ಸಿಗುವಂತೆ ಮಾಡುತ್ತೇನೆ. ಮೆಗಾ ಡೇರಿಯನ್ನು ಬಳ್ಳಾರಿಯಲ್ಲೇ ಸ್ಥಾಪಿಸುತ್ತೇನೆ’ ಎಂದು ಸ್ಪಷ್ಟಪಡಿಸಿದರು.


ರಾಘವೇಂದ್ರ

‘ಕೆಎಂಎಫ್ ನಿರ್ದೇಶಕ ಸ್ಥಾನಕ್ಕೆ ಪ್ರಾತಿನಿಧ್ಯ (ಡೆಲಿಗೇಷನ್) ಪಡೆದು, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡುವಿರಾ’ ಎಂಬ ಪ್ರಶ್ನೆಗೆ, ‘ಇದು ಪಕ್ಷದ ನಾಯಕರಿಗೆ ಬಿಟ್ಟ ವಿಚಾರ’ ಎಂದರು.

ಕೆಎಂಎಫ್ ಆಸೆ ಬಿಡದ ಭೀಮಾ ನಾಯ್ಕ: ‘ಡಿ.ಕೆ.ಸುರೇಶ್ ಅವರು ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡುವ ವಿಚಾರ ನನಗೆ ಗೊತ್ತಿಲ್ಲ. ಆದರೆ ನಾನಂತೂ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದೇನೆ. ಈ ವಿಚಾರದಲ್ಲಿ ಪಕ್ಷದ ನಾಯಕರು ತೀರ್ಮಾನ ಕೈಗೊಳ್ಳುತ್ತಾರೆ’ ಎಂದು ಕೆಎಂಎಫ್ ಮಾಜಿ ಅಧ್ಯಕ್ಷ ಭೀಮಾ ನಾಯ್ಕ ಹೇಳಿದರು.

ಆದರೆ, ಭೀಮಾ ನಾಯ್ಕ ಅವರಿಗೆ ಕೆಎಂಎಫ್ ಡೆಲಿಗೇಷನ್ ಕೊಡಲು ತೀರ್ಮಾನಿಸಿರುವುದನ್ನು ರಾಘವೇಂದ್ರ ಹಿಟ್ನಾಳ್ ನಿರಾಕರಿಸಿದರು. ಆಡಳಿತ ಮಂಡಳಿ ಆ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

ಅಭ್ಯರ್ಥಿ ಆಯ್ಕೆಗೆ ಕಸರತ್ತು ಶುರು

ಉಪ ರಾಷ್ಟ್ರಪತಿ ಚುನಾವಣೆ ಪ್ರಕ್ರಿಯೆ ಆರಂಭ: ಗರಿಗೆದರಿದ ಚಟುವಟಿಕೆ

ಮುಖ್ಯಾಂಶಗಳು

- 782 ಹಾಲಿ ಮತದಾರರು
- 392 ಗೆಲುವಿಗೆ ಬೇಕಿರುವ ಮತಗಳು
- 425 ಎನ್‌ಡಿಎ ಸದಸ್ಯರು

ನವದೆಹಲಿ (ಪಿಟಿಐ): ಚುನಾವಣಾ ಆಯೋಗವು ಚುನಾವಣಾಧಿಕಾರಿಯನ್ನು ನೇಮಿಸುವ ಮೂಲಕ ಮುಂದಿನ ಉಪರಾಷ್ಟ್ರಪತಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭಿಸುತ್ತಿದ್ದಂತೆ, ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳ ಮೈತ್ರಿಕೂಟದಲ್ಲೂ ಚಟುವಟಿಕೆಗಳು ಗರಿಗೆದರಿವೆ.

ಅಭ್ಯರ್ಥಿಯ ಆಯ್ಕೆಗೆ ಬಿಜೆಪಿ ಹೈಕಮಾಂಡ್ ಇನ್ನೂ ಚರ್ಚೆ ಆರಂಭಿಸಿಲ್ಲವಾದರೂ, ತೆರೆ ಮರೆಯಲ್ಲಿ ಕಸರತ್ತು ಶುರುವಾಗಿದೆ. ಬಿಜೆಪಿ ನಾಯಕತ್ವ ಈ ಬಾರಿ ಪ್ರಯೋಗಕ್ಕೆ ಮುಂದಾಗುವ ಬದಲು ಅಭ್ಯರ್ಥಿಯ ಆಯ್ಕೆಗೆ ಸೈದ್ಧಾಂತಿಕ ಹಿನ್ನೆಲೆ ಮತ್ತು ಪಕ್ಷ ನಿಷ್ಠೆಗೆ ಆದ್ಯತೆ ನೀಡುವ ಸಾಧ್ಯತೆಯಿದೆ.



2022ರಲ್ಲಿ ಪಕ್ಷವು ಪ್ರಯೋಗಕ್ಕೆ ಮುಂದಾಗಿ ಧನಕರ್ ಅವರನ್ನು ಅಭ್ಯರ್ಥಿಯನ್ನಾಗಿಸಿತ್ತು. ಜನತಾ ದಳದ ಸಂಸದರಾಗಿ 1991ರಲ್ಲಿ ರಾಜಕೀಯ ಜೀವನ ಆರಂಭಿಸಿದ್ದ ಧನಕರ್ ಆ ಬಳಿಕ ಕಾಂಗ್ರೆಸ್ ಸೇರಿದ್ದರು. ಅನಂತರ ಅವರು ಬಿಜೆಪಿ ಜತೆ ಗುರುತಿಸಿಕೊಂಡಿದ್ದರು.

ಸುಪ್ರೀಂ ಕೋರ್ಟ್‌ನಲ್ಲಿ ಹಿರಿಯ ವಕೀಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬಿಜೆಪಿ ನಾಯಕತ್ವದ ಗಮನಸೆಳೆದ ಅವರು 2019ರಲ್ಲಿ ಪಶ್ಚಿಮ ಬಂಗಾಳ ರಾಜ್ಯಪಾಲರಾಗಿ ನೇಮಕಗೊಂಡರು.

2022ರಲ್ಲಿ ಉಪ ರಾಷ್ಟ್ರಪತಿಯಾಗಿ ಆಯ್ಕೆಯಾದರು. ಧನಕರ್ ಅವರ ನೇರ ನುಡಿ ಮತ್ತು ಅಸಾಂಪ್ರದಾಯಿಕ ಶೈಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಇಷ್ಟವಾಗಲಿಲ್ಲ.

'ಧನಕರ್ ಅವರ ಆಯ್ಕೆಗೆ ಅನುಸರಿಸಿದ್ದ ಹಾದಿಯನ್ನು ಈ ಬಾರಿ ಎನ್‌ಡಿಎ ಅನುಸರಿಸುವ ಸಾಧ್ಯತೆಯಿಲ್ಲ. ಅವರ ಉತ್ತರಾಧಿಕಾರಿ ಆಯ್ಕೆಗೆ ಸಾಂಪ್ರದಾಯಿಕ ಮಾರ್ಗದ ಮೊರೆ ಹೋಗಲಾಗುತ್ತದೆ' ಎಂದು ಬಿಜೆಪಿ ಹಾಗೂ ಅದರ ಮಿತ್ರಪಕ್ಷಗಳ ಹಲವು ನಾಯಕರು ಅಭಿಪ್ರಾಯಪಟ್ಟಿದ್ದಾರೆ.

ಬಿಜೆಪಿಯವರೇ ಅಭ್ಯರ್ಥಿ ಆಗಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆಯಾದರೂ, ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್ ಅವರ ಹೆಸರೂ ಮುಂಚೂಣಿಯಲ್ಲಿದೆ. ಜೆಡಿಯು ಸಂಸದರಾಗಿರುವ ಹರಿವಂಶ್ ಅವರು ಕಳೆದ ಏಳು ವರ್ಷಗಳಲ್ಲಿ ಸರ್ಕಾರದ ವಿಶ್ವಾಸ ಗಳಿಸಲು ಯಶಸ್ವಿಯಾಗಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ಅಕ್ಟೋಬರ್- ನವೆಂಬರ್‌ನಲ್ಲಿ ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಮುಂದಿನ ವರ್ಷ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಅಸ್ಸಾಂನಲ್ಲಿ ಚುನಾವಣೆ ನಡೆಯಲಿದೆ. ಅಭ್ಯರ್ಥಿ ಆಯ್ಕೆ ವೇಳೆ ಬಿಜೆಪಿ ಈ ಅಂಶಗಳನ್ನೂ ಗಮನದಲ್ಲಿಡಲಿದೆ ಎನ್ನಲಾಗಿದೆ.

ಎನ್‌ಡಿಎ ಬಳಿ ಬಹುಮತ

ಉಪ ರಾಷ್ಟ್ರಪತಿ ಹುದ್ದೆಗೆ ತಾನು ನಿಲ್ಲಿಸುವ ಅಭ್ಯರ್ಥಿಯನ್ನು ಗೆಲ್ಲಿಸಲು ಅಗತ್ಯವಿರುವಷ್ಟು ಮತಗಳನ್ನು ಎನ್‌ಡಿಎ ಹೊಂದಿದೆ. ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರು ಉಪ ರಾಷ್ಟ್ರಪತಿಯನ್ನು ಆಯ್ಕೆ ಮಾಡುವರು. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಒಟ್ಟು 782 ಸದಸ್ಯರಿದ್ದು, ಗೆಲುವಿಗೆ 392 ಮತಗಳು ಬೇಕಿವೆ. ಎನ್‌ಡಿಎ ಪ್ರಸ್ತುತ 425 ಸದಸ್ಯರನ್ನು ಹೊಂದಿದ್ದು, ತನ್ನ ಅಭ್ಯರ್ಥಿಯನ್ನು ಗೆಲ್ಲಿಸಲು ಬೇಕಾದಷ್ಟು ಸಂಖ್ಯಾಬಲ ಹೊಂದಿದೆ.

ಪಿ.ಸಿ.ಮೋದಿ ಚುನಾವಣಾಧಿಕಾರಿ

ನೂತನ ಉಪ ರಾಷ್ಟ್ರಪತಿ ಆಯ್ಕೆಯ ಚುನಾವಣೆ ನಡೆಸಲು ರಾಜ್ಯಸಭಾ ಕಾರ್ಯದರ್ಶಿ ಪಿ.ಸಿ ಮೋದಿ ಅವರನ್ನು ಚುನಾವಣಾಧಿಕಾರಿಯಾಗಿ ನೇಮಕ ಮಾಡಲಾಗಿದೆ.

ರಾಜ್ಯಸಭೆ ಕಾರ್ಯಾಲಯದ ಜಂಟಿ ಕಾರ್ಯದರ್ಶಿ ಗರಿಮಾ ಜೈನ್ ಮತ್ತು ನಿರ್ದೇಶಕ ವಿಜಯ್ ಕುಮಾರ್ ಅವರನ್ನು ಸಹಾಯಕ ಚುನಾವಣಾಧಿಕಾರಿಯಾಗಿ ನೇಮಕ ಮಾಡಲಾಗಿದೆ ಎಂದು ಚುನಾವಣಾ ಆಯೋಗ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

'ವಿದ್ಯಾರ್ಥಿ ಆತ್ಮಹತ್ಯೆ ತಪ್ಪಿಸಿ'

ಒಂದನೇ ಪುಟದಿಂದ...

ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಗೆ ವಿಶಾಖಪಟ್ಟಣ-ದಲ್ಲಿ ಸಿದ್ಧತೆ ನಡೆಸುತ್ತಿದ್ದ 17 ವರ್ಷ ವಯಸ್ಸಿನ ವಿದ್ಯಾರ್ಥಿಯ ಅಸಹಜ ಸಾವು ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸುವ ಮನವಿಯನ್ನು ಆಂಧ್ರ ಪ್ರದೇಶ ಹೈಕೋರ್ಟ್ ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

ಈ ಮಾರ್ಗಸೂಚಿಗಳನ್ನು ಜಾರಿಗೊಳಿಸಲು ತೆಗೆದುಕೊಂಡಿರುವ ಕ್ರಮಗಳು ಮತ್ತು ಇದರ ಮೇಲ್ವಿಚಾರಣೆಗೆ ಮಾಡಿರುವ ವ್ಯವಸ್ಥೆಗಳನ್ನು ವಿವರಿಸುವ ಅಫಿಡವಿಟ್ ಅನ್ನು 90 ದಿನಗಳ ಒಳಗೆ ಸಲ್ಲಿಸುವಂತೆ ಪೀಠವು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿತು.

ವಿದ್ಯಾರ್ಥಿಯ ಅಸಹಜ ಸಾವು ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸುವಂತೆ ನಿರ್ದೇಶಿಸಿದ ಪೀಠ, ವಿಚಾರಣೆಯನ್ನು ಅಕ್ಟೋಬರ್ 27ಕ್ಕೆ ಮುಂದೂಡಿತು.

25 ಒಟಿಟಿ ವೇದಿಕೆಗಳಿಗೆ ನಿಷೇಧ

ಅಶ್ಲೀಲ ವಿಡಿಯೊ ಲಭ್ಯತೆಗೆ ಕಡಿವಾಣ ಹಾಕುವ ಉದ್ದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೈಂಗಿಕತೆಗೆ ಸಂಬಂಧಿಸಿದ ಅಶ್ಲೀಲ ವಿಡಿಯೊ ಪ್ರಸಾರ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಯುಎಲ್‌ಎಲ್‌ಯು, ಎಎಲ್‌ಟಿಟಿ, ದೇಸಿಫ್ಲಿಕ್ಸ್, ಹಲ್‌ಚಲ್ ಸೇರಿದಂತೆ 25 ಒಟಿಟಿ ವೇದಿಕೆಗಳ ವೆಬ್‌ಸೈಟ್‌ಗಳು ಮತ್ತು ಆ್ಯಪ್‌ಗಳನ್ನು ನಿಷೇಧಿಸಲಾಗಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ಕೇಂದ್ರ ಗೃಹ ಸಚಿವಾಲಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತಿತರ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಈ ಒಟಿಟಿ ವೇದಿಕೆಗಳ ನಿಷೇಧಕ್ಕೆ ನಿರ್ದೇಶನ ನೀಡಿದೆ.

ಲೈಂಗಿಕತೆಗೆ ಸಂಬಂಧಿಸಿದ ಅಶ್ಲೀಲ ವಿಡಿಯೊಗಳ ಸುಲಭ ಲಭ್ಯತೆಗೆ ಕಡಿವಾಣ ಹಾಕಲು ಮತ್ತು ಡಿಜಿಟಲ್ ಕಂಟೆಂಟ್‌ಗಳು ಕಾನೂನು ಮತ್ತು ಸಭ್ಯತೆಯ ಮಿತಿ ಮೀರದಿರಲಿ ಎಂಬ ಉದ್ದೇಶದಿಂದ ನಿಷೇಧ ಹೇರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೆಲವು ವೇದಿಕೆಗಳು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 67ಎ ಉಲ್ಲಂಘಿಸಿ ಲೈಂಗಿಕತೆಗೆ ಸಂಬಂಧಿಸಿದ ಅಶ್ಲೀಲ ವಿಡಿಯೊ ಪ್ರಸಾರ ಮಾಡುತ್ತಿದ್ದವು. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಶಿಫಾರಸಿನ ಆಧಾರದಲ್ಲಿ ಈ ವೇದಿಕೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿವೆ.

ಈ ವರ್ಷ ಮೇನಲ್ಲಿ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಮಧ್ಯಪ್ರವೇಶದ ನಂತರ ಯುಎಲ್‌ಎಲ್‌ಯು ವೇದಿಕೆಯು 'ಹೌಸ್ ಅರೆಸ್ಟ್' ವೆಬ್ ಸರಣಿಯನ್ನು ತನ್ನ ವೆಬ್‌ಸೈಟ್‌ನಿಂದ ತೆಗೆದುಹಾಕಿತ್ತು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಅಶ್ಲೀಲ ವಿಡಿಯೊ ಪ್ರಸಾರ ಮಾಡದಂತೆ ಈ 25 ಒಟಿಟಿ ವೇದಿಕೆಗಳಿಗೆ ನೋಟಿಸ್ ಕಳುಹಿಸಲಾಗಿತ್ತು. ಆದರೂ ಅವು ಅಂತಹ ವಿಡಿಯೊ ಪ್ರಸಾರವನ್ನು ಮುಂದುವರಿಸಿದ್ದವು.

ನಿಷೇಧಿತ ಒಟಿಟಿ ವೇದಿಕೆಗಳು



ಬಿಗ್ ಶಾಟ್ಸ್ ಆ್ಯಪ್, ಬೂಮೆಕ್ಸ್, ನವರಸ ಲೈಟ್, ಗುಲಾಬ್ ಆ್ಯಪ್, ಕಂಗನ್ ಆ್ಯಪ್, ಬುಲ್ ಆ್ಯಪ್, ಜಲ್ವಾ ಆ್ಯಪ್, ವಾವ್ ಎಂಟರ್‌ಟೈನ್‌ಮೆಂಟ್, ಲುಕ್ ಎಂಟರ್‌ಟೈನ್‌ಮೆಂಟ್, ಹಿಟ್‌ಪ್ರೈಮ್, ಫೆನಿಯೊ, ಶೋಎಕ್ಸ್, ಸೋಲ್ ಟಾಕೀಸ್, ಅಡ್ಡಾ ಟಿ.ವಿ, ಹಾಟ್ ಎಕ್ಸ್ ವಿಐಪಿ, ಮೂಡ್‌ಎಕ್ಸ್, ಫುಗಿ, ಮೋಜ್‌ಫ್ಲಿಕ್ಸ್ ಟ್ರೈಫ್ಲಿಕ್ಸ್, ಯುಎಲ್‌ಎಲ್‌ಯು, ಎಎಲ್‌ಟಿಟಿ, ದೇಸಿಫ್ಲಿಕ್ಸ್, ಹಲ್‌ಚಲ್

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನೀವು ಸೇವಿಸುವ ಅನ್ನವನ್ನು ಬೇಯಿಸುವ ನೀರು ನಿಮ್ಮ ದುಡಿಮೆಯ ಬೆವರೋ ಅಥವಾ ಬೇರೆಯವರ ಕಣ್ಣೀರೋ? –ಡಿ.ವಿ. ಗುಂಡಪ್ಪ

ಸಂಪಾದಕೀಯ

ಸಣ್ಣ ವರ್ತಕರಿಗೆ ಜಿಎಸ್‌ಟಿ ಮನ್ನಾ ಪಾರದರ್ಶಕ ನೀತಿಯೂ ಅಗತ್ಯ

ರಾಜ್ಯ ವಾಣಿಜ್ಯ ತೆರಿಗೆಗಳ ಇಲಾಖೆಯು ನೋಟಿಸ್ ನೀಡಿದ್ದ 9,000 ಸಣ್ಣ ವರ್ತಕರು ಇಲ್ಲಿಯವರೆಗೂ ಪಾವತಿಸಬೇಕಾಗಿದ್ದ ಜಿಎಸ್‌ಟಿ ಮನ್ನಾ ಮಾಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ತೆರಿಗೆ ಸಂಗ್ರಹದಲ್ಲಿ ಸರ್ಕಾರ ಪಾರದರ್ಶಕವಾಗಿದ್ದು, ಯಾರಿಗೂ ತೊಂದರೆ ಆಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ವರ್ತಕರ ಅನುಕೂಲಕ್ಕೆ ಸಹಾಯವಾಣಿ ಸಂಖ್ಯೆಗಳನ್ನು ಬಿಡುಗಡೆ ಮಾಡಲಾಗಿದೆ. ಈ ಮೂಲಕ, ಜಿಎಸ್‌ಟಿ ಪಾವತಿಗೆ ಸಂಬಂಧಿಸಿದಂತೆ ಕಳೆದ ಕೆಲವು ದಿನಗಳಿಂದ ಸಣ್ಣ ವ್ಯಾಪಾರಿಗಳು ಮತ್ತು ವರ್ತಕ ಸಮೂಹದಲ್ಲಿ ಉಂಟಾಗಿದ್ದ ಗೊಂದಲ ಹಾಗೂ ಆತಂಕವನ್ನು ಬಗೆಹರಿಸಲು ಅಗತ್ಯವಾಗಿದ್ದ ಕ್ರಮಗಳನ್ನು ಸರ್ಕಾರ ಕೈಗೊಂಡಂತಾಗಿದೆ. ಯುಪಿಐ ಮೂಲಕ ವಾರ್ಷಿಕ ₹40 ಲಕ್ಷಕ್ಕಿಂತ ಹೆಚ್ಚಿನ ವಹಿವಾಟು ನಡೆಸಿದ್ದ ಬೇಕರಿ, ಹೋಟೆಲ್, ಬೀಡಾ ಅಂಗಡಿ ಮತ್ತು ಟೀ ಅಂಗಡಿ ಮಾಲೀಕರಿಗೆ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ನೀಡಿದ್ದರು; ಜಿಎಸ್‌ಟಿ ನೋಂದಣಿ ಮಾಡಿಸಿ ಮತ್ತು ತೆರಿಗೆ ಪಾವತಿಸಿ ಎಂದು ಸೂಚಿಸಿದ್ದರು. ತೆರಿಗೆ ಇಲಾಖೆಯ ಕ್ರಮವನ್ನು ವಿರೋಧಿಸಿ ವರ್ತಕರು ಪ್ರತಿಭಟನೆ ನಡೆಸಿದ್ದರು. ಕೆಲವು ವರ್ತಕರು ಯುಪಿಐ ವಹಿವಾಟಿನಿಂದ ಹಿಂದೆ ಸರಿದು, ನಗದು ವ್ಯಾಪಾರಕ್ಕೆ ಮುಂದಾಗಿದ್ದರಿಂದ ಗ್ರಾಹಕರೂ ತೊಂದರೆ ಅನುಭವಿಸುವಂತಾಯಿತು. ನಗದು ರಹಿತ ವ್ಯವಹಾರ ಈಗ ಜನಪ್ರಿಯವಾಗಿದ್ದು, ಯುಪಿಐ ಪಾವತಿ ಪದ್ಧತಿಗೆ ಜನಸಾಮಾನ್ಯರೂ ಒಗ್ಗಿಕೊಂಡಿದ್ದಾರೆ. ಮೊಬೈಲ್ ಫೋನ್‌ಗಳ ವ್ಯಾಪಕ ಬಳಕೆಯಿಂದಾಗಿ ಯುಪಿಐ ಮೂಲಕ ಹಣದ ಸರಳ ವಹಿವಾಟು ಸಾಧ್ಯವಾಗಿದೆ. ಆ ಅಭ್ಯಾಸ ಮುಂದುವರಿಯುವುದರಲ್ಲಿ ಗ್ರಾಹಕರಿಗೆ ಹೆಚ್ಚಿನ ಅನುಕೂಲವಿದೆ ಹಾಗೂ ಪಾರದರ್ಶಕ ವಹಿವಾಟಿಗೂ ಯುಪಿಐ ಪದ್ಧತಿ ಪೂರಕವಾಗಿದೆ.



ಜಿಎಸ್‌ಟಿಯಿಂದ ಸಣ್ಣ ವರ್ತಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ. ಜಿಎಸ್‌ಟಿ ಬಗ್ಗೆ ಅರಿವು ಮೂಡಿಸುವ ಪ್ರಯತ್ನಗಳೂ ವ್ಯಾಪಕವಾಗಿ ನಡೆಯಬೇಕು.

ವ್ಯಾಪಾರಿಗಳು, ಸಣ್ಣ ವರ್ತಕರು ಮತ್ತು ಗ್ರಾಹಕರ ನಡುವೆ ಉಂಟಾಗಿದ್ದ ಗೊಂದಲವನ್ನು ಪರಿಹರಿಸಬೇಕಾದ ಆಡಳಿತ ಮತ್ತು ಪ್ರತಿ ಪಕ್ಷಗಳ ಮುಖಂಡರು, ತಮ್ಮ ಹೊಣೆಗಾರಿಕೆಯನ್ನು ಮರೆತು ಪರಸ್ಪರ ದೂಷಣೆಯಲ್ಲಿ ತೊಡಗಿಕೊಂಡಿದ್ದುದು ದುರದೃಷ್ಟಕರ. ವರ್ತಕರ ಸಮಸ್ಯೆಗಳನ್ನು ಆಲಿಸುವ ಬದಲು, ಜಿಎಸ್‌ಟಿ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದು ಎಂದು ಕಾಂಗ್ರೆಸ್ ನಾಯಕರು ಹಾಗೂ ಕರ್ನಾಟಕದಲ್ಲಿ ಮಾತ್ರ ಈ ರೀತಿ ತೆರಿಗೆ ವಸೂಲಿ ಮಾಡಲಾಗುತ್ತಿದೆ ಎಂದು ಬಿಜೆಪಿ ನಾಯಕರು ಪರಸ್ಪರ ದೂರಿಕೊಂಡರು. ಮೆಟ್ರೊ ರೈಲು ಪ್ರಯಾಣ ದರ ಹೆಚ್ಚಳದ ಸಂದರ್ಭದಲ್ಲೂ ಹೀಗೆಯೇ ಪರಸ್ಪರ ದೂಷಣೆಯ ರಾಜಕೀಯ ವಾಗ್ವಾದ ನಡೆದಿತ್ತು ಹಾಗೂ ಪ್ರಯಾಣಿಕರ ಹಿತಾಸಕ್ತಿ ರಕ್ಷಿಸುವ ಉತ್ತರದಾಯಿತ್ವವನ್ನು ಯಾರೊಬ್ಬರೂ ನಿರ್ವಹಿಸಿರಲಿಲ್ಲ. ಪ್ರಸ್ತುತ, ಸಣ್ಣ ವರ್ತಕರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತಡವಾಗಿಯಾದರೂ ಎಚ್ಚೆತ್ತು ಜವಾಬ್ದಾರಿಯಿಂದ ವರ್ತಿಸಿರುವುದು ಸಮಾಧಾನದ ಸಂಗತಿ. ಜಿಎಸ್‌ಟಿ ಸಂಗ್ರಹದ ಹಣದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಸಮ ಪಾಲು ಹೊಂದಿರುವುದರಿಂದ, ಸಣ್ಣ ವರ್ತಕರ ಸಮಸ್ಯೆಯನ್ನು ಪರಿಹರಿಸಬೇಕಾದ ಹೊಣೆ ರಾಜ್ಯ ಸರ್ಕಾರದ್ದೇ ಆಗಿತ್ತು. ಸರಕುಗಳ ವಾರ್ಷಿಕ ವಹಿವಾಟು ಮಿತಿಯನ್ನು ₹40 ಲಕ್ಷಕ್ಕೆ ಹಾಗೂ ಸೇವಾ ವಹಿವಾಟು ಮಿತಿಯನ್ನು ₹20 ಲಕ್ಷಕ್ಕೆ ಸರ್ಕಾರ ನಿಗದಿಪಡಿಸಿದೆ. ಈ ಮಿತಿ ದಾಟಿದವರು ಜಿಎಸ್‌ಟಿ ನೋಂದಣಿ ಮಾಡಿಸುವುದು ಹಾಗೂ ನಿಯಮದಂತೆ ತೆರಿಗೆ ಪಾವತಿಸುವುದು ಕಡ್ಡಾಯ. ಹಾಲು, ಹಣ್ಣು, ತರಕಾರಿ, ಮಾಂಸ, ಇತ್ಯಾದಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಲಾಗಿದೆ ಹಾಗೂ ಪ್ರತಿ ವರ್ತಕರಿಗೂ ವೈಯಕ್ತಿಕ ಅಹವಾಲು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಜಿಎಸ್‌ಟಿ ಪಾವತಿಗೆ ಸಂಬಂಧಿಸಿದಂತೆ ಸರ್ಕಾರದ ಈ ನಿಲುವು ಸದ್ಯದ ಗೊಂದಲಗಳಿಗೆ ಉತ್ತರ ನೀಡುವಂತಿದೆ. ದೊಡ್ಡ ಮೊತ್ತದ ವಹಿವಾಟು ನಡೆಸುವವರು ನ್ಯಾಯಯುತ ತೆರಿಗೆ ಪಾವತಿಸಲೇಬೇಕು ಎಂದು ಹೇಳಿರುವುದೂ ಸರಿಯಾಗಿದೆ. ವ್ಯಾಪಾರಿಗಳಿಗೆ ಹಾಗೂ ಸಣ್ಣ ವರ್ತಕರಿಗೆ ಇರುವ ಗೊಂದಲಗಳನ್ನು ನಿವಾರಿಸಿ, ಜಿಎಸ್‌ಟಿ ನೋಂದಣಿ ಮತ್ತು ಪಾವತಿಯ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ತೆರಿಗೆ ಇಲಾಖೆಯು ವ್ಯಾಪಕ ಪ್ರಯತ್ನಗಳನ್ನು ನಡೆಸಬೇಕಾಗಿದೆ.

ಚಾವಡಿ

ಯುವಜನರಿಗೆ ಅವಕಾಶ



ಯುಜಿಸಿ ವೇತನ ಪಡೆದು ನಿವೃತ್ತರಾಗಿ ಆರು ಅಂಕಿಗಳ ಪಿಂಚಣಿ ಪಡೆಯುತ್ತಿರುವ ಕನ್ನಡ ಉಪನ್ಯಾಸಕರೇ, ದಯಮಾಡಿ ನೀವು ಸ್ಥಳೀಯ ಖಾಸಗಿ ಕಾಲೇಜುಗಳಲ್ಲಿ ಕನ್ನಡ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಬೇಡಿ. ಕನ್ನಡದ ಯುವ ಸ್ನಾತಕೋತ್ತರ ಪದವೀಧರರು ಕೆಲಸವಿಲ್ಲದೆ ನಿರಾಶರಾಗಿದ್ದಾರೆ. ಅವರಿಗೆ ಅವಕಾಶ ಕೊಡಿ. ನಿಮಗೆ ಹಣದ ಅಗತ್ಯ ಇದ್ದರೆ ಬೇರೆ ಯಾವುದಾದರೂ ಕರ್ತವ್ಯವನ್ನು ಮಾಡಿ.

ಪಿ.ಬಿ. ಪ್ರಸನ್ನ, ಲೇಖಕ, ಫೇಸ್‌ಬುಕ್‌ನಿಂದ

ಕಿಡಿನುಡಿ



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು, ರಾಜ್ಯ ಸರ್ಕಾರದ ವಿರುದ್ಧ ಆರೋಪ ಮಾಡುವುದನ್ನು ಮತ್ತು ವಿವಿಧ ಧರ್ಮಗಳ ಜನರ ಮಧ್ಯೆ ಬೆಂಕಿ ಹಚ್ಚುವುದನ್ನು ನಿಲ್ಲಿಸಬೇಕು. ಕೇಂದ್ರ ಸಚಿವರಾಗಿ ರಾಜ್ಯಕ್ಕೆ ಏನು ಮಾಡಿದ್ದೇನೆ ಎಂಬುದನ್ನು ಅವರು ಹೇಳಬೇಕು.

ರಮೇಶ್ ಬಾಬು, ಅಧ್ಯಕ್ಷ, ಕೆಪಿಸಿಸಿ ಮಾಧ್ಯಮ ವಿಭಾಗ

25 ವರ್ಷಗಳ ಹಿಂದೆ

ಬುಧವಾರ, 26-7-2000

- **ಕೆಪಿಎಸ್‌ಸಿ ಸಂದರ್ಶನ ಬೇಡ: ಸರ್ಕಾರ**

ಬೆಂಗಳೂರು, ಜುಲೈ 25– ಗ್ರಾಮೀಣ ಕೃಪಾಂಕ ನೀಡಿಕೆ ವಿಚಾರಕ್ಕೆ ಸಂಬಂಧಿಸಿದಂತೆ ತಲೆದೋರಿರುವ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಈ ತಿಂಗಳು 31ರ ನಂತರ ಸಂದರ್ಶನಗಳನ್ನು ಮುಂದುವರಿಸಬಾರದು ಎಂದು ರಾಜ್ಯ ಸರ್ಕಾರ ಅಭಿಪ್ರಾಯಪಟ್ಟಿದೆ.

ಈ ಅವಧಿಯ ನಂತರ ಆಯೋಗವು ಭರ್ತಿ ಮಾಡಲಿರುವ ಹುದ್ದೆಗಳ ಅಗತ್ಯತೆ ಕುರಿತು ಈಗಾಗಲೇ ರಾಜ್ಯ ಸರ್ಕಾರವು ಲೋಕಸೇವಾ ಆಯೋಗಕ್ಕೆ ಸಲ್ಲಿಸಿರುವ ಕೋರಿಕೆಯನ್ನು ಅಮಾನತಿನಲ್ಲಿ ಇಡಲು ಉದ್ದೇಶಿಸಲಾಗಿದೆ ಎಂದು ವಾರ್ತಾ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ ಇಂದು ರಾತ್ರಿ ತಿಳಿಸಿದರು.

- **ಕಡುಬಡವರಿಗೆ ಕಡಿಮೆ ದರದಲ್ಲಿ ಅಕ್ಕಿ, ಗೋಧಿ**

ಬೆಂಗಳೂರು, ಜುಲೈ 25– ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ ಸುಮಾರು 30 ಲಕ್ಷ ಕುಟುಂಬಗಳಿಗೆ ರೂ. 3.50ಕ್ಕೆ ಒಂದು ಕೆ.ಜಿಯಂತೆ ಎಂಟು ಕೆ.ಜಿ ಅಕ್ಕಿ ಮತ್ತು ರೂ. 2.75ರಂತೆ ಎರಡು ಕೆ.ಜಿ ಗೋಧಿಯನ್ನು ಮಾರಾಟ ಮಾಡಲು ರಾಜ್ಯ ಸಚಿವ ಸಂಪುಟ ಇಂದು ನಿರ್ಧರಿಸಿತು.

75 ವರ್ಷಗಳ ಹಿಂದೆ

ಬುಧವಾರ, 26-7-1950

- **ದೇಶದ ಆಹಾರ ಪರಿಸ್ಥಿತಿ ಬಗ್ಗೆ ಕಳವಳಪಡಲು ಕಾರಣವಿಲ್ಲ**

ದೆಹಲಿ, ಜುಲೈ 25– ಕೇಂದ್ರ ಸಚಿವ ಕೆ.ಎಂ. ಮುನ್ಷಿ ಅವರು 'ಭಾರತ ರಾಷ್ಟ್ರದಲ್ಲಿನ ಆಹಾರ ಪರಿಸ್ಥಿತಿಯ ವಿಚಾರದಲ್ಲಿ ಗಾಬರಿಪಡಬೇಕಾದ ಕಾರಣವೇ ಇಲ್ಲ. ಕ್ಷಾಮ ಎಂಬುದಾಗಿ ಕೆಲ ವೃತ್ತಗಳಲ್ಲಿ ಹೇಳಿಕೊಳ್ಳುತ್ತಿರುವುದು ಆಧಾರರಹಿತ ಅಪಪ್ರಚಾರ. ಈ ರೀತಿಯ ಕೂಗಿನಿಂದ ಪದಾರ್ಥಗಳನ್ನು ಕೂಡಿಹಾಕಿಕೊಂಡು ಲಾಭ ಪಡೆಯುವವರಿಗೆ ಅವಕಾಶಕೊಟ್ಟಂತಾಗುತ್ತದೆ. ಪರಿಸ್ಥಿತಿಯನ್ನು ಹದಕ್ಕೆ ತರಬೇಕೆಂಬ ಸರ್ಕಾರದ ನೀತಿಗೆ ಧಕ್ಕೆ ತರುತ್ತದೆ' ಎಂದು ತಿಳಿಸಿದರು.

- **ವನಸ್ಪತಿ ನಿಷೇಧಕ್ಕೆ ಬೆಂಬಲ**

ಬೆಂಗಳೂರು, ಜುಲೈ 25– ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಇಂದು ಮಧ್ಯಾಹ್ನ ಸುಮಾರು 5 ಗಂಟೆ ಚರ್ಚೆ ನಡೆಸಿ, ಗೃಹ ಕೈಗಾರಿಕೆಗಳನ್ನು ಉತ್ತೇಜಿಸುವುದೇ ಕಾಂಗ್ರೆಸ್ ನೀತಿಯಾಗಿರುವುದರಿಂದ ವನಸ್ಪತಿ ನಿಷೇಧಿಸುವ ಕ್ರಮವನ್ನು ಸಮರ್ಥಿಸಿತೆಂದು ತಿಳಿದುಬಂದಿದೆ.

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಆಗಸ್ಟ್ 26ನೇ ತಾರೀಕಿನಂದು ಸಮಾವೇಶಗೊಂಡು ವಿಸರ್ಜನೆಗೊಳ್ಳುವುದು.

ಎಸ್‌ಐಆರ್: ಕಲ್ಪಿತ ಸಂಕಥನ

ವಿಶ್ಲೇಷಣೆ

ಕಾಮಾಯನಿ ಸ್ವಾಮಿ, ರಾಹುಲ್ ಶಾಸ್ತ್ರಿ, ಯೋಗೇಂದ್ರ ಯಾದವ್

ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಕುರಿತು ಚುನಾವಣಾ ಆಯೋಗದ (ಇಸಿಐ) 'ಕೌಂಟರ್ ಅಫಿಡವಿಟ್' (ಪ್ರತಿ ಪ್ರಮಾಣ ಪತ್ರ) ಮಾಹಿತಿಯನ್ನು ಚಾನೆಲ್‌ಗಳು ಪ್ರಸಾರ ಮಾಡಲು ಪ್ರಾರಂಭಿಸಿದಾಗ ನಾವು ಪಟ್ನಾದಲ್ಲಿದ್ದೆವು. ಜನಮುಖಿ ಸಂಘಟನೆಗಳು ಆಯೋಜಿಸಿದ್ದ, ಸಾರ್ವಜನಿಕರ ಅಹವಾಲುಗಳನ್ನು ಆಲಿಸುವ ಒಂದಿಡೀ ದಿನದ 'ಜನಸುನ್‌ವಾಯಿ' ಕಾರ್ಯಕ್ರಮವನ್ನು ಆಗಷ್ಟೇ ಮುಗಿಸಿದ್ದೆವು. ಬಿಹಾರದ ಜನರಿಗೆ 'ಎಸ್‌ಐಆರ್'ನಿಂದ ಯಾವ ರೀತಿಯ ಅನುಭವ ಆಗುತ್ತಿದೆ ಎನ್ನುವುದನ್ನು ಅರಿಯುವ ಕಾರ್ಯಕ್ರಮ ಅದಾಗಿತ್ತು. 19 ಜಿಲ್ಲೆಗಳ ಸುಮಾರು 250 ಮಂದಿ ಅದರಲ್ಲಿ ಪಾಲ್ಗೊಂಡಿದ್ದರು; ಹಳ್ಳಿಯಿಂದ ಬಂದವರೇ ಹೆಚ್ಚಾಗಿದ್ದರು. ಅದರಲ್ಲೂ ಮಹಿಳೆಯರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ದೊಡ್ಡ ಸಂಖ್ಯೆಯಲ್ಲಿ ಪಟ್ನಾಗೆ ಬಂದಿದ್ದರು. ಉದ್ಯೋಗಾಕಾಂಕ್ಷಿಗಳು ಪ್ರಮುಖ ಪರೀಕ್ಷೆ ಬರೆಯಲು ರೈಲುಗಳಲ್ಲಿ ಇಡುಕಿರಿದಂತೆ ಪಯಣಿಸಿದ್ದರು. ಕಾವಡಿ ಯಾತ್ರಿಗಳೂ ಪಯಣಿಸುವ ಸಂದರ್ಭ ಇದು. ಅವರ ಜೊತೆಯಲ್ಲೇ ಮಹಿಳೆಯರೂ ರಾತ್ರಿಯಿಡೀ ರೈಲು ಪ್ರಯಾಣ ಮಾಡಿದ್ದರು. ದಣಿದಿದ್ದ ಕೆಲವರು ಆಗೀಗ ಸಣ್ಣ ನಿದ್ದೆ ತೆಗೆಯುತ್ತಿದ್ದರು. ಕುರ್ಚಿ ಮೇಲೆ ಕುಳಿತಿದ್ದರೂ ಪದೇ ಪದೇ ಮೈಮುರಿಯುತ್ತಾ, ತಮಗೆ ಮೈಕೈ ನೋವಾಗಿರುವುದನ್ನು ವ್ಯಕ್ತಪಡಿಸುತ್ತಿದ್ದರು. ನಿವೃತ್ತ ನ್ಯಾಯಮೂರ್ತಿ ಅಂಜನಾ ಪ್ರಕಾಶ್, ವಜಾಹತ್ ಹಬೀಬುಲ್ಲಾ, ಜ್ಯಾಂ ದ್ರೇಜ್, ನಂದಿನಿ ಸುಂದರ್, ಡಿ.ಎಂ. ದಿವಾಕರ್ ಹಾಗೂ ಭವರ್ ಮೇಘವಂಶಿ ಅವರನ್ನು ಒಳಗೊಂಡ ಸಮಿತಿಯ ಮುಂದೆ ಸುಮಾರು ಮೂರು ಡಜನ್ ಜನರು ತಮ್ಮ ಅನುಭವಗಳನ್ನು ಹೇಳಿಕೊಂಡರು.

ಚುನಾವಣಾ ಆಯೋಗದ ಅಫಿಡವಿಟ್ ಅನ್ನು ನಾವು ರಾತ್ರಿ ಓದಿದೆವು. ಇಡೀ ದಿನ ಬಿಹಾರದ ಬೇರೆ ಬೇರೆ ಆಡುಮಾತುಗಳಲ್ಲಿ ನಾವು ಕೇಳಿದ್ದ ಅನುಭವಗಳೆಲ್ಲ ಒಂದೊಂದಾಗಿ ಮನದಲ್ಲಿ ಮೂಡತೊಡಗಿದವು. ಅದಕ್ಕೂ ಹಿಂದಿನ ಕೆಲವು ವಾರಗಳಲ್ಲಿ ನಡೆದಿದ್ದಕ್ಕೂ, ಅಫಿಡವಿಟ್‌ನಲ್ಲಿ ಹೇಳಿದ ಸಂಗತಿಗೂ ತಾಳೆಯೇ ಆಗುತ್ತಿರಲಿಲ್ಲ. ಎರಡೂ ಭಿನ್ನ ಜಗತ್ತುಗಳು. 'ಇಸಿಐ' ಅಧಿಕೃತ ಖಾತೆಯಲ್ಲಿ ಇದ್ದುದು ಒಂದು ಸೃಜನಶೀಲ ಬರಹದ ತುಣುಕು, ಕಲ್ಪಿತ ಸ್ಥಳದ ಕುರಿತು ಹೆಣೆದ ಬರಹ. ವಾಸ್ತವದಲ್ಲಿ ಅಲ್ಲಿನ ಜನ ಒಂದು ತಿಂಗಳು ಕಂಡಿದ್ದು ಬರೀ ದುಃಸ್ವಪ್ನ.

ಒಂದು ಫೋಟೊ, ಮತದಾರರ ಗುರುತಿನ ಚೀಟಿಯ ಪ್ರತಿ ಹಾಗೂ ಆಧಾರ್ ಕಾರ್ಡ್ ನೀಡುವಂತೆ ಕಟಿಹಾರ್‌ನ ಹಸನ್‌ಗಂಜ್‌ನಿಂದ ಬಂದಿದ್ದ ರೈತಮಹಿಳೆ ಫೂಲ್‌ಕುಮಾರಿ ದೇವಿ ಅವರನ್ನು ಅಧಿಕಾರಿಗಳು ಕೇಳಿದ್ದರು (ನಿಜಕ್ಕೂ ನಡೆದದ್ದೇನು ಎನ್ನುವುದಕ್ಕೆ ಈ ಪ್ರಸಂಗ ಗಮನಿಸಿ: 'ಇಸಿಐ' ಅದಾಗಲೇ ನೀಡಿದ್ದ ಮುದ್ರಿಸಿದ ಅರ್ಜಿಯಲ್ಲಿ ಆ ಮಹಿಳೆಯ ಫೋಟೊ ಇತ್ತು. ಆಧಾರ್ ಸಂಖ್ಯೆಯನ್ನು ಬೇಕಿದ್ದರೆ ನಮೂದಿಸಿ ಎಂದು ಅದರಲ್ಲಿ ಉಲ್ಲೇಖಿಸಲಾಗಿತ್ತು. ಇಸಿಐ ಪ್ರಕಾರ ಆ ಕಾರ್ಡ್ ಸ್ವೀಕಾರಾರ್ಹ ಆಗಿರಲಿಲ್ಲ). ಫೋಟೊ ತೆಗೆಸಲು ಹಾಗೂ ದಾಖಲೆಗಳ ಛಾಯಾಪ್ರತಿ ಮಾಡಿಸಲು ಫೂಲ್‌ಕುಮಾರಿ, ಪಡಿತರದ ಅಕ್ಕಿಯನ್ನು ಮಾರಾಟ ಮಾಡಿ ಹಣ ಹೊಂದಿಸಿಕೊಂಡಿದ್ದರು. ಅದಕ್ಕೂ ಅವರು ಪಟ್ಟಣಕ್ಕೆ ಹೋಗಬೇಕಿತ್ತು. ಆ ಕೆಲಸಕ್ಕಾಗಿ ಅಲೆದಾಡಿದ್ದರಿಂದ ಎರಡು ದಿನ ಕೂಲಿ ತಪ್ಪಿ, ಹಣ ಸಿಗದೆ, ಹಸಿವಿನಿಂದ ಇರಬೇಕಾಗಿ ಬಂತು.

ಸುಮಾರು 60 ವರ್ಷ ವಯಸ್ಸಿನ ಸುಮಿತ್ರಾ ದೇವಿ, ಸಹರಸ ಎಂಬ ಊರಿನಿಂದ ಬಂದಿದ್ದರು. ವರ್ಷಗಳ ಹಿಂದೆಯೇ ಅಗಲಿದ್ದ ಪೋಷಕರ ದಾಖಲೆಗಳು, ತನ್ನ ಜಾತಿ ಪ್ರಮಾಣಪತ್ರ ಹಾಗೂ ವಾಸಸ್ಥಾನ ದೃಢೀಕರಿಸುವ ಪತ್ರವನ್ನು ಕೇಳಿದ್ದರು ಎನ್ನುವ ಅನುಭವವನ್ನು ಅವರು ಹೇಳಿಕೊಂಡರು. ಕೇಳಿದ ದಾಖಲೆಗಳನ್ನು ಒದಗಿಸದೇ ಇದ್ದಲ್ಲಿ 'ಸರ್ಕಾರ್ ಕೆ ಲೋಗ್' (ಸರ್ಕಾರದ ಜನ) ಎನ್ನುವ ಸ್ಥಾನಮಾನವನ್ನೇ ಕಳೆದುಕೊಳ್ಳಬೇಕಾಗುತ್ತದೆ ಎಂದವರಿಗೆ ಎಚ್ಚರಿಕೆ ನೀಡಲಾಗಿತ್ತು. ಜಾತಿ ಪ್ರಮಾಣಪತ್ರ ಮಾಡಿಸಲು ಅವರು ₹300 ಖರ್ಚು ಮಾಡಿದ್ದರು. ಆದರೂ ಜಾತಿ ಪ್ರಮಾಣಪತ್ರವಿನ್ನೂ ಕೈ ಸೇರಿರಲಿಲ್ಲ. ಸಹರಸದವರೇ ಆದ ಗೋವಿಂದ್ ಪಾಸ್ವಾನ್ ಅವರನ್ನು ಪಾಸ್‌ಬುಕ್ ಹಾಗೂ ಭೂದಾಖಲೆಗಳನ್ನು ಕೇಳಲಾಗಿತ್ತು (ವಾಸ್ತವ ಏನೆಂದರೆ, ಸುಮಿತ್ರಾ ದೇವಿ ಹಾಗೂ ಗೋವಿಂದ್ ಇಬ್ಬರ ಹೆಸರುಗಳೂ 2003ರ ಮತದಾರರ ಪಟ್ಟಿಯಲ್ಲಿ ಇದ್ದವು. ಯಾವ ದಾಖಲೆಗಳನ್ನು ಒದಗಿಸುವ ಅಗತ್ಯವೂ ಅವರಿಗೆ ಇರಲಿಲ್ಲ).

ದಾಖಲೆಗಳನ್ನು ಮಾಡಿಸಿಕೊಡುವುದಾಗಿ ಹಣ ಪೀಕುವ ಮಧ್ಯವರ್ತಿಗಳ ಕಥೆಗಳೂ ನಮ್ಮ ಕಿವಿಮೇಲೆ ಬಿದ್ದವು. ಅಂಗನವಾಡಿ ಕಾರ್ಯಕರ್ತೆಯೊಬ್ಬರ ಪತಿ 'ಬಿಎಲ್‌ಒ'. ಅವರು ಅರ್ಜಿ ತುಂಬಿಕೊಡಲು ಬಡವರಿಂದ ₹100 ವಸೂಲಿ ಮಾಡುತ್ತಿದ್ದರು. ಅನೇಕ ಮಹಿಳೆಯರು ತಮ್ಮ ತವರೂರುಗಳಿಂದ (ಬಹುತೇಕರು ಅಸ್ಸಾಂನವರು) ದಾಖಲೆಗಳನ್ನು ತರಲು ಅನುಭವಿಸುತ್ತಿರುವ ಪಡಿಪಾಟಲು ಬಿಚ್ಚಿಟ್ಟರು. 2003ರ ಮತದಾರರ ಪಟ್ಟಿಯಲ್ಲಿ ಅವರ ತಂದೆ–ತಾಯಿಯರ ಹೆಸರಿದ್ದರೂ ದಾಖಲೆಗಳನ್ನು ಮತ್ತೆ ಕೇಳಲಾಗಿತ್ತು.

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' ಜನಸಾಮಾನ್ಯರ ಮೇಲೆ ನಡೆಯುತ್ತಿರುವ ಅಪಾಯಕಾರಿ ಪ್ರಯೋಗದಂತಿದೆ. ವಿನ್ಯಾಸದಲ್ಲೇ ಲೋಪ ಇರುವ ಯೋಜನೆಯನ್ನು ಅವಸರದಲ್ಲಿ ಜಾರಿಗೊಳಿಸಲು ಚುನಾವಣಾ ಆಯೋಗ ಹೊರಟಿದೆ. ಇದು ಬರ್ಖಾಸ್ತುಗೊಳಿಸಬೇಕಾದ ಪ್ರಯೋಗ.

ಈ ಘಟನೆಗಳನ್ನು ನೋಡಿದರೆ, ವಲಸೆ ಕಾರ್ಮಿಕರು 'ಇಸಿಐನೆಟ್' ಆ್ಯಪ್‌ನಲ್ಲಿ ಮೊಬೈಲ್ ನಂಬರ್ ಬಳಸಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಇರುವ ವ್ಯವಸ್ಥೆಯೇ ನಗೆಪಾಟಲು ಎಂದಾಯಿತು. 'ಸ್ಟ್ರ್ಯಾಂಡೆಡ್ ವರ್ಕರ್ಸ್ ಆ್ಯಕ್ಷನ್ ಕಮಿಟಿ'ಯು ಗುರುತಿಸಿರುವ ವಲಸೆ ಕಾರ್ಮಿಕರ ಸಮಸ್ಯೆಗಳನ್ನು ಜನರ ಅಹವಾಲು ಕೇಳಿದ ಕಾರ್ಯಕ್ರಮದಲ್ಲಿ ಮಂಡಿಸಲಾಯಿತು. ಬಿಹಾರದ ಹೊರಗೆ ಕೆಲಸ ಮಾಡುತ್ತಿರುವ 235 ಕಾರ್ಮಿಕರನ್ನು ಫೋನ್ ಮೂಲಕ ಸಮೀಕ್ಷೆಗೆ ಒಳಪಡಿಸಲಾಗಿತ್ತು. ಅವರಲ್ಲಿ ಮೂರನೇ ಒಂದು ಭಾಗದಷ್ಟು ಕಾರ್ಮಿಕರು 'ಎಸ್‌ಐಆರ್' ಎನ್ನುವುದನ್ನು ಕೇಳಿಯೇ ಇರಲಿಲ್ಲ. ಆನ್‌ಲೈನ್ ಮೂಲಕ ಮತದಾರರ ಪಟ್ಟಿ ಸೇರಲು ಅರ್ಜಿ ಸಲ್ಲಿಸಬಹುದು ಎನ್ನುವ ವಿಷಯ ಗೊತ್ತಿದ್ದುದು ಹತ್ತನೇ ಒಂದರಷ್ಟು ವಲಸೆ ಕಾರ್ಮಿಕರಿಗೆ ಮಾತ್ರ.

ಚುನಾವಣಾ ಆಯೋಗದ ಅಧಿಕೃತ ಕಲ್ಪಿತ ಕಥೆಯ ಒಂದು ಅಂಶವನ್ನು ವಾಸ್ತವದೊಂದಿಗೆ ಹೋಲಿಸಿ ನೋಡೋಣ. 'ಎಸ್‌ಐಆರ್' ಆದೇಶದ ಮಾರ್ಗಸೂಚಿ 3 (ಬಿ) ಪ್ರಕಾರ, ಬಿಎಲ್‌ಒಗಳು ಪ್ರತಿ ಮನೆಗೂ ಹೋಗಿ, ಮತದಾರರ ಪಟ್ಟಿ ಸೇರ್ಪಡೆಯ ಅರ್ಜಿ ವಿತರಿಸಬೇಕು. ಅಷ್ಟೇ ಅಲ್ಲ, ಈಗ ಮತದಾರರ ಪಟ್ಟಿಯಲ್ಲಿ ಇರುವವರ ಮಾಹಿತಿಯನ್ನು ಮೊದಲೇ ಮುದ್ರಿಸಿ, ಅದರ ಪ್ರತಿಯನ್ನು ನೀಡಬೇಕು. ಅರ್ಜಿ ತುಂಬಲು ಎಲ್ಲರಿಗೂ ಮಾರ್ಗದರ್ಶನ ಮಾಡಬೇಕು. ಈ ಸರಳವಾದ ಮಾರ್ಗಸೂಚಿಯಲ್ಲಿ ಆರು ಕೆಲಸಗಳು ಅಡಕವಾಗಿವೆ. ಇದೇ 'ಇಸಿಐ'ನ ಆರು ಸುಳ್ಳುಗಳನ್ನು ಅನಾವರಣಗೊಳಿಸುತ್ತದೆ.

ಬಿಎಲ್‌ಒಗಳು ತಮ್ಮ ಬೂತ್ ವ್ಯಾಪ್ತಿಯ ಎಲ್ಲ ಮನೆಗಳಿಗೂ ಹೋಗಬೇಕು. ಆದರೆ, ಅವರು ಹೋಗಿಯೇ ಇಲ್ಲ. ಕೆಲಸ ಮುಗಿಸಲು ಅಸಾಧ್ಯ ಎನ್ನುವಂತಹ ಗಡುವು ವಿಧಿಸಿದ್ದರಿಂದ ಹೋಗಲು ಅವರಿಗೆ ಸಾಧ್ಯವಾಗಿಲ್ಲ. ಅವರು ಮೊದಲ ಕೆಲವು ದಿನ ಮನೆಗಳಿಗೆ ಭೇಟಿ ನೀಡಿದರು. 'ಮನೆ ಮನೆಗೆ ಹೋಗಿ ಕಾಲಹರಣ ಮಾಡಬೇಡಿ' ಎಂಬ ಸೂಚನೆ ಬಂದಿದ್ದೇ ಸುಮ್ಮನಾದರು. ಅರ್ಧದಷ್ಟು ಪ್ರಕರಣಗಳಲ್ಲಿ ಬಿಎಲ್‌ಒಗಳನ್ನು ಹುಡುಕಿಕೊಂಡು ಮತದಾರರು ಓಡಾಡುತ್ತಿದ್ದಾರೆಯೇ ವಿನಾ, ಮತದಾರರನ್ನು ಹುಡುಕುವ ಕರ್ತವ್ಯಕ್ಕೆ ಬಿಎಲ್‌ಒಗಳು ಹೋಗಿಲ್ಲ. ಅರ್ಜಿಗಳನ್ನು ಬಿಎಲ್‌ಒಗಳು ವಿತರಿಸಬೇಕಿತ್ತು. ಆದರೆ, ನಗರ ಪ್ರದೇಶಗಳಲ್ಲಿ ಮುನ್ಸಿಪಲ್ ಸಿಬ್ಬಂದಿ ಆ ಕೆಲಸ ಮಾಡಿದ್ದಾರೆ. ಪ್ರತಿ ಮತದಾರರಿಗೆ ಪೂರ್ವ ಮಾಹಿತಿಯನ್ನು ಮುದ್ರಿಸಿದ ಪ್ರತ್ಯೇಕ ಅರ್ಜಿ ನೀಡಬೇಕು. ಪಟ್ನಾ ಸೇರಿದಂತೆ ಬಹುತೇಕ ನಗರ ಪ್ರದೇಶಗಳಲ್ಲಿ ಖಾಲಿ ಅರ್ಜಿಗಳನ್ನು ವಿತರಿಸಿದ್ದಾರೆ. ಈಗಿನ ಮತದಾರರ ಪಟ್ಟಿಯ ಅನ್ವಯ ಪ್ರತಿ ಮತದಾರರಿಗೆ ಅರ್ಜಿ ವಿತರಿಸಬೇಕು. ಆದರೆ, ಪಟ್ಟಿಯಲ್ಲಿ ಇರುವ ಎಷ್ಟೋ ಜನರಿಗೆ ಅರ್ಜಿಗಳೇ ಸಿಕ್ಕಿಲ್ಲ. ಭರ್ತಿ ಮಾಡಿದ ಅರ್ಜಿಯ ಒಂದು ಪ್ರತಿಯನ್ನು ಮತದಾರರಿಗೆ ನೀಡಬೇಕು, ಇನ್ನೊಂದು ಪ್ರತಿಯನ್ನು ಬಿಎಲ್‌ಒ ಇಟ್ಟುಕೊಳ್ಳಬೇಕು. ಇದಂತೂ ಬಹುತೇಕ ಕಡೆ ನಡೆದೇ ಇಲ್ಲ. ಮತದಾರರೇ ಬಲವಂತ ಮಾಡಿ, ಒಂದು ಛಾಯಾಪ್ರತಿ ತೆಗೆಸಿಕೊಂಡು ಬಂದು, ದುಂಬಾಲು ಬಿದ್ದರಷ್ಟೇ ಬಿಎಲ್‌ಒಗಳು ಸ್ವೀಕೃತಿ ಮುದ್ರೆ ಒತ್ತಿಕೊಟ್ಟಿರುವ ಉದಾಹರಣೆಗಳಿವೆ. ಬಿಎಲ್‌ಒಗಳು ಅರ್ಜಿ ತುಂಬಲು ಮಾರ್ಗದರ್ಶನ ನೀಡಬೇಕು. ಬಡಪಾಯಿ ಬಿಎಲ್‌ಒಗಳಿಗೆ ಅದಕ್ಕೆ ಸಮಯವಾದರೂ ಎಲ್ಲಿದೆ? ಮೊದಲೇ ಅವರು ಈ ಕಾರ್ಯಭಾರದ ಒತ್ತಡದಿಂದ ನಲುಗಿದ್ದಾರೆ. ಮತದಾರರಿಗೆ ಅವರು ತಪ್ಪು ಮಾರ್ಗದರ್ಶನ ಮಾಡದಿದ್ದರೆ ಸಾಕು ಎನ್ನುವ ಸ್ಥಿತಿ ಇದೆ.

'ಎಸ್‌ಐಆರ್'ಗೆ ಸಂಬಂಧಿಸಿದ ವಂಚನೆಗಳನ್ನು ಪತ್ರಕರ್ತ ಅಜಿತ್ ಅಂಜುಮ್ ವಿಡಿಯೊ ವರದಿಗಳ ಮೂಲಕ ಬಯಲು ಮಾಡಿದ್ದಾರೆ. ಮತದಾರರ ಪಟ್ಟಿ ಸೇರಲು ಅರ್ಜಿ ಹಾಕಿರುವವರ ಗಮನಕ್ಕೇ ತಾರದೆ ಅರ್ಜಿಗಳನ್ನು ತುಂಬಿರುವ ಪ್ರಸಂಗಗಳನ್ನು ಅವರು ತೋರಿಸಿದ್ದಾರೆ. ಅನೇಕ ಮತದಾರರು ಈ ಅಕ್ರಮದ ಕುರಿತು ಹಂಚಿಕೊಂಡ ಅನುಭವಗಳನ್ನು ನಾವೂ ಕೇಳಿಸಿಕೊಂಡೆವು. ಊರಿನಲ್ಲಿ ಇಲ್ಲದ ಮತದಾರರ ಪರವಾಗಿ ಅವರ ಕುಟುಂಬದವರು ಸಹಿ ಹಾಕಿಲ್ಲ. ಇನ್ನಷ್ಟು ಪ್ರಕರಣಗಳಲ್ಲಿ ಮತದಾರರ ಗಮನಕ್ಕೆ ಬಾರದೆ ಇದ್ದರೂ ಅರ್ಜಿ ಸಲ್ಲಿಸಲಾಗಿದೆ ಎಂದು 'ಬಿಎಲ್‌ಒ'ಗಳು ಹೇಳಿ ಕೈತೊಳೆದುಕೊಂಡಿದ್ದಾರೆ. 'ಇಸಿಐ' ವೆಬ್‌ಸೈಟ್‌ನಲ್ಲಿ, 'ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ, ಮತ್ತೆ ಸಲ್ಲಿಸಲು ಅವಕಾಶವಿಲ್ಲ' ಎಂಬ ಒಕ್ಕಣೆ ಕಂಡು ದಂಗಾದವರೂ ಇದ್ದಾರೆ. 'ಇಸಿಐ' ಹೇಳಿಕೊಂಡಿರುವಂತೆ ಅರ್ಜಿ ಸಲ್ಲಿಕೆ ಪ್ರಕ್ರಿಯೆಯು ಶೇ 98.01ರಷ್ಟು ಯಶಸ್ವಿಯಾಗಿದೆ. ವಾಸ್ತವದಲ್ಲಿ, ಆ ಪೈಕಿ ಕಾಲು ಭಾಗ ಅರ್ಜಿಗಳು ಸಲ್ಲಿಕೆಯಾಗಿರುವುದು ಅದನ್ನು ಸಲ್ಲಿಸಿದ್ದಾರೆ ಎನ್ನಲಾದ ಮತದಾರರಿಗೇ ಗೊತ್ತಿಲ್ಲ! ಇದೊಂದು ದೊಡ್ಡ ವಂಚನೆ. ಇವು, ಬೃಹತ್ ಯೋಜನೆಯ ಜಾರಿಯಲ್ಲಿ ಸಹಜವಾಗಿ ಆಗಬಹುದಾದ ಕ್ರಿಯಾಲೋಪಗಳಲ್ಲ. 'ಎಸ್‌ಐಆರ್' ಕುರಿತು ಇರುವ ಗೊಂದಲಗಳ ಫಲಿತ ಇದು.

ಕೇವಲ 24 ಗಂಟೆಗಳಲ್ಲಿ ಅಧಿಸೂಚನೆ ಹೊರಡಿಸಿ, 4 ವಾರಗಳಲ್ಲಿ 8 ಕೋಟಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಮಾಡಲು ಹೊರಟರೆ ಹೀಗೆಯೇ ಆಗುವುದು. ಇದಕ್ಕೆ ಬಿಎಲ್‌ಒಗಳನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಯೋಜನೆಯ ವಿನ್ಯಾಸದ ಲೋಪ ಇದು; 'ಇಸಿಐ' ನಿರ್ಧಾರದ ಹುಳುಕು. ಆಡಳಿತಶಾಹಿಗೆ ಅಚ್ಚುಕಟ್ಟಾಗಿ ಮುಗಿಸಲು ಆಗದಂತಹ ಕಾರ್ಯ ವಹಿಸಿದರೆ ಹೀಗೆಯೇ ಆಗುವುದು. ಈಗಲೂ ಕಾಲ ಮಿಂಚಿಲ್ಲ. ಜನರ ಮೇಲಿನ ಇಂತಹ ಪ್ರಯೋಗವನ್ನು ಬರ್ಖಾಸ್ತುಗೊಳಿಸಬೇಕು.

ಪಟ್ನಾದಲ್ಲಿ ನಡೆದ 'ಜನಸುನ್‌ವಾಯಿ'– ಎಸ್‌ಐಆರ್ ತಡೆಹಿಡಿಯುವುದೇ ಸರಿ ಎಂಬ ನಿರ್ಣಯದೊಂದಿಗೆ ಮುಕ್ತಾಯಗೊಂಡಿತು.

(ಕಾಮಾಯನಿ ಸ್ವಾಮಿ ಅವರು ಬಿಹಾರದಲ್ಲಿ ಭಾರತ್ ಜೋಡೊ ಆಂದೋಲನದ ಸಂಯೋಜಕರು. ರಾಹುಲ್ ಶಾಸ್ತ್ರಿ, ಯೋಗೇಂದ್ರ ಯಾದವ್ ಇಬ್ಬರೂ ಭಾರತ್ ಜೋಡೊ ಅಭಿಯಾನದ ರಾಷ್ಟ್ರೀಯ ತಂಡದಲ್ಲಿ ಕೆಲಸ ಮಾಡುತ್ತಾರೆ. ಯೋಗೇಂದ್ರ ಯಾದವ್ ಅವರು 'ಎಸ್‌ಐಆರ್' ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದಾರೆ.)

ವಾಚಕರ ವಾಣಿ

ಗಣತಿಗೆ 'ಯುವನಿಧಿ' ಬಳಗ ಬಳಸಿ

ಸುಮಾರು 1.65 ಲಕ್ಷ ಶಿಕ್ಷಕರನ್ನು ಬಳಸಿಕೊಂಡು ದಸರಾ ರಜೆಯಲ್ಲಿ 'ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ' ನಡೆಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಆ ಮೂಲಕ, ಈಗಾಗಲೇ ಕೆಲಸದ ಒತ್ತಡದಿಂದ ಬಳಲುತ್ತಿರುವ ಶಿಕ್ಷಕರನ್ನು ಮತ್ತೆ ದೈಹಿಕವಾಗಿ, ಮಾನಸಿಕವಾಗಿ ಶೋಷಿಸಲಾಗುತ್ತಿದೆ. ಸರ್ಕಾರ ನೀಡುತ್ತಿರುವ ಗ್ಯಾರಂಟಿಗಳಲ್ಲಿ 'ಯುವನಿಧಿ'ಯೂ ಒಂದು. 'ಯುವನಿಧಿ'ಯ ಫಲಾನುಭವಿಗಳನ್ನು ಸಮೀಕ್ಷಾ ಕಾರ್ಯಕ್ಕೆ ಏಕೆ ಬಳಸಬಾರದು?

ಶ್ರೀಧರ ನಾಯಕ, ಬೇಲೇಕೇರಿ

ಬಡ್ತಿ: 'ಸುಪ್ರೀಂ' ಆದೇಶ ಉಲ್ಲಂಘನೆ

ರಾಜಕಾರಣಿಗಳು, ಸಚಿವರು ಸರ್ಕಾರಿ ನೌಕರರ ಸೇವಾ ವಿಷಯದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಅಲ್ಲದೆ, ನೌಕರರು ಜಾತಿ ಸಂಘಟನೆಗಳ ಮೂಲಕ ಅಧಿಕಾರಸ್ಥರ ಮೇಲೆ ಒತ್ತಡ ಹೇರಿ ಬಡ್ತಿ ವಿಷಯದಲ್ಲಿ ಮಧ್ಯಪ್ರವೇಶಿಸುತ್ತಿದ್ದಾರೆ. ಇದರಿಂದ ತೊಂದರೆಗೀಡಾದವರು ನ್ಯಾಯಾಲಯದ ಕದ ತಟ್ಟುತ್ತಿದ್ದಾರೆ. ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗುವವರೆಗೆ ಇಲಾಖೆಗಳಲ್ಲಿ ಬಡ್ತಿಯನ್ನು ತಡೆಹಿಡಿಯಲಾಗುತ್ತಿದೆ. ಹೀಗಾಗಿ 25ರಿಂದ 30 ವರ್ಷ ಸೇವೆ ಸಲ್ಲಿಸಿದ ನೌಕರರು ಬಡ್ತಿ ಸಿಗದೆ ನೊಂದುಕೊಂಡು ನಿವೃತ್ತರಾಗುತ್ತಿರುವುದು ಖೇದಕರ. ಸರ್ಕಾರವು ನೌಕರರ ಸೇವಾ ಜೇಷ್ಠತೆ ಮತ್ತು ಬಡ್ತಿ ವಿಷಯದಲ್ಲಿ ಯಾವುದೇ ಒತ್ತಡಕ್ಕೆ ಮಣಿಯದೆ, 'ಪವಿತ್ರಾ ಪ್ರಕರಣ'ದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಪಾಲಿಸಬೇಕಿದೆ.

ಅನಿಲ್ ಕುಮಾರ್, ಶಿವಮೊಗ್ಗ

ಮಾನವರ ವಿನಿಮಯ ಸೂಕ್ತ

ಅಂತರರಾಷ್ಟ್ರೀಯ ಪ್ರಾಣಿ ವಿನಿಮಯ ಯೋಜನೆಯಡಿ ಬನ್ನೇರುಘಟ್ಟದಿಂದ ನಾಲ್ಕು ಆನೆಗಳನ್ನು ಜಪಾನ್‌ಗೆ ಕಳುಹಿಸಲಾಗುತ್ತಿದೆ. ಮನುಷ್ಯನ ತಿಕ್ಕಲುತನಕ್ಕೆ ಇದಕ್ಕಿಂತ ಇನ್ನೊಂದು ಉದಾಹರಣೆ ಬೇಕಿಲ್ಲ. ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಬಂದಿಳಿದ ಚೀತಾಗಳ ಸಾವು ಇಂಥ ಯೋಜನೆಗಳಿಗೆ ಪಾಠವಾಗಬೇಕಿದೆ.

ಒಂದು ಪ್ರದೇಶದಲ್ಲಿನ ಪರಿಸರ, ಋತುಮಾನಗಳಿಗೆ ಅನುಗುಣವಾಗಿ ಪ್ರಾಣಿಯೊಂದರ ಜೀವನ ಚಕ್ರ ರೂಪಿತವಾಗಿರುತ್ತದೆ. ನೂರು ಕಿಲೋಮೀಟರ್ ದೂರದ ನೀರಿನ ಸೆಲೆಯನ್ನು ಆನೆ ತಿಳಿಯಬಲ್ಲದು. ಇದಕ್ಕೆ ಅದರ ಪರಂಪರಾಗತ ಜ್ಞಾನ ನೆರವಾಗುತ್ತದೆ. ಕಾಡುಮೇಡುಗಳಲ್ಲಿ ಜೀವಿಸುವ ಆನೆಯನ್ನು ಪುಟ್ಟ ರಾಷ್ಟ್ರಕ್ಕೆ ಕಳುಹಿಸಿ ಅವುಗಳ ಸ್ವಾಭಾವಿಕ ಬದುಕಿಗೆ ನಾವು ಮಾರಕವಾಗಿದ್ದೇವೆ. ಈ ಸರಳ ಸತ್ಯವು ವನ್ಯಜೀವಿ ವಿಜ್ಞಾನಿಗಳು, ವನ್ಯಜೀವಿ ಸಂರಕ್ಷಕರು, ಅಧಿಕಾರಿಗಳಿಗೆ ಅರ್ಥವಾಗುತ್ತಿಲ್ಲ. ಎರಡು ದಿನ ಮನೆ ಬಿಟ್ಟು ಪರ ಊರಿಗೆ ಹೋದಾಗ ಮತ್ತೆ ಯಾವಾಗ ಮನೆ ಸೇರುತ್ತೇವೋ ಎಂದು ಚಡಪಡಿಸುವ ನಾವು, ಪ್ರಾಣಿಗಳ ಬಗ್ಗೆ ಏಕಿಷ್ಟು ಅಸಡ್ಡೆ ತೋರುತ್ತಿದ್ದೇವೆ? ಭಾರೀ ಜನಸಂಖ್ಯೆಯ ಭಾರತದಲ್ಲಿರುವ ಕ್ರೂರ ಪ್ರಾಣಿಗಳಾದ ಮನುಷ್ಯರನ್ನೇ ವಿನಿಮಯ ಮಾಡಿಕೊಂಡರೆ ಸಮಾಜದ ಆರೋಗ್ಯಕ್ಕೆ ಒಳಿತಲ್ಲವೇ?

ಸಿದ್ದೇಗೌಡ ಶಾಂತರಾಜು, ಬೆಂಗಳೂರು

ಸರ್ಕಾರಿ ಅಧಿಕಾರಿಗಳ ಬಲಿ

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣ ಕುರಿತು ತನಿಖೆ ನಡೆಸಿರುವ ಆಯೋಗದ ವರದಿಯಲ್ಲಿನ ಲೋಪಗಳ ಬಗ್ಗೆ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ (ಪ್ರ.ವಾ., ಜುಲೈ 25). ಅಪಾರ ಜನ ಸೇರುವಂಥ ಕಾರ್ಯಕ್ರಮಕ್ಕೆ ಅಗತ್ಯ ಪೊಲೀಸ್ ಬಂದೋಬಸ್ತ್ ಮಾಡಿಕೊಳ್ಳುವ ಕಷ್ಟ– ಸಾಧ್ಯತೆ ಕುರಿತು ಪೊಲೀಸರ ಆಕ್ಷೇಪ ಇದ್ದಾಗಲೂ, ರಾಜಕೀಯವಾಗಿ ಲಾಭ ಗಿಟ್ಟಿಸಿಕೊಳ್ಳಲು ತರಾತುರಿಯಲ್ಲಿ ಆಯೋಜಿಸಲಾಗುವ ಇಂಥ ಸಮಾರಂಭಗಳಲ್ಲಿ ಅವಘಡ ಸಂಭವಿಸುವುದು ನಿರೀಕ್ಷಿತ. ಜನಸಾಗರವನ್ನು ಗಮನಿಸಿ ಸಿಬ್ಬಂದಿ ಮಾಡುವ ಗುಪ್ತಚರ ವರದಿಯನ್ನು ಆ ಸಂದರ್ಭದಲ್ಲಿ ಗಮನಿಸುವಷ್ಟು ಅಥವಾ ಆ ವರದಿ ಆಧರಿಸಿ ಕಾರ್ಯಕ್ರಮವನ್ನು ರದ್ದುಗೊಳಿಸುವ ಸಾಧ್ಯತೆಗಳಾದರೂ ಆಗ ಎಲ್ಲಿ ಇರುತ್ತದೆ. ಆಡಳಿತ ವ್ಯವಸ್ಥೆಯಲ್ಲಿ ಸಮಯ ಸಂದರ್ಭ ಅನುಸಾರ ಕೆಲವರ ಬಲಿದಾನ ಆಗಬೇಕಾಗುತ್ತದೆ. ಕಾಲ್ತುಳಿತ ಪ್ರಕರಣದಲ್ಲಿ ಕೆಲವು ಅಧಿಕಾರಿಗಳ ಬಲಿ ನೀಡಲಾಗಿದೆ, ಅಷ್ಟೇ.

ವೆಂಕಟೇಶ ಮಾಚಕನೂರ, ಧಾರವಾಡ


ಜಾತಿವಾದಿ ಮನಸ್ಸಿಗೆಲ್ಲಿದೆ ಮದ್ದು?

ಸುಬ್ಬು ಹೊಲೆಯಾರ್ ಅವರ 'ಅನ್ನ ನೀಡುವ ತಾಯಿಗೆ ಜಾತಿಯೇ?' ಲೇಖನ (ಪ್ರ.ವಾ., ಜುಲೈ 24) ಓದಿದಾಗ ಉಪ ರಾಷ್ಟ್ರಪತಿಯಾಗಿದ್ದ ಬಿ.ಡಿ. ಜತ್ತಿ, 'ನನಗೆ ನಾನೇ ಮಾದರಿ' ಆತ್ಮಕಥೆಯಲ್ಲಿ ದಾಖಲಿಸಿರುವ ಪ್ರಸಂಗ ನೆನಪಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಜತ್ತಿ ಅವರು, ಜಮಖಂಡಿ ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದರು. ಅವರ ಸಚಿವ ಸಂಪುಟದಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿದ ಚಂದ್ರಪ್ಪ ಕಾಂಬಳೆ ಸಚಿವರಾಗಿದ್ದರು. ಶಂಕರ್ ರಾವ್ ಪಟವರ್ಧನ್ ಆಗಿನ ದೊರೆ. ಗಣೇಶ ಉತ್ಸವದ ವೇಳೆ ಸಂಪುಟದ ಸದಸ್ಯರನ್ನು ದೊರೆ, ತಮ್ಮ ಅರಮನೆಗೆ ಊಟಕ್ಕೆ ಆಮಂತ್ರಿಸುವ ಸಂಪ್ರದಾಯವಿತ್ತು. ದೊರೆಗೆ, ಕಾಂಬಳೆ ಅವರನ್ನು ಆಮಂತ್ರಿಸುವ ಮನಸ್ಸಿರಲಿಲ್ಲ. ಇದನ್ನು ಜತ್ತಿಗೆ ಹೇಳಿದರು. ಆಗ ಜತ್ತಿ ಅವರು, ಕಾಂಬಳೆಯನ್ನು ಅನ್ಯಕಾರ್ಯದ ನಿಮಿತ್ತ ಒಂದು ವಾರ ರಾಮದುರ್ಗಕ್ಕೆ ಕಳಿಸಿಕೊಟ್ಟರು. ಹೀಗೆ ದೊರೆಯ ಸಮಸ್ಯೆಯನ್ನು ಪರಿಹರಿಸಿದೆ ಎಂದು ಜತ್ತಿ ಅವರು 'ಹೆಮ್ಮೆ'ಯಿಂದ ಹೇಳಿಕೊಂಡಿದ್ದಾರೆ. ತಾತ್ವಿಕ ನೆಲೆ ಬಿಟ್ಟು ತಂತ್ರಗಾರಿಕೆ ಅನುಸರಿಸುತ್ತಿರುವುದಲೇ ಸಮಾಜದಲ್ಲಿ ಇಂದಿಗೂ ಜಾತಿ ತಾರತಮ್ಯ ಉಳಿದುಕೊಂಡಿದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಚುರುಮುರಿ



ಎಣ್ಣೆಚೀಟಿ ಐಡೆಂಟಿಟಿ!

• ತುರುವೇಕೆರೆ ಪ್ರಸಾದ್

'ಈ ಎಲೆಕ್ಷನ್ ಕಮಿಸನ್ನು ಭಾರೀ ಕನ್ಫೂಸನ್ ಆಗ್ಬುಟ್ಟಿದೆ ಕಣ್ರಲಾ' ಎಂದು ಹರಟೆಕಟ್ಟೇಲಿ ಸಿಬಿರೆಬ್ಬಿದ ಗುದ್ಲಿಂಗ.

'ಕಮಿಸನ್ನು ಕಮಲ ಪಾಳೆಯದ ಸುಳ್ ಸೆಲ್ ಆಗದೆ ಅಂತ ರಾಹುಲಣ್ಣ ಗುಡುಗವ್ರೆ'.

'ಅದ್ಕೇ, ಹಳೇ ಬೇರು ಕಣಿ ಮಂಕರಿ ಐಯ್ನೋರು ಮತ್ತು ಹೊಸ ಚಿಗುರು ಸಸಿ ತವರೂರು ಸೇರಿಸಿ ಟ್ರೂತ್ ಫೈಂಡಿಂಗ್ ಕಮಿಸನ್ ಮಾಡ್ಬುಟ್ರೆ ಸರಿ ಓಯ್ತದೆ'.

'ಅದಿರ್ಲಿ, ಈಗ ನಿಜವಾಗ್ಲು ಒರಿಜಿನಲ್ ಮತದಾರ್ರು ಯಾರು ಅಂತ ಕಂಡ್ ಹಿಡ್ಯೋದು ಎಂಗೆ? ಈ ರೇಸನ್ ಕಾಲ್ಡು ಮಡಿಕ್ಕಂಡು ಓಟ್ರು ಲಿಸ್ಟು ಮಾಡುದ್ರೆ?' ಕೇಳಿದ ಕಲ್ಲೇಶಿ.

'ಲಕ್ಷಾಂತರ ರೇಶನ್ ಕಾಲ್ಡು ಬೋಗಸ್ಸು ಅಂತ ನಮ್ ಸರ್ಕಾರನೇ ಕಿತ್ ಒಗೀಲಿಲ್ವಾ?'

'ಔದಲ್ವಾ? ಅಂಗಾರೆ ಈ ಆಧಾರ್ ಕಾರ್ಡ್‌ನೇ ಯಾಕ್ ಲಿಸ್ಟ್ ಮಾಡಕ್ಕೆ ದಾಖಲೆ ಅಂತ ಮಡಿಕ್ಕಬಾರ್ದು?'

'ಅದ್ನೂ ಲಕ್ಷ ಲಕ್ಷ ನಕಲಿ ಮಾಡ್ಬುಟ್ಟವ್ರಲ್ಲ! ಕಳ್ ಒಕ್ಲುತವೆಲ್ಲಾ ಈ ಬೋಗಸ್ ಕಾರ್ಡ್ ಅದೆ'.

'ಅಲ್ಲಿಗೆ ಅದೂ ನೆಗೆದು ಬಿತ್ತು... ಬರ್ತ್ ಸರ್ಟಿಫಿಕೇಟ್‌ನೂ ತಿದ್ದಿರೋ ಭೂಪರವ್ರೆ. ಈ ಜಾತಕ ಕುಂಡಲೀನೆ ಆಧಾರ ಇಟ್ಕಂಡು ಲಿಸ್ಟು ಮಾಡುದ್ರೆ?'

'ಅದು ಎಲೆಕ್ಷನ್ಗೆ ನಿಂತ್ಕಂಡು ಬುಲ್ಡೆ ಬಿಡೋರಿಗೆ ಸರಿ ಓಯ್ತದೆ. ಇದ್ನೆಲ್ಲಾ ಬುಟ್ಟಾಕಿ ನಮ್ ಎಣ್ಣೆ ಚೀಟಿ ಮಡಿಕ್ಕಂಡ್ರೆ ಓಟರ್ ಲಿಸ್ಟು ಪಕ್ಕಾ ಆಗ್ತದೆ'.

'ಎಣ್ಣೆ ಚೀಟಿನಾ? ಅಂಗಂದ್ರೆ?'

'ಅದೇ ಕಣ್ಲಾ! ಎಲೆಕ್ಷನ್ಗಳಲ್ಲಿ ಎಲ್ಲಾ ಪಾರ್ಟಿಯೋರು ಎಣ್ಣೆಗೆ ಅಂತ ಒಂದು ಚೀಟಿ ಬರ್ಕೊಟ್ಟಿರ್ತಾರೆ. ಅದ್ನ ತೋರ್ಸುದ್ರೆ ಎಣ್ಣೆ ಕೊಡಾದು... ಆ ಚೀಟಿ ಇದ್ಬುಟ್ರೆ ಇವನು ಹಳೇ ಓಟರ್ ಅಂತ ಗ್ಯಾರೆಂಟಿ ಆಯ್ತದಲ್ವಾ? ಗಂಡಸ್ರಿಗೆ ಎಣ್ಣೆ ಚೀಟಿ, ಎಂಗುಸ್ರಿಗೆ ಸೀರೆ ಚೀಟಿ' ಎಂದ ಪರ್ಮೇಶಿ.

ಎಲ್ಲರೂ ಗೊಳ್ಳನೆ ನಕ್ಕರು.

ಸಂಗತ

ರಾಜಕಾರಣಿಗಳೇ, ಯಾಕೀ ಧಾವಂತ?


ಬೆಂಗಾವಲು ಪಡೆ ಅವಸರಕ್ಕೆ ಯಾರು ಹೊಣೆ?

• ಸಿದ್ದಯ್ಯ ಹಿರೇಮಠ

ಮೈಸೂರಿನಲ್ಲಿ ರಾಜ್ಯ ಸರ್ಕಾರ ಏರ್ಪಡಿಸಿದ್ದ ಎರಡು ವರ್ಷಗಳ 'ಸಾಧನಾ' ಸಮಾವೇಶದಲ್ಲಿ ಭಾಗವಹಿಸಿ ಬೆಂಗಳೂರಿನತ್ತ ವಾಪಸಾಗುತ್ತಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬೆಂಗಾವಲು ಪಡೆಯ ವಾಹನ ಪಲ್ಟಿಯಾಗಿ, ನಾಲ್ವರು ಸಿಬ್ಬಂದಿಗೆ ಗಾಯಗಳಾಗಿರುವ ಕುರಿತು ವರದಿಯಾಗಿದೆ.

ಮಳೆ ನೀರಿನಿಂದ ಆವೃತವಾಗಿದ್ದ ರಸ್ತೆಯಲ್ಲಿ ವೇಗದಿಂದ ಸಾಗುತ್ತಿದ್ದ ಬೆಂಗಾವಲು ಪಡೆ ವಾಹನ ಉರುಳಿ ಬಿದ್ದಿದೆ. ಚಾಲಕನ ನಿಯಂತ್ರಣ ತಪ್ಪಿರುವ ಆ ವಾಹನ ಪಲ್ಟಿ ಹೊಡೆದು, ಚಕ್ರಗಳೆಲ್ಲ ಆಕಾಶಮುಖಿಯಾಗಿದ್ದವು. ಅದೃಷ್ಟವಶಾತ್, ವಾಹನದ ಒಳಗಿದ್ದವರಿಗಾಗಲೀ, ರಸ್ತೆಯ ಮೇಲೆ ಸಾಗುತ್ತಿದ್ದ ಇತರ ವಾಹನ ಸವಾರರಿಗಾಗಲೀ, ರಸ್ತೆಯ ಮೇಲೆ ಹೊರಟಿದ್ದ ಪಾದಚಾರಿಗಳಿಗಾಗಲೀ ಯಾವುದೇ ರೀತಿಯ ಗಾಯ ಆಗಿಲ್ಲ.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು ಸೇರಿದಂತೆ ರಾಜಕೀಯ ಗಣ್ಯರು ಯಾವುದಾದರೂ ಊರಿಗೆ ಬಂದರೆ ಅಥವಾ ಅಲ್ಲಿಂದ ಹೊರಟರೆ, ಅವರ ವಾಹನಗಳು ಅತಿಯಾದ ವೇಗದಿಂದ ಸಾಗುವುದು ಸಾಮಾನ್ಯವಾಗಿ ಕಂಡುಬರುವ ದೃಶ್ಯ. ಅದರಲ್ಲೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅಥವಾ ಸಚಿವರು ಯಾವುದಾದರೂ ಊರಿಗೆ ಹೆಲಿಕಾಪ್ಟರ್‌ನಲ್ಲಿ ಬಂದರೂ ಅಲ್ಲಿಂದ ಸಭೆ, ಸಮಾರಂಭ ನಿಗದಿಯಾದ ಸ್ಥಳಕ್ಕೆ ತೆರಳುವಾಗ ಅವರು ಕುಳಿತ ವಾಹನ ಮತ್ತು ಅವರ ಹಿಂದೆ, ಮುಂದೆ ಹತ್ತಾರು ವಾಹನಗಳು ಸಾಗುತ್ತವೆ. ಆ ವಾಹನಗಳು ವಿಪರೀತ ವೇಗದೊಂದಿಗೆ ಸಾಗುತ್ತವೆ. ಬಹುಶಃ, ರಸ್ತೆಗುಂಟ ನಿಂತು ನೋಡುವವರ ಗಮನ ಸೆಳೆಯುವುದಕ್ಕೇ ಆ ವಾಹನಗಳು ಅಷ್ಟೊಂದು ವೇಗದಿಂದ ಸಾಗುತ್ತಿರಬಹುದು! ವಿವಿಐಪಿಗಳ ವಾಹನಗಳು ಸಂಚರಿಸುವ ಸಂದರ್ಭದಲ್ಲಿ ಪೊಲೀಸರು ಜೀರೊ ಟ್ರಾಫಿಕ್ ಸೌಲಭ್ಯ ಕಲ್ಪಿಸುವುದರಿಂದ, ಆ ಮಾರ್ಗದಲ್ಲಿ ಸಾಗುವ ಜನಸಾಮಾನ್ಯರು ವೇಗದಿಂದ ಸಾಗುವ ಈ ವಾಹನಗಳನ್ನು ಮೂಕಪ್ರೇಕ್ಷಕರಂತೆ ನೋಡಬೇಕಾಗುತ್ತದೆ.



ಬೆಂಗಳೂರಿನಲ್ಲಿ ಜೀರೊ ಟ್ರಾಫಿಕ್ ಸೌಲಭ್ಯ ಕಲ್ಪಿಸುವುದಕ್ಕೆ ಕೆಲವೊಮ್ಮೆ ಅಪಸ್ವರಗಳು ಕೇಳಿಬರುತ್ತವಾದರೂ, ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಅಧಿಕಾರಸ್ಥರಿಗೆ ಹಾಗೂ ಇತರೆ ಗಣ್ಯರಿಗೆ ಜೀರೊ ಟ್ರಾಫಿಕ್ ವ್ಯವಸ್ಥೆ ಕಲ್ಪಿಸುವುದರಿಂದ, ಬಹುಶಃ ಆ ಸೌಲಭ್ಯ ಕಾನೂನುಬದ್ಧವಾಗಿ ಇರಬಹುದು ಎಂದೇ ಜನಸಾಮಾನ್ಯರು ಭಾವಿಸಿದ್ದಾರೆ.

ಗಣ್ಯರ ವಾಹನಗಳು ಸಾಗುವ ಧಾವಂತ ನೋಡಿದರಂತೂ, 'ಇವರು ಯಾವುದಾದರೂ ಬಸ್ಸು ಅಥವಾ ರೈಲಿನ ಮೂಲಕ ಮುಂದಿನ ಊರಿಗೆ ತೆರಳುವವರಿರಬಹುದು. ಬಹುಶಃ ಆ ರೈಲೋ, ಬಸ್ಸೋ ಮಿಸ್ ಆಗಬಹುದೇನೋ? ಅದನ್ನು ಹಿಡಿಯಲು ಇಷ್ಟೊಂದು ವೇಗದಿಂದ ಸಾಗುತ್ತಿದ್ದಾರೇನೋ?' ಎನ್ನುವ ಭಾವನೆಗಳು ದಾರಿಹೋಕರ ಮನಸ್ಸಿನಲ್ಲಿ ಹಾದುಹೋದರೆ ಅಚ್ಚರಿಯೇನೂ ಇಲ್ಲ.

'ಜನಪ್ರತಿನಿಧಿಗಳು, ಸರ್ಕಾರ ನಡೆಸುವವರು ಇಷ್ಟೊಂದು ವೇಗದಿಂದ ಸಾಗಿದರೆ ಮಾರ್ಗಮಧ್ಯದ ಊರುಗಳ ಜನರ ಸಂಕಷ್ಟಗಳು ಅವರಿಗೆ ಅರ್ಥವಾಗುವುದಾದರೂ ಹೇಗೆ?' ಎಂದೂ ಕೆಲವು ಸಂದರ್ಭಗಳಲ್ಲಿ ಸಾರ್ವಜನಿಕರೇ ಮಾತನಾಡಿದ್ದಿದೆ.

ದಾರಿಯಲ್ಲಿ ನಡೆದು ಹೊರಟವರು, ಅಶಕ್ತರು ಸಮಸ್ಯೆಗೆ ಸಿಲುಕಿದಾಗ ಸಚಿವರು, ಶಾಸಕರು, ಹಿರಿ–ಕಿರಿಯ ಅಧಿಕಾರಿಗಳು ತಮ್ಮ ವಾಹನದಲ್ಲಿ ಕರೆದೊಯ್ದ ಘಟನೆಗಳು ಈ ಹಿಂದೆ ವರದಿಯಾಗುತ್ತಿದ್ದವು. ಈಚಿನ ದಿನಗಳಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅಥವಾ ಸಚಿವರು ಯಾವುದಾದರೂ ಊರಿಗೆ ಭೇಟಿಕೊಟ್ಟರೆ ಅವರ ಹಿಂದೆ ಮುಂದೆ ಕಾರ್ಯಕರ್ತರ, ಬೆಂಬಲಿಗರ ಹಾಗೂ ಭಟ್ಟಂಗಿಗಳ ವಾಹನಗಳ ಪಡೆಯೇ ಭರದಿಂದ ಸಾಗುತ್ತದೆ.

ಕೆಲವೊಮ್ಮೆ ಇಂಥ ವಾಹನಗಳು ಕಿಲೋಮೀಟರ್‌ಗಟ್ಟಲೆ ಸಾಗುವ ದೃಶ್ಯಗಳು ಕಾಣಸಿಗುತ್ತವೆ. ರಾಜಕೀಯ ಮುಖಂಡರು ಸಮಾವೇಶದಲ್ಲೋ, ಸಭೆಯಲ್ಲೋ, ಕಾರ್ಯಕ್ರಮದಲ್ಲೋ ಭಾಗವಹಿಸಲು ಹೊರಡುವಾಗ ಅವರ ವೇಗಕ್ಕೆ ಮಿತಿಯೇ ಇರುವುದಿಲ್ಲ. ಖಾಸಗಿ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ಬಂದಾಗಲೂ ಅವರಿಗೆ ಬೆಂಗಾವಲು ಪಡೆ ಇರುತ್ತದೆ. ಆಗಲೂ ಅವರ ವೇಗಕ್ಕೆ ಕಡಿವಾಣವೇ ಇರುವುದಿಲ್ಲ. ಈ ವೇಗದ ಕಾರಣದಿಂದಲೇ, ಗಣ್ಯರ ಬೆಂಗಾವಲು ವಾಹನಗಳು ಡಿಕ್ಕಿ ಹೊಡೆದು ಕೆಲವರು ಗಂಭೀರವಾಗಿ ಗಾಯಗೊಂಡಿರುವ, ಮೃತಪಟ್ಟಿರುವ ಘಟನೆಗಳು ಈ ಹಿಂದೆ ಕೆಲವೆಡೆ ನಡೆದಿವೆ.

ಬೆಂಗಾವಲಿಗೆ ಇರುವ ವಾಹನಗಳೇ ಹೀಗೆ ಉರುಳಿ ಬಿದ್ದರೆ ಅಥವಾ ಇತರ ವಾಹನಗಳಿಗೆ ಡಿಕ್ಕಿ ಹೊಡೆದು ಸಾಮಾನ್ಯ ಸವಾರರ ಪ್ರಾಣ ತೆಗೆದರೆ, ಆ ಗಣ್ಯರಿಗೆ ಸೂಕ್ತವಾದ ಬೆಂಗಾವಲಾಗಲೀ, ಭದ್ರತೆಯಾಗಲೀ ಎಲ್ಲಿ ಸಿಗುತ್ತದೆ? ಅಪಘಾತ ಸಂಭವಿಸಿದರೆ, ಬೆಂಗಾವಲಿನ ಉದ್ದೇಶವೇ ಹಾಳಾಗುತ್ತದಲ್ಲವೇ? ಬೆಂಗಾವಲಿಗೆ ಇರುವ ವಾಹನಗಳು ಗಣ್ಯರ ಧಾವಂತಕ್ಕೆ ಕಟ್ಟುಬಿದ್ದು, ವಿಪರೀತ ವೇಗದಿಂದ ಸಾಗಿ ಅನಾಹುತಗಳು ಸಂಭವಿಸಲು ಕಾರಣರು ಯಾರು? ಎಂಬ ಪ್ರಶ್ನೆಯೂ ಉದ್ಭವವಾಗುತ್ತದೆ.

ಮುಂದೆ ಹೋಗುವ ಬೆಂಗಾವಲು ವಾಹನವು ನಿಧಾನಕ್ಕೆ ಸಾಗಿದಾಗ ಅದರ ಚಾಲಕನನ್ನು ಗಣ್ಯರು ತರಾಟೆಗೆ ತೆಗೆದುಕೊಂಡ ನಿದರ್ಶನಗಳೂ ಇವೆ. ಯಾರದ್ದೋ ಧಾವಂತಕ್ಕೆ ಇನ್ಯಾರೋ ನೋವು ಅನುಭವಿಸುವಂತಾಗಿದೆ. ಗಣ್ಯರೇ ಇದಕ್ಕೆ ಕಡಿವಾಣ ಹಾಕಲು ಮುಂದಾಗಬೇಕಷ್ಟೇ. ಇಲ್ಲದಿದ್ದರೆ ಬೆಂಗಾವಲು ಪಡೆಯ ಅವಘಡಕ್ಕೆ ಸ್ವತಃ ಆ ಗಣ್ಯ ವ್ಯಕ್ತಿಯೇ ಬೆಲೆ ತೆರುವಂಥ ಸಂದರ್ಭವೂ ಬರಬಹುದು.


ರಾಜಕಾರಣಿಗಳು ಅಥವಾ ಗಣ್ಯರು ವೇಗ ಅಪೇಕ್ಷಿಸಬೇಕಾದುದು ವಾಹನಗಳಿಗೆ ಸಂಬಂಧಿಸಿದಂತೆ ಅಲ್ಲ. ಜನಪರ ಕಾರ್ಯಕ್ರಮಗಳು ವೇಗ ಪಡೆದುಕೊಂಡರೆ, ಆ ವೇಗವನ್ನು ಎಲ್ಲರೂ ಮೆಚ್ಚಿಕೊಂಡಾರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಹಸು ಹಾಗೂ ಇತರ ಜಾನುವಾರುಗಳನ್ನು ಕಾಡಿಗೆ ಬಿಡುವುದನ್ನು ನಿರ್ಬಂಧಿಸುವುದು ಸರಿಯೇ?

ಅರಣ್ಯ ಸಂಸ್ಕೃತಿ ನಾಶ ಮಾಡುವ ಹುನ್ನಾರ

• ಕಲ್ಕುಳಿ ವಿಠ್ಠಲ ಹೆಗಡೆ



'ಕರ್ನಾಟಕದ ಅರಣ್ಯಗಳ ಸಂರಕ್ಷಣೆ ಮತ್ತು ಸಂವರ್ಧನೆಯ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ಅರಣ್ಯ ಪ್ರದೇಶಗಳ ಒಳಗೆ ಸಾಕುಪ್ರಾಣಿಗಳನ್ನು ಮೇಯಲು ಬಿಡುವುದನ್ನು ನಿರ್ಬಂಧಿಸಲು ಮತ್ತು ನಿಷೇಧಿಸಲು ನಿಯಮಾನುಸಾರ ಕ್ರಮವಹಿಸಿ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚಿಸಿದ್ದರು. ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದಂತೆಯೇ 'ಹೊರರಾಜ್ಯದ ದನಗಳನ್ನು ಮೇಯಿಸುವುದಕ್ಕೆ ಮಾತ್ರ ಈ ನಿಷೇಧ' ಎಂದು ಅಸಂಬದ್ಧವಾಗಿ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.

ಹೊರರಾಜ್ಯದ ದನಗಳನ್ನು ಮೇಯಿಸುವುದಕ್ಕೆ ಮಾತ್ರ ನಿಷೇಧ ಎಂದಾಗಿದ್ದರೆ, ಎಲ್ಲೆಲ್ಲಿ ಈ ರೀತಿ ಹೊರ ರಾಜ್ಯಗಳಿಂದ ದನಗಳನ್ನು ತಂದು ಮೇಯಿಸಲಾಗುತ್ತಿದೆಯೋ ಅಲ್ಲಿ ಅದನ್ನು ತಡೆಯಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಅಡ್ಡಿಯಾಗಿದ್ದಾದರೂ ಯಾರು? ಅಧಿಕಾರಿಗಳಿಗೆ ಇದನ್ನು ತಡೆಯಲು ಕಟ್ಟುನಿಟ್ಟಿನ ಸೂಚನೆ ನೀಡಿದ್ದರೆ ಸಾಕಿತ್ತಲ್ಲವೇ? ಅದನ್ನು ಬಿಟ್ಟು ರಾಜ್ಯದ ಎಲ್ಲ ಅರಣ್ಯ ಪ್ರದೇಶಗಳ ಒಳಗೆ 'ಸಾಕುಪ್ರಾಣಿಗಳನ್ನು ಮೇಯಲು ಬಿಡುವುದನ್ನು ನಿರ್ಬಂಧಿಸಲು ಮತ್ತು ನಿಷೇಧಿಸಲು ನಿಯಮಾನುಸಾರ ಕ್ರಮವಹಿಸಿ' ಎಂದು ಸೂಚನೆ ನೀಡಿದ್ದಾದರೂ ಏಕೆ?

ಅರಣ್ಯ ಸಚಿವರು ಹೀಗೆ ಅಸಂಬದ್ಧ ಹೇಳಿಕೆಗಳನ್ನು ನೀಡಿ, ಕಾಡಿನೊಂದಿಗೆ ಸಂಬಂಧ ಹೊಂದಿರುವ ರಾಜ್ಯದ ರೈತರನ್ನು, ಗಿರಿಜನರನ್ನು ಆತಂಕಕ್ಕೆ ತಳ್ಳಿರುವುದು ಇದು ಮೊದಲೇನೂ ಅಲ್ಲ. ಈ ಹಿಂದೆ ಕೂಡ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಇದೇ ರೀತಿಯ ಹೇಳಿಕೆ ನೀಡಿ, 2015ರ ನಂತರದ ಅರಣ್ಯ ಒತ್ತುವರಿ ತೆರವುಗೊಳಿಸಲಾಗುವುದು ಎಂದಿದ್ದರು. ಅದಕ್ಕಿಂತಲೂ ಮೊದಲು ಒತ್ತುವರಿ ಮಾಡಿಕೊಂಡವರನ್ನು ಸಕ್ರಮಗೊಳಿಸುವ ಅಧಿಕಾರವೇನೂ ಸಚಿವರಿಗಿರಲಿಲ್ಲ. ಒಟ್ಟಾರೆ ಒಂದು ಹೇಳಿಕೆ ನೀಡಿ ಸ್ಥಳೀಯರ ನಿದ್ರೆ ಕೆಡಿಸಿದ್ದರು.

ವಾಸ್ತವವಾಗಿ, ಅರಣ್ಯ ಪ್ರದೇಶದಲ್ಲಿ ಜಾನುವಾರುಗಳನ್ನು ನಿಷೇಧಿಸುವುದು ಅವೈಜ್ಞಾನಿಕ, ಅವಾಸ್ತವಿಕ ಹಾಗೂ ಕಾನೂನಿನ ಬೆಂಬಲವಿಲ್ಲದ ಕ್ರಮ. ಆದರೂ 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಈ ರೀತಿಯ ನಿಷೇಧಕ್ಕೆ ಅವಕಾಶವಿದೆ ಎಂದು ಸಚಿವರು ಹೇಳಿಕೆ ನೀಡಿ ದಿಕ್ಕುತಪ್ಪಿಸುವ ಕೆಲಸ ಮಾಡಿದ್ದಾರೆ. ಈ ಕಾಯ್ದೆಯಲ್ಲಿ ರಾಷ್ಟ್ರೀಯ ಉದ್ಯಾನ ಮತ್ತು ಅಭಯಾರಣ್ಯಗಳಲ್ಲಿ ಮಾತ್ರ ಜಾನುವಾರುಗಳನ್ನು ಮೇಯಿಸಲು ನಿಷೇಧ ಮತ್ತು ನಿರ್ಬಂಧಗಳಿವೆ. ಅರಣ್ಯಗಳಲ್ಲಿ ಜಾನುವಾರು ಮೇಯಿಸುವಂತಿಲ್ಲ ಎಂದು ಎಲ್ಲೂ ಹೇಳಿಲ್ಲ. ಆದರೆ, 2006ರ ಅರಣ್ಯ ಹಕ್ಕು ಕಾಯ್ದೆಯು ಬುಡಕಟ್ಟು ನಿವಾಸಿಗಳಿಗೆ, ಅರಣ್ಯವಾಸಿಗಳಿಗೆ ಈ ಅಧಿಸೂಚಿತ ಅರಣ್ಯಗಳಲ್ಲಿಯೂ ಜಾನುವಾರುಗಳನ್ನು ಸಾಕಲು, ಮೇಯಿಸಲು ಅವಕಾಶ ನೀಡಿದೆ. ಹೀಗಿರುವಾಗ ಸಚಿವರು 'ನಗರವಾಸಿ ಪರಿಸರವಾದಿ'ಗಳ ಮಾತು ಕೇಳಿಕೊಂಡು ಅರಣ್ಯದಲ್ಲಿ ಜಾನುವಾರು ಮೇಯಿಸುವಂತಿಲ್ಲ ಎಂದು ಆದೇಶ ಹೊರಡಿಸಿರುವುದು ಎಷ್ಟು ಸರಿ?

ಸಚಿವರ ಈ ಆದೇಶ ಕಾಡಿನೊಂದಿಗೆ ಬೆರೆತು ಬದುಕುವ ಮತ್ತು ಕಾಡಿನೊಂದಿಗೆ ಸಂಬಂಧ ಹೊಂದಿರುವ, ಹೈನುಗಾರಿಕೆಯೊಂದಿಗೆ ಬದುಕು ಕಟ್ಟಿಕೊಂಡಿರುವ ಸಾವಿರಾರು ರೈತ ಕುಟುಂಬಗಳ ಬದುಕನ್ನು ಅಭದ್ರಗೊಳಿಸುವಂತಹದ್ದು. ಮದ್ರಾಸ್ ಕೋರ್ಟ್ ಹೇಳಿದೆ, ಇನ್ನೆಲ್ಲಿಯದೋ ಕೋರ್ಟ್ ಹೇಳಿದೆ ಎಂದು ಮಾಹಿತಿ ಪಡೆದುಕೊಂಡು ತಮ್ಮ ಕ್ರಮ ಸಮರ್ಥಿಸಿಕೊಳ್ಳುವ ಸಚಿವರಿಗೆ ನಮ್ಮ ರಾಜ್ಯದಲ್ಲಿ ರೈತರು ಹೇಗೆ ಬದುಕು ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ಇಲ್ಲವೇ?

> ಪಶ್ಚಿಮಘಟ್ಟ ಪ್ರದೇಶದಲ್ಲಿ ಹೆದ್ದಾರಿ ಮಾಡಲು, ಅನಗತ್ಯವಾಗಿ ರಸ್ತೆ ವಿಸ್ತರಣೆ ಮಾಡಲು ಸಾವಿರಾರು ಮರಗಳನ್ನು ಕಡಿಯಲಾಗುತ್ತಿದೆ. ಇಂಧನ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿದ್ದರೂ, ಜೋಗದಲ್ಲಿನ ಶರಾವತಿ ಪಂಪ್ಡ್ ಸ್ಟೋರೇಜ್‌ಗೆ ನೂರಾರು ಎಕರೆ ಅರಣ್ಯವನ್ನು ಬಲಿ ಕೊಡಲಾಗುತ್ತಿದೆ; ಎಲ್ಲೆಂದರಲ್ಲಿ ರೆಸಾರ್ಟ್‌ಗಳಿಗೆ ಅವಕಾಶ ಮಾಡಿಕೊಡಲಾಗುತ್ತಿದೆ. ಹೀಗೆ ಹೇಳುತ್ತಾ ಹೋದರೆ, ಸರ್ಕಾರ ಹಿಂದೆ-ಮುಂದೆ ಯೋಚಿಸದೇ ಅರಣ್ಯನಾಶ ಮಾಡುತ್ತಿರುವುದಕ್ಕೆ ಲೆಕ್ಕವೇ ಇಲ್ಲ. ಇಂತಹ ಸರ್ಕಾರವು ಈಗ ಜಾನುವಾರುಗಳು ಮೇಯ್ದರೆ ಅರಣ್ಯನಾಶವಾಗುತ್ತದೆ ಎಂದು ಹೇಳುತ್ತಿರುವುದು ಹಾಸ್ಯಾಸ್ಪದ

ಅರಣ್ಯ ಸಚಿವರು ನೀಡಿರುವ ಆದೇಶ ಮತ್ತು ಅದನ್ನು ಸಮರ್ಥಿಸಿಕೊಳ್ಳುತ್ತಿರುವ ರೀತಿ ಅವರಿಗೆ ಅರಣ್ಯ ಸಂಪತ್ತಿನ ಬಗ್ಗೆಯಾಗಲೀ, ಜನ ಜೀವನದ ಬಗ್ಗೆಯಾಗಲೀ ತಳಮಟ್ಟದ ತಿಳಿವಳಿಕೆ ಇಲ್ಲ ಎಂಬುದನ್ನು ಎತ್ತಿತೋರಿಸುತ್ತಿದೆ. 'ಜಾನುವಾರುಗಳಿಂದ ಅರಣ್ಯ ನಾಶವಾಗುತ್ತದೆ' ಎಂದು 'ನಗರ ಪರಿಸರವಾದಿಗಳು' ಮಾತ್ರ ಊಹೆ ಮಾಡಲು ಸಾಧ್ಯ. ಇದಕ್ಕೆ ಯಾವ ಸಮರ್ಥನೆಯೂ ಇಲ್ಲ. ಸಚಿವರು ಕಾಡಿನೊಂದಿಗೆ ಬದುಕುತ್ತಿರುವ ಅರಣ್ಯವಾಸಿಗಳು ಮತ್ತು ರೈತರ ಬದುಕನ್ನು ಹತ್ತಿರದಿಂದ ನೋಡಿದ್ದಲ್ಲಿ, ಅರಣ್ಯ ಸಂಪತ್ತಿನ ಮತ್ತು ವನ್ಯಜೀವಿಗಳ ಅವನತಿಗೆ ಕಾರಣಗಳೇನು ಎಂಬುದನ್ನು ಸಮಗ್ರವಾಗಿ ಅಧ್ಯಯನ ನಡೆಸಿದ್ದಲ್ಲಿ ಈ ರೀತಿಯ ಕ್ರಮಕ್ಕೆ ಮುಂದಾಗುತ್ತಿರಲಿಲ್ಲ.

ಸಚಿವರ ಸಮರ್ಥನೆ ಎಷ್ಟು ಅಸಂಬದ್ಧವಾಗಿದೆ ಎಂದರೆ, ರೈತರಿಗೆ ಹೆಚ್ಚು ಹಾಲು ನೀಡುವ ಹೈಬ್ರೀಡ್ ಹಸುಗಳನ್ನು ಕೊಡಿಸಿ, ಜಾನುವಾರುಗಳು ಮೇಯಲು ಕಾಡಿಗೆ ಹೋಗುವುದನ್ನು ತಪ್ಪಿಸುತ್ತಾರಂತೆ. ನಮ್ಮ ದೇಶಿ ತಳಿಯ ಹಸುಗಳು ಕಾಡು ತಿಂದು, ನಾಡನ್ನೂ ಉದ್ಧಾರ ಮಾಡದ ಜಾತಿಯವು ಎಂದು ಸಚಿವರು ತೀರ್ಮಾನಿಸಿದಂತಿದೆ. ಎಲ್ಲರಿಗೂ ಗೊತ್ತಿರುವಂತೆ ಮಲೆನಾಡಿನಲ್ಲಿ ಗಿಡ್ಡ ತಳಿಯ ಹಸುಗಳನ್ನೇ ಸಾಕುವುದು ಹೆಚ್ಚು. ಇವು ಜಾಸ್ತಿಯೇನೂ ಹಾಲು ಕೊಡುವುದಿಲ್ಲ. ಆದರೆ, ಮಲೆನಾಡಿನ ಥಂಡಿಗೆ ಬರುವ ಕಾಯಿಲೆ-ಕಸಾಲೆಗಳನ್ನು ಇವು ಎದುರಿಸಬಲ್ಲವು. ಅವುಗಳನ್ನು ಕಟ್ಟಿ ಸಾಕಿದರೆ ಸಂತತಿ ಉಳಿಯುವುದಿಲ್ಲ. ಸಚಿವರ ಪ್ರಕಾರ, ನಾವು ಮಲೆನಾಡಿಗರು ಈ ಕಡಿಮೆ ಹಾಲು ಕೊಡುವ ತಳಿಯನ್ನು ಬಿಟ್ಟು, ಹೆಚ್ಚು ಹಾಲು ಕೊಡುವ ಜೆರ್ಸಿ ಹಸುಗಳನ್ನು ಸಾಕಬೇಕು. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರೂ ಆಗಿರುವ ಸಚಿವರು ಈ ಆದೇಶದ ಮೂಲಕ ಜಾನುವಾರುಗಳ ವೈವಿಧ್ಯವನ್ನೇ ನಾಶ ಮಾಡಲು ಮುಂದಾಗಿರುವುದು ದುರದೃಷ್ಟಕರ. ಹೋಗಲಿ, ಸಚಿವರು ಕಾರ್ಪೊರೇಟ್ ಕಂಪನಿಗಳು ನೀಡುವ ದುಡ್ಡು ತಂದು, ನಮಗೆಲ್ಲಾ ಜಾಸ್ತಿ ಹಾಲು ಕೊಡುವ ಹಸು ಕೊಡಿಸುತ್ತಾರೆ ಎಂದೇ ಇಟ್ಟುಕೊಳ್ಳೋಣ. ಅವರು ಹೇಳಿದ ಹಾಗೆ ನಾವು ಅವುಗಳನ್ನು ಕಟ್ಟಿಯೇ ಸಾಕುತ್ತೇವೆ. ಆದರೆ ಈ ಕುರಿ-ಮೇಕೆ ಸಾಕುವವರನ್ನು ಸಚಿವರು ಏನು ಮಾಡುತ್ತಾರೆ?

ಹಿಂದೆ 'ಕುದುರೆಮುಖ ರಾಷ್ಟ್ರೀಯ ಉದ್ಯಾನ' ಯೋಜನೆ ಘೋಷಣೆಯಾದಾಗಲೂ ಸ್ಥಳೀಯ ಅರಣ್ಯಾಧಿಕಾರಿಗಳು ಇದೇ ರೀತಿಯಾಗಿ ಕಾಡಿನಲ್ಲಿ ಜಾನುವಾರು ಮೇಯಿಸುವಂತಿಲ್ಲ ಎಂದು ಕರಪತ್ರಗಳನ್ನು ಹಂಚಿ, ಸ್ಥಳೀಯರ ಆಕ್ರೋಶಕ್ಕೆ ಗುರಿಯಾಗಿದ್ದರು. ಈಗ ಸಚಿವರು ಇದೇ ರೀತಿಯಾಗಿ ವರ್ತಿಸಿದ್ದಾರೆ. ಜಾನುವಾರುಗಳಿಂದ ಯಾವ ಪ್ರಮಾಣದಲ್ಲಿ ನಮ್ಮ ಅರಣ್ಯ ಸಂಪತ್ತು ನಾಶವಾಗುತ್ತಿದೆ, ಈಗಾಗಲೇ ಎಷ್ಟು ನಾಶವಾಗಿದೆ ಎಂಬ ಬಗ್ಗೆ ಸರ್ಕಾರದ ಬಳಿ ವರದಿಗಳೇನಾದರೂ ಇದ್ದರೆ ಅದನ್ನು ಬಹಿರಂಗಪಡಿಸಿ, ಚರ್ಚೆಗೆ ಅವಕಾಶ ಮಾಡಿಕೊಡಲಿ. ಅದನ್ನು ಬಿಟ್ಟು ಹೀಗೆ ಏಕಾಏಕಿ ನಿಷೇಧ ಹೇರುವುದು ಪ್ರಜಾತಾಂತ್ರಿಕ ಕ್ರಮ ಅಲ್ಲ.

ಪಶ್ಚಿಮಘಟ್ಟ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ ಮಾಡಲು, ಅನಗತ್ಯವಾಗಿ ರಸ್ತೆ ವಿಸ್ತರಣೆ ಮಾಡಲು ಸಾವಿರಾರು ಮರಗಳನ್ನು ಕಡಿಯಲಾಗುತ್ತಿದೆ. ಇಂಧನ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿದ್ದರೂ ಲೆಕ್ಕಿಸದೆ, ಜೋಗದಲ್ಲಿನ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ನೂರಾರು ಎಕರೆ ಅರಣ್ಯವನ್ನು ಬಲಿ ಕೊಡಲಾಗುತ್ತಿದೆ; ಎಲ್ಲೆಂದರಲ್ಲಿ ರೆಸಾರ್ಟ್‌ಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಟ್ಟು, ಅರಣ್ಯ ನಾಶ ಮಾಡಲಾಗುತ್ತಿದೆ. ಜತೆಗೆ, ಹೊಸ ಹೊಸ ಅಣೆಕಟ್ಟುಗಳನ್ನು ನಿರ್ಮಿಸಿ, ಅರಣ್ಯ ಮುಳುಗಿಸುವ ಯೋಚನೆಯೂ ಸರ್ಕಾರದ ಮುಂದಿದೆ. ಹೀಗೆ ಹೇಳುತ್ತಾ ಹೋದರೆ, ಸರ್ಕಾರ ಹಿಂದೆ-ಮುಂದೆ ಯೋಚಿಸದೇ ಅರಣ್ಯ ನಾಶ ಮಾಡುತ್ತಿರುವುದಕ್ಕೆ ಲೆಕ್ಕವೇ ಇಲ್ಲ. ಇಂತಹ ಸರ್ಕಾರವು ಈಗ ಜಾನುವಾರುಗಳು ಮೇಯ್ದರೆ ಅರಣ್ಯ ನಾಶವಾಗುತ್ತದೆ ಎಂದು ಹೇಳುತ್ತಿರುವುದು ಹಾಸ್ಯಾಸ್ಪದವಾಗಿದೆ.

ಕಾಡಿನ ಆಹಾರ ಸರಪಣಿಯಲ್ಲಿ ಯಾವುದು ಹೆಚ್ಚಾದರೂ ಒಳ್ಳೆಯದಲ್ಲ. ಜಿಂಕೆಗಳ ಹಿಂಡು ಜಾಸ್ತಿಯಾದರೆ, ಹುಲ್ಲಿರಲಿ, ಅದರ ಬೇರೂ ಉಳಿಯುವುದಿಲ್ಲ. ಈಗ ನಮ್ಮ ಅರಣ್ಯ ಇಲಾಖೆ ಅನುಸರಿಸುತ್ತಿರುವ ಪಾಶ್ಚಿಮಾತ್ಯ ಶೈಲಿಯ ಅರಣ್ಯ ಸಂರಕ್ಷಣಾ ಕ್ರಮಗಳಿಂದ ಕಾಡಿನಂಚಿನಲ್ಲಿ ಜನರು, ರೈತರು ಬದುಕಲು ಸಾಧ್ಯವೇ ಆಗದಂತಹ ಸ್ಥಿತಿ ನಿರ್ಮಾಣವಾಗುತ್ತಿದ. ಆನೆಗಳ ವಾಸವೇ ಇಲ್ಲದ ನಮ್ಮ ಮಲೆನಾಡಿನಲ್ಲಿ ಈ ವರ್ಷ ಆನೆ ದಾಳಿಗೆ ನಾಲ್ವರು ಬಲಿಯಾಗಿದ್ದಾರೆ. ವನ್ಯಜೀವಿ ಮತ್ತು ಮನುಷ್ಯರ ನಡುವಿನ ಸಂಘರ್ಷ ದಿನೇ ದಿನೇ ತಾರಕಕ್ಕೇರುತ್ತಿದೆ. ಇದನ್ನು ಬಗೆಹರಿಸುವ ದಿಸೆಯಲ್ಲಿ ಯೋಚಿಸಬೇಕಾಗಿದ್ದ ಅರಣ್ಯ ಇಲಾಖೆ, ಜಾನುವಾರುಗಳನ್ನು ಮೇಯಿಸಬೇಡಿ, ಏಡಿ ಹಿಡಿಯಬೇಡಿ, ಮಂಗ ಓಡಿಸಬೇಡಿ ಎಂದುಕೊಂಡು ಕುಳಿತಿದೆ.

ಒಟ್ಟಾರೆಯಾಗಿ ಸಚಿವರು ಈ ಆದೇಶದ ಮೂಲಕ, ಅರಣ್ಯವಾಸಿಗಳಿಗೆ, ಅರಣ್ಯದಂಚಿನ ರೈತರಿಗೆ ಕಿರುಕುಳ ನೀಡುತ್ತಿದ್ದ ಅರಣ್ಯ ಇಲಾಖೆಯ ಸಿಬ್ಬಂದಿಗೆ ಮತ್ತೊಂದು ಅಸ್ತ್ರವನ್ನು ನೀಡಿದ್ದಾರೆ, ಅಷ್ಟೇ. ಜಗತ್ತಿನ ಯಾವ ಮೂಲೆಯಲ್ಲಿಯೂ ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆಯದೇ, ಅವರ ಬೆಂಬಲವಿಲ್ಲದೇ ಯಾವುದೇ ಅರಣ್ಯ ಸಂರಕ್ಷಣಾ ಯೋಜನೆ ಯಶಸ್ವಿಯಾಗಿಲ್ಲ. ಅರಣ್ಯ ಸಂರಕ್ಷಣೆ ಎಂಬುದು ಇಲಾಖೆಯ ನಾಲ್ಕಾರು ಅಧಿಕಾರಿಗಳು, ಬೆರಳೆಣಿಕೆಯಷ್ಟಿರುವ ಸಿಬ್ಬಂದಿ ಮಾತ್ರ ಮಾಡುವ ಕೆಲಸವಲ್ಲ. ಇಂದು ಇಷ್ಟಾದರೂ ಅರಣ್ಯವಿದೆ ಎಂದರೆ ಅದಕ್ಕೆ ಸ್ಥಳೀಯರೇ ಕಾರಣ ಎಂಬುದನ್ನು ಸಚಿವರು ಮರೆಯಲೇಬಾರದು. ಹೊರಗಿನವರು ಬಂದು ಕಾಡು ಕಡಿಯದಂತೆ, ಕಾಡಿಗೆ ಬೆಂಕಿ ಬೀಳದಂತೆ ಕಾದುಕೊಂಡೇ ಬಂದಿರುವ, ಈಗಾಗಲೇ ಕಾಡು ಪ್ರಾಣಿಗಳ ದಾಳಿಯಿಂದ ಕಂಗೆಟ್ಟಿರುವ ರೈತಾಪಿ ವರ್ಗಕ್ಕೆ ಸರ್ಕಾರದ ತೀರ್ಮಾನದಿಂದ ಇನ್ನಷ್ಟು ಕಿರುಕುಳ ನೀಡಿದಂತಾಗಲಿದೆ.

ಸಚಿವರು ಈ ಆದೇಶ ಹೊರಡಿಸಿರುವುದು, ಅದನ್ನು ಸಮರ್ಥಿಸಿಕೊಳ್ಳುವಾಗ ಮದ್ರಾಸ್ ಹೈಕೋರ್ಟ್ ತೀರ್ಪನ್ನು ಉಲ್ಲೇಖಿಸಿದ್ದು ಮತ್ತು 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯನ್ನು ತಪ್ಪಾಗಿ ಪ್ರಸ್ತಾಪಿಸಿದ್ದನ್ನು ನೋಡಿದರೆ, ಇದರ ಹಿಂದೆ ಅರಣ್ಯದೊಂದಿಗೆ ಸಹಬಾಳ್ವೆ ನಡೆಸುತ್ತಿರುವ ಸಂಸ್ಕೃತಿಯೊಂದನ್ನು ನಾಶಮಾಡುವ ಹುನ್ನಾರವಿರುವುದು ಸ್ಪಷ್ಟವಾಗುತ್ತಿದೆ.

ಮಲೆನಾಡಿಗರ ದುರದೃಷ್ಟವೋ, ದುರ್ದೈವವೋ ಗೊತ್ತಿಲ್ಲ; 80ರ ದಶಕದ ನಂತರ ಮಲೆನಾಡು ಭಾಗದವರು ಯಾರೂ ಅರಣ್ಯ ಸಚಿವರಾಗಿಲ್ಲ. ಹೀಗಾಗಿ ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ತಲೆ-ಬುಡವಿಲ್ಲದ ಯೋಜನೆಗಳು, ಕ್ರಮಗಳು ಜಾರಿಯಾಗಿದ್ದೇ ಹೆಚ್ಚು. ಅರಣ್ಯ ಮತ್ತು ಸ್ಥಳೀಯ ಜನರನ್ನು ಬೇರೆ ಬೇರೆಯಾಗಿ ನೋಡಿ, ಬೇರೆ ಬೇರೆಯಾಗಿಯೇ ಅಭಿವೃದ್ಧಿ ಕ್ರಮಗಳನ್ನು ಜಾರಿಗೆ ತರುತ್ತಿರುವುದರಿಂದ ಅರಣ್ಯದೊಂದಿಗೆ ಒಂದಾಗಿ ಬದುಕುತ್ತಿದ್ದ ಜನರು ಈಗ ಸಂಘರ್ಷ ಮಾಡಿಕೊಂಡು ಬದುಕುವಂತಾಗಿದೆ. ಇದು ಹೀಗೆಯೇ ಮುಂದುವರಿದರೆ ಇಡೀ ಪಶ್ಚಿಮಘಟ್ಟ ಪ್ರದೇಶ ರೈತರಿಲ್ಲದ, ಸ್ಥಳೀಯ ಜನಜೀವನ, ಸಂಸ್ಕೃತಿ ಇಲ್ಲದ, ಪ್ರವಾಸಿಗರಿಂದ ಮಾತ್ರ ತುಂಬಿ ತುಳುಕುವ ಪ್ರದೇಶವಾಗುವ ದಿನ ದೂರವಿಲ್ಲ.


ಲೇಖಕ: ಪರಿಸರ ಹೋರಾಟಗಾರ

> 1980ರ ಅರಣ್ಯ ಸಂರಕ್ಷಣಾ ಕಾಯ್ದೆಯಲ್ಲಿ ಒಂದು ಎಕರೆ ಜಾಗದಲ್ಲಿ ಒಂಬತ್ತು ಮರಗಳಿದ್ದರೂ (ಒಂದು ಹೆಕ್ಟೇರ್‌ನಲ್ಲಿ 25 ಮರ) ಅದು 'ಅರಣ್ಯ' ಎಂದು ಭಾಷ್ಯ ಬರೆಯಲಾಗಿದೆ. ಇದಕ್ಕೆ ಸುಪ್ರೀಂ ಕೋರ್ಟ್ ಕೂಡ ಒಪ್ಪಿಗೆ ನೀಡಿದೆ. ಇದರಿಂದಾಗಿ ಮಲೆನಾಡಿನ ಮತ್ತು ಅರೆಮಲೆನಾಡಿನ ಯಾವ ಜಾಗವನ್ನಾದರೂ ಅರಣ್ಯ ಎಂದು ಪರಿಗಣಿಸಬಹುದು. ಹೀಗಾದರೆ ಇನ್ನು ಮುಂದೆ ಕುರಿಗಾಹಿಗಳು ಕುರಿ-ಮೇಕೆಗಳನ್ನು ಎಲ್ಲಿ ಮೇಯಿಸಬೇಕು? ಈ ಆದೇಶ ಕುರಿಗಾಹಿ ಜನಾಂಗವನ್ನೇ ನಾಶ ಮಾಡಬಹುದು ಎಂಬ ಅರಿವಾದರೂ ಸಚಿವರಿಗಿದೆಯೇ? 'ಮೈಸೂರು ಹುಲಿ' ಖ್ಯಾತಿಯ ಟಿಪ್ಪು ಸುಲ್ತಾನನ ಕಾಲದಲ್ಲಿ ಹಳ್ಳಿಕಾರ್ ಹಸು ತಳಿಯ ರಕ್ಷಣೆಗಾಗಿ ಸಾವಿರಾರು ಎಕರೆ ಹುಲ್ಲುಗಾವಲನ್ನು ಮೀಸಲಿಡಲಾಗಿತ್ತು. ಈಗ ನೋಡಿದರೆ ಜಾನುವಾರುಗಳ ಓಡಾಟವನ್ನೇ ನಿಷೇಧಿಸಲು ಸಚಿವರು ಮುಂದಾಗಿದ್ದಾರೆ. ಮಹಾನಗರ ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದೆ ಎಂದು ವಾಹನಗಳನ್ನೇ ನಿಷೇಧಿಸಲಾಗುತ್ತದೆಯೇ?



ವನ್ಯಜೀವಿ ಸಂರಕ್ಷಣೆಗೆ ಉಳಿಯಬೇಕು ಕಾಡು

• ಈಶ್ವರ ಬಿ ಖಂಡ್ರೆ



ಕಾಡು ಎಂಬ ಪದಕ್ಕೆ ಅಟವಿ, ಅರಣ್ಯ, ವನ, ವಿಪಿನ, ಕಾನನ ಎಂಬಿತ್ಯಾದಿ ಹಲವು ಅರ್ಥಗಳಿವೆ. ಗಿಡ, ಮರ, ಬೆಟ್ಟ, ಗುಡ್ಡ, ಗುಹೆ, ನದಿ, ಝರಿ, ಕಣಿವೆಗಳನ್ನು ಒಳಗೊಂಡ ಕಾಡು-ಸಸ್ಯಸಂಕುಲ, ಕೀಟ ಸಂಕುಲ, ವನ್ಯಜೀವಿ ಸಂಕುಲದ ನೆಲೆವೀಡು. ಮಾನವನ ಅತಿಯಾದ ಹಸ್ತಕ್ಷೇಪ ಇಲ್ಲದಿದ್ದರೆ ಕಾಡು ಸಮೃದ್ಧವಾಗಿ ಬೆಳೆಯುತ್ತದೆ. ಹಸಿರು ಹೊದಿಕೆ ಹೆಚ್ಚುತ್ತದೆ. ಸಮೃದ್ಧವಾದ ಕಾಡುಗಳು ಮಾನವನ ಆರೋಗ್ಯಪೂರ್ಣ ಜೀವನಕ್ಕೆ ಸೋಪಾನ. ಪ್ರಾಣವಾಯು ನೀಡುವ ವನ ಇದ್ದರೆ ಮಾತ್ರವೇ ಮನುಷ್ಯನ ಜೀವನ ಎಂಬುದು ನಿರ್ವಿವಾದ. ಅಮೆಜಾನ್ ಮಳೆ ಕಾಡುಗಳನ್ನು ವಿಶ್ವದ ಆಮ್ಲಜನಕದ ಕಣಜ ಎಂದು ಕರೆಯುತ್ತಾರೆ. ಜಗತ್ತಿನ ಶೇ 30ರಷ್ಟು ಜೀವವೈವಿಧ್ಯವಿರುವ ಅಮೆಜಾನ್ ಕಾಡುಗಳು ವಿಶ್ವದ ಶೇ 20ರಷ್ಟು ಆಮ್ಲಜನಕ ಉತ್ಪಾದಿಸುತ್ತವೆ. ಕಾಡು ನಾಶವಾದರೆ ಪರೋಕ್ಷವಾಗಿ ನಾಡೇ ನಾಶವಾದಂತೆ. ಕಾಡು ನಾಶವಾದರೆ ಮನುಷ್ಯನ ನಾಶ ನಿಶ್ಚಿತ. ಹೀಗಾಗಿಯೇ ಭೌಗೋಳಿಕ ಪ್ರದೇಶದ ಶೇ 33ರಷ್ಟು ಹಸಿರು ಹೊದಿಕೆ ಇರಬೇಕು ಎಂಬುದು ಜಾಗತಿಕ ಮಾನದಂಡ. ಕರ್ನಾಟಕದಲ್ಲಿ ಸುಮಾರು ಶೇ 21ರಷ್ಟು ಹಸಿರು ಹೊದಿಕೆ ಇದೆ. ಪ್ರಸಕ್ತ ಕಾಲಘಟ್ಟದಲ್ಲಿ ಅರಣ್ಯ ವಿಸ್ತರಣೆ ಅಸಾಧ್ಯ. ಹೀಗಾಗಿ, ಇರುವ ಅರಣ್ಯ ನಾಶವಾಗದಂತೆ, ಒತ್ತುವರಿ ಆಗದಂತೆ ರಕ್ಷಿಸುವ ಹೊಣೆ ಸರ್ಕಾರದ್ದಷ್ಟೇ ಅಲ್ಲ, ಪ್ರತಿಯೊಬ್ಬ ನಾಗರಿಕನದೂ ಆಗಿದೆ.

ನಮ್ಮ ಪೂರ್ವಿಕರು ಊರಿನ ಮಧ್ಯೆ ಅತಿ ಹೆಚ್ಚು ಆಮ್ಲಜನಕ ನೀಡುವ ಅರಳಿಮರ ನೆಟ್ಟು ಅದಕ್ಕೆ ಒಂದು ಕಟ್ಟೆ ಕಟ್ಟಿ ಪಕ್ಕದಲ್ಲೊಂದು ಬೇವಿನ ಮರ ನೆಟ್ಟು, ಅಶ್ವತ್ಥಕಟ್ಟೆ ಎಂದು ಪೂಜಿಸುತ್ತಿದ್ದರು. ವನಮಹೋತ್ಸವ ಆಚರಿಸುತ್ತಿದ್ದರು. ದೇವರ ಕಾಡು ಎಂದು ಹೆಸರಿಟ್ಟು, ಬೆಟ್ಟ, ಗುಡ್ಡಗಳ ಮೇಲೆ ದೇವಾಲಯಗಳನ್ನು ಕಟ್ಟಿ ಪ್ರಕೃತಿ ಪರಿಸರ ನಾಶವಾಗದಂತೆ ರಕ್ಷಿಸಿದ್ದರು. ಇದು ನಮ್ಮ ಪೂರ್ವಿಕರು ಸಹಸ್ರಾರು ವರ್ಷಗಳ ಹಿಂದೆ ತಾವೇ ರೂಪಿಸಿಕೊಂಡ ಸಂವಿಧಾನ. ಇದನ್ನೇ ನಮ್ಮ ಪವಿತ್ರ ಸಂವಿಧಾನದಲ್ಲೂ ಉಲ್ಲೇಖಿಸಲಾಗಿದೆ: 'ಭಾರತದ ಪ್ರಜೆಯಾಗಿ ನಾನು ಅರಣ್ಯ, ಸರೋವರ, ನದಿ, ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುತ್ತೇನೆ ಮತ್ತು ಸುಧಾರಿಸುತ್ತೇನೆ. ಭಾರತದ ಸಂವಿಧಾನದ 51 (ಎ) ಕಲಂನಲ್ಲಿರುವಂತೆ ನಾನು ಜೀವಂತ ಜೀವಿಗಳ ಬಗ್ಗೆ ಸಹಾನುಭೂತಿ ಹೊಂದಿರುತ್ತೇನೆ'. ಇದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಕರ್ತವ್ಯವನ್ನು ನೆನಪಿಸುತ್ತದೆ. ಗಾಂಧೀಜಿಯವರು 'ಪ್ರಕೃತಿ, ಪರಿಸರ ಇರುವುದು ಮನುಷ್ಯನ ಅವಶ್ಯಕತೆ ಪೂರೈಸುವುದಕ್ಕೇ ಹೊರತು, ದುರಾಸೆ ಪೂರೈಸುವುದಕ್ಕಲ್ಲ' ಎಂದು ಹೇಳಿದ್ದಾರೆ. ಆದರೆ, ಇಂದು ಮಾನವನ ಅತಿಯಾಸೆಗೆ ಅವ್ಯಾಹತವಾಗಿ ನೈಸರ್ಗಿಕ ಸಂಪನ್ಮೂಲದ ದುರ್ಬಳಕೆ ಆಗುತ್ತಿದೆ. ನಾವು ಪ್ರಕೃತಿದತ್ತವಾದ ಸಂಪನ್ಮೂಲವನ್ನು ಹಿತಮಿತವಾಗಿ ಬಳಕೆ ಮಾಡಬೇಕು. ಮರುಬಳಕೆಗೂ ಒತ್ತು ನೀಡಬೇಕು. ಆದರೆ, ಈ ಪರಿವೆಯೇ ಇಲ್ಲದೆ ನಾವು ವರ್ತಿಸುತ್ತಿದ್ದೇವೆ ಎಂಬುದು ನೋವಿನ ಸಂಗತಿ.

ಹುಲಿ ಯೋಜನೆ ಜಾರಿಗೆ ಬಂದು 50 ವರ್ಷಗಳಾಗಿವೆ. ಈ ಯೋಜನೆ ಆರಂಭವಾದಾಗ ದೇಶದಲ್ಲಿದ್ದ ಹುಲಿಗಳ ಸಂಖ್ಯೆ 1,827 ಮಾತ್ರ. 2022ರ ಗಣತಿಯಂತೆ ಈಗ ಕರ್ನಾಟಕದಲ್ಲಿ 563 ಹುಲಿಗಳಿವೆ. ದೇಶದಲ್ಲಿ ಒಟ್ಟು 3,682 ಹುಲಿಗಳಿವೆ. ಆದರೆ, ಇತ್ತೀಚೆಗೆ ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಕಾನನ ಪ್ರದೇಶದ ಹೂಗ್ಯಂನಲ್ಲಿ ಒಂದು ತಾಯಿ ಹುಲಿ ಮತ್ತು ನಾಲ್ಕು ಮರಿ ಹುಲಿಗಳ ದಾರುಣವಾಗಿ ಸತ್ತದ್ದು ಹೃದಯ ವಿದ್ರಾವಕ. ವನ್ಯಜೀವಿಯೊಂದು ತಮ್ಮ ದನವನ್ನು ತಿಂದಿದೆ ಎಂಬ ಕಾರಣದಿಂದ ಆಕ್ರೋಶಗೊಂಡ ಕೆಲವರು ಸತ್ತ ದನಕ್ಕೆ ಕಾರ್ಬೋಫ್ಯುರಾನ್ ಕೀಟನಾಶಕವನ್ನು ಸಿಂಪಡಿಸಿದ್ದರು. ವಿಷಲೇಪಿತ ಮೃತ ದನವನ್ನು ತಿಂದ ಐದು ಹುಲಿಗಳು ಸಾವಿಗೀಡಾಗಿದ್ದವು. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಕಾಡಿನಲ್ಲಿ ದನಗಳನ್ನು ಮೇಯಿಸುವ ವಿಚಾರ ಈ ಪ್ರಕರಣದಿಂದ ಮುನ್ನೆಲೆಗೆ ಬಂದಿದೆ. ಮಲೆಮಹದೇಶ್ವರ ವನ್ಯಜೀವಿಧಾಮದ ವ್ಯಾಪ್ತಿಯಲ್ಲಿ 33,043 ಜಾನುವಾರುಗಳು ಇವೆ ಎಂದು ಪಶುಸಂಗೋಪನಾ ಇಲಾಖೆಯ ಅಂಕಿ ಅಂಶಗಳು ಹೇಳುತ್ತವೆ. ಇವುಗಳ ಪೈಕಿ ಕೆಂದುಬಟ್ಟ, ಹಳ್ಳಿಕಾರ್, ಬರಗೂರು, ಹುಲಿಕಲ್ ಜಾತಿಯ ದನಗಳೇ ಹೆಚ್ಚು.

ಸಾಕಿದ ಜಾನುವಾರುಗಳನ್ನು ಅರಣ್ಯದಲ್ಲಿ ಮೇಯಿಸುವುದನ್ನು ನಿಷೇಧಿಸಿ ಮದ್ರಾಸ್ ಹೈಕೋರ್ಟ್ 2022ರಲ್ಲಿ ಆದೇಶ ನೀಡಿದ ಬಳಿಕ, ತಮಿಳುನಾಡಿನ ಬರಗೂರು ಜಾತಿ ಜಾನುವಾರುಗಳನ್ನು ನಮ್ಮ ಕಾಡಿನಲ್ಲಿ ಮೇಯಿಸುವ ದೊಡ್ಡ ಜಾಲವೇ ಹುಟ್ಟಿಕೊಂಡಿದೆ. ಕಾಡಿನಲ್ಲಿ ಸಾವಿರಾರು ಸಂಖ್ಯೆಯ ಜಾನುವಾರುಗಳನ್ನು ಮೇಯಲು ಬಿಡುವುದರಿಂದ ಕಾಡಿನ ದಟ್ಟಣೆ ಕ್ಷೀಣಿಸುತ್ತಿದೆ, ಮಣ್ಣಿನ ಸವಕಳಿ ಉಂಟಾಗುತ್ತಿದೆ. ಇದು ಜೀವವೈವಿಧ್ಯವನ್ನು ನಾಶ ಮಾಡುತ್ತದೆ. ಕಾಡುಗಳಲ್ಲಿ ಅತಿಯಾಗಿ ದನ, ಕರು, ಎಮ್ಮೆ, ಕುರಿ, ಮೇಕೆ ಇತ್ಯಾದಿ ಸಾಕುಪ್ರಾಣಿಗಳನ್ನು ಮೇಯಿಸುವುದರಿಂದ ಸ್ವಾಭಾವಿಕವಾದ ಪರಿಸರ ವ್ಯವಸ್ಥೆಗೆ ಅಡ್ಡಿಯಾಗಿ, ಮಾನವ-ವನ್ಯಜೀವಿ ಸಂಘರ್ಷ ಹೆಚ್ಚುತ್ತದೆ ಎಂಬುದು ತಜ್ಞರ ಅಭಿಪ್ರಾಯ. ಸಾವಿರಾರು ಸಂಖ್ಯೆಯಲ್ಲಿ ಜಾನುವಾರುಗಳನ್ನು ಕಾಡಿಗೆ ಮೇಯಲು ಬಿಟ್ಟರೆ ಅವು ಕಾಡಿನಲ್ಲಿನ ಸಮೃದ್ಧ ಹುಲ್ಲು, ಗರಿಕೆ, ಆಗಷ್ಟೇ ಮೊಳೆತ ಸಸ್ಯಗಳನ್ನು ತಿನ್ನುವ ಕಾರಣ, ಹೊಸ ಗಿಡಗಳು ಬೆಳೆಯದೆ ಸೆನ್ನಾ, ಲಂಟಾನದಂತಹ ಕಳೆಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಅರಣ್ಯ ಪುನರುಜ್ಜೀವನ, ವೃಕ್ಷ ಸಂವರ್ಧನೆ ಆಗದಿದ್ದಾಗ, ಕಾಡಿನಲ್ಲಿ ಹರಿಯುವ ನದಿಗಳ ಮೇಲೂ ಪ್ರಭಾವ ಬೀರುತ್ತದೆ. ಇದು ಕಾಡಿನಲ್ಲಿರುವ ಸಸ್ಯಾಹಾರಿ ವನ್ಯಜೀವಿಗಳು ಅಂದರೆ ಆನೆ, ಕಡವೆ, ಜಿಂಕೆ, ಕಾಡೆಮ್ಮೆ, ಕಾಡುಕೋಣ ಮೊದಲಾದ ಪ್ರಾಣಿಗಳಿಗೆ ಆಹಾರದ ಕೊರತೆ ಉಂಟಾಗುವಂತೆ ಮಾಡುತ್ತದೆ. ಜೊತೆಗೆ ಎಲ್ಲ ಪ್ರಾಣಿಗಳೂ ನೀರು ಅರಸಿ ನಾಡಿಗೆ ಬರುವಂತೆ ಮಾಡುತ್ತದೆ. ಸಾವಿರಾರು ಸಂಖ್ಯೆಯಲ್ಲಿ ಜಾನುವಾರುಗಳು ಕಾಡಿನಲ್ಲಿ ಓಡಾಡಿದರೆ, ಅವು ಸಂಚರಿಸಿದ ಪ್ರದೇಶದಲ್ಲಿ ಅವುಗಳ ಗೊರಸುಗಳ ತುಳಿತದಿಂದ ನೆಲ ಸಂಕುಚಿತಗೊಳ್ಳುತ್ತದೆ. ಅಲ್ಲಿ ಭೂಮಿಗೆ ನೀರು ಇಳಿಯದೆ ಗಟ್ಟಿಯಾಗಿ, ಆ ಪ್ರದೇಶದಲ್ಲಿ ಯಾವುದೇ ಗಿಡ ಮರ ಬೆಳೆಯದಂತೆ ಆಗುತ್ತದೆ. ವಿಶೇಷವಾಗಿ ಇಳಿಜಾರುಗಳಲ್ಲಿ ಸವೆತಕ್ಕೆ ಕಾರಣವಾಗುತ್ತದೆ ಎಂಬುದು ತಜ್ಞರ ಅಭಿಪ್ರಾಯ.


ಜಾನುವಾರುಗಳಿಗೆ ಕಾಲುಬಾಯಿ ರೋಗ, ಚರ್ಮಗಂಟು ಅಥವಾ ಬಾವು (ಲಂಪಿ ಸ್ಕಿನ್), ನೆರಡಿ (ಆಂಥ್ರಾಕ್ಸ್) ಮೊದಲಾದ ಸಾಂಕ್ರಾಮಿಕ ಕಾಯಿಲೆಗಳು ಬರುತ್ತವೆ. ಸಾಕುಪ್ರಾಣಿಗಳಿಗೆ ಕಾಯಿಲೆ ಬಂದರೆ, ಪಶುವೈದ್ಯರಿಂದ ಚಿಕಿತ್ಸೆ ಕೊಡಿಸಬಹುದು. ಆದರೆ, ಈ ಕಾಯಿಲೆಗಳಿಂದ ಬಳಲುತ್ತಿರುವ ಜಾನುವಾರುಗಳು ಕಾಡಿನಲ್ಲಿ ಮೇಯುವ, ಅಲ್ಲಿನ ಕೆರೆ, ಗುಂಡಿಗಳಲ್ಲಿ ನೀರು ಕುಡಿಯುವ ಕಾರಣ, ಅವುಗಳ ಸೋಂಕು ವನ್ಯಜೀವಿಗಳಿಗೆ ಹರಡಿದರೆ, ಕಾಡಿನ ಪ್ರಾಣಿಗಳಿಗೆ ಚಿಕಿತ್ಸೆ ಕೊಡಿಸಲು ಸಾಧ್ಯವೇ ಇಲ್ಲ ಎಂದು ತಜ್ಞರು ಹೇಳುತ್ತಾರೆ. ಕಾಡಿನಲ್ಲಿಯೇ ಜೀವಿಸುವ ಆದಿವಾಸಿಗಳು ತಮ್ಮ ಅಗತ್ಯಕ್ಕೆ ಕೆಲವು ಹಸು, ಕರು, ಕುರಿ, ಮೇಕೆಗಳನ್ನು ಇಟ್ಟುಕೊಳ್ಳುತ್ತಾರೆ. ಅವು ನಾಡಿಗೆ ಬರುವುದಿಲ್ಲ. ಹೀಗಾಗಿ ಅವುಗಳಿಂದ ವನ್ಯಜೀವಿಗಳಿಗೆ ಸಾಂಕ್ರಾಮಿಕ ರೋಗ ಹರಡುವುದಿಲ್ಲ. ಆದರೆ ನೂರಾರು ಕಿ.ಮೀ ದೂರದಿಂದ ಸಾವಿರಾರು ದನಕರುಗಳನ್ನು ತಂದು ಕಾಡಿನಲ್ಲಿ ಬಿಟ್ಟಾಗ ಸಾಂಕ್ರಾಮಿಕ ರೋಗ ವನ್ಯಜೀವಿಗಳಿಗೂ ಬರುವ ಅಪಾಯ ಇದೆ. ಸಾಕು ಪ್ರಾಣಿಗಳಿಗೆ ಲಸಿಕೆ ಹಾಕಿಸಬಹುದು, ಚಿಕಿತ್ಸೆ ಕೊಡಿಸಬಹುದು. ಆದರೆ, ವನ್ಯಜೀವಿಗಳಿಗೆ ಚಿಕಿತ್ಸೆ ಕೊಡುವುದಾದರೂ ಹೇಗೆ? ಸಾವಿರಾರು ದನಕರುಗಳನ್ನು ತಿಂಗಳುಗಟ್ಟಲೆ ಕಾಡಿನಲ್ಲಿ ಮೇಯಿಸುವುದರಿಂದ ಕಾಡಿನಲ್ಲಿರುವ ನಿರ್ದಿಷ್ಟ ಹುಲ್ಲುಗಾವಲುಗಳು ಕೆಲವೇ ದಿನಗಳಲ್ಲಿ ನಾಶವಾಗುತ್ತವೆ. ಮಣ್ಣು ಸಂಕುಚಿತವಾಗಿ ವನಸಮೃದ್ಧಿ ಬರಡಾಗುತ್ತದೆ. ಹೀಗಾಗಿಯೇ ಸ್ಥಳೀಯರಿಗೆ ಮತ್ತು ಅರಣ್ಯವಾಸಿಗಳಿಗೆ ತೊಂದರೆ ಆಗದ ರೀತಿಯಲ್ಲಿ ಹೊರರಾಜ್ಯದಿಂದ ತಂದು ನಮ್ಮ ಕಾಡಿನಲ್ಲಿ ಮೇಯಿಸುವ ಜಾನುವಾರುಗಳಿಗೆ ಕಡಿವಾಣ ಹಾಕಲು ಸರ್ಕಾರ ಈ ತೀರ್ಮಾನ ಕೈಗೊಂಡಿದೆ.

ಲೇಖಕ: ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

> ಅರಣ್ಯದಲ್ಲಿ ಜಾನುವಾರುಗಳನ್ನು ಮೇಯಿಸುವುದಕ್ಕೆ ನಿಷೇಧ ಹೇರಿ ಮದ್ರಾಸ್ ಹೈಕೋರ್ಟ್ 2022ರಲ್ಲಿ ಆದೇಶ ನೀಡಿದ ಬಳಿಕ, ತಮಿಳುನಾಡಿನ ಬರಗೂರು ಜಾತಿಯ ಜಾನುವಾರುಗಳನ್ನು ನಮ್ಮ ಕಾಡಿನಲ್ಲಿ ಮೇಯಿಸುವ ದೊಡ್ಡ ಜಾಲವೇ ಚಾಮರಾಜನಗರದಲ್ಲಿ ಹುಟ್ಟಿಕೊಂಡಿದೆ. ಸಾವಿರಾರು ಜಾನುವಾರುಗಳನ್ನು ಕಾಡಿಗೆ ಬಿಡುವುದರಿಂದ ಗಿಡಮರಗಳ ದಟ್ಟಣೆ ಕ್ಷೀಣಿಸುತ್ತದೆ. ಮಣ್ಣಿನ ಸವಕಳಿ ಉಂಟಾಗಿ ಜೀವವೈವಿಧ್ಯ ನಾಶವಾಗುತ್ತದೆ. ಭಾರಿ ಸಂಖ್ಯೆಯಲ್ಲಿ ಪ್ರಾಣಿಗಳನ್ನು ಮೇಯಿಸುವುದರಿಂದ ಸ್ವಾಭಾವಿಕವಾದ ಪರಿಸರ ವ್ಯವಸ್ಥೆಗೆ ಅಡ್ಡಿಯಾಗಿ, ಮಾನವ-ವನ್ಯಜೀವಿ ಸಂಘರ್ಷವೂ ಹೆಚ್ಚಾಗುತ್ತದೆ

> 'We have not inherited the world from our forefathers - we have borrowed it from our children'
> – ಈ ಜಗತ್ತು ನಮ್ಮ ಪಿತ್ರಾರ್ಜಿತ ಆಸ್ತಿಯಲ್ಲ, ಬದಲಾಗಿ ನಮ್ಮ ಮುಂದಿನ ಪೀಳಿಗೆಯಿಂದ ನಾವು ಪಡೆದಿರುವ ಸಾಲ ಎಂಬುದು ಇದರ ಅರ್ಥ. ಈ ಜಗತ್ತನ್ನು ಜತನವಾಗಿ ಕಾಪಾಡಿ ಅವರಿಗೆ ಮರಳಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂಬ ಈ ಸಾಲುಗಳು ನಾವು ಈ ಭೂಮಿ ಮತ್ತು ಭೂಮಿಯಿಂದ ನಮಗೆ ದೊರೆತಿರುವ ಸಂಪನ್ಮೂಲವನ್ನು ಹೇಗೆ ಹಿತಮಿತವಾಗಿ ಬಳಕೆ ಮಾಡಬೇಕು ಎಂಬುದನ್ನು ಸಾರಿ ಹೇಳುತ್ತವೆ. ಆದಾಗ್ಯೂ ಮನುಷ್ಯನ ಲೋಲುಪತೆಗೆ, ಸ್ವಾರ್ಥಕ್ಕೆ ಅರಣ್ಯ ನಾಶವಾಗಿದೆ. ಹಲವು ವನ್ಯಜೀವಿಗಳು ಇಂದು ಅವಸಾನವಾಗಿವೆ. ಹಿಂದೆ ಮೋಜಿಗಾಗಿ ಬೇಟೆಯ ಹೆಸರಲ್ಲಿ ವನ್ಯಜೀವಿಗಳ ಮಾರಣಹೋಮವೇ ನಡೆಯುತ್ತಿತ್ತು. ಪ್ರಕೃತಿ ಪರಿಸರ ಸಮತೋಲನವಾಗಿರಲು ವನ್ಯಜೀವಿಗಳಷ್ಟೇ ಅಲ್ಲ, ಕೀಟಗಳೂ ಮುಖ್ಯ ಎಂಬುದನ್ನು ಮನಗಂಡು ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರು 1972ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ, 1980ರಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದ ಫಲವಾಗಿ ಇಂದು ಅರಣ್ಯ ಉಳಿದಿದೆ. ವನ್ಯಜೀವಿಗಳು ಉಳಿದಿವೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

26 ಜುಲೈ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ದ್ವಿತೀಯ ಗಂ. 22-43 **ನಕ್ಷತ್ರ:** ಆಶ್ಲೇಷ ಗಂ. 15-52 **ಯೋಗ:** ಸಿದ್ಧಿ (ಆಸ್ರಿಕ್) ಗಂ. 05-32 **ಕರಣ:** ಬಾಲವ ಗಂ. 10-58, ಕರ್ಕಾಟಕ ಮಾಸದ 10 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 2 ನೇ ಪಾದ. **ರಾಹುಕಾಲ:** ಬೆಳಿಗ್ಗೆ 09-00 10-30, **ಸೂರ್ಯೋದಯ:** 06-18 **ಸೂರ್ಯಾಸ್ತ:** 06-56, ಮುಸ್ಲಿಂ ದಿನಾಂಕ : 30 ಮೊಹರಮ್, ದಿನ ವಿಶೇಷ : ಶ್ರಾವಣ ಶನಿವಾರ, ಅದೃಷ್ಟ ಸಂಖ್ಯೆ : 5, 8

ಮೇಷ: ಸ್ನೇಹಿತನ ಮಾತನ್ನು ಅಗತ್ಯಕ್ಕಿಂತ ಹೆಚ್ಚಾಗಿ ಕೇಳುವುದರಿಂದ ಅವರ ಆಜ್ಞಾನುವರ್ತಿಯನ್ನಾಗಿಸಬಹುದು. ಸಿಹಿ ಖಾದ್ಯ ತಯಾರಕರಿಗೆ ಬೇಡಿಕೆಗಳು ಹೆಚ್ಚಲಿವೆ. ಗೃಹಾಲಂಕಾರ ವಸ್ತುಗಳ ಖರೀದಿಗೆ ಉತ್ತಮ ದಿನ.

ವೃಷಭ: ಹೊಸ ದಾರಿಯನ್ನು ಹಿಡಿಯಲು ಯೋಚಿಸುತ್ತಿರುವ ವಿದ್ಯಾರ್ಥಿಗಳಿಗೆ ಗ್ರಹಗತಿಯ ಬೆಂಬಲ ಇದೆ. ನಡೆಯುವ ಘಟನೆಯಿಂದ ಸಂಗಾತಿಗೆ ಸಂತೋಷವಾಗುವುದು. ಕೋಪವನ್ನು ನಿಯಂತ್ರಣ ಮಾಡಿಕೊಳ್ಳಿ.

ಮಿಥುನ: ಪರಿಸ್ಥಿತಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುವುದು ಅಗತ್ಯ. ಶ್ರಮಕ್ಕೆ ಸರಿಸಮಾನ ಧನಾಗಮನಕ್ಕೆ ತೊಂದರೆಯಿಲ್ಲ. ಕೃಷಿಕರಿಗೆ ಅಧಿಕ ಒತ್ತಡ ದೇಹಕ್ಕೆ ಆಯಾಸವನ್ನು ಮಾಡಲಿದೆ.

ಕರ್ಕಾಟಕ: ಸಂಗೀತ ಕ್ಷೇತ್ರದಲ್ಲಿರುವವರು ಧ್ವನಿಯ ಬಗ್ಗೆ, ಕ್ರೀಡಾಪಟುಗಳು ದೈಹಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಕೌಟುಂಬಿಕ ಕೆಲಸಗಳು ನಿರಾಯಾಸವಾಗಿ ಸಾಗುವುದು. ವ್ಯಾಪಾರ ವಿಸ್ತರಣೆ ಮಾಡುವ ಬಗ್ಗೆ ಯೋಚಿಸಿ.

ಸಿಂಹ: ಕಲ್ಪನೆಗೂ ಮತ್ತು ವಾಸ್ತವಕ್ಕೂ ಅಜಗಜಾಂತರ ವ್ಯತ್ಯಾಸವಿರುವುದು ಅಸಮಾಧಾನಕ್ಕೆ ಕಾರಣವಾಗಬಹುದು. ಕುಟುಂಬದಲ್ಲಿ ನೆಮ್ಮದಿಯ ವಾತಾವರಣ ತಂದುಕೊಳ್ಳುವುದು ನಿಮ್ಮ ಕೈಯಲ್ಲಿದೆ.

ಕನ್ಯಾ: ಸಹೋದ್ಯೋಗಿಗಳಿಂದ ನಿರೀಕ್ಷಿತ ಕೆಲಸಗಳು ನಡೆಯುವುದು ಕಷ್ಟವಾಗಲಿದೆ. ಭೂ ಖರೀದಿಯ ಯೋಜನೆಯಲ್ಲಿರುವವರಿಗೆ ಮಧ್ಯವರ್ತಿಗಳ ಮೂಲಕದ ವ್ಯವಹಾರ ಕೈಗೂಡುವುದು. ಸಂತಾನಭಾಗ್ಯದ ಲಕ್ಷಣವಿದೆ.

ತುಲಾ: ಅನುಸರಿಸುವ ವ್ಯಕ್ತಿಗಳು ಈ ದಿನ ಹೆಚ್ಚಿರುತ್ತಾರೆ. ನಡವಳಿಕೆಯಲ್ಲಿ ಹೆಚ್ಚಿನ ಗಮನವಿರಲಿ. ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಶುಭ ಸುದ್ದಿ ಕೇಳಲಿದೆ. ಅತಿಯಾದ ನಿದ್ದೆ ನಿಮ್ಮ ಕೆಲಸವನ್ನು ಹಾಳುಮಾಡುವುದು.

ವೃಶ್ಚಿಕ: ವಿಳಂಬವಾಗುತ್ತಿರುವ ಕಾರ್ಯಗಳನ್ನು ಶೀಘ್ರವಾಗಿ ಮುಕ್ತಾಯ ಮಾಡಲು ಕುಲದೇವತೆ ಹಾಗು ಗ್ರಾಮದೇವತೆಯ ಮೊರೆ ಹೋಗಿ. ಸ್ನೇಹಿತರ ಕೆಲವು ಅಹಿತಕರ ನಡೆಗಳಿಂದ ಇರಿಸುಮುರಿಸಾಗುವುದು.

ಧನು: ಹೊಸ ಹೂಡಿಕೆಯಲ್ಲಿ ಅನುಭವವಿಲ್ಲದಿದ್ದರೆ ನಷ್ಟಗಳನ್ನೇ ನೋಡಬೇಕಾಗುತ್ತದೆ. ಬಾಲ್ಯದ ಬಯಕೆಯು ಈಡೇರುವುದು. ಶತ್ರುಗಳ ಉಪಟಳ ಕಡಿಮೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುವ ಲಕ್ಷಣವಿದೆ.

ಮಕರ: ಮಾತಿನ ಬಗ್ಗೆ ಜಾಗ್ರತೆ ವಹಿಸಿ, ಮಾತಿನಿಂದ ಸಮಸ್ಯೆ ಉಂಟಾಗಬಹುದು. ಭೂ ಸಂಬಂಧ ವ್ಯವಹಾರದಲ್ಲಿ ಪತ್ರಗಳ ಬಗ್ಗೆ ಎರಡು ಬಾರಿ ಪರಿಶೀಲಿಸುವುದು ಉತ್ತಮ. ಆರೋಪವನ್ನು ಕೇಳಬೇಕಾಗಬಹುದು

ಕುಂಭ: ಪಾಲುದಾರಿಕೆ ವ್ಯವಹಾರದಲ್ಲಿ ಯಾವುದೇ ರೀತಿಯ ಸಂಶಯಕ್ಕೆ ಆಸ್ಪದ ಕೊಡದೆ ಪಾರದರ್ಶಕತೆ ಉಳಿಸಿಕೊಳ್ಳಿ. ಗುರುಗಳ ಆಜ್ಞೆಯನ್ನು ಪಾಲಿಸಿದಲ್ಲಿ ಶ್ರೇಯಸ್ಸಾಗುವುದು. ಬುದ್ಧಿ ಪರಮಾತ್ಮನಲ್ಲಿ ಸ್ಥಿರವಾದರೆ ಜಯ ಖಂಡಿತ.

ಮೀನ: ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲವಾಗಿದೆ. ಮಕ್ಕಳ ಮೂಲಕ ಕೆಲವು ಸಮಸ್ಯೆಗಳಿಗೆ ಪರಿಹಾರವು ದೊರೆಯುತ್ತದೆ. ಅನಾರೋಗ್ಯ ಪರಿಹಾರವಾಗುವುದು.

ಪದಬಂಧ 6115


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಿವಿಗೆ ಇಂಪಾದುದು (2)
3.ಪ್ರಯಾಸದಿಂದಾದ ಹೆರಿಗೆ (3)
6.ಸಭೆಯಲ್ಲಿ ಕುಳಿತಿರುವವನು (3)
8.ತೀಡಿ ತೀಡಿ ಮಾಡಿದ ಸುಧಾರಣೆ (4)
10.ಯುಕ್ತಾ ಯುಕ್ತಾ ವಿಚಾರ (3)
11.ಮರದ ಪಾದರಕ್ಷೆ (3)
12.ಕಲ್ಲಿನ ಆಯುಧಗಳು ಬಳಕೆಯಲ್ಲಿದ್ದ ಕಾಲ (4)
15.ಮರದ ಹತ್ತಿರವಿರುವ ಮೊಸಳೆ (3)
17.ಚೋರ ಇಲ್ಲಿಗೆ ಬಂದಿದ್ದಾನಲ್ಲಾ? (3)
18.ಜನನಿ ನುಡಿದ ಸತ್ಯ (2)

ಮೇಲಿಂದ ಕೆಳಕ್ಕೆ

2.ಅದಲು ಬದಲು ಎಂದು ಹೀಗೆನ್ನಿ (3)
3.ಚಿಹ್ನೆ ಅಥವಾ ಪ್ರತಿಬಿಂಬ (3)
4.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
5.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
7. ಈತ ತಿರುಪೆಯವನು (3)
9.ಕೊನೆಗೆ ತಾಪವಿದ್ದರೂ ತೋರಿದ ಬಾಹ್ಯ ಸೌಂದರ್ಯ (3)
10.ಬೇರೆ ದೇಶದಿಂದ ಬಂದವನು (3)
11.ನೇಯುವ ಸಾಧನ (3)
13.ಆನೆ ಕುದುರೆಗಳನ್ನು ಕಟ್ಟುವ ಜಾಗ (2)
14.ಅಗಣಿತ ಸಂಖ್ಯೆಗಳಿರುವ ಲೆಕ್ಕಶಾಸ್ತ್ರ (3)
15.ದ್ವೇಷ ಹೀಗೆ ಬಂದಿದೆ (3)
16.ರಜವಿದ್ದಾಗಿನ ಇರುಳು (3)



6114ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿದ್ಯಮಾನ 3.ಅಧರ
4.ವ್ಯವಧಾನ 6.ಒಮ್ಮತ
8.ನಕ್ತಂಚರ 9.ವಸ್ತುಕೋಶ
11.ಟಗರು 14.ಹನುಮಂತ
16.ವರಾಹ 17.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ವಿರಕ್ತ 2.ನವ್ಯ
3.ಅನುಮಾನ 5.ನಸ್ಯ
6.ಒರಟ 7.ತವರು
10.ಶಯ್ಯಾಗೃಹ 12.ದಾಹ
13.ಪ್ರವರ 15.ತಮ

ಸುಡೊಕು 6499

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

6498 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ವಿನಿಮಯ ದರ | ಡಾಲರ್ 86.52 ↓ | ಪೌಂಡ್ 116.45 ↑ | ಯುರೊ 101.52 ↑ | ಯೆನ್ (100ಕ್ಕೆ) 59 ↓

ಷೇರುಪೇಟೆ ವಹಿವಾಟು: ಹಿಂದಿನ ಅಂತ್ಯ 82,184 | ಇಂದಿನ ಅಂತ್ಯ 81,463 | ↓ 721

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,062
ಇಂದಿನ ಅಂತ್ಯ:	24,837
ದಿನದ ಕನಿಷ್ಠ:	24,806
↓	225

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹525
	12 ಕ್ಕೆ	₹72
ಮೈಸೂರು:	100 ಕ್ಕೆ	₹525

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹285-600
ದ್ವಿತಳಿ (ಬಿ.ವಿ)	₹300-705

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹209
ಆರ್‌ಎಸ್‌ಎಸ್-5	₹203
ಗುಡ್ ಲಾಟ್	₹186.50

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1400-1800
ಮಧ್ಯಮ	₹1000-1400
ಸಣ್ಣ	₹500-1000

ಚಿಟಿಕೆ ಸುದ್ದಿ

ಕರೂರು ವೈಶ್ಯ ಬ್ಯಾಂಕ್‌ಗೆ ₹521 ಕೋಟಿ ಲಾಭ

ಚೆನ್ನೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಕರೂರು ವೈಶ್ಯ ಬ್ಯಾಂಕ್ ₹521 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹458 ಕೋಟಿ ಲಾಭ ಗಳಿಸಿತ್ತು ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ರಮೇಶ ಬಾಬು ತಿಳಿಸಿದ್ದಾರೆ.

ಬ್ಯಾಂಕ್‌ನ ಒಟ್ಟು ವರಮಾನ ₹3,015 ಕೋಟಿಯಷ್ಟಾಗಿದೆ. ಒಟ್ಟು ವ್ಯವಹಾರ ₹1,96,024 ಕೋಟಿಗೆ ಹೆಚ್ಚಳವಾಗಿದೆ. ಇದು 2024ರ ಜೂನ್ ತ್ರೈಮಾಸಿಕದಲ್ಲಿ ಇದು ₹1,70,059 ಕೋಟಿಯಷ್ಟಿತ್ತು.

ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 1.32ರಿಂದ ಶೇ 0.66ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 1ಕ್ಕಿಂತ ಕಡಿಮೆ ಇದೆ ಎಂದು ಹೇಳಿದ್ದಾರೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹25000-28500

ಮುಂಬೈ ಧಾರಣೆ (ಶೇಂಗಾ) 25-07-2025	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1440 (1450)
ಒಂದು ವಾರದ ಡೆಲಿವರಿ	1435 (1445)
ಪಾಮ್ ವಾರದ ಡೆಲಿವರಿ	1203 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1285)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,900 (98,900)
ಬೆಳ್ಳಿ ಕೆ.ಜಿಗೆ	1,14,500 (1,14,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ದ್ರಾಕ್ಷಿ: ಈ ಬಾರಿ ಬೆಳೆಗಾರರಿಗೂ 'ಸಿಹಿ'

ಪ್ರಸಕ್ತ ವರ್ಷ 15 ಸಾವಿರ ಟನ್ ಇಳುವರಿ ರಾಜ್ಯದ ವೈನ್ ತಯಾರಿಕೆಗೆ ಉತ್ತೇಜನ

• ಕಲಾವತಿ ಬೈಚಬಾಳ



ಹುಬ್ಬಳ್ಳಿ: ದ್ರಾಕ್ಷಾರಸ (ವೈನ್) ತಯಾರಿಕೆಗೆ ಬೇಕಾದ ತಳಿಯ ದ್ರಾಕ್ಷಿಯನ್ನು ರಾಜ್ಯದಲ್ಲಿ 2,500 ಎಕರೆಯಲ್ಲಿ ಬೆಳೆಲಾಗುತ್ತಿದ್ದು, ಸಕಾಲಿಕ ಮಳೆ, ಹವಾಮಾನದ ಪರಿಣಾಮ ಉತ್ತಮ ಇಳುವರಿ ಬಂದಿದೆ. ಪ್ರಸಕ್ತ ವರ್ಷ ದ್ರಾಕ್ಷಿಯು ಬೆಳೆಗಾರರಿಗೂ 'ಸಿಹಿ'ಯಾಗುವ ಸೂಚನೆಗಳಿವೆ.

ಜನವರಿಯಿಂದ ಮೇ ತಿಂಗಳವರೆಗೆ ದ್ರಾಕ್ಷಿ ಕೃಷಿ ನಡೆಯಲಿದ್ದು, ಜೂನ್‌ನಿಂದ ಜುಲೈ ಅಂತ್ಯದವರೆಗೆ ವೈನ್ ತಯಾರಿಕೆ ಪ್ರಕ್ರಿಯೆ ನಡೆಯುತ್ತದೆ. ರಾಜ್ಯದಲ್ಲಿ ವಿಜಯಪುರ, ಬಾಗಲಕೋಟೆ, ಬೆಳಗಾವಿ, ಬೀದರ್, ಕಲಬುರಗಿ, ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಸೇರಿ 16 ಜಿಲ್ಲೆಗಳಲ್ಲಿ ವೈನ್ ಉತ್ಪಾದನೆಗೆ ಬಳಸಲಾಗುವ ತಳಿಯ ದ್ರಾಕ್ಷಿಗಳನ್ನು ಬೆಳೆಯಲಾಗುತ್ತದೆ.

ಕೆಂಪು ವೈನ್ ತಯಾರಿಕೆಗೆ ಶಿರಾಜ್ ಕೆಬರ್‌ನೆಟ್ ಸಾಲಿನನ್, ಮೆರ್ಲೋ, ಜಿನ್ ಫ್ಯಾಂಡಲ್ ತಳಿಯ ದ್ರಾಕ್ಷಿಯನ್ನು ಹಾಗೂ ಬಿಳಿ ವೈನ್ ತಯಾರಿಕೆಗೆ ಚಿನಿನ್ ಬ್ಲಾಂಕ್, ಚಾರಡೋನಿ, ಸಾಲಿನನ್ ಬ್ಲಾಂಕ್ ತಳಿಯ ದ್ರಾಕ್ಷಿಯನ್ನು ಅಧಿಕವಾಗಿ ಬೆಳೆಯಲಾಗುತ್ತದೆ.

ರಾಜ್ಯದಲ್ಲಿ 19 ಖಾಸಗಿ ವೈನರಿಗಳಿವೆ. 2024–25ರಲ್ಲಿ 15 ಸಾವಿರ ಟನ್ ದ್ರಾಕ್ಷಿ ಇಳುವರಿ ಬಂದಿದೆ. 2023–24ನೇ ಸಾಲಿಗೆ ಹೋಲಿಸಿದರೆ 2024–25ರಲ್ಲಿ 1.39 ಲಕ್ಷ ಲೀಟರ್ ವೈನ್ ಅಧಿಕ ಉತ್ಪಾದನೆಯಾಗಿತ್ತು.



2023–24ರಲ್ಲಿ 96.75 ಲಕ್ಷ ಲೀಟರ್ ವೈನ್ ಮಾರಾಟವಾಗಿ, ₹387 ಕೋಟಿ ವಹಿವಾಟು ನಡೆದಿದ್ದರೆ, 2024–25ರಲ್ಲಿ 98.14 ಲಕ್ಷ ಲೀಟರ್ ವೈನ್ ಮಾರಾಟವಾಗಿ, ₹388 ಕೋಟಿ ವಹಿವಾಟು ನಡೆದಿತ್ತು.

'ಈ ತಳಿಯ ದ್ರಾಕ್ಷಿ ದರ ಕೆ.ಜಿಗೆ ₹40 ರಿಂದ ₹75ರವರೆಗೆ (ತಳಿಗಳ ಆಧಾರದಲ್ಲಿ) ಮಾರಾಟ ಆಗಿದೆ. ಒಟ್ಟು ದ್ರಾಕ್ಷಿ ಇಳುವರಿಯಲ್ಲಿ ಶೇ 70ರಷ್ಟು ಒಣದ್ರಾಕ್ಷಿಗೆ ಬಳಕೆಯಾದರೆ, ಶೇ 10ರಷ್ಟು ವೈನ್ ತಯಾರಿಕೆಗೆ ಬಳಕೆ ಆಗುತ್ತದೆ. ಶೇ 20ರಷ್ಟು ದ್ರಾಕ್ಷಿ ಮಾರಲಾಗುತ್ತದೆ' ಎಂದು ರಾಜ್ಯ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಟಿ.ಸೋಮು 'ಪ್ರಜಾವಾಣಿ'ಗೆ ತಿಳಿಸಿದರು.

'ಒಣ ದ್ರಾಕ್ಷಿ ಸಂಸ್ಕರಣೆ ಘಟಕ ಸ್ಥಾಪನೆ'

'ನಬಾರ್ಡ್ ಯೋಜನೆಯಡಿ ಕರ್ನಾಟಕ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿ ವಿಜಯಪುರದ ತೊರವಿಯಲ್ಲಿ 10 ಸಾವಿರ ಟನ್ ಸಾಮರ್ಥ್ಯದ ಒಣದ್ರಾಕ್ಷಿ ಸಂಗ್ರಹ ಶೀತಲ ಹಾಗೂ ಸಂಸ್ಕರಣ ಘಟಕ ಸ್ಥಾಪಿಸಲಿದ್ದು, ಕಾಮಗಾರಿ ಪ್ರಗತಿಯಲ್ಲಿದೆ' ಎಂದು ಟಿ.ಸೋಮು ತಿಳಿಸಿದರು.

'ಬೆಂಗಳೂರು ಬ್ಲ್ಯೂ'ಗೆ ಬೇಡಿಕೆ: ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಜಿಲ್ಲೆಗಳ 4 ಸಾವಿರ ಎಕರೆ ಪ್ರದೇಶದಲ್ಲಿ 'ಬೆಂಗಳೂರು ಬ್ಲ್ಯೂ' ತಳಿಯ ದ್ರಾಕ್ಷಿ ಬೆಳೆಯಲಾಗುತ್ತಿದೆ. ಈ ವರ್ಷ 50 ಸಾವಿರ ಟನ್ ಇಳುವರಿ ಬಂದಿದೆ. ಈ ಪೈಕಿ 10 ಸಾವಿರ ಟನ್ ದ್ರಾಕ್ಷಿಯನ್ನು ಫೋರ್ಟಿಫೈಡ್ ವೈನ್ ತಯಾರಿಕೆಗೆ ಬಳಸಲಾಗುತ್ತಿದೆ' ಎಂದು ವಿವರಿಸಿದರು.

ದ್ರಾಕ್ಷಿ ಕೆ.ಜಿಗೆ ₹80ರಿಂದ ₹85ಕ್ಕೆ ಮಾರಾಟವಾದರೆ, ರೈತರಿಗೆ ಅನುಕೂಲ. ಫೋರ್ಟಿಫೈಡ್ ವೈನ್ ತಯಾರಿಕೆಯಲ್ಲಿ ಸ್ಪಿರಿಟ್ ಬಳಸಲಾಗುತ್ತದೆ. ಅಂಥ ವೈನ್‌ಗಳನ್ನು ನಿರ್ಬಂಧಿಸಬೇಕು
ಅಭಯಕುಮಾರ ನಾಂದ್ರೇಕರ, ಅಧ್ಯಕ್ಷ, ಕರ್ನಾಟಕ ರಾಜ್ಯ ದ್ರಾಕ್ಷಿ ಬೆಳೆಗಾರರ ಸಂಘ ರಾಜ್ಯ ಘಟಕ

2020–21ರಿಂದ ಈವರೆಗೆ ರಾಜ್ಯದಲ್ಲಿ 450.88 ಲಕ್ಷ ಲೀಟರ್ ವೈನ್ ತಯಾರಿಸಲಾಗಿದೆ. 2020–21ರಿಂದ 2024–25ರವರೆಗೆ ವೈನ್ ಮಾರಾಟದಿಂದ ₹1,724 ಕೋಟಿ ಮೊತ್ತದ ವಹಿವಾಟು ನಡೆದಿದೆ
ಟಿ.ಸೋಮು, ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿ

ಸುದ್ದಿ 2 ನಿಮಿಷ

₹8.67 ಲಕ್ಷ ಕೋಟಿ ಕರಗಿದ ಹೂಡಿಕೆದಾರರ ಸಂಪತ್ತು


ಮುಂಬೈ (ಪಿಟಿಐ): ಹಣಕಾಸು, ಐ.ಟಿ, ತೈಲ ಮತ್ತು ಅನಿಲ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ವಿದೇಶಿ ಬಂಡವಾಳ ಹೊರಹರಿವು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 721 ಅಂಶ ಕುಸಿತವಾಗಿ, 81,463ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 225 ಅಂಶ ಕಡಿಮೆಯಾಗಿ, 24,837ಕ್ಕೆ ಕೊನೆಗೊಂಡಿದೆ.

ಕಳೆದ ಎರಡು ದಿನದ ವಹಿವಾಟಿನಲ್ಲಿ ಇಳಿಕೆ ಕಂಡ ಸೂಚ್ಯಂಕಗಳಿಂದ ಹೂಡಿಕೆದಾರರ ಸಂಪತ್ತು ₹8.67 ಲಕ್ಷ ಕೋಟಿ ಕರಗಿದೆ.

ಬಜಾಜ್ ಫೈನಾನ್ಸ್, ಪವರ್ ಗ್ರಿಡ್, ಇನ್ಫೊಸಿಸ್, ಟೆಕ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಟ್ರೆಂಟ್, ಟಾಟಾ ಮೋಟರ್ಸ್, ಎನ್‌ಟಿಪಿಸಿ ಮತ್ತು ಅದಾನಿ ಪೋರ್ಟ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಸನ್‌ಫಾರ್ಮಾ ಮತ್ತು ಭಾರ್ತಿ ಏರ್‌ಟೆಲ್ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ.



ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಗುರುವಾರದ ವಹಿವಾಟಿನಲ್ಲಿ ₹2,133 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದೇ ವೇಳೆ ದೇಶೀಯ ಹೂಡಿಕೆದಾರರು ₹2,617 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

30ರಿಂದ ಎನ್‌ಎಸ್‌ಡಿಎಲ್ ಐಪಿಒ

ನವದೆಹಲಿ (ಪಿಟಿಐ): ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ₹4,011 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ.

ಜುಲೈ 30ರಂದು ಹಂಚಿಕೆ ಪ್ರಕ್ರಿಯೆ ಆರಂಭವಾಗಲಿದ್ದು, ಆಗಸ್ಟ್ 1ರಂದು ಅಂತ್ಯಗೊಳ್ಳಲಿದೆ. ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್) ಜುಲೈ 29ರಂದು ಅರ್ಜಿ ಸಲ್ಲಿಸಬಹುದು. ಈ ಐಪಿಒ ಆಫರ್ ಫಾರ್ ಸೇಲ್ (ಒಎಫ್‌ಎಸ್) ಆಗಿರಲಿದೆ. 5.01 ಕೋಟಿ ಷೇರುಗಳನ್ನು ಮಾರಾಟ ಮಾಡಲಾಗುವುದು. ಪ್ರತಿ ಷೇರಿನ ಬೆಲೆ ₹760ರಿಂದ ₹800 ಇರಲಿದೆ ಎಂದು ಕಂಪನಿ ಶುಕ್ರವಾರ ತಿಳಿಸಿದೆ.

ಈ ಷೇರುಗಳ ಹಂಚಿಕೆ ಪೈಕಿ ಶೇ 50ರಷ್ಟನ್ನು ಅರ್ಹ ಸಾಂಸ್ಥಿಕ ಖರೀದಿಗಾರರಿಗೆ ಮೀಸಲಿರಿಸಲಾಗಿದೆ. ಶೇ 35ರಷ್ಟನ್ನು ಸಣ್ಣ ಹೂಡಿಕೆದಾರರು ಮತ್ತು ಉಳಿದ ಶೇ 15ರಷ್ಟನ್ನು ಸಾಂಸ್ಥಿಕೇತರ ಖರೀದಿದಾರರು ಖರೀದಿಸಬಹುದಾಗಿದೆ.

ಐಸಿಐಸಿಐ ಸೆಕ್ಯುರಿಟೀಸ್, ಎಕ್ಸಿಸ್ ಕ್ಯಾಪಿಟಲ್, ಎಚ್‌ಎಚ್‌ಬಿಸಿ ಸೆಕ್ಯುರಿಟೀಸ್ ಆ್ಯಂಡ್ ಕ್ಯಾಪಿಟಲ್ ಮಾರ್ಕೆಟ್ಸ್ (ಇಂಡಿಯಾ), ಐಡಿಬಿಐ ಕ್ಯಾಪಿಟಲ್ ಮಾರ್ಕೆಟ್ಸ್ ಆ್ಯಂಡ್ ಸೆಕ್ಯುರಿಟೀಸ್, ಮೋತಿಲಾಲ್ ಓಸ್ವಾಲ್ ಇನ್ವೆಸ್ಟ್‌ಮೆಂಟ್ ಅಡ್ವೈಸರ್ಸ್ ಮತ್ತು ಎಸ್‌ಬಿಐ ಕ್ಯಾಪಿಟಲ್ ಮಾರ್ಕೆಟ್ಸ್ ಈ ಐಪಿಒದ ನಿರ್ವಹಣೆ ಮಾಡಲಿವೆ.

ಮಾಲ್ದೀವ್ಸ್‌ಗೆ ₹4,850 ಕೋಟಿ ಲೈನ್ ಆಫ್ ಕ್ರೆಡಿಟ್

ಮಾಲೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಪ್ರವಾಸಕ್ಕಾಗಿ ಶುಕ್ರವಾರ ಮಾಲ್ದೀವ್ಸ್‌ಗೆ ಆಗಮಿಸಿದರು. ಈ ಸಂದರ್ಭದಲ್ಲಿ ಅವರು ಜುಲೈ 26ರಂದು ನಡೆಯಲಿರುವ ದೇಶದ 60ನೇ ಸ್ವಾತಂತ್ರ್ಯೋತ್ಸವದ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಧ್ಯಕ್ಷ ಮೊಹಮದ್ ಮುಯಿಝು ಅವರು ಸ್ವಾಗತಿಸಿದರು. ಈ ವೇಳೆ ಮಕ್ಕಳು ಸಾಂಪ್ರದಾಯಿಕ ನೃತ್ಯ ಮಾಡಿದರು. ಉಭಯ ದೇಶಗಳ ನಾಯಕರು ವ್ಯಾಪಾರ, ರಕ್ಷಣೆ ಮತ್ತು ಮೂಲಸೌಕರ್ಯ ಸಹಕಾರ ಕೇಂದ್ರೀಕೃತ ವಿಚಾರಗಳ ಬಗ್ಗೆ ಮಾತುಕತೆ ನಡೆಸಿದರು.

ನಂತರ ನರೇಂದ್ರ ಮೋದಿ ಅವರು, 'ಭಾರತವು ಮಾಲ್ದೀವ್ಸ್‌ಗೆ ₹4,850 ಕೋಟಿ (565 ಮಿಲಿಯನ್ ಡಾಲರ್) ಲೈನ್ ಆಫ್ ಕ್ರೆಡಿಟ್ (ವಿಸ್ತರಿಸಿದ ಸಾಲದ ಮೊತ್ತ) ನೀಡಲು ನಿರ್ಧರಿಸಿದೆ' ಎಂದು ಘೋಷಿಸಿದರು.

ದ್ವಿಪಕ್ಷೀಯ ಹೂಡಿಕೆ ಒಪ್ಪಂದ ಮತ್ತು ಮುಕ್ತ ವ್ಯಾಪಾರ ಒಪ್ಪಂದದ ಬಗ್ಗೆ ಉಭಯ ದೇಶಗಳು ಮಾತುಕತೆ ನಡೆಸುತ್ತಿವೆ ಎಂದು ತಿಳಿಸಿದರು.

ರಕ್ಷಣೆ ಮತ್ತು ಭದ್ರತಾ ಕ್ಷೇತ್ರಗಳಲ್ಲಿನ ಪರಸ್ಪರ ಸಹಕಾರವು ಉಭಯ ದೇಶಗಳ ನಡುವಣ ವಿಶ್ವಾಸಕ್ಕೆ ಸಾಕ್ಷಿ. ಮಾಲ್ದೀವ್ಸ್‌ನ ರಕ್ಷಣಾ ಸಾಮರ್ಥ್ಯವನ್ನು ಬಲಿಷ್ಠಗೊಳಿಸಲು ಭಾರತ ಎಂದಿಗೂ ಬೆಂಬಲ ನೀಡುತ್ತದೆ ಎಂದು ಭರವಸೆ ನೀಡಿದರು.

ಅಡಿಕೆ ಧಾರಣೆ					
ಪುತ್ತೂರು		ಚಾಲಿ	34369-42499	ಕೆಂಪುಗೋಟು	16899-23099
ಕೋಕ	20000-27500	ಕೋಕ	15699-24900	ರಾಶಿ	42099-47791
ಹೊಸತು	26000-48500	ಹೊಸಚಾಲಿ	37899-37899	**ಯಲ್ಲಾಪುರ**	
ಶಿವಮೊಗ್ಗ		ಕೆಂಪುಗೋಟು	22099-22819	ಅಪಿ	60179-63906
ಬೆಟ್ಟೆ	55399-59399	ರಾಶಿ	44099-48399	ಬಿಳಿಗೋಟು	15499-32499
ಗೊರಬಲು	18010-31899	ತಟ್ಟಿಬೆಟ್ಟೆ	26099-32000	ಚಾಲಿ	32719-43500
ರಾಶಿ	45009-57511	**ಶಿರಸಿ**		ಕೋಕ	8899-19010
ಸರಕು	60199-66600	ಬೆಟ್ಟೆ	31223-40699	ಕೆಂಪುಗೋಟು	1779-24899
ಸಿದ್ದಾಪುರ		ಬಿಳಿಗೋಟು	20823-36699	ರಾಶಿ	40269-56899
ಬಿಳಿಗೋಟು	24800-30989	ಚಾಲಿ	35699-44000	ತಟ್ಟಿಬೆಟ್ಟೆ	26619-37009

'ಪ್ಯಾಲೆಸ್ಟೀನ್'ಗೆ ದೇಶದ ಮಾನ್ಯತೆ; ಫ್ರಾನ್ಸ್ ಅಧ್ಯಕ್ಷ

ಪ್ಯಾರಿಸ್(ಎಪಿ): 'ಪ್ಯಾಲೆಸ್ಟೀನ್'ಗೆ ದೇಶದ ಮಾನ್ಯತೆ ನೀಡಲು ಫ್ರಾನ್ಸ್ ನಿರ್ಧರಿಸಿದೆ' ಎಂದು ಫ್ರಾನ್ಸ್‌ನ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಘೋಷಿಸಿದ್ದಾರೆ. ಗಾಜಾದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಹಸಿವಿನಿಂದ ಬಳಲುತ್ತಿದ್ದು, ಜಾಗತಿಕ ಮಟ್ಟದಲ್ಲಿ ತೀವ್ರ ವಿರೋಧ ವ್ಯಕ್ತವಾಗಿರುವ ಬೆನ್ನಲ್ಲೇ, ಫ್ರಾನ್ಸ್ ಈ ಘೋಷಣೆ ಮಾಡಿದೆ. ಈ ನಿರ್ಧಾರವನ್ನು ಇಸ್ರೇಲ್ ಖಂಡಿಸಿದೆ.

'ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದಲ್ಲಿ ಈ ನಿರ್ಧಾರವನ್ನು ಅಂತಿಮಗೊಳಿಸಲಾಗುವುದು' ಎಂದು ಮ್ಯಾಕ್ರನ್ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ಅದಕ್ಕಿಂತಲೂ ತುರ್ತಾಗಿ, ಗಾಜಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಿ, ನಾಗರಿಕರನ್ನು ಕಾಪಾಡಬೇಕಿದೆ' ಎಂದಿದ್ದಾರೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1430 (1440)
ಸೋಯಾ (ರಿಫೈನ್ಡ್)	₹1240 (1230)
ಸೂರ್ಯಕಾಂತಿ (ರಿಫೈನ್ಡ್)	₹1370 (1375)
ಪಾಮೋಲಿನ್	₹1205 (1205)

ಪ್ರಧಾನ ಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆ ಆಗಸ್ಟ್ 1ರಿಂದ ಜಾರಿ

ನವದೆಹಲಿ (ಪಿಟಿಐ): ಉದ್ಯೋಗ ಸೃಷ್ಟಿಯ ಗುರಿಯನ್ನು ಹೊಂದಿರುವ 'ಪ್ರಧಾನ ಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆ' ಆಗಸ್ಟ್ 1ರಿಂದ ಜಾರಿಯಾಗಲಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆಗೊಂಡಿದ್ದ ಈ ಯೋಜನೆಯು ಅನುಷ್ಠಾನಗೊಳ್ಳಲಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

₹99,446 ಕೋಟಿ ವೆಚ್ಚದ ಈ ಯೋಜನೆಯು ಎರಡು ವರ್ಷಗಳಲ್ಲಿ 3.5 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ. ಅದರಲ್ಲಿ ಸುಮಾರು 1.92 ಕೋಟಿ ಜನ ಮೊದಲ ಬಾರಿಗೆ ಉದ್ಯೋಗ ಪಡೆಯಲಿದ್ದಾರೆ. ಈ ಯೋಜನೆಯು ಇದೇ ಆಗಸ್ಟ್ 1ರಿಂದ 2027 ಜುಲೈ 31ರವರೆಗೆ ಉದ್ಯೋಗ ಪಡೆಯುವವರಿಗೆ ಪ್ರಯೋಜನಕಾರಿಯಾಗಲಿದೆ.

ಈ ಯೋಜನೆಯು ಎರಡು ಭಾಗಗಳನ್ನು ಹೊಂದಿದ್ದು, ಒಂದು ಉದ್ಯೋಗ ಪಡೆಯುವ ವರಿಗೆ ಸಂಬಂಧಿಸಿದ್ದು, ಇನ್ನೊಂದು ಉದ್ಯೋಗ ದಾತರಿಗೆ ಸಂಬಂಧಿಸಿರುತ್ತದೆ. 1 ಲಕ್ಷಕ್ಕೂ ಅಧಿಕ ವೇತನದ ಉದ್ಯೋಗ ಪಡೆಯುವವರಿಗೆ ಪಿಂಚಣಿ ಮಾಸಿಕ ಕಂತು ₹15 ಸಾವಿರ ಭರಿಸಲಾಗುತ್ತದೆ. 1 ಲಕ್ಷಕ್ಕೂ ಅಧಿಕ ವೇತನದ ಉದ್ಯೋಗ ನೀಡುವವರಿಗೂ ಎರಡು ವರ್ಷ ಮಾಸಿಕ ₹3 ಸಾವಿರ ಪ್ರೋತ್ಸಾಹಧನವನ್ನು ಈ ಯೋಜನೆಯ ಮೂಲಕ ನೀಡಲಾಗುತ್ತದೆ.

ಎಸ್‌ಐಟಿ ಚಟುವಟಿಕೆ ಚುರುಕು

ಒಂದನೇ ಪುಟದಿಂದ...

ಅನುಚೇತ್ ಮತ್ತು ದಯಾಮ ಮಾತ್ರ ದಕ್ಷಿಣ ಕನ್ನಡಕ್ಕೆ ಶುಕ್ರವಾರ ಬಂದಿದ್ದು ಮಂಗಳೂರಿನಲ್ಲಿ ಎರಡು ಸಭೆಗಳನ್ನು ನಡೆಸಿದರು. ಎಸ್‌ಐಟಿಗೆ ನಿಯೋಜಿಸಿದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಒಳಗೊಂಡ ತಂಡದ ಜೊತೆ ನಗರದ ಸರ್ಕೀಟ್ ಹೌಸ್‌ನಲ್ಲಿ ಸಭೆ ನಡೆಸಿದ ಅನುಚೇತ್ ಮತ್ತು ದಯಾಮ, ಸಂಜೆ ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಜೊತೆ ಅವರ ಕಚೇರಿಯಲ್ಲಿ ಸಮಾಲೋಚನೆ ನಡೆಸಿದರು.

ವಿಶೇಷ ತನಿಖಾ ತಂಡಕ್ಕೆ ಇನ್‌ಸ್ಪೆಕ್ಟರ್‌ಗಳು, ಸಬ್ ಇನ್‌ಸ್ಪೆಕ್ಟರ್‌ಗಳು, ಹೆಡ್ ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್‌ಗಳನ್ನು ಒಳಗೊಂಡ 20 ಮಂದಿ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಸರ್ಕೀಟ್ ಹೌಸ್‌ನಲ್ಲಿ ನಡೆದ ಸಭೆಯಲ್ಲಿ ಈ ಪೈಕಿ 12 ಮಂದಿ ಭಾಗವಹಿಸಿದ್ದರು ಎಂದು ಮೂಲಗಳು ತಿಳಿಸಿವೆ. ಒಂದೆರಡು ದಿನಗಳಲ್ಲಿ ಎಲ್ಲರೂ ತನಿಖಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಸಿದ್ಧರಾಗಿರುವಂತೆ ಅನುಚೇತ್ ಅವರು ತಿಳಿಸಿದ್ದಾರೆ ಎನ್ನಲಾಗಿದೆ.

ಐಜಿಪಿ ಕಚೇರಿಯಲ್ಲಿ ಎರಡು ತಾಸುಗಳಿಗೂ ಹೆಚ್ಚು ಸಮಯ ಸಮಾಲೋಚನೆ ನಡೆಯಿತು. ಸಭೆಯ ನಂತರ ಅನುಚೇತ್ ಅವರನ್ನು ಮಾತನಾಡಿಸಲು ಮುಂದಾದ ಮಾಧ್ಯಮದವರಿಗೆ 'ಸದ್ಯ ಏನೂ ಹೇಳುವುದಿಲ್ಲ' ಎಂದಷ್ಟೇ ಹೇಳಿ ಮುಂದೆಸಾಗಿದರು.

ಬೆಳ್ತಂಗಡಿಯಲ್ಲಿ ಕಚೇರಿ: ಬೆಳ್ತಂಗಡಿ ಪೊಲೀಸ್ ಠಾಣೆಯ ಸಮೀಪದಲ್ಲಿರುವ ಪೊಲೀಸ್ ಇಲಾಖೆಯ ವಸತಿ ಸಮುಚ್ಚಯದ ಹೊಸ ಕಟ್ಟಡದ ನೆಲಮಹಡಿಯ ಎರಡು ಕೊಠಡಿಗಳಲ್ಲಿ ತನಿಖಾ ತಂಡದ ಕಚೇರಿ ತೆರೆಯಲು ಸಿದ್ದತೆ ನಡೆದಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ಅವರ ಸೂಚನೆಯಂತೆ ಇಲ್ಲಿ ಕಚೇರಿಗೆ ಬೇಕಾದ ಸಿದ್ಧತೆಗಳನ್ನು ಬೆಳ್ತಂಗಡಿ ಪೊಲೀಸರು ಮಾಡಿದ್ದಾರೆ. ತನಿಖಾ ತಂಡದ ಕಚೇರಿ ಮಂಗಳೂರಿನ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ, ಬೆಳ್ತಂಗಡಿ ಅಥವಾ ಧರ್ಮಸ್ಥಳ ಗ್ರಾಮದಲ್ಲಿ ತೆರೆಯುವ ಸಾಧ್ಯತೆ ಇದೆ ಎನ್ನಲಾಗಿತ್ತು. ತನಿಖಾ ಪ್ರಕ್ರಿಯೆ ಸುಸೂತ್ರವಾಗಿ ನಡೆಯಲು ಬೆಳ್ತಂಗಡಿಯಲ್ಲಿ ಕಚೇರಿ ತೆರೆಯುವುದೇ ಸೂಕ್ತ ಎಂದು ಅಂತಿಮವಾಗಿ ನಿರ್ಧರಿಸ ಲಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.



ಎಸ್‌ಐಟಿ ತಂಡದಲ್ಲಿರುವ ಡಿಐಜಿ ಎಂ.ಎನ್. ಅನಿಚೇತ್ ಮಂಗಳೂರಿನ ಪಶ್ಚಿಮ ವಲಯದ ಐಜಿಪಿ ಕಚೇರಿಗೆ ಆಗಮಿಸಿದ್ದರು ಪ್ರಜಾವಾಣಿ ಚಿತ್ರ

ಪ್ರಕರಣವು ಹಲವು ಆಯಾಮಗಳಲ್ಲಿ ಸೂಕ್ಷ್ಮವಾಗಿರುವುದರಿಂದ ಎಸ್‌ಐಟಿ ಅಧಿಕಾರಿಗಳು ಕಾರ್ಯಾಚರಣೆ ಯನ್ನು ಗುಪ್ತವಾಗಿ ಮಾಡಲು ನಿರ್ಧರಿಸಿದ್ದಾರೆ. ಚಲನ ವಲನ, ಸಭೆಗಳು ಸೇರಿದಂತೆ ಯಾವ ಮಾಹಿತಿಯೂ ಹೊರಗೆ ತಲುಪದಂತೆ ನೋಡಿಕೊಳ್ಳಬೇಕು ಎಂದು ಎಲ್ಲರಿಗೂ ಕಡ್ಡಾಯವಾಗಿ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಇಎಲ್ ಜೊತೆಗೆ ₹2 ಸಾವಿರ ಕೋಟಿ ಒಪ್ಪಂದ

ನವದೆಹಲಿ (ಪಿಟಿಐ): ಭಾರತೀಯ ಸೇನೆಗೆ ವಾಯುರಕ್ಷಣಾ ಅಗ್ನಿ ನಿಯಂತ್ರಣ ರೇಡಾರ್ ಖರೀದಿ ಮಾಡುವ ಸಂಬಂಧ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಸಂಸ್ಥೆಯ ಜೊತೆಗೆ ರಕ್ಷಣಾ ಇಲಾಖೆಯು ₹2 ಸಾವಿರ ಕೋಟಿ ಮೊತ್ತದ ಒಪ್ಪಂದ ಮಾಡಿಕೊಂಡಿದೆ.


'ಅಗ್ನಿ ನಿಯಂತ್ರಣ ರೇಡಾರ್‌ನಿಂದ ಆಕಾಶ ಮಾರ್ಗದಲ್ಲಿ ಯುದ್ಧ ವಿಮಾನ, ಹೆಲಿಕಾಪ್ಟರ್ ಹಾಗೂ ಡ್ರೋನ್‌ಗಳಿಂದ ಎದುರಾಗುವ ಬೆದರಿಕೆಗಳನ್ನು ತಡೆಯಬಹುದಾಗಿದೆ' ಎಂದು ರಕ್ಷಣಾ ಇಲಾಖೆ ತಿಳಿಸಿದೆ.

'ದೇಶಿಯವಾಗಿ ವಿನ್ಯಾಸಗೊಳಿಸಿ, ತಯಾರಿಸಿದ ರೇಡಾರ್ ಅನ್ನೇ ರಕ್ಷಣಾ ಇಲಾಖೆ ಖರೀದಿಸಲಿದೆ. ಇದರ ಅನ್ವಯ, ಹೊಸ ರೇಡಾರ್ ಶೇಕಡ 70ರಷ್ಟು ದೇಶಿಯ ಉತ್ಪನ್ನಗಳನ್ನು ಒಳಗೊಂಡಿರಲಿದೆ. ವಾಯು ರಕ್ಷಣಾ ವ್ಯವಸ್ಥೆಯನ್ನು ಆಧುನೀಕರಣಗೊಳಿಸುವ ನಿಟ್ಟಿನಲ್ಲಿ ಇದು ಮಹತ್ತರ ಮೈಲಿಗಲ್ಲಾಗಲಿದ್ದು, ದೇಶದ ಅಭಿವೃದ್ಧಿಗೂ ಕೊಡುಗೆ ನೀಡಲಿದೆ' ಎಂದು ರಕ್ಷಣಾ ಇಲಾಖೆ ಹೇಳಿದೆ.

ವರ್ಷದ 365 ದಿನಗಳೂ ಸರ್ವ ಸನ್ನದ್ಧವಾಗಿರುವ ಭಾರತೀಯ ಸೇನೆ: ಸಿಡಿಎಸ್

'ಆಪರೇಷನ್ ಸಿಂಧೂರ' ಮುಂದುವರಿದಿದೆ

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಈಗಲೂ ಮುಂದುವರಿದಿದೆ. 24x7 ಮಾದರಿಯಲ್ಲಿ ಭಾರತೀಯ ಸೇನೆಯು ವರ್ಷದ 365 ದಿನಗಳೂ ಗರಿಷ್ಠ ಮಟ್ಟದ ಸನ್ನದ್ಧ ಸ್ಥಿತಿಯಲ್ಲಿದೆ' ಎಂದು ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಹೇಳಿದರು.



ಅನಿಲ್ ಚೌಹಾಣ್

ಶುಕ್ರವಾರ ಇಲ್ಲಿನ ಸುಬ್ರತೊ ಪಾರ್ಕ್‌ನಲ್ಲಿ ರಕ್ಷಣೆಗೆ ಸಂಬಂಧಿಸಿದಂತೆ ನಡೆದ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

'ಯುದ್ಧಭೂಮಿಯ ಚಿತ್ರಣ ಬದಲಾಗುತ್ತಿದ್ದು, ಸೇನೆಗೆ ಭವಿಷ್ಯದಲ್ಲಿ ಮಾಹಿತಿ-ತಂತ್ರಜ್ಞಾನದ ವಿದ್ವತ್ ಇರುವ ಯೋಧರು ಬೇಕಾಗಿದ್ದಾರೆ. ಭವಿಷ್ಯದ ಸೈನಿಕ ಈ ಮೂರೂ ಅಂಶಗಳ ಜ್ಞಾನ ಹೊಂದಿರಬೇಕು' ಎಂದು ಅಭಿಪ್ರಾಯಪಟ್ಟರು.

ಯುದ್ಧದಲ್ಲಿ 'ರನ್ನರ್ ಅಪ್' ಎಂಬುವುದಿಲ್ಲ. ಯಾವುದೇ ಸಂದರ್ಭದಲ್ಲಿ ಕಾರ್ಯಾಚರಣೆಗೆ ಸೇನೆಯು ಸರ್ವ ಸನ್ನದ್ಧವಾಗಿರಬೇಕು. ಭಾರತೀಯ ಸೇನೆಯ ಸಿದ್ಧತೆಯೂ ಗರಿಷ್ಠ ಮಟ್ಟದಲ್ಲಿದೆ' ಎಂದ ಅವರು, ಶಸ್ತ್ರ (ಯುದ್ಧ) ಮತ್ತು ಶಾಸ್ತ್ರ (ಜ್ಞಾನ) ಎರಡನ್ನೂ ಕಲಿತಿರಬೇಕಾದ ಮಹತ್ವವನ್ನು ಒತ್ತಿಹೇಳಿದರು.

ಭಾರತೀಯ ಸೇನೆಯು ಮೇ 7ರಂದು ಆಪರೇಷನ್ ಸಿಂಧೂರ ಕಾರ್ಯಾಚರಣೆ ಮೂಲಕ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿದ್ದ (ಪಿಒಕೆ) ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿತ್ತು. ಮೇ 10ರಂದು ಉಭಯ ದೇಶಗಳ ನಡುವೆ ಕದನ ವಿರಾಮ ಘೋಷಣೆಯಾಗಿತ್ತು.

'ಆಪರೇಷನ್ ಸಿಂಧೂರ–ಅಧ್ಯಯನ ಅಗತ್ಯ'

'50ಕ್ಕಿಂತಲೂ ಕಡಿಮೆ ಆಯುಧಗಳನ್ನು ಬಳಸಿಯೂ ಎದುರಾಳಿಯನ್ನು ಹೇಗೆ ಮಾತುಕತೆಗೆ ಬರುವಂತೆ ಮಾಡಬಹುದು' ಎನ್ನುವುದನ್ನು 'ಆಪರೇಷನ್ ಸಿಂಧೂರ' ಸಾಬೀತುಪಡಿಸಿದೆ' ಎಂದು ಭಾರತೀಯ ವಾಯುಪಡೆಯ ಉಪ ಮುಖ್ಯಸ್ಥ, ಏರ್ ಮಾರ್ಷಲ್ ನರ್ಮದೇಶ್ವರ್ ತಿವಾರಿ ಹೇಳಿದರು.

ಸೆಂಟರ್ ಫಾರ್ ಏರ್ ಸ್ಟಡೀಸ್ (ಸಿಎಪಿಎಸ್) ಮತ್ತು ಕಾಲೇಜ್ ಆಫ್ ಏರ್ ವಾರ್‌ಫೇರ್‌ನಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

ವಾಯುಪಡೆಯಲ್ಲಿ ಮಾನವ ರಹಿತ ವ್ಯವಸ್ಥೆಗಿಂತಲೂ, ಮಾನವ ಸಹಿತ ವ್ಯವಸ್ಥೆಯಿಂದ ದೊಡ್ಡ ಮಟ್ಟದ ಲಾಭವಿದೆ. ಇದಕ್ಕೆ ಆಪರೇಷನ್ ಸಿಂಧೂರ ಕಾರ್ಯಾಚರಣೆ ಉತ್ತಮ ಮಾದರಿಯಾಗಿದೆ. ಅದರ ಅಧ್ಯಯನ ಅಗತ್ಯ ಎಂದರು.



ಮನರಂಜನೆಯ ಮಾಲೆಪಟಾಕಿ

ಕನ್ನಡದಲ್ಲಿ ಪೂರ್ಣ ಪ್ರಮಾಣದ ಹಾಸ್ಯಭರಿತ ಸಿನಿಮಾವೊಂದು ತೆರೆಕಾಣುವುದು ಇತ್ತೀಚೆಗೆ ಅಪರೂಪವಾಗಿದೆ. ವರ್ಷದ ಹಿಂದೆ ತೆರೆಕಂಡಿದ್ದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾ ಭಿನ್ನವಾದ ಪ್ರಸ್ತುತಿ ಹಾಗೂ ಕಥೆಯಿಂದ ಹಾಸ್ಯದೌತಣ ಬಡಿಸಿತ್ತು. ಇದೀಗ ತೆರೆಕಂಡಿರುವ 'ಸು ಫ್ರಮ್ ಸೋ' ಅಂದರೆ 'ಸುಲೋಚನಾ ಫ್ರಮ್ ಸೋಮೇಶ್ವರ' ಹಾಸ್ಯದೊಂದಿಗೆ ತುಸು ಹಾರರ್ ಮಿಶ್ರಣವಾಗಿರುವ ಭರ್ಜರಿ ಮನರಂಜನೆಯ ಸಿನಿಮಾ. ಈ ಸಿನಿಮಾ ಸುಮಾರು ಎರಡು ಗಂಟೆಗಳ ನಗುವಿನ ಮಾಲೆಪಟಾಕಿ.

ಒಂದು ವಠಾರ, ಅದರೊಳಗೊಂದು ಕಥೆ, ಆ ಕಥೆಯುದ್ದಕ್ಕೂ ಹಾಸ್ಯಭರಿತ ಸಂಭಾಷಣೆ, ಸಂಭಾಷಣೆಗೆ ತಕ್ಕ ಪಾತ್ರಗಳ ಹಾವಭಾವಗಳು, ಕ್ಲೈಮ್ಯಾಕ್ಸ್‌ನಲ್ಲೊಂದು ಭಾವನಾತ್ಮಕ ಸ್ಪರ್ಶ...ಇದು ತುಳು ನಾಟಕಗಳ ಜೀವಾಳ. ಇಂತಹ ರಂಗಭೂಮಿಯಲ್ಲಿ ಪಳಗಿರುವ ಜೆ.ಪಿ. ತೂಮಿನಾಡು ಸಿನಿಮಾದೊಳಗೂ ಅದನ್ನು ಪ್ರಯೋಗಿಸಿ ಯಶಸ್ಸು ಕಂಡಿದ್ದಾರೆ. 'ಸು ಫ್ರಮ್ ಸೋ' ಒಂದು ಊರಿನೊಳಗೆ ನಡೆಯುವ ಕಥೆಯಾಗಿದ್ದು, ನೋಡುಗನನ್ನು ಆ ಊರಿನ ಭಾಗವಾಗಿಸಿ ನಕ್ಕುನಗಿಸುತ್ತದೆ.

'ಮಲ್ಲೂರು' ಕರಾವಳಿಯ ಒಂದು ಊರು. ಊರಿನಲ್ಲಿ ಮೇಸ್ತ್ರಿಯಾಗಿರುವ 'ರವಿಯಣ್ಣ' (ಶನೀಲ್ ಗೌತಮ್) ಎಲ್ಲರಿಗೂ ಅಚ್ಚುಮೆಚ್ಚು. 'ರವಿಯಣ್ಣ'ನ ಮಾತೇ ವೇದವಾಕ್ಯ. ಅದೇ ಊರಿನಲ್ಲಿ ಪೇಂಟರ್ ಆಗಿ ಕೆಲಸ ಮಾಡುತ್ತಿರುವ 'ಅಶೋಕ'ನಿಗೆ- (ಜೆ.ಪಿ.ತೂಮಿನಾಡು) ಊರಿನ ಹುಡುಗಿಯೊಬ್ಬಳ ಮೇಲೆ ಕಣ್ಣಿನಲ್ಲೇ ಪ್ರೀತಿ. 'ರವಿಯಣ್ಣ'ನನ್ನು ಕಂಡರೆ ಅಶೋಕನಿಗೆ ಅಷ್ಟಕಷ್ಟೇ. ಊರಿನಲ್ಲಿ ಮದುವೆ ನಡೆದರೂ, ತಿಥಿಯಾದರೂ 'ರವಿಯಣ್ಣ'ನ ಸಲಹೆ, ಸೂಚನೆಗಳು ಬೇಕೇಬೇಕು. ಊರಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗುವುದು 'ರವಿಯಣ್ಣ'ನಲ್ಲೇ. ಈತ ಮೇಲ್ನೋಟಕ್ಕೆ ಧೈರ್ಯಶಾಲಿ! ಇಂತಹ 'ರವಿಯಣ್ಣ' ನಿಗೂ ಬಗೆಹರಿಸಲಾಗದ ಸಮಸ್ಯೆಯೊಂದು ಎದುರಾದಾಗ ಸಿನಿಮಾದ ಕಥೆ ತೆರೆದುಕೊಳ್ಳುತ್ತದೆ, ಸುಲೋಚನಾಳ ಆಟ ಪ್ರಾರಂಭವಾಗುತ್ತದೆ. ಕರುಣಾಕರ ಗುರೂಜಿಯ ಆಗಮನವೂ ಆಗುತ್ತದೆ!

ಪ್ರೇಕ್ಷಕರನ್ನು ನಗಿಸುವುದೊಂದೇ ನನ್ನ ಕೆಲಸ ಎಂದುಕೊಂಡಂತೆ ಕಥೆ ರಚಿಸಿದ್ದಾರೆ ಜೆ.ಪಿ.ತೂಮಿನಾಡು. 'ಸ.ಹಿ.ಪ್ರಾ.ಶಾಲೆ ಕಾಸರಗೋಡು' ಸಿನಿಮಾದ ವಾತಾವರಣವನ್ನು ನೆನಪಿಸುವ ಈ ಸಿನಿಮಾ, ಕರಾವಳಿಯ ಮಣ್ಣಿನ ಸೊಬಗಿನಿಂದ ಕೂಡಿದೆ. ಕರಾವಳಿಯ ಪ್ರಕೃತಿ, ಸಂಸ್ಕೃತಿ, ಆಚರಣೆಗಳೊಂದಿಗೆ ಪ್ರವೇಶಿಕೆ ಬರೆಯುತ್ತಾ ಚುಟುಕಾಗಿ ಪ್ರೀತಿಯ ಒಗ್ಗರಣೆ ಹಾಕಿ, ಕಥೆಗೆ ತಕ್ಕ ಸ್ಥಳೀಯ ಪಾತ್ರಗಳನ್ನು ಒಗ್ಗೂಡಿಸಿ, ಅವುಗಳಿಗೆ ಭರಪೂರ ಹಾಸ್ಯ ಸಂಭಾಷಣೆಗಳನ್ನು ಸುರಿಯುತ್ತಾ, ಚಿಟಿಕೆಯಷ್ಟು ಮಾನವೀಯ ಗುಣಗಳ ಸಂದೇಶ ಹಾಕಿ ಈ ರಸದೌತಣವನ್ನು ಅವರು ಸಿದ್ಧಪಡಿಸಿದ್ದಾರೆ. ಹಾಸ್ಯ-ಹಾರರ್-ಭಾವನೆಗಳ ಹದವಾದ ಮಿಶ್ರಣ ಇಲ್ಲಿದೆ.

ಸು ಫ್ರಮ್ ಸೋ (ಕನ್ನಡ)

- ನಿರ್ಮಾಣ: ಶಶಿಧರ್ ಶೆಟ್ಟಿ ಬರೋಡ, ರವಿ ರೈ ಕಳಸ, ರಾಜ್ ಬಿ.ಶೆಟ್ಟಿ
- ನಿರ್ದೇಶನ: ಜೆ.ಪಿ.ತೂಮಿನಾಡು
- ತಾರಾಗಣ: ಶನೀಲ್ ಗೌತಮ್, ಜೆ.ಪಿ. ತೂಮಿನಾಡು, ಪ್ರಕಾಶ್ ಕೆ.ತೂಮಿನಾಡು, ದೀಪಕ್ ರೈ ಪಾಣಾಜೆ, ರಾಜ್ ಬಿ.ಶೆಟ್ಟಿ, ಮೈಮ್ ರಾಮದಾಸ್, ಪುಷ್ಪರಾಜ್ ಬೋಳಾರ್, ಸಂಧ್ಯಾ ಅರೆಕೆರೆ ಮತ್ತಿತರರು.

ಆರಂಭದಲ್ಲಿ 'ಭಾವ'ನ ಮದ್ಯಪಾನದ ಒಂದೆರಡು ದೃಶ್ಯಗಳಿಗೆ ಕತ್ತರಿ ಹಾಕಿ, ಈ ಅವಧಿಯನ್ನು ಅಶೋಕನ ಪ್ರೀತಿಯ ಕಥೆಗೆ ಮೀಸಲಿಡಬಹುದಿತ್ತು ಎನಿಸುತ್ತದೆ. ಈ ಕೊರತೆಯಿಂದ ಚಿತ್ರದಲ್ಲಿ ಪ್ರೀತಿಯ ಕಥೆ ಅಪೂರ್ಣವಾದಂತೆ ಭಾಸವಾಗುತ್ತದೆ.


ನಟನೆಯಲ್ಲಿ 'ರವಿಯಣ್ಣ'ನಾಗಿ ಶನೀಲ್ ಗೌತಮ್ ಇಷ್ಟವಾಗುತ್ತಾರೆ. ಅವರ ಸಹಜವಾಗಿರುವ ಅಭಿನಯ ಆ ಪಾತ್ರಕ್ಕೆ ಜೀವ ತುಂಬಿದೆ. 'ಸ್ವಾತಿ ಮುತ್ತಿನ ಮಳೆ ಹನಿಯೇ' ಹಾಗೂ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾಗಳಲ್ಲಿ ತಮ್ಮ ನಟನೆಯ ಸಾಮರ್ಥ್ಯ ಪ್ರದರ್ಶಿಸಿದ್ದ ಜೆ.ಪಿ.ತೂಮಿನಾಡು ಇಲ್ಲೂ ನಟನೆಯ ಜೊತೆಗೆ ನಿರ್ದೇಶನದ ಸಾಮರ್ಥ್ಯವನ್ನೂ ಪ್ರದರ್ಶಿಸಿದ್ದಾರೆ. 'ಭಾವ'ನಾಗಿ ಪುಷ್ಪರಾಜ್ ಬೋಳಾರ್, 'ಚಂದ್ರ'ನಾಗಿ ಪ್ರಕಾಶ್ ತೂಮಿನಾಡು, 'ಸತೀಶ'ನಾಗಿ ದೀಪಕ್ ರೈ ಪಾಣಾಜೆ, 'ಯದು'ವಾಗಿ ಮೈಮ್ ರಾಮದಾಸ್ ನಗಿಸುವ ಜವಾಬ್ದಾರಿ ಹೊತ್ತು ಅದನ್ನು ಅಷ್ಟೇ ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ನಟಿ ಸಂಧ್ಯಾ ಅರೆಕೆರೆ 'ಭಾನು' ಪಾತ್ರವನ್ನು ನಿಭಾಯಿಸಿದ ರೀತಿ ಉಲ್ಲೇಖಾರ್ಹ.

ಕರುಣಾಕರ ಗುರೂಜಿ ಎಂಬ ಪಾತ್ರ ಗುಟ್ಟಾಗಿ ಉಳಿದರೇ ಚೆಂದ. ಗುರೂಜಿ-ಭಾವನ ಹೈಫೈ ದೃಶ್ಯ ಇಡೀ ಸಿನಿಮಾದ ಹೈಲೈಟ್. ಗುರೂಜಿ ಪಾತ್ರದ ಗತ್ತು, ಗಮ್ಮತ್ತನ್ನು ತೆರೆಯಲ್ಲೇ ನೋಡಿ ಆನಂದಿಸಬೇಕು. ಈ ಪಾತ್ರವನ್ನು ನಿಭಾಯಿಸಿದ ನಟ ಆಗಾಗ ಇಂತಹ ಜಾನರ್‌ನ ಸಿನಿಮಾಗಳನ್ನು ತರಲಿ ಎನ್ನುವುದಷ್ಟೇ ಆಶಯ. ಸುಮೇಧ್ ಕೆ. ಹಾಗೂ ಸಂದೀಪ್ ತುಳಸಿದಾಸ್ ಚಿತ್ರದ ದೃಶ್ಯಗಳಿಗೆ ಸಂಗೀತದ ಮೂಲಕ ಜೀವ ತುಂಬಿದ್ದಾರೆ. ಎಸ್.ಚಂದ್ರಸೇಖರನ್ ಛಾಯಾಚಿತ್ರಗ್ರಹಣ ಕರಾವಳಿಯ ಸೊಬಗನ್ನು ಸೆರೆಹಿಡಿದಿದೆ.

ಅಭಿಲಾಷ್ ಪಿ.ಎಸ್.

ಇದು ನೋಡಬಹುದಾದ ಚಿತ್ರ

ನಾವು ನೋಡಿದ ಸಿನಿಮಾ



'ಮಂಟಪ'ದಲ್ಲಿ ಚರಿತ್ರೆಯ ಪಾಠ

ಚರಿತ್ರೆ ಕೇವಲ ಕಥೆಗಳಲ್ಲ. ನಮ್ಮ ನಾಡಿನ ನಂಬಿಕೆ, ಪರಂಪರೆಗಳ ದ್ಯೋತಕ ಎಂಬ ಸಂದೇಶವನ್ನು ಹೊಂದಿರುವ ಚಿತ್ರ ಸ್ವಪ್ನಮಂಟಪ. ಇತಿಹಾಸ ಮತ್ತು ವರ್ತಮಾನಗಳಲ್ಲಿ ಒಟ್ಟಿಗೆ ಕಥೆ ಸಾಗುತ್ತದೆ. ಹೀಗಾಗಿ ನಿರ್ದೇಶಕರು ವರ್ತಮಾನದಲ್ಲಿ ಇತಿಹಾಸದ ಮಹತ್ವ ಹೇಳುತ್ತ, ಅಂದಿಗೂ, ಇಂದಿಗೂ, ಎಂದೆಂದಿಗೂ ಗಂಡು-ಹೆಣ್ಣಿನ ಸಂಬಂಧಗಳು ಹೇಗಿರಬೇಕು ಎಂದು ಹೇಳುತ್ತಾ ಹೋಗುತ್ತಾರೆ. ಆದಾಗ್ಯೂ ಈ ಕಥೆಯನ್ನು ಸಿನಿಮಾ ಚೌಕಟ್ಟಿನಲ್ಲಿ ಕೂರಿಸುವ ನಿರ್ದೇಶಕರ ಯತ್ನ ಸಫಲವಾಗದೆ, ಹಲವು ಕಡೆ ರಂಗದ ಮೇಲೊಂದು ಇತಿಹಾಸದ ಪಾಠ ಕೇಳಿದಂತಾಗುತ್ತದೆ.

ಕಥೆಯ ನಾಯಕಿ ಮಂಜುಳಾ ಪ್ರೌಢಶಾಲಾ ಶಿಕ್ಷಕಿಯಾಗಿ, ಪಾಳುಬಿದ್ದ 'ಸ್ವಪ್ನಮಂಟಪ'ವಿರುವ ಊರಿಗೆ ಬರುತ್ತಾರೆ. ತನ್ನ ತಂದೆಯ ಸ್ನೇಹಿತರಾದ ಸಿದ್ದಪ್ಪ ಅವರ ಮನೆಯಲ್ಲಿ ಉಳಿದುಕೊಳ್ಳುತ್ತಾರೆ. ಅಲ್ಲಿ ಕಥೆಯ ನಾಯಕ ಶಿವಕುಮಾರ್ ಪರಿಚಯವಾಗುತ್ತದೆ. ಸಮಾಜ ವಿಜ್ಞಾನ ಶಿಕ್ಷಕಿಯಾದ ಮಂಜುಳಾಗೆ ಇತಿಹಾಸದಲ್ಲಿ ಆಸಕ್ತಿ. ಗತಿಸಿಹೋದ ನಿನ್ನೆಯ ಕಥೆಗಳನ್ನು ತಿಳಿದುಕೊಳ್ಳಲು ಐತಿಹಾಸಿಕ ಸ್ಮಾರಕಗಳನ್ನು ಅಧ್ಯಯನ ಮಾಡಬೇಕು, ಇತಿಹಾಸ ಎಂಬುದು ಕೇವಲ ಕಥೆಯಲ್ಲ, ನಮ್ಮವರ ನಿನ್ನೆ ಎಂಬ ನಂಬಿಕೆಯುಳ್ಳವರು. 'ಸ್ವಪ್ನಮಂಟಪ' ಎಂಬುದು ಇವರ ಕಿವಿಗೆ ಬೀಳುತ್ತದೆ.

ಈ ಕಡೆ ಭೀಮರಾಜುಗೆ 'ಸ್ವಪ್ನಮಂಟಪ' ಹಾಳು ಬಿದ್ದ ಜಾಗ. ಅದನ್ನು ಕೆಡವಿ ರೆಸಾರ್ಟ್ ಮಾಡಬೇಕೆಂಬ ಹಂಬಲ. ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುತ್ತಾನೆ. ಅದನ್ನು ಹೇಗಾದರೂ ಆತನ ಕಪಿಮುಷ್ಟಿಯಿಂದ ತಪ್ಪಿಸಬೇಕು ಎಂದು ನಾಯಕ ಶಿವಕುಮಾರ್ ಪ್ರಯತ್ನ ಪ್ರಾರಂಭಿಸುತ್ತಾನೆ. ಶಿವಕುಮಾರ್‌ಗೆ ಮಂಜುಳಾ ಮೇಲೆ ಒಲವಾಗುತ್ತದೆ. ಆಕೆ ಆತನಿಂದ ಈ ಮಂಟಪದ ಕಥೆ ಕೇಳಲು ಪ್ರಾರಂಭಿಸುತ್ತಾಳೆ. ಆಗ ರಾಜ ಚಂಡೆರಾಯ, ಮದನಿಕೆ, ಚಂದ್ರಕುಮಾರರ ಐತಿಹಾಸಿಕ ಕಥೆಯೊಂದು ಚಿತ್ರದಲ್ಲಿ ತೆರೆದುಕೊಳ್ಳುತ್ತದೆ. ಆ ಐತಿಹಾಸಿಕ ಕಥೆಯ ಜತೆಗೆ ಭೀಮರಾಜುವಿನಿಂದ ಮಂಟಪವನ್ನು ಉಳಿಸಿಕೊಳ್ಳಲು ಈ ಜೋಡಿ ಏನು ಮಾಡುತ್ತದೆ ಎಂಬ ವರ್ತಮಾನದ ಸನ್ನಿವೇಶಗಳೇ ಚಿತ್ರದ ದ್ವಿತೀಯಾರ್ಧ.

ಶಿವಕುಮಾರ್ ಆಗಿ ವಿಜಯ ರಾಘವೇಂದ್ರ ಕಾಣಿಸಿಕೊಂಡಿದ್ದಾರೆ. ಮಂಜುಳಾ ಪಾತ್ರದಲ್ಲಿ ರಂಜನಿ ನಟಿಸಿದ್ದಾರೆ. ಮದನಿಕೆ, ಚಂದ್ರಕುಮಾರರಾಗಿಯೂ ಇವರಿಬ್ಬರೇ ಕಾಣಿಸಿಕೊಂಡಿದ್ದಾರೆ. ಆಗಿನ ಮತ್ತು ಈಗಿನ ಈ ಜೋಡಿಯ ವಿಚಾರಧಾರೆಗಳು, ಆಲೋಚನೆಗಳು ಒಂದೇ ರೀತಿ ಎಂಬಂತೆ ಬಿಂಬಿಸಲು ನಿರ್ದೇಶಕರು ಈ ತಂತ್ರ ಉಪಯೋಗಿಸಿದಂತಿದೆ. ಆದರೆ ಇತಿಹಾಸ ಮತ್ತು ವರ್ತಮಾನದ ಕಥೆಗಳು ಒಟ್ಟಿಗೆ ಸಾಗುವುದರಿಂದ ಒಂದು ಜೋಡಿಗೆ ಬೇರೆ ನಟರನ್ನು ಆಯ್ಕೆ ಮಾಡಿಕೊಳ್ಳಬಹುದಿತ್ತು. ಶಿವಕುಮಾರ್ ಆಗಿ ವಿಜಯ ರಾಘವೇಂದ್ರ, ಮಂಜುಳಾ ಆಗಿ ರಂಜನಿ ಇಷ್ಟವಾಗುತ್ತಾರೆ. ಆದರೆ ಮದನಿಕೆ, ಚಂದ್ರಕುಮಾರರಾಗಿ ಈ ಪಾತ್ರಗಳು ನಾಟಕೀಯ ಅನ್ನಿಸುತ್ತವೆ.

ಕಲಾತ್ಮಕ ಚಿತ್ರವಾಗಿರುವುದರಿಂದ ನಿರ್ದೇಶಕರು ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಿದಂತಿಲ್ಲ. ಹೀಗಾಗಿ ಹಲವು ಕಡೆ ಇದನ್ನು ಸಿನಿಮಾವಾಗಿಸುವ ಬದಲು ರಂಗದ ಮೇಲಿನ ನಾಟಕವಾಗಿಸಬಹುದಿತ್ತು ಎಂಬ ಭಾವನೆ ಮೂಡುತ್ತದೆ. ಮಂಟಪದಲ್ಲಿ ಮಂಜುಳಾ ಭರತನಾಟ್ಯ, ರಾಣಿಯನ್ನು ಮಂಟಪಕ್ಕೆ ತರುವ ಕುದುರೆ ಗಾಡಿ, ಅರಮನೆ ಆವರಣ ಮುಂತಾದ ಸನ್ನಿವೇಶಗಳು ಇದಕ್ಕೆ ನಿದರ್ಶನಗಳಂತಿವೆ. ಶಮಿತಾ ಮಲ್ನಾಡ್ ಸಂಯೋಜನೆಯ ಹಾಡುಗಳು ನೆನಪಿನಲ್ಲಿ ಉಳಿಯುವಂತಿಲ್ಲ. ಛಾಯಾಚಿತ್ರಗ್ರಹಣದಲ್ಲಿಯೂ ಹೊಸತನ ಕಾಣಿಸುವುದಿಲ್ಲ.

ವಿನಾಯಕ ಕೆ.ಎಸ್

ಸ್ವಪ್ನಮಂಟಪ

- ನಿರ್ಮಾಣ: ಎ.ಎಂ.ಬಾಬು
- ನಿರ್ದೇಶನ: ಬರಗೂರು ರಾಮಚಂದ್ರಪ್ಪ
- ತಾರಾಗಣ: ವಿಜಯ ರಾಘವೇಂದ್ರ, ರಂಜನಿ ರಾಘವೇಂದ್ರ, ಸುಂದರ್ ರಾಜ್ ಮತ್ತಿತರರು.

ಸರ್ಕಾರ ಸ್ಪಷ್ಟನೆ ನೀಡಲಿ: ಕಾಂಗ್ರೆಸ್

ಎಸ್‌ಐಆರ್ ವಿರೋಧಿಸಿ ವಿಪಕ್ಷ ಸಂಸದರ ಪ್ರತಿಭಟನೆ

ನವದೆಹಲಿ (ಪಿಟಿಐ/ ಪ್ರಜಾವಾಣಿ ವಾರ್ತೆ): ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಸಂಸತ್ತಿನಲ್ಲಿ ಚರ್ಚೆ ನಡೆಯಲಿದೆಯೇ, ಇಲ್ಲವೇ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸುತ್ತಿಲ್ಲ ಎಂದು ಕಾಂಗ್ರೆಸ್ ಶುಕ್ರವಾರ ದೂರಿದೆ.

ಸೋಮವಾರದಿಂದ ಸಂಸತ್ ಕಲಾಪ ಸುಗಮವಾಗಿ ನಡೆಸುವ ಉದ್ದೇಶದಿಂದ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಶುಕ್ರವಾರ ವಿವಿಧ ಪಕ್ಷಗಳ ಹಿರಿಯ ನಾಯಕರ ಜೊತೆ ಸಭೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್, 'ನಾವು ಪಹಲ್ಗಾಮ್ ಮತ್ತು ಆಪರೇಷನ್ ಸಿಂಧೂರ ವಿಷಯವನ್ನು ಸದನದಲ್ಲಿ ಎತ್ತಲಿಲ್ಲ. ಏಕೆಂದರೆ, ಈ ವಿಷಯಗಳ ಕುರಿತ ಚರ್ಚೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಸದನದಲ್ಲಿ ಇರಬೇಕೆಂದು ನಾವು ಒತ್ತಾಯಿಸಿದ್ದೆವು. ಆದರೆ ಅವರು ವಿದೇಶದಲ್ಲಿರುವುದರಿಂದ ಸದನದಲ್ಲಿ ಈಗ ಚರ್ಚೆ ಸಾಧ್ಯವಿಲ್ಲ' ಎಂದು ಹೇಳಿದರು.

'ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ವಿಷಯವನ್ನು ಸದನದಲ್ಲಿ ಚರ್ಚಿಸಬೇಕೆಂದು ನಾವು ಒತ್ತಾಯಿಸುತ್ತಿದ್ದೆವು. ಆದರೆ ಸರ್ಕಾರ ಏನನ್ನೂ ಸ್ಪಷ್ಟಪಡಿಸುತ್ತಿಲ್ಲ. ತಾಂತ್ರಿಕ ಕಾರಣಗಳನ್ನು ನೀಡಿ ಚರ್ಚೆಯಿಂದ ನುಣುಚಿಕೊಳ್ಳುತ್ತಿದೆ' ಎಂದಿದ್ದಾರೆ.

'ಚುನಾವಣಾ ಆಯೋಗವು ಈ ಪ್ರಕ್ರಿಯೆ ನಡೆಸುತ್ತಿರುವುದರಿಂದ ಚರ್ಚೆ ಸಾಧ್ಯವಿಲ್ಲ ಎಂದು ಸರ್ಕಾರ ನೆಪ ಹೇಳುತ್ತಿದೆ. ಹಾಗಾದಲ್ಲಿ, ನಮ್ಮ ಪ್ರಶ್ನೆಗಳಿಗೆ ಯಾರು ಉತ್ತರಿಸುತ್ತಾರೆ' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕರೂ ಆಗಿರುವ ಗೊಗೊಯ್ ಪ್ರಶ್ನಿಸಿದ್ದಾರೆ.

ಎಸ್‌ಐಆರ್ ಬಿಕ್ಕಟ್ಟು– ಸಂಸತ್ ಆವರಣದಲ್ಲಿ ಪ್ರತಿಭಟನೆ: ಮತದಾರರ ಪಟ್ಟಿ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ವಿಚಾರವಾಗಿ ಕೇಂದ್ರ ಸರ್ಕಾರ ಹಾಗೂ ಪ್ರತಿಪಕ್ಷಗಳ ನಡುವಿನ ಜಿದ್ದಾಜಿದ್ದಿ ತಾರಕಕ್ಕೇರಿದೆ. ಎಸ್‌ಐಆರ್ ವಿರೋಧಿಸಿ ಸಂಸತ್ತಿನ ಆವರಣದಲ್ಲಿ ಇಂಡಿಯಾ ಕೂಟದ ಸಂಸದರು ಶುಕ್ರವಾರ ಪ್ರತಿಭಟನೆ ನಡೆಸಿದ್ದಾರೆ.

ಸಂಸತ್ತಿನ ಆವರಣದಲ್ಲಿರುವ ಗಾಂಧಿ ಪ್ರತಿಮೆಯಿಂದ ಮಕರ ದ್ವಾರದವರೆಗೂ ಪ್ರತಿಪಕ್ಷಗಳ ಸಂಸದರು ಪ್ರತಿಭಟನಾ ಮೆರವಣಿಗೆ ನಡೆಸಿ, ಎಸ್‌ಐಆರ್ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಚರ್ಚೆ ನಡೆಸಲು ಆಗ್ರಹಿಸಿದ್ದಾರೆ.

'ಪ್ರಜಾಪ್ರಭುತ್ವದ ಮೇಲಿನ ದಾಳಿ'

'ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಪ್ರಜಾಪ್ರಭುತ್ವದ ಹಕ್ಕುಗಳು ಮತ್ತು ಸಾಂವಿಧಾನಿಕ ಮೌಲ್ಯಗಳ ಮೇಲಿನ ದಾಳಿ' ಎಂದು ಸಿಪಿಎಂನ ಹಿರಿಯ ನಾಯಕಿ ಬೃಂದಾ ಕಾರಟ್ ಟೀಕಿಸಿದ್ದಾರೆ.



ಬೃಂದಾ ಕಾರಟ್

ಚುನಾವಣಾ ಆಯೋಗದ ಮೂಲಕ ಬಿಹಾರದಲ್ಲಿ ಮತದಾರರ ಪಟ್ಟಿಯ ದೊಡ್ಡ ಪ್ರಮಾಣದ ಪರಿಷ್ಕರಣೆ ನಡೆಸುವ ಮೂಲಕ ಬಿಜೆಪಿಯು ಅಕ್ರಮ ಎಸಗಲು ಮುಂದಾಗಿದೆ ಎಂದು ಶುಕ್ರವಾರ ಆರೋಪಿಸಿದ್ದಾರೆ.

ಚುನಾವಣಾ ಆಯೋಗವು ಬಿಜೆಪಿಯ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತಿದೆ ಎಂದು ದೂರಿದ ಅವರು, 'ಬಿಜೆಪಿಗೆ ಬಿಹಾರ ಚುನಾವಣೆಯಲ್ಲಿ ಸೋಲಿನ ಭೀತಿ ಎದುರಾಗಿದೆ. ಆದ್ದರಿಂದ, ಚುನಾವಣಾ ಆಯೋಗದ ಮೂಲಕ ಇಷ್ಟು ಕಡಿಮೆ ಅವಧಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ಸೂಚಿಸಿದ್ದಾರೆ' ಎಂದಿದ್ದಾರೆ.

ಎಸ್‌ಐಆರ್: ಚರ್ಚೆಗೆ ಟಿಎಂಸಿ ಪಟ್ಟು

ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಕುರಿತು ತಕ್ಷಣವೇ ಚರ್ಚೆ ಕೈಗೆತ್ತಿಕೊಳ್ಳಬೇಕು ಎಂಬ ತನ್ನ ಬೇಡಿಕೆಯನ್ನು ಟಿಎಂಸಿ ಶುಕ್ರವಾರ ಮತ್ತೊಮ್ಮೆ ಸರ್ಕಾರದ ಮುಂದಿಟ್ಟಿದೆ.

ಆಪರೇಷನ್ ಸಿಂಧೂರ ಕುರಿತು ಚರ್ಚೆ ಆರಂಭಿಸಲು ಲೋಕಸಭೆ ಸಜ್ಜಾಗಿರುವ ಹೊತ್ತಿನಲ್ಲಿಯೇ, ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತ ಚರ್ಚೆ ನಡೆಯಬೇಕು ಎಂಬ ತನ್ನ ಪಟ್ಟನ್ನು ಟಿಎಂಸಿ, ಮತ್ತಷ್ಟು ಬಿಗಿಗೊಳಿಸಿದೆ. ಈ ಮೂಲಕ, ಮುಂದಿನ ವಾರ ಈ ಬೇಡಿಕೆ ಮುಂದಿಟ್ಟುಕೊಂಡು ತನ್ನ ಪ್ರತಿಭಟನೆಯನ್ನು ತೀವ್ರಗೊಳಿಸುವ ಸೂಚನೆಯನ್ನು ಕೂಡ ಟಿಎಂಸಿ ನೀಡಿದೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು ಪಶ್ಚಿಮ ಬಂಗಾಳದಲ್ಲಿಯೂ ಕೈಗೆತ್ತಿಕೊಳ್ಳಲಾಗುತ್ತದೆ. ಬಿಹಾರದಲ್ಲಿ ನಡೆಯುತ್ತಿರುವ ಈ ಪ್ರಕ್ರಿಯೆ ಈ ನಿಟ್ಟಿನಲ್ಲಿ ಕೈಗೊಂಡಿರುವ ತಾಲೀಮು ಅಷ್ಟೆ ಎಂದು ಟಿಎಂಸಿ ಆರೋಪಿಸಿದೆ.

ಮುಂದಿನ ವರ್ಷ ಏಪ್ರಿಲ್-ಮೇನಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಹೀಗಾಗಿ ಪಕ್ಷಕ್ಕೆ ತೊಂದರೆ ನೀಡುವ ಉದ್ದೇಶದಿಂದ ಬಿಜೆಪಿಯು ಯಾವ ಮಟ್ಟಕ್ಕೂ ಹೋಗಲಿದೆ ಎಂದೂ ಆರೋಪಿಸಿದೆ.

ದೆಹಲಿ ಹೈಕೋರ್ಟ್ ಆದೇಶ • ಆರೋಪಿಯ ಜಾಮೀನು ಅರ್ಜಿ ವಜಾ

'ಸ್ನೇಹಿತನಾದ ಮಾತ್ರಕ್ಕೆ ಲೈಂಗಿಕ ಸಂಬಂಧ ಸಲ್ಲ'

ನವದೆಹಲಿ (ಪಿಟಿಐ): ಮಹಿಳೆಯ ಸ್ನೇಹಿತನಾದ ಮಾತ್ರಕ್ಕೆ ಆಕೆಯ ಒಪ್ಪಿಗೆ ಇಲ್ಲದೆ ಲೈಂಗಿಕ ಸಂಬಂಧ ಹೊಂದುವ ಹಕ್ಕು ಪುರುಷನಿಗೆ ಇಲ್ಲ. ಆಕೆ ಅಪ್ರಾಪ್ತ ವಯಸ್ಸಿನವಳಾಗಿದ್ದರೆ ಸಮ್ಮತಿ ಪಡೆದರ ಅದು ಕಾನೂನಿಗೆ ವಿರುದ್ಧವಾದದ್ದು ಎಂದು ದೆಹಲಿ ಹೈಕೋರ್ಟ್ ಆದೇಶ ಹೊರಡಿಸಿದೆ.



ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ವಜಾಗೊಳಿಸಿತು.

'ಬಾಲಕಿಯ ಒಪ್ಪಿಗೆ ಪಡೆದೇ ಆಕೆಯೊಂದಿಗೆ ಲೈಂಗಿಕ ಸಂಪರ್ಕ ಬೆಳೆಸಿದ್ದೇನೆ' ಎಂಬ ಆರೋಪಿಯ ಹೇಳಿಕೆಯನ್ನು ನ್ಯಾಯಮೂರ್ತಿ ಗಿರೀಶ್ ಕಟ್ಪಾಲಿಯಾ ತಿರಸ್ಕರಿಸಿದರು. ಆಕೆ ಬಾಲಕಿಯಾಗಿರುವುದರಿಂದ ಸಮ್ಮತಿ ಪಡೆದರೂ ಅದು ಕಾನೂನು ಬದ್ಧವಲ್ಲ ಎಂದು ಹೇಳಿದರು.

ನಯವಾದ ಮಾತುಗಳಿಂದ ಆರೋಪಿಯು ಬಾಲಕಿಯೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದಾನೆ. ಬಾಲಕಿಯ ಒಪ್ಪಿಗೆ ಇಲ್ಲದಿದ್ದರೂ ವ್ಯಕ್ತಿಯು ಹಲವು ಬಾರಿ ಆಕೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಎಫ್‌ಐಆರ್‌ನಲ್ಲಿ ದಾಖಲಾಗಿದೆ ಎಂದು ನ್ಯಾಯಾಲಯ ಒತ್ತಿ ಹೇಳಿತು.

'ಹೀಗಾಗಿ ಇದು ಒಮ್ಮತದ ಸಂಬಂಧ ಎಂದು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಆರೋಪಿಗೆ ಜಾಮೀನು ನೀಡಲು ಇದು ಸೂಕ್ತ ಪ್ರಕರಣವಲ್ಲ' ಎಂದು ಆದೇಶಿಸಿತು.

ವಿಕಾಸಪುರಿಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸ ಮಾಡುತ್ತಿದ್ದ ಕಾರ್ಮಿಕ, ಬಾಲಕಿಯೊಂದಿಗೆ ಸ್ನೇಹ ಬೆಳೆಸಿಕೊಂಡು ಆಕೆ ಮೇಲೆ ನಿರಂತರವಾಗಿ ಅತ್ಯಾಚಾರ ಎಸಗಿದ್ದಾನೆ. ಎಂದು ಪ್ರಾಸಿಕ್ಯೂಷನ್ ಆರೋಪಿಸಿದೆ.

ರಾಣಾ ಮನವಿ: ಪ್ರತಿಕ್ರಿಯೆ ಕೇಳಿದ ಕೋರ್ಟ್

ಕುಟುಂಬದ ಸದಸ್ಯರಿಗೆ ದೂರವಾಣಿ ಕರೆ ಮಾಡಲು ತಮಗೆ ಅನುಮತಿ ನೀಡಬೇಕು ಎಂದು ಕೋರಿ 26/11ರ ಮುಂಬೈ ಭಯೋತ್ಪಾದಕ ದಾಳಿಯ ಆರೋಪಿ ತಹವ್ವುರ್ ಹುಸೇನ್ ರಾಣಾ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ದೆಹಲಿಯ ವಿಶೇಷ ನ್ಯಾಯಾಲಯವೊಂದು ತಿಹಾರ್ ಜೈಲಿನ ಅಧಿಕಾರಿಗಳಿಂದ ಪ್ರತಿಕ್ರಿಯೆಯನ್ನು ಶುಕ್ರವಾರ ಕೇಳಿದೆ.



ರಾಣಾ

ವಿಚಾರಣೆಯನ್ನು ಆಗಸ್ಟ್ 1ಕ್ಕೆ ಮುಂದೂಡಿರುವ ವಿಶೇಷ ನ್ಯಾಯಮೂರ್ತಿ ಚಂದ್ರಜಿತ್ ಸಿಂಗ್ ಅವರು, ತಿಹಾರ್ ಜೈಲಿನ ಸೂಪರಿಂಟೆಂಡೆಂಟ್‌ಗೆ ವಿವರವಾದ ಪ್ರತಿಕ್ರಿಯೆ ನೀಡುವಂತೆ ಹೇಳಿದ್ದಾರೆ.

ಈ ಮಧ್ಯೆ ರಾಣಾ ಅವರಿಗೆ ಹಾಸಿಗೆಯನ್ನು ಒದಗಿಸಲಾಗಿದೆ ಎಂದು ಅಧಿಕಾರಿಗಳು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ.

ರಾಣಾ, 26/11 ಮುಂಬೈ ದಾಳಿಯ ಮುಖ್ಯ ಸಂಚುಕೋರ, ಅಮೆರಿಕದ ಪ್ರಜೆ ಡೇವಿಡ್ ಕೋಲ್ಮನ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿಯ ನಿಕಟವರ್ತಿ. ಭಾರತಕ್ಕೆ ರಾಣಾ ಅವರನ್ನು ಹಸ್ತಾಂತರಿಸುವ ವಿರುದ್ಧ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಯನ್ನು ಏಪ್ರಿಲ್ 4ರಂದು ಅಮೆರಿಕ ಸುಪ್ರೀಂ ಕೋರ್ಟ್ ವಜಾ ಮಾಡಿತ್ತು. ಆನಂತರ ಭಾರತಕ್ಕೆ ರಾಣಾನನ್ನು ಬಂಧಿಸಿ ಕರೆತರಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಲೋಕಸಭೆಯಲ್ಲಿ ನಿರ್ಣಯ ಮಂಡನೆ: ರಿಜಿಜು

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಲೋಕಸಭೆಯಲ್ಲಿ ಮಂಡಿಸಲಾಗುವುದು ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಶುಕ್ರವಾರ ಹೇಳಿದ್ದಾರೆ.

ರಾಜ್ಯಸಭೆಯಲ್ಲೂ ಇದೇ ರೀತಿಯ ನಿರ್ಣಯ ಮಂಡಿಸಲು ವಿರೋಧ ಪಕ್ಷಗಳು ನೋಟಿಸ್ ಸಲ್ಲಿಸಿದ್ದವು. ಆದರೆ ಆ ನೋಟಿಸ್ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಆರೋಪದ ವಿರುದ್ಧ ಒಗ್ಗಟ್ಟಿನಿಂದ ಹೋರಾಡುವುದು ಎಲ್ಲಾ ರಾಜಕೀಯ ಪಕ್ಷಗಳ ಸರ್ವಾನುಮತದ ನಿರ್ಧಾರ ಎಂದು ರಿಜಿಜು ಶುಕ್ರವಾರ ಹೇಳಿದ್ದಾರೆ.

'ತೇಜಸ್ವಿ ಹತ್ಯೆಗೆ ಜೆಡಿಯು–ಬಿಜೆಪಿ ಯತ್ನ'

ಪಟ್ನಾ (ಪಿಟಿಐ): 'ರಾಜ್ಯದಲ್ಲಿನ ಜೆಡಿಯು-ಬಿಜೆಪಿ ಮೈತ್ರಿ ಸರ್ಕಾರವು, ವಿಧಾನಸಭೆ ಚುನಾವಣೆ ಮುನ್ನ ನನ್ನ ಮಗ ತೇಜಸ್ವಿ ಯಾದವ್‌ನನ್ನು ಹತ್ಯೆ ಮಾಡಲು ಸಂಚು ರೂಪಿಸಿದೆ' ಎಂದು ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಶುಕ್ರವಾರ ಆರೋಪಿಸಿದರು.



ರಾಬ್ಡಿ ದೇವಿ

ಪಿಟಿಐ ಸುದ್ದಿ ಸಂಸ್ಥೆಯೊಂದಿಗೆ ರಾಬ್ಡಿ ದೇವಿ ಮಾತನಾಡಿದರು. 'ಚುನಾವಣೆಯಲ್ಲಿ ತಮಗೆ ಎದುರಾಳಿಯಾಗಿರುವ ಕಾರಣಕ್ಕೆ ತೇಜಸ್ವಿ ಹತ್ಯೆಗೆ ಜೆಡಿಯು ಮತ್ತು ಬಿಜೆಪಿ ಮುಂದಾಗಿವೆ. ಈಗಾಗಲೇ ಮೂರರಿಂದ ನಾಲ್ಕು ಬಾರಿ ಹತ್ಯೆಗೆ ಪ್ರಯತ್ನಿಸಲಾಗಿದೆ. ಒಮ್ಮೆ ತೇಜಸ್ವಿ ವಾಹನಕ್ಕೆ ಟ್ರಕ್ ಗುದ್ದಿಸಿ ಅಪಘಾತ ಮಾಡಲು ಯತ್ನಿಸಲಾಗಿತ್ತು' ಎಂದು ಹೇಳಿದರು.

ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ಡ್ರೋನ್ ಮೂಲಕ ದಾಳಿ ನಡೆಸಬಹುದಾದ ನಿಖರ ನಿರ್ದೇಶಿತ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವು ಆಂಧ್ರ ಪ್ರದೇಶದ ಕರ್ನೂಲ್‌ನಲ್ಲಿ ಯಶಸ್ವಿಯಾಗಿ ಶುಕ್ರವಾರ ನಡೆಯಿತು.

ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಪ್ರತಿಕ್ರಿಯೆ ನೀಡಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ನೇತೃತ್ವದಲ್ಲಿ ಯುಎಲ್‌ಪಿಜಿಎಂ-ವಿ3 ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿ ನಡೆಯಿತು. ಇದರಿಂದ ರಕ್ಷಣಾ ವಲಯದಲ್ಲಿ ಭಾರತದ ಸಾಮರ್ಥ್ಯವು ಇಮ್ಮಡಿಗೊಂಡಿದೆ' ಎಂದು ಹೇಳಿದರು.

ರಾಜಸ್ಥಾನ: ಶಾಲಾ ಕಟ್ಟಡ ಕುಸಿತ– 7 ಮಕ್ಕಳು ಬಲಿ

ಒಂದನೇ ಪುಟದಿಂದ...

'ಶಾಲಾ ಕಟ್ಟಡ ಕುಸಿದ ವಿಚಾರವನ್ನು ಪಿಪಲೋದಿ ಗ್ರಾಮಸ್ಥರು ಬೆಳಿಗ್ಗೆ 7.45ಕ್ಕೆ ಗಮನಕ್ಕೆ ತಂದರು' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'7 ಮಕ್ಕಳು ಮೃತಪಟ್ಟಿದ್ದಾರೆ' ಎಂದು ಝಾಲಾವಾಢ ಜಿಲ್ಲೆಯ ಮನೋಹರ್ ಥಾನಾ ಠಾಣೆಯ ಠಾಣಾಧಿಕಾರಿ ನಂದ ಕಿಶೋರ್ ತಿಳಿಸಿದ್ದಾರೆ. ಘಟನೆ ನಡೆದ ಸ್ಥಳವು ಜಿಲ್ಲಾ ಕೇಂದ್ರದಿಂದ 80 ಕಿ.ಮೀ. ದೂರದಲ್ಲಿದೆ. 'ಘಟನೆಗೆ ಸಂಬಂಧಿಸಿದಂತೆ ಐದು ಮಂದಿ ಶಿಕ್ಷಕರನ್ನು ಅಮಾನತುಗೊಳಿಸಲಾಗಿದ್ದು, ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ' ಎಂದು ಶಿಕ್ಷಣ ಸಚಿವ ಮದನ್ ದಿಲ್ವಾರ್ ತಿಳಿಸಿದ್ದಾರೆ.

ಅಧಿಕಾರಿಗಳ ವಿರುದ್ಧ ಆಕ್ರೋಶ

ಒಂದನೇ ಪುಟದಿಂದ...

'ಆಡಳಿತ ನಡೆಸುವವರ ವೈಫಲ್ಯದಿಂದಲೇ ಈ ಅನಾಹುತ ಸಂಭವಿಸಿದೆ' ಎಂದು ಸ್ಥಳೀಯ ನಿವಾಸಿ ಬಾಲ್‌ಕಿಶನ್ ಆಕ್ರೋಶ ಹೊರಹಾಕಿದರು.

'ಶಾಲೆಯ ಹತ್ತಿರದಲ್ಲಿರುವ ರಸ್ತೆಯ ಪಕ್ಕದಲ್ಲಿಯೇ ಕೂತಿದ್ದೆ. ಈ ವೇಳೆ ದೊಡ್ಡದಾದ ಶಬ್ದ ಕೇಳಿಸಿತು. ತಕ್ಷಣವೇ ಅತ್ತ ನೋಡಿದೆ. ಶಾಲೆಯ ಕಟ್ಟಡವೊಂದರ ಭಾಗವು ಉರುಳಿಬಿದ್ದಿರುವುದು ಕಂಡುಬಂತು. ದೂಳು, ಮಣ್ಣಿನಡಿಯಲ್ಲಿ ಸಿಲುಕಿದ್ದ ಮಕ್ಕಳು ಕಿರುಚಾಡುವುದು ಕೇಳಿಸಿತು. ನಾನು ಸೇರಿದಂತೆ ಎಲ್ಲರೂ ಓಡಿಹೋಗಿ, ಅವಶೇಷಗಳನ್ನು ತೆಗೆದುಹಾಕಲು ಆರಂಭಿಸಿದೆವು. ಗಾಯಾಳುಗಳನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತು' ಎಂದು ಅವರು ತಿಳಿಸಿದರು.



ಸರ್ಕಾರಿ ಶಾಲಾ ಕಟ್ಟಡ ಕುಸಿದ ನಂತರ ಸ್ಥಳೀಯರು ಅವಶೇಷಗಳನ್ನು ತೆರವುಗೊಳಿಸಿದರು —ಪಿಟಿಐ ಚಿತ್ರ

'ಕಟ್ಟಡಕ್ಕೆ ಅಂಟಿಕೊಂಡಂತೆ ಮರದ ಕೊಂಬೆ ಬೆಳೆದಿದ್ದು, ಅದರಿಂದಲೇ ನೀರು ಸೋರಿ ಕಟ್ಟಡವು ಶಿಥಿಲಗೊಂಡಿತ್ತು. ಇದರಿಂದಲೇ ಕಟ್ಟಡ ಕುಸಿದಿದೆ' ಎಂದು ಗಾಯಾಳು ವಿದ್ಯಾರ್ಥಿ ಮಾಹಿತಿ ನೀಡಿದ್ದಾರೆ.

ಒಬಿಸಿ ಸಮಸ್ಯೆ ಅರಿತಿದ್ದರೆ ಮೊದಲೇ ಜಾತಿಗಣತಿ: ರಾಹುಲ್

ಒಂದನೇ ಪುಟದಿಂದ...

'ದಲಿತರು, ಬುಡಕಟ್ಟು ಜನರು ಮತ್ತು ಅಲ್ಪಸಂಖ್ಯಾತರ ವಿಷಯಕ್ಕೆ ಬಂದಾಗ, ನನಗೆ ಉತ್ತಮ ಅಂಕಗಳು ದೊರೆಯಬೇಕು. ಮಹಿಳೆಯರ ವಿಷಯದಲ್ಲಿ ನನಗೆ ಉತ್ತಮ ಅಂಕಗಳು ದೊರೆಯಬೇಕು. ಆದರೆ, ನಾನು ಹಿಂದಿರುಗಿ ನೋಡಿದಾಗ, ಒಂದು ವಿಷಯದ ಕೊರತೆ ಕಾಣುತ್ತದೆ. ನಾನು ಒಂದು ತಪ್ಪು ಮಾಡಿದ್ದೇನೆ. ನಾನು ಒಬಿಸಿ ಸಮುದಾಯವನ್ನು ರಕ್ಷಿಸಬೇಕಿದ್ದ ರೀತಿಯಲ್ಲಿ ರಕ್ಷಿಸಲಿಲ್ಲ' ಎಂದರು.

'2004ರಿಂದ ನಾನು ರಾಜಕೀಯದಲ್ಲಿದ್ದೇನೆ. ಹಿಂದಿರುಗಿ ನೋಡಿದಾಗ, ನಾನು ತಪ್ಪು ಮಾಡಿದ್ದೇನೆ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಆ ಸಮಯದಲ್ಲಿ ನನಗೆ ನಿಮ್ಮ ಸಮಸ್ಯೆಗಳು ಆಳವಾಗಿ ಅರ್ಥವಾಗಲಿಲ್ಲ. ನಿಮ್ಮ (ಒಬಿಸಿ) ಇತಿಹಾಸ ಮತ್ತು ನಿಮ್ಮ ಸಮಸ್ಯೆಗಳ ಬಗ್ಗೆ ನನಗೆ ತಿಳಿದಿದ್ದರೆ, ನಾನು ಆಗಲೇ ಜಾತಿ ಜನಗಣತಿ ಮಾಡಿಸುತ್ತಿದ್ದೆ. ನನಗೆ ಈ ಕುರಿತು ವಿಷಾದವಿದೆ. ಇದು ನನ್ನಿಂದಾದ ತಪ್ಪು. ಇದು ಕಾಂಗ್ರೆಸ್ ಪಕ್ಷದ ತಪ್ಪಲ್ಲ, ನನ್ನ ತಪ್ಪು. ಈ ತಪ್ಪನ್ನು ನಾನು ಸರಿಪಡಿಸಿಕೊಳ್ಳುತ್ತೇನೆ' ಎಂದು ಅವರು ಹೇಳಿದರು.

'ಜೊತೆಗೆ, ತಪ್ಪಾಗಿರುವುದು ಒಳ್ಳೆಯದೇ ಆಯಿತು. ಆ ಸಮಯದಲ್ಲಿ ಜಾತಿ ಜನಗಣತಿ ನಡೆದಿದ್ದರೆ, ಈಗ ನಡೆದಂತೆ ನಡೆಯುತ್ತಿರಲಿಲ್ಲ. ನಾವು ತೆಲಂಗಾಣದಲ್ಲಿ ಮಾಡಿರುವುದು ರಾಜಕೀಯ ಭೂಕಂಪವನ್ನೇ ಸೃಷ್ಟಿಸಿದೆ' ಎಂದರು. ಪ್ರಧಾನಿ ಮೋದಿ ಅವರನ್ನು ಟೀಕಿಸಿದ ರಾಹುಲ್, 'ಅವರದ್ದು ತೋರಿಕೆ, ಒಳಗೆಲ್ಲಾ ಟೊಳ್ಳು' ಎಂದರು. ಕೇವಲ ಮಾಧ್ಯಮಗಳು ಪ್ರಧಾನ ಮಂತ್ರಿಯವರ ಬಲೂನ್ ಅನ್ನು ಊದಿದ್ದಾರೆ. ಆದರೆ, ಅವರ ಒಳಗೆ ಅಂತಹ ಯಾವುದೇ ಅಂಶಗಳಿಲ್ಲ' ಎಂದು ಛೇಡಿಸಿದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, 'ಮೋದಿ ಅವರು 'ಸುಳ್ಳು ಹೇಳುವವರು. ಅವರಿಂದ ದೇಶಕ್ಕೆ ಏನೂ ಒಳಿತು ಮಾಡಲು ಸಾಧ್ಯವಿಲ್ಲ' ಎಂದು ಟೀಕಿಸಿದರು.

'ಒಬಿಸಿ ಮತ್ತು ಇತರ ನಿರ್ಲಕ್ಷಿತ ವರ್ಗಗಳು ಬಿಜೆಪಿಯ ವಿರುದ್ಧ ಒಂದಾಗಬೇಕು' ಎಂದು ಕರೆ ನೀಡಿರುವ ಖರ್ಗೆ, 'ಒಬ್ಬ ಮನುಷ್ಯನಲ್ಲಿ ಮೂರು ಅಂಶಗಳಿರಬೇಕು. ಮಾನಸಿಕ ಬಲ, ಮನುಷ್ಯ ಬಲ ಮತ್ತು ಆರ್ಥಿಕ ಬಲ. ಇದರಿಂದ ಆತ ಸಮಾಜದಲ್ಲಿ ಮುಂದೆ ಬರಬಹುದು. ಇದರಲ್ಲಿ ಒಂದು ಇಲ್ಲದಿದ್ದರೂ ದೇಶದಲ್ಲಿ ನೀವು ಮುಂದಕ್ಕೆ ಬರಲಾಗದು' ಎಂದರು.

'18ನೇ ಲೋಕಸಭೆಯಲ್ಲಿ ನಾವು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಜನರ ಮುಂದೆ ಹೋಗಿದ್ದೆವು ಮತ್ತು 'ಸ್ವಲ್ಪ ಯಶಸ್ಸು' ಗಳಿಸಿದೆವು. ನಾವು ಇನ್ನೂ 20-25 ಹೆಚ್ಚಿನ ಸೀಟುಗಳನ್ನು ಗಳಿಸಿದ್ದರೆ, ಮೋದಿ ಅವರ ಸರ್ಕಾರ ಬುಡಮೇಲಾಗುತ್ತಿತ್ತು' ಎಂದರು.

ಒಂದು ಭಾರತದ ಕನಸು: ಸಿ.ಎಂ

'ನಾವು ಒಂದು ಭಾರತದ ಕನಸು ಕಾಣುತ್ತೇವೆ. ಅಲ್ಲಿ ನೇಕಾರನ ಮಗಳು ನೀತಿನಿರೂಪಕಳಾಗುತ್ತಾಳೆ, ಕುರಿಗಾಹಿಯ ಮಗ ಒಬ್ಬ ವಿದ್ವಾಂಸನಾಗುತ್ತಾನೆ, ಮತ್ತು ಕಾರ್ಮಿಕನ ಮಗು ಬದುಕಿನ ಆಚೆಗೆ ಕನಸು ಕಾಣುತ್ತದೆ. ಆ ಭಾರತವನ್ನು ಘೋಷಣೆಗಳಿಂದ ನಿರ್ಮಿಸಲಾಗದು. ಇದಕ್ಕೆ ರಾಜಕೀಯ ಧೈರ್ಯ ಮತ್ತು ನೈತಿಕ ಸ್ಪಷ್ಟತೆಯ ಅಗತ್ಯವಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಪ್ರತಿಯೊಬ್ಬ ಒಬಿಸಿ ನಾಯಕ, ಪ್ರತಿಯೊಬ್ಬ ಗ್ರಾಮೀಣ ಕಾರ್ಯಕರ್ತ, ಸಂವಿಧಾನದಲ್ಲಿ ನಂಬಿಕೆಯಿರುವ ಪ್ರತಿಯೊಬ್ಬರಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದಂತೆ ಶಿಕ್ಷಣ, ಆಂದೋಲನ, ಸಂಘಟನೆಯ ಅಗತ್ಯ ಇದೆ. ಕಾಯುವ ಸಮಯ ಮುಗಿದಿದೆ. ನಾವು ನ್ಯಾಯವನ್ನು ವಿಳಂಬಗೊಳಿಸದ, ಪ್ರಾತಿನಿಧ್ಯವನ್ನು ನಿರಾಕರಿಸದ, ಮತ್ತು ಘನತೆಯು ಷರತ್ತುಬದ್ಧವಾಗಿರದ ಗಣರಾಜ್ಯವನ್ನು ನಿರ್ಮಿಸಬೇಕು' ಎಂದು ಸಲಹೆ ನೀಡಿದರು.

'ನಮ್ಮ ಕನಸುಗಳು ವಿಭಿನ್ನವಾಗಿರಬೇಕು. ಹುಟ್ಟು ಭವಿಷ್ಯವನ್ನು ನಿರ್ಧರಿಸದ, ಉತ್ಪಾದಕ ವರ್ಗವನ್ನು ಮರೆತಿರದ, ಆದರೆ ಅವರನ್ನು ಗೌರವಿಸುವ, ನ್ಯಾಯವನ್ನು ಉದ್ದೇಶಪೂರ್ವಕವಾಗಿ ವಿಳಂಬಗೊಳಿಸದ, ಸಾಂವಿಧಾನಿಕ ಪ್ರಜಾಪ್ರಭುತ್ವದ ಮೂಲಕ ತಲುಪಿಸಲ್ಪಡುವಂತಹ ಭಾರತವನ್ನು ನಾವು ನಿರ್ಮಿಸಬೇಕು' ಎಂದರು.

ಆರ್‌ಎಸ್‌ಎಸ್-ಬಿಜೆಪಿಯ ಮನುವಾದಿ ದೃಷ್ಟಿಕೋನವು ಸಾಮಾಜಿಕ ಡಾರ್ವಿನಿಸಂನ ಮಾರುವೇಷದಲ್ಲಿದೆ. ಅಲ್ಲಿ ಪ್ರಬಲರು ಮಾತ್ರ ಘನತೆಗೆ ಅರ್ಹರಾಗಿರುತ್ತಾರೆ. ಆದರೆ, ನಮ್ಮ ಸಂವಿಧಾನವು ಬಲಿಷ್ಠರ ಬದುಕಿಗೆ ಭರವಸೆ ನೀಡುವುದಿಲ್ಲ, ಬದಲಿಗೆ ದುರ್ಬಲರಿಗೆ ನ್ಯಾಯ ಹಾಗೂ ಭರವಸೆ ನೀಡುತ್ತದೆ ಎಂದರು.

'ರಾಹುಲ್ ಹೇಳಿಕೆ: ದ್ವೇಷ ಬಿತ್ತುವ ಉದ್ದೇಶದ ಕೃತ್ಯ'

ನವದೆಹಲಿ: 'ಭಾರತ ಜೋಡೊ' ಯಾತ್ರೆ ಸಂದರ್ಭದಲ್ಲಿ ಸಾವರ್ಕರ್ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೀಡಿದ್ದ ಹೇಳಿಕೆಯು ಜನರಲ್ಲಿ ದ್ವೇಷ ಬಿತ್ತುವ ಉದ್ದೇಶದ ಪೂರ್ವಯೋಜಿತ ಕೃತ್ಯ ಎಂಬುದನ್ನು ತನಿಖೆಯು ಪುಷ್ಟೀಕರಿಸುತ್ತದೆ ಎಂದು ಉತ್ತರ ಪ್ರದೇಶ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ರಾಹುಲ್ ಅವರ ವಿವಾದಾತ್ಮಕ ಹೇಳಿಕೆಯು ಅಪರಾಧ ಕೃತ್ಯಗಳ ವ್ಯಾಪ್ತಿಗೆ ಬರುತ್ತದೆ ಎಂದೂ ಅದು ತಿಳಿಸಿದೆ. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ, ಮನಮೋಹನ್ ಅವರ ನೇತೃತ್ವದ ನ್ಯಾಯಪೀಠವು, ಮುಂದಿನ ಆದೇಶದವರೆಗೆ ರಾಹುಲ್ ಗಾಂಧಿ ಅವರಿಗೆ ಸಮನ್ಸ್ ನೀಡುವಂತಿಲ್ಲ ಎಂದು ಆದೇಶ ನೀಡಿತು.

ಸಾವರ್ಕರ್ ಅವರನ್ನು 'ಬ್ರಿಟಿಷರ ಸೇವಕ' ಎಂದು ರಾಹುಲ್ ಗಾಂಧಿ ಅವರು ಕರೆದಿದ್ದರು ಎಂದು ಕೋರ್ಟ್ ಮೆಟ್ಟಿಲೇರಲಾಗಿದೆ.

ರಾಷ್ಟ್ರಪತಿ ಆಡಳಿತ ವಿಸ್ತರಣೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಆಗಸ್ಟ್ 13ರಿಂದ ಮತ್ತೆ ಆರು ತಿಂಗಳು ವಿಸ್ತರಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ. ಈ ಸಂಬಂಧ ಶಾಸನಬದ್ಧ ನಿರ್ಣಯ ಕೈಗೊಳ್ಳಲು ರಾಜ್ಯಸಭೆಯನ್ನು ಕೋರಲಾಗಿದೆ. ರಾಜ್ಯಸಭೆಯು ಈ ಬಗ್ಗೆ ಮುಂದಿನ ವಾರ ಚರ್ಚೆ ನಡೆಸಲು ಪಟ್ಟಿ ಮಾಡಿದೆ.

'ಮಣಿಪುರದಲ್ಲಿ ಸಂವಿಧಾನದ 356ನೇ ವಿಧಿಯಡಿಯಲ್ಲಿ ಈ ವರ್ಷ ಫೆ. 13ರಿಂದ ಜಾರಿಯಾಗಿದ್ದ ರಾಷ್ಟ್ರಪತಿ ಆಡಳಿತವನ್ನು ಮತ್ತೆ ಆರು ತಿಂಗಳು ವಿಸ್ತರಿಸಲು ಸದನದ ಒಪ್ಪಿಗೆ ಬೇಕಿದೆ ಎಂಬ ನಿರ್ಣಯವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ಮಂಡಿಸಿದರು' ಎಂದು ರಾಜ್ಯಸಭಾ ಸಚಿವಾಲಯ ತಿಳಿಸಿದೆ.

2025ರ ಫೆಬ್ರುವರಿ 9ರಂದು ಬಿರೇನ್ ಸಿಂಗ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಫೆಬ್ರುವರಿ 13ರಂದು ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿತ್ತು. ರಾಜ್ಯದಲ್ಲಿ 2023ರ ಮೇ ತಿಂಗಳಿನಿಂದ ನಡೆದ ಜನಾಂಗೀಯ ಹಿಂಸಾಚಾರದಲ್ಲಿ ಕನಿಷ್ಠ 260 ಮಂದಿ ಹತ್ಯೆಗೀಡಾಗಿದ್ದಾರೆ ಮತ್ತು ಸಾವಿರಾರು ಜನರು ಆಶ್ರಯ ಕಳೆದುಕೊಂಡಿದ್ದಾರೆ.



ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ

ಒಬ್ಬಂಟಿಯಾಗಿ ಜಗತ್ತನ್ನು ಬದಲಾಯಿಸಲು ನಿಮಗೆ ಸಾಧ್ಯವಾಗದೇ ಇರಬಹುದು. ಆದರೆ, ಅನೇಕ ಅಲೆಗಳನ್ನು ಸೃಷ್ಟಿಸುವಂತೆ ನೀರಿಗೆ ಕಲ್ಲನ್ನು ಒಗೆಯಲು ನಿಮಗೆ ಸಾಧ್ಯ.
-ಮದರ್ ತೆರೇಸಾ



ಅಯ್ಯಯ್ಯೋ ಹಾವು ರಾಣಿ!



ಹಾವು ಹಿಡಿಯುವುದರಲ್ಲಿ ಪುರುಷರದೇ ಪ್ರಾಬಲ್ಯ ಎನ್ನುವುದು ಈಗ ಕ್ಲೀಷೆಯ ಮಾತು. ನಾಗಿಣಿಯ ನೃತ್ಯ ಮಾಡುವುದಕ್ಕಷ್ಟೇ ಅಲ್ಲ ಅದನ್ನು ಹಿಡಿಯುವುದಕ್ಕೂ ಸೈ ಎನ್ನುತ್ತಿದ್ದಾರೆ ಕೆಲವು ವನಿತೆಯರು. ರೀಲ್ಸ್ ಲೋಕದಲ್ಲಿ ಛಾಪು ಮೂಡಿಸಿರುವ ಪ್ರಿಯಾ ಸವಡಿ ಅಂತಹವರಲ್ಲಿ ಒಬ್ಬರು.



• ಸಂತೋಷ ಈ. ಚಿನಗುಡಿ

ಬೆಳ್ಳಂಬೆಳಿಗ್ಗೆ ಕಪಾಟಿನಲ್ಲಿ ಬುಸುಗುಡುತ್ತಾ ಕುಳಿತಿದ್ದ ಹಾವನ್ನು ಕಂಡು ಆ ಮನೆಯ ಜನ ಬೆಚ್ಚಿಬಿದ್ದರು. ದೌಡಾಯಿಸಿ ಹೊರಗೆ ಬಂದು, ಹಾವು ಹಿಡಿಯುವ ಮಂದಿಗೆ ಕರೆ ಮಾಡಿದರು. ಆಗ ಬಂದವರಾರು ಗೊತ್ತೇ? ಒಬ್ಬಳು ಹೆಣ್ಣುಮಗಳು! ಎಲ್ಲರೂ ನೋಡನೋಡುತ್ತಿದ್ದಂತೆಯೇ ಆಕೆ ಸಣ್ಣದೊಂದು ಕೋಲನ್ನು ಹಿಡಿದುಕೊಂಡು, ಆ ಹಾವನ್ನು ಹೇಗೋ ಮರುಳು ಮಾಡಿ, ಒಂದೇ ನಿಮಿಷದಲ್ಲಿ ಬಾಲ ಹಿಡಿದು ಚೀಲಕ್ಕೆ ತುಂಬಿಕೊಂಡು ಹೊರಟಳು! ಆ ಸುಕೋಮಲೆ ಹೀಗೆ ಧಾಡಸಿತನದಿಂದ ಹಾವನ್ನು ಅಟ್ಟಾಡಿಸಿ ಹಿಡಿಯುವುದನ್ನು ಕಂಡು ಜನ ಮೂಗಿನ ಮೇಲೆ ಬೆರಳಿಟ್ಟರು. ಆಕೆ ಪ್ರಿಯಾ ಸವಡಿ.

'ಹಾಂವು ಯಾರನ್ನೂ ಕೊಲ್ಲುದಿಲ್ಲ- ಹಾಂವನ್ನೂ ಯಾರೂ ಕೊಲ್ಲಬಾರ್ದು. ನಾವ್ ಹೊಡಿಯೋದ್ ಬಿಟ್ರ ಅದು ಕಡಿಯೋದ್ ಬಿಡತೈತಿ. ಯಾರು ಹಾಂವನ್ನು ಕೊಲ್ಲತೇರಿ, ಅವರು ಪಂಚಮಿ ದಿನ ಪೂಜೆ ಮಾಡಬ್ಯಾಡರಿ. ಹಂಗ ಮಾಡಿದ್ರ ಹಾಂವಿಗೂ ಕಿಮ್ಮತ್ತ ಇರುದಿಲ್ಲ, ನಮಗೂ ಕಿಮ್ಮತ್ತ ಬರುದಿಲ್ಲ...'

ಉತ್ತರ ಕರ್ನಾಟಕದ ಖಡಕ್ ರೊಟ್ಟಿಯಷ್ಟೇ ಖಡಕ್ ಮಾತು ಪ್ರಿಯಾ ಅವರದ್ದು. ಹೀಗೆ ಹೇಳುವ ನೈತಿಕ ಹಕ್ಕೂ ಅವರಿಗಿದೆ. ಹತ್ತಾರು ವರ್ಷಗಳಿಂದ ಹಾವುಗಳನ್ನು ರಕ್ಷಣೆ ಮಾಡುತ್ತಿದ್ದಾರೆ ಅವರು. ಸಾಮಾಜಿಕ ಜಾಲತಾಣಗಳಲ್ಲಿ ನಟನೆಯ ಮೂಲಕ ಗುರುತಿಸಿಕೊಂಡಿರುವ ಈ ಹೆಣ್ಣುಮಗಳದ್ದು ಪಕ್ಕಾ ಜವಾರಿ ವ್ಯಕ್ತಿತ್ವ. ಹಾವು ಹಿಡಿಯುವುದು ಅವರು ಹೆಗಲಿಗೇರಿಸಿಕೊಂಡ ಸಾಮಾಜಿಕ ಜವಾಬ್ದಾರಿ.

ಪ್ರಿಯಾ ಅವರ ತಂಗಿ ಪ್ರೀತಿ ಕೂಡ ಹಾವು ಹಿಡಿಯುವುದರಲ್ಲಿ ಸಿದ್ಧಹಸ್ತರು. ಸರಸರ ಸರಿದುಹೋಗುವ ಸರ್ಪ ಕಂಡು ಊರೆಲ್ಲ ಬೆಚ್ಚಿಬಿದ್ದರೆ, ಈ ಸಹೋದರಿಯರು ದಿಲ್‌ದಾರಾಗಿ, ಆದರೆ ಅಷ್ಟೇ ಸರಳವಾಗಿ ಸೆರೆಹಿಡಿಯುತ್ತಾರೆ. ಮನೆ, ಹೊಲ-ಗದ್ದೆ, ಅಪಾರ್ಟ್‌ಮೆಂಟು, ಉದ್ಯಾನ, ದೇವಸ್ಥಾನ, ಬಾವಿ, ಕೆರೆ, ನದಿ, ಶಾಲೆ, ಕಾಲೇಜು... ಹೀಗೆ ಇವರು ಹಾವು ಹಿಡಿಯದ ಜಾಗವೇ ಇಲ್ಲ. ಮಾರುದ್ದದ ಹಾವನ್ನು ಲೀಲಾಜಾಲವಾಗಿ ಹಿಡಿದು ಕೊರಳಿಗೆ ಹಾಕಿಕೊಂಡು 'ಪೋಸ್' ಕೊಟ್ಟಿದ್ದೂ ಇದೆ.

ಬೆಳಗಾವಿ ಹಾಗೂ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಹಾವು ಕಾಣಿಸಿಕೊಂಡರೆ ಸಾಕು, ಮೊದಲು ಫೋನ್ ಕರೆ ಬರುವುದು ಈ ಸಹೋದರಿಯರಿಗೇ. ಸರೀಸೃಪ ಹಿಡಿಯುವ ಕೌಶಲ ಹೊಂದಿರುವ ಪುರುಷರು ಬಹಳಷ್ಟು ಮಂದಿ ಇದ್ದಾರೆ. ಆದರೆ, ಈ ಗಟ್ಟಿತನ ತೋರಿದ ದೇಶದ ಕೆಲವೇ ಹೆಣ್ಣುಮಕ್ಕಳ ಸಾಲಿಗೆ ಈ 'ಸ್ನೇಕ್ ಸಿಸ್ಟರ್ಸ್' ಕೂಡ ಸೇರಿದ್ದಾರೆ.

ಇವರು ಹಾವು ಹಿಡಿಯುವ ಕಲೆ ಕರಗತ ಮಾಡಿಕೊಂಡಿದ್ದೇ ತಂದೆ ಚಂದ್ರಶೇಖರ ಅವರಿಂದ. ಚಂದ್ರಶೇಖರ ಬಾಲ್ಯದಲ್ಲೇ ಹಾವು- ಚೇಳುಗಳ ರಕ್ಷಣೆ ಮಾಡುತ್ತಾ ಬಂದವರು. ಸೈನಿಕರಾಗಿದ್ದ ಅವರು ಅಲ್ಲಿಯೂ ಸರೀಸೃಪಗಳ ರಕ್ಷಣೆ ಮಾಡುವಲ್ಲಿ ಆಸ್ಥೆ ವಹಿಸಿದ್ದರು. ಅದೇ ಕಲೆಯನ್ನು ತಮ್ಮ ಹೆಣ್ಣುಮಕ್ಕಳಿಗೂ ಕಲಿಸಿದ್ದಾರೆ.

'ನಾವು ಚಿಕ್ಕವರಿದ್ದಾಗ ಅಪ್ಪ ಹಾವು ಹಿಡಿಯುವುದನ್ನು ನೋಡುವಾಗಲೇ ನಮಗೂ ಅವುಗಳ ಬಗ್ಗೆ ಸೆಳೆತ ಶುರುವಾಯಿತು. ಕೆಲವು ಹಾವು ಕಚ್ಚುವುದಿಲ್ಲ, ಕಚ್ಚಿದರೂ ವಿಷ ಏರುವುದಿಲ್ಲ ಎಂಬುದನ್ನು ಜನರಿಗೆ ಅರ್ಥ ಮಾಡಿಸುತ್ತಿದ್ದರು. ಅಣ್ಣನ ಕೊರಳಿಗೆ ಹಾವು ಸುತ್ತಿ ಜನರ ಮುಂದೆ ನಿಲ್ಲಿಸುತ್ತಿದ್ದರು. ಅಣ್ಣ ಅಕಾಲಿಕವಾಗಿ ಸಾವಿಗೀಡಾದಾಗ ಹಾವನ್ನು ನಮ್ಮ ಕೊರಳಿಗೆ ಸುತ್ತಿಕೊಂಡೆವು. ನಾನು 8ನೇ ತರಗತಿಯಲ್ಲಿ ಇದ್ದಾಗಲೇ ನಾಗರಹಾವು ಹಿಡಿದೆ. ತಂಗಿ 7ನೇ ತರಗತಿಯಲ್ಲಿ ಇದ್ದಾಗ ಕೇರೆಹಾವು ಹಿಡಿದಳು. ಅಲ್ಲಿಂದೀಚೆಗೆ ಜನರೇ ಗುರುತಿಸಿ ಕರೆಯಲು ಶುರು ಮಾಡಿದರು. ಮೂವರೂ ಸೇರಿ ಇದುವರೆಗೆ 5,000ಕ್ಕೂ ಹೆಚ್ಚು ಹಾವುಗಳನ್ನು ರಕ್ಷಣೆ ಮಾಡಿದ್ದೇವೆ' ಎನ್ನುತ್ತಾರೆ ಪ್ರಿಯಾ.

'ಹಾವು ಹಿಡಿದರೆ ಎಷ್ಟು ದುಡ್ಡು ಕೊಡಬೇಕು ಎಂದು ಕೆಲವರು ಕೇಳುತ್ತಾರೆ. ಅಚ್ಚರಿ ಆಗುತ್ತದೆ. ಇದನ್ನು ಸಮಾಜದ ಕೆಲಸ ಅಥವಾ ಹವ್ಯಾಸ ಎಂದು ಮಾಡುತ್ತಿದ್ದೇವೆ. ಜನರಿಂದ ಹಾವಿಗೆ, ಹಾವಿನಿಂದ ಜನರಿಗೆ ಅಪಾಯ ಆಗಬಾರದು ಎಂಬುದೊಂದೇ ಉದ್ದೇಶ. ಹಿಡಿದ ಬಳಿಕ ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡುತ್ತೇವೆ. ಆಹಾರ, ನೀರು ಸಿಗುವಂಥ ಸ್ಥಳಕ್ಕೆ ಹೋಗಿ ಅದನ್ನು ಬಿಡುತ್ತೇವೆ' ಎಂದರು.

ಈ ಸಹೋದರಿಯರು ಬೆಳೆದಂತೆ ಹಾವುಗಳ ಬಗೆಗಿನ ಕುತೂಹಲವೂ ಬೆಳೆಯಿತು. ಗೂಗಲ್‌ನಲ್ಲಿ ಒಂದಷ್ಟು ಹುಡುಕಿದರು, ಪ್ರಯೋಗಾಲಯ-ಗಳಿಗೆ ಭೇಟಿ ನೀಡಿದರು, ಅನುಭವಿಗಳಿಂದ ಮಾಹಿತಿ ಕಲೆಹಾಕಿದರು. ಹಾವಿನ ಬಣ್ಣ, ಗುಣ, ಪ್ರಭೇದ, ಆಹಾರ ಪದ್ಧತಿ, ವಿಷದ ಸಾಧ್ಯತೆ, ಆವಾಸಸ್ಥಾನ, ಕಚ್ಚಿದಾಗ ಪಡೆಯಬೇಕಾದ ಪ್ರಾಥಮಿಕ ಚಿಕಿತ್ಸೆ... ಹೀಗೆ ಎಲ್ಲ ಆಯಾಮಗಳನ್ನೂ ಕರಗತ ಮಾಡಿಕೊಂಡರು.

'ಹಾವು ಹಿಡಿಯಲು ಬೇಕಾದ ಮುಖ್ಯ ಗುಣವೆಂದರೆ ಧೈರ್ಯ. ಹಾವು ಕಚ್ಚಿ ಸತ್ತವರಿಗಿಂತ, ಕಚ್ಚಿದ ಭಯಕ್ಕೆ ಸತ್ತವರೇ ಹೆಚ್ಚು. ಬಹುಪಾಲು ಹಾವುಗಳು ವಿಷಕಾರಿ ಅಲ್ಲ. ಇಂಥ ವಿಷಯಗಳನ್ನು ರೈತರಿಗೆ ತಿಳಿಸಿಕೊಡುವುದು ಅಗತ್ಯ. ಒಂದು ವೇಳೆ ಹಾವು ಕಚ್ಚಿದರೂ ಅದು ಯಾವ ಜಾತಿಯ ಹಾವು, ಅಪಾಯಕಾರಿಯೋ ಅಲ್ಲವೋ ಎಂಬುದು ಗೊತ್ತಿರಬೇಕು. ಇಲ್ಲದಿದ್ದರೆ ವಿನಾಕಾರಣ ಹಾವನ್ನು ಕೊಲ್ಲುತ್ತಾರೆ, ಭಯದಿಂದ ಪ್ರಾಣಕ್ಕೂ ಕಂಟಕ ತಂದುಕೊಳ್ಳುತ್ತಾರೆ' ಎನ್ನುತ್ತಾರೆ ಪ್ರಿಯಾ.

'ಅಕ್ಕ ಈಗ ಸಿನಿಮಾದಲ್ಲಿ ಕ್ರಿಯಾಶೀಲಳಾಗಿದ್ದಾಳೆ. ಹೆಚ್ಚು ಕರೆಗಳು ನನಗೇ ಬರುತ್ತಿವೆ. ನಾನು ಕೂಡ 'ಶೂಟಿಂಗ್' ಕ್ರೀಡೆಯಲ್ಲಿ ರಾಷ್ಟ್ರ ಮಟ್ಟದ ಪ್ರತಿನಿಧಿ ಆಗಿದ್ದೇನೆ. ಹಾವು ಹಿಡಿಯಲು ಹೆಚ್ಚು ಸಮಯ ಸಿಗುತ್ತಿಲ್ಲ. ಊರಲ್ಲಿ ಇದ್ದರೆ ಯಾವಾಗ ಕರೆದರೂ ಓಡಿ ಹೋಗುತ್ತೇನೆ. ಹಾವನ್ನು ರಕ್ಷಿಸಿದ ಖುಷಿಯೊಂದೇ ನನಗೆ ಸಾಕು' ಎಂಬುದು ಪ್ರೀತಿ ಅವರ ಮಾತು.

ಹಾವುಗಳ ಬಗ್ಗೆ ಸಿನಿಮಾ, ಧಾರಾವಾಹಿಗಳ ಮೂಲಕ ಬಹಳಷ್ಟು ಭ್ರಮೆ ಬಿತ್ತಲಾಗಿದೆ. ಧಾರ್ಮಿಕವಾಗಿಯೂ ಹಾವು ದೊಡ್ಡ 'ವಿಲನ್' ಆಗಿದೆ. ಇದರ 'ದೋಷ' ಬಿಡಿಸುವುದಕ್ಕಾಗಿಯೇ ದೊಡ್ಡದೊಡ್ಡ ದೇವಸ್ಥಾನಗಳಿವೆ. ಹಾವಿನ ದ್ವೇಷ 12 ವರ್ಷ ಎಂದೆಲ್ಲ ಬಿಂಬಿಸಿದ್ದಾರೆ. ಇದು ಅವರವರ ನಂಬಿಕೆಗೆ ಬಿಟ್ಟ ವಿಚಾರ. ಆದರೆ, ಹಾವು ಹಾಲು ಕುಡಿಯುವುದಿಲ್ಲ, ದ್ವೇಷ ಸಾಧಿಸುವುದಿಲ್ಲ, ನಾಗಿಣಿಯಾಗಿ ಕುಣಿಯುವುದಿಲ್ಲ, ನಾಗಮಣಿ, ನಾಗಲೋಕವೂ ಇಲ್ಲ, ಪುಂಗಿ ಊದಿದರೆ ತಲೆಯಾಡಿಸುವುದೂ ಇಲ್ಲ. ಇದನ್ನೆಲ್ಲ ಜನ ಅರ್ಥ ಮಾಡಿಕೊಳ್ಳಬೇಕು. ಸಂಪತ್ತಿನ ಕಾವಲು ಕಾಯುತ್ತಿದೆ ಎಂಬ ಮೌಢ್ಯದಿಂದ ಹಾವನ್ನು ಬಲಿ ಪಡೆಯುವವರೂ ಇದ್ದಾರೆ. ಹಾವಿಗೆ ಬೇಕಾಗಿರುವುದು ಇಲಿ, ಮೊಲ, ಹಲ್ಲಿ, ಕಪ್ಪೆ, ಕೋಳಿಯಂತಹ ಆಹಾರವಷ್ಟೇ ಎನ್ನುವುದು ಅವರ ಕಳಕಳಿ.

ಕಲ್ಲಲ್ಲ, ಫೋಟೊ ಹೊಡೆಯಿರಿ

ಜನವಸತಿ- ಹೊಲಗಳ ಸುತ್ತಮುತ್ತ ಆರು ಬಗೆಯ ಹಾವುಗಳು ಹೆಚ್ಚಾಗಿ ಕಂಡುಬರುತ್ತವೆ. ಇವುಗಳಲ್ಲಿ ಕೊಳಕಮಂಡಲ, ಕಾಮನ್ ವುಲ್ಫ್, ಕಾಮನ್ ಕ್ರೈಟ್ ಜಾತಿಯ ಹಾವುಗಳು ಹೆಚ್ಚು ವಿಷಕಾರಿ. ಅವು ಕಚ್ಚಿದರೆ ತಕ್ಷಣ ಚಿಕಿತ್ಸೆ ಪಡೆಯಬೇಕು. ಕೇರೆಹಾವು, ನೀರಹಾವು, ಹೆಬ್ಬಾವು ಅಪಾಯಕಾರಿ ಅಲ್ಲ. ನಾಗಸರ್ಪಗಳಲ್ಲಿ ಕೆಲವು ವಿಷಕಾರಿ ಅಲ್ಲದವೂ ಇವೆ ಎನ್ನುವುದು ಪ್ರಿಯಾ ಅವರ ಅನುಭವದ ಮಾತು.

ಎಲ್ಲಿಯಾದರೂ ಹಾವು ಕಂಡರೆ ಕಲ್ಲು ಹೊಡೆಯಬೇಡಿ, ಒಂದು ಫೋಟೊ ತೆಗೆಯಿರಿ. ಗೂಗಲ್ ಲೆನ್ಸ್‌ನಲ್ಲಿ ಅಪ್‌ಲೋಡ್ ಮಾಡಿ, ಅದರ ಬಗೆಗಿನ ಮಾಹಿತಿಯನ್ನು ಅರಿಯಿರಿ ಎನ್ನುವುದು ಅವರ ಕಿವಿಮಾತು.

ಹೀಗಿದೆ ಇವರ 'ಸರ್ಪಸ್ನೇಹ'

ಹಾವನ್ನು ಸುರಕ್ಷಿತವಾಗಿ ಹಿಡಿಯುವ ಮೂಲಕ, ಮಾನವ-ವನ್ಯಜೀವಿ ಇಬ್ಬರ ಸಂರಕ್ಷಣೆಯಲ್ಲೂ ತೊಡಗಿರುವ ದೇಶದ ಪ್ರಮುಖ ಮಹಿಳೆಯರು ಇವರು:



ರೋಷನಿ ಜಿ.ಎಸ್.

ಕೇರಳದ ಈ ಅರಣ್ಯಾಧಿಕಾರಿ, ಸಮವಸ್ತ್ರದಲ್ಲೇ ತೊರೆಯೊಂದರ ಬಳಿ ಕೋಲಿನಿಂದ ನಾಗರಹಾವನ್ನು ಹಿಡಿದು ಚೀಲಕ್ಕೆ ತುಂಬಿಸುತ್ತಿರುವ ರೋಚಕ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಹರಿದಾಡಿತು. 8 ವರ್ಷಗಳ ಸೇವಾವಧಿಯಲ್ಲಿ 800 ಹಾವುಗಳನ್ನು ಹಿಡಿದಿದ್ದರೂ 16 ಅಡಿ ಉದ್ದದ ಬೃಹತ್ ನಾಗರಹಾವನ್ನು ಹಿಡಿದದ್ದು ಇದೇ ಮೊದಲು. ಈ ಅಪಾಯಕಾರಿ ಸಾಹಸ ಮಾಡುವಾಗ ಆಕೆ ತೋರುವ ಶಾಂತಚಿತ್ತವು ಪ್ರಶಂಸೆಗೆ ಪಾತ್ರವಾಗಿದೆ.



ವನಿತಾ ಜಗದೇವ್

'ಸರ್ಪಸ್ನೇಹಿ' ಎನಿಸಿಕೊಂಡಿರುವ ಮಹಾರಾಷ್ಟ್ರದ ವನಿತಾ ಜಗದೇವ್ ಅವರನ್ನು, ದೇಶದ ಮೊದಲ ಮಹಿಳಾ ಸರ್ಪ ಸಂರಕ್ಷಕಿ ಎಂದು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ದಾಖಲಿಸಿದೆ. 35ಕ್ಕೂ ಹೆಚ್ಚು ವರ್ಷಗಳಿಂದ 50,000ಕ್ಕೂ ಹೆಚ್ಚು ಹಾವುಗಳನ್ನು ಇವರು ಸಂರಕ್ಷಿಸಿದ್ದಾರೆ. ಈ ಅಪೂರ್ವ ಕಾರ್ಯಕ್ಕಾಗಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಅತ್ಯುನ್ನತ 'ನಾರಿ ಶಕ್ತಿ ಪುರಸ್ಕಾರ'ವು ಅವರನ್ನು ಅರಸಿ ಬಂದಿದೆ.

ಶಿವಾನಿ ಚಿತ್ತಿ

ಹಾವುಗಳ ಸಂರಕ್ಷಣೆ ಮತ್ತು ನಡವಳಿಕೆಗೆ ಸಂಬಂಧಿಸಿದ ವಿಡಿಯೊ ಹಾಗೂ ಮಾಹಿತಿಯನ್ನು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಳ್ಳುವುದರಲ್ಲಿ ಕರ್ನಾಟಕದ ಶಿವಾನಿ ಅವರದು ಎತ್ತಿದ ಕೈ. 'ಸ್ನೇಕ್‌ಸೇವರ್ ಶಿವಾನಿ' ಎಂದೇ ಅವರು ತಮ್ಮನ್ನು ಕರೆದುಕೊಂಡಿದ್ದಾರೆ. ನೈಸರ್ಗಿಕ ಆವಾಸಸ್ಥಾನಗಳಲ್ಲಿ ಹಾವುಗಳನ್ನು ತೋರಿಸುವ ಮೂಲಕವೂ ಜನಜಾಗೃತಿ ಮೂಡಿಸುತ್ತಿದ್ದಾರೆ.

ತಮಿಳುನಾಡು ನಾರಿಯರ ಮಾದರಿ


ಹಾವುಗಳ ಬಗ್ಗೆ ಜನರಲ್ಲಿ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲೆಂದೇ ಅಸ್ತಿತ್ವಕ್ಕೆ ಬಂದಿದೆ ತಮಿಳುನಾಡು ಸರ್ಪ ಸಂಶೋಧನೆ ಮತ್ತು ವನ್ಯಜೀವಿ ಸಂರಕ್ಷಣಾ ಟ್ರಸ್ಟ್. ಸಂಪೂರ್ಣವಾಗಿ ಮಹಿಳಾ ಸದಸ್ಯರೇ ಇರುವ ಈ ಟ್ರಸ್ಟ್, ದಿಢೀರನೆ ಹಾವು ಎದುರಾದಾಗ ಸಂಯಮದಿಂದ ವರ್ತಿಸಬೇಕಾದ ಅಗತ್ಯವನ್ನು ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಗೃಹಿಣಿಯರಿಗೆ ಮನದಟ್ಟು ಮಾಡುತ್ತಿದೆ. ಕೋಲಿನಿಂದ ಹಾವು ಹಿಡಿಯುವ ರೂಢಿಗತ ಪದ್ಧತಿಗೆ ಬದಲಾಗಿ, ಅದಕ್ಕೆ ನೋವಾಗದಂತೆ ಕೈಯಿಂದಲೇ ಹಿಡಿಯುವುದರಲ್ಲಿ ನಿಪುಣರಾಗಿದ್ದಾರೆ ಟ್ರಸ್ಟ್‌ನ ಸಂಸ್ಥಾಪಕಿ ಮಣಿಮೇಖಲೆ.



ನಾವೀಗ 'ಒಂಟಿ' ಅಲ್ಲ

ಉತ್ತರ ಕರ್ನಾಟಕ ಭಾಗದ ಒಂಟಿ ಮಹಿಳೆಯರು ಈಗ ಸಂಘಟಿತರಾಗಿದ್ದಾರೆ, ತಮ್ಮ ಹಕ್ಕೊತ್ತಾಯ ಮಂಡನೆಗೆ ಮುಂದಾಗಿದ್ದಾರೆ

• ರಾಹುಲ ಬೆಳಗಲಿ



ಒಂಟಿ ಮಹಿಳೆ. ಈ ಪದಗಳನ್ನು ಕೇಳಿದೊಡನೆ, ಆ ಮಹಿಳೆಯ ಬಗ್ಗೆ ಜನರ ಮನದಲ್ಲಿ ಹಲವು ರೀತಿಯ ಕಲ್ಪನೆಗಳು ಮೂಡತೊಡಗುತ್ತವೆ. ಅವುಗಳಲ್ಲಿ ಮುಖ್ಯವಾದವು, ಆಕೆ ಅಬಲೆ, ಆಸರೆಯ ಕೊರತೆಯಿದೆ ಎಂದುಕೊಳ್ಳುವುದು, ದಿಕ್ಕೇ ಇಲ್ಲದವಳು ಎಂಬ ನಿಕೃಷ್ಟ ಧೋರಣೆ.

ಇದು ಇತ್ತೀಚಿನ ಕಥೆಯಲ್ಲ. ಶತಮಾನಗಳಿಂದ ಮಹಿಳೆಯ ಬಗ್ಗೆ ಮೂಡಿಬಂದಿರುವ ಪೂರ್ವಗ್ರಹ.

ಒಂಟಿ ಮಹಿಳೆ ಎಂದ ಮಾತ್ರಕ್ಕೆ ಆಕೆ ನಿರಾಶ್ರಿತಳಲ್ಲ, ಸ್ವಾವಲಂಬಿ ಜೀವಿ ಎಂಬುದನ್ನು ಮನವರಿಕೆ ಮಾಡಿಕೊಡಲು ಆಯಾ ಕಾಲಘಟ್ಟಗಳಲ್ಲಿ ನಿರಂತರ ಪ್ರಯತ್ನಗಳು ನಡೆದಿವೆ. ಇಂಥ ಬೆಳವಣಿಗೆ ಆದಾಗಲೆಲ್ಲ, ಅದನ್ನು ಹೊಸಕಿಹಾಕುವ ಪ್ರಯತ್ನಗಳೂ ವ್ಯವಸ್ಥಿತವಾಗಿ ನಡೆದಿವೆ. ಆದರೂ ಒಂಟಿ ಮಹಿಳೆಯ ಹೋರಾಟ ಮಾತ್ರ ನಿಂತಿಲ್ಲ. ವಿಜ್ಞಾನ, ತಂತ್ರಜ್ಞಾನ, ಜೀವನಶೈಲಿ, ಜಗತ್ತು, ವಿಚಾರಗಳು ಬದಲಾದಂತೆ ಒಂಟಿ ಮಹಿಳೆಯರ ಕುರಿತಾದ ಭಾವನೆಗಳೂ ಬದಲಾಗುತ್ತಿವೆ. ಒಂಟಿ ಮಹಿಳೆಯರು ಈಗ ಸಂಘಟಿತರಾಗುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಹುಬ್ಬಳ್ಳಿಯಲ್ಲಿ ಈಚೆಗೆ ಒಂಟಿ ಮಹಿಳೆಯರ ಸಮಾವೇಶವೊಂದು ನಡೆಯಿತು. ಅದರ ಘೋಷವಾಕ್ಯ ಹೀಗಿತ್ತು: 'ಸಾಮಾಜಿಕ ಬಹಿಷ್ಕಾರ ತೊಡೆಯೋಣ, ಸ್ವಾವಲಂಬಿ ಬದುಕಿನತ್ತ ಮುನ್ನಡೆಯೋಣ'. ಉತ್ತರ ಕರ್ನಾಟಕದ ವಿವಿಧ ಭಾಗಗಳಿಂದ ಬಂದಿದ್ದವರಿದ್ದ ಸಮಾವೇಶದಲ್ಲಿ ಹಲವು ವಿಷಯಗಳು ಚರ್ಚೆಗೆ ಒಳಪಟ್ಟವು. ಸಂಕಷ್ಟಗಳನ್ನು ಎದುರಿಸುವ ಬಗೆಗಿನ ಸಲಹೆಗಳು ಕೇಳಿಬಂದವು. ಜಿಲ್ಲಾ ಕೇಂದ್ರಗಳಿಗೆ ಸೀಮಿತವಾಗದೆ ಗ್ರಾಮೀಣ ಭಾಗದ ಮಹಿಳೆಯರ ನೋವಿಗೂ ಸ್ಪಂದಿಸುವ ಆಶಯ ವ್ಯಕ್ತವಾಯಿತು.


ಒಂಟಿ ಮಹಿಳೆಯರು ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಲು ಸರ್ಕಾರ, ಸಂಘ- ಸಂಸ್ಥೆಗಳು ನೆರವಾಗಬೇಕು ಎಂಬ ಆಗ್ರಹ ಕೇಳಿಬಂತು. ದೇವದಾಸಿ ಪದ್ಧತಿಯಿಂದ ಮುಕ್ತವಾಗಿರುವ ಮಹಿಳೆಯರಿಗೆ ಇನ್ನೂ ಸುಭದ್ರವಾದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ಅವರ ಮಕ್ಕಳ ಪಾಡಂತೂ ಹೇಳತೀರದು. ಮದುವೆಯಾಗಿ ಹಿಂಸೆ ಮತ್ತು ದೌರ್ಜನ್ಯ ಸಹಿಸಲಾಗದೇ ಆ ವ್ಯವಸ್ಥೆಯಿಂದ ಹೊರಬಂದ ಮಹಿಳೆಯರ ಸ್ಥಿತಿಯಂತೂ ಶೋಚನೀಯ. ಅತ್ತ ಗಂಡನ ಮನೆಯವರು ಆಕೆಯನ್ನು ಹೊರದಬ್ಬಿದರೆ, ಇತ್ತ ತವರು ಮನೆಯವರು ಇರಿಸಿಕೊಳ್ಳಲು ಹಿಂಜರಿಯುತ್ತಾರೆ. ಈ ಎಲ್ಲ ಸಂಗತಿಗಳ ಬಗ್ಗೆ ಕಳಕಳಿ ವ್ಯಕ್ತವಾಯಿತು. ಶಿಕ್ಷಣ ಪಡೆಯುವಾಗ ಮತ್ತು ವೃದ್ಧಾಪ್ಯದಲ್ಲಿ ನೆರವಾಗುವ ಸರ್ಕಾರವು ಒಂಟಿ ಮಹಿಳೆಯರ ಬಗ್ಗೆಯೂ ಕಾಳಜಿ ತೋರಬೇಕು ಎಂಬ ಒತ್ತಾಯ ಕರ್ನಾಟಕ ರಾಜ್ಯ ಒಂಟಿ ಮಹಿಳೆಯರ ಸಂರಕ್ಷಣಾ ಸಂಘದ್ದು. ಈ ದಿಸೆಯಲ್ಲಿ ಸ್ಪಂದನೆ ದೊರೆಯಬೇಕು ಎಂಬ ಆಶಯ ಸಹೃದಯರದ್ದು.

ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಲಹರಿ, ಪುಟ್ಟ ಪುಟ್ಟ ಬರಹಗಳನ್ನು 'ಭೂಮಿಕಾ'ಗೆ ಬರೆಯಬಹುದು. ಆರೋಗ್ಯಕರ ಜೀವನಶೈಲಿಗೆ ಪೂರಕವಾಗುವ ಟಿಪ್ಸ್‌ಗಳನ್ನು ಹಂಚಿಕೊಳ್ಳಬಹುದು. ನಮ್ಮ ಇ- ಮೇಲ್ ಐ.ಡಿ- bhoomika@prajavani.co.in

40 ವರ್ಷ ಪೂರೈಸಿದ ಎಂಜಿ ರಸ್ತೆ ಆಭರಣ



ಡಾ. ಪ್ರತಾಪ್ ಮಧುಕರ್ ಕಾಮತ್, ವ್ಯವಸ್ಥಾಪಕ ನಿರ್ದೇಶಕ



ನಾಲ್ಕು ದಶಕಗಳ ಇತಿಹಾಸ ಹೊಂದಿರುವ ಎಂ.ಜಿ. ರಸ್ತೆಯ 'ಆಭರಣ' ಮಳಿಗೆ ಕೇವಲ ಆಭರಣ ಅಂಗಡಿ ಮಾತ್ರವಲ್ಲ, ನಂಬಿಕಸ್ಥ ಗ್ರಾಹಕರ ನೆಲೆಯೂ ಎನಿಸಿದೆ.

ಮಹಾನಗರದ ಐಕಾನಿಕ್ ಮಹಾತ್ಮ ಗಾಂಧಿ ರಸ್ತೆಯಲ್ಲಿ 1985ರಲ್ಲಿ ತೆರೆದ ಆಭರಣ ಮಳಿಗೆ 40 ವರ್ಷಗಳನ್ನು ಪೂರೈಸಿ ಮುನ್ನುಗ್ಗುತ್ತಿದೆ. ಬೆಂಗಳೂರಿನ ಮೋಡಿಯ ನಡುವೆ ಇಲ್ಲಿನ ಬಹುಮುಖ ಗ್ರಾಹಕರ ಇಚ್ಛೆಗೆ ತಕ್ಕಂತ ಉತ್ತಮ ಆಭರಣ ಪರಿಚಯಿಸಿದ್ದು ಮಾತ್ರವಲ್ಲದೆ, ತನ್ನ ನಿಷ್ಠಾವಂತ ಗ್ರಾಹಕರ ನೆಲೆಯಾಗಿ ರೂಪುಗೊಂಡಿದೆ. ಜ್ಯುವೆಲರಿ ಅಂಗಡಿಗಿಂತ ಹೆಚ್ಚಿನದ್ದಾಗಿ ತನ್ನ ನಾಲ್ಕು ದಶಕಗಳ ಕಥೆಯನ್ನೂ ಹೊಂದಿರುವ ಆಭರಣ, ಕುಟುಂಬದ ಇತಿಹಾಸಗಳು, ಆಚರಣೆಗಳು ಮತ್ತು ಪರಂಪರೆಯಿಂದ ಹೆಣೆಯಲ್ಪಟ್ಟ ಹೆಸರಾಗಿದೆ. ಪ್ರವೃತ್ತಿಗಳನ್ನು ಮೀರಿ 5ನೇ ದಶಕಕ್ಕೆ ಕಾಲಿಡುತ್ತಿರುವ ಆಭರಣದ ಒಡವೆಗಳು ಸರ್ವ ಕಾಲಕ್ಕೂ ಹೊಳೆಯುತ್ತಲೇ ಇರುತ್ತವೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

ಈ ಸಂದರ್ಭದಲ್ಲಿ ಆಭರಣ ಜ್ಯುವೆಲರ್ಸ್ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರತಾಪ್ ಮಧುಕರ್ ಕಾಮತ್ ಮಾತನಾಡಿ, "ನನ್ನ ತಂದೆ ಉಡುಪಿಯಿಂದ ಬೆಂಗಳೂರಿಗೆ ಈ ಶಾಖೆಯನ್ನು ತೆರೆಯಲು ಬಂದಿದ್ದರು. ಇಂದು, ನಾವು ಎಂ.ಜಿ. ರಸ್ತೆಯಲ್ಲಿರುವ ಅತ್ಯಂತ ಹಳೆಯ ಆಭರಣ ಮಳಿಗೆ ಎನಿಸಿದ್ದೇವೆ. ಇಂದು ನನ್ನ ಮಗಳು ಸಂಯುಕ್ತಾ ಈ ವ್ಯವಹಾರಕ್ಕೆ ಕಾಲಿಡುತ್ತಿರುವುದನ್ನು ನೋಡುವುದು ನಂಬಲಾಗದಷ್ಟು ತೃಪ್ತಿಕರವಾಗಿದೆ. ನಮಗೆ, ಇಲ್ಲಿನ 40 ವರ್ಷಗಳು ಎಂದರೆ ಇಡೀ ಜಗತ್ತು" ಎಂಬಂತಾಗಿದೆ.

ಹೊಸ ಅಧ್ಯಾಯ: ಮಾತು ಮುಂದುವರಿಸಿದ ಪ್ರತಾಪ್ ಅವರು, ನನ್ನ ಮಗಳು ಅಮೆರಿಕದಲ್ಲಿ ತನ್ನ ಅಧ್ಯಯನ ಮುಗಿಸಿ ಇತ್ತೀಚೆಗೆ ಹಿಂದಿರುಗಿದ್ದಾರೆ. ಅವರು ನಮ್ಮ ಆಭರಣ ಬ್ರ್ಯಾಂಡ್‌ಗೆ ಹೊಸ ಅಧ್ಯಾಯವಾಗಿ ಪ್ರತಿನಿಧಿಸುತ್ತಾರೆ. ಸಂಯುಕ್ತಾ ಪ್ರಕಾರ "ಭಾರತೀಯ ಆಭರಣಗಳು ಕೇವಲ ಅಲಂಕಾರಿಕವಲ್ಲ. ಅವು ನಮ್ಮ ಇತಿಹಾಸ, ಪುರಾಣ ಮತ್ತು ಕರಕುಶಲತೆಯನ್ನು ಒಳಗೊಂಡಿವೆ. ಆದರೆ, ನಾವು ಅವುಗಳನ್ನು ಹೇಗೆ ಇಂದಿನ ಗ್ರಾಹಕರಲ್ಲಿ ಮುಂದೆ ಪ್ರಸ್ತುತಪಡಿಸುತ್ತೇವೆ ಎಂಬುದು ಅವರ ಅಭಿಪ್ರಾಯ".

"ನಾನು 25 ವರ್ಷಗಳ ಹಿಂದೆ ವ್ಯವಹಾರಕ್ಕೆ ಇಳಿದಾಗ, ಕುಟುಂಬದ ಎಲ್ಲ ಹೆಣ್ಣುಮಕ್ಕಳು ಒಂದೇ ರೀತಿ ಆಭರಣ ವಿನ್ಯಾಸವನ್ನು ಆರಿಸಿಕೊಳ್ಳುತ್ತಿದ್ದರು. ಇಂದು, ಪ್ರತಿ ಮಹಿಳೆ ತಾನು ಬಯಸಿದ, ತನಗಿಷ್ಟವಾದ ಹಾಗೂ ಸರಿಹೊಂದುವ ಆಭರಣವನ್ನು ತನ್ನದಾಗಿಸಿಕೊಳ್ಳಲು ಇಚ್ಛಿಸುತ್ತಾರೆ. ಆದ್ದರಿಂದ ನಾವು ಪ್ರಸ್ತುತ ಕರಕುಶಲತೆಯ ಸಾರವನ್ನು ಕಳೆದುಕೊಳ್ಳದೆ, ಪ್ರತ್ಯೇಕ ಹಾಗೂ ವಿಭಿನ್ನ ಅಭಿರುಚಿಯ ಮೇಲೆ ಕೇಂದ್ರೀಕರಿಸುತ್ತೇವೆ ಎಂದರು."

ನಂಬಿಕೆ, ಕರಕುಶಲತೆಯ ಪರಂಪರೆ: ಇದರ ಬಗ್ಗೆ ಹೆಚ್ಚಿನ ಒತ್ತು ನೀಡಿರುವ ನಾವು, ಹಿಂದೆ ಹಾಲ್‌ಮಾರ್ಕ್ ಅಥವಾ ಸರ್ಟಿಫಿಕೇಷನ್ ಯಾವುದೇ ಇರಲಿಲ್ಲ. ಕೇವಲ ನಂಬಿಕೆ ಮೇಲೆ ವ್ಯವಹಾರ ನಡೆಯುತ್ತಿತ್ತು. ಜನರು ಆಭರಣ್‌ನಲ್ಲಿ ಪ್ರಾಮಾಣಿಕ ಮೌಲ್ಯ ಸಿಗುತ್ತದೆ ಎಂಬ ವಿಶ್ವಾಸ ಹೊಂದಿರುತ್ತಿದ್ದರು. ನಾವು ಅದಕ್ಕೆ ಬದ್ಧರಾಗಿ ಕೆಲಸ ಮಾಡುತ್ತಿದ್ದೇವು. ಅದು ಇಂದು ನಮ್ಮನ್ನು ಈ ಮಟ್ಟಕ್ಕೆ ಕೊಂಡೊಯ್ದಿದೆ ಎಂಬುದು ಪ್ರತಾಪ್ ಅವರ ಮಾತು.

ಇತರ ನಗರಗಳಿಗೂ ವಿಸ್ತರಿಸುವ ಯೋಜನೆ: ಸಂಯುಕ್ತಾ

'ಆಭರಣ ಇತರ ನಗರಗಳಿಗೆ ವಿಸ್ತರಿಸಲು ನಾವು ಯೋಚಿಸುತ್ತಿದ್ದೇವೆ. ಇದೇ ಸಮಯದಲ್ಲಿ ಮತ್ತಷ್ಟು ವಿಶೇಷವಾಗಿಸುವ ಆಭರಣ ವಿನ್ಯಾಸಗಳು, ಗುಣಮಟ್ಟ ಮತ್ತು ಸೇವೆ ನೀಡಲು ನಿಷ್ಠರಾಗಿದ್ದೇವೆ. ನನ್ನ ಅಜ್ಜ ಮತ್ತು ನನ್ನ ತಂದೆಯಿಂದಾಗಿ ನಮಗೆ ಅದ್ಭುತ ಪರಂಪರೆ ಬಂದಿದೆ. ಈಗ, ಭಾರತೀಯ ವಿನ್ಯಾಸಗಳು, ವಿಶೇಷವಾಗಿ ವಜ್ರ ಮತ್ತು ಸಾಂಪ್ರದಾಯಿಕ ತುಣುಕುಗಳು ಸಮಕಾಲೀನ ಶೈಲಿಯೊಂದಿಗೆ ಹೇಗೆ ಸುಂದರವಾಗಿಸಬಹುದು. ಗ್ರಾಹಕರ ಮುಂದೆ ಹೇಗೆ ಪ್ರಸ್ತುತ ಪಡಿಸುವುದು ಎಂಬುದು ನಮ್ಮ ಮುಂದಿರುವ ಸವಾಲು'.

40% ರವರೆಗೆ

ಸಂಭ್ರಮಾಚರಣೆ

ಈ ಮೈಲಿಗಲ್ಲಿನ ಸಂಭ್ರಮ ವರ್ಷಕ್ಕಾಗಿ, ಆಭರಣ ಮಳಿಗೆ ಜು. 25 ರಿಂದ 31 ರವರೆಗೆ ಎಂ.ಜಿ. ರಸ್ತೆಯ ಶೋ ರೂಂನಲ್ಲಿ ಒಂದು ವಾರದ ವಿಶೇಷ ಕೊಡುಗೆ ಕಾರ್ಯಕ್ರಮ ಹಮ್ಮಿಕೊಂಡಿದೆ. ಮೇಕಿಂಗ್ ಚಾರ್ಜ್‌ಗಳಲ್ಲಿ ರಿಯಾಯಿತಿ ನೀಡುತ್ತಲಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಪಂಚಮಿ ಬಂತಲ್ರೀ ಉಂಡಿ ಕಟ್ಟೋಣ್ ಬರ್ರೀ

ರಸಾಸ್ವಾದ

'**ಉಂಡಿ** ಕಟ್ಟೂದ್‌ss ಅಗ್ದಿ ಸರಳೈತ್ರಿ. ಆದ್ರ ಬಾಳ್ ಮಂದಿ ಸಣ್ಣುಟ್ ತಪ್ ಮಾಡ್ತಾರ. ಆಗ ಉಂಡಿ ರುಚಿನೇ ಹಾಳಾಕತಿ. ಪಾಕ ಛಲೋತ್ನಗೆ ಹಿಡದ್ರ ಉಂಡಿ ಮಸ್ತ್ ಬರ್ತಾವ. ಪಂಚ್ಮಿ ಬಂತಲ್ರೀ, ಬರ್ರಿss... ಪಾಕ ಹೆಂಗ್ ಹಿಡಿಯೋದ್ ಅಂತ ತೋರಿಸ್ತೀನಿ...'

ಹೀಗೆ ಉತ್ತರ ಕರ್ನಾಟಕದ ಶೈಲಿಯಲ್ಲಿ ಆಹ್ವಾನವೀಯುವ 'ಪಾಕ ಶೃಂಗಾರ' ಯೂಟ್ಯೂಬ್ ಚಾನೆಲ್‌ನ ಗೀತಾ ಪ್ರದೀಪ್, ಬಗೆಬಗೆ ಉಂಡಿ ಕಟ್ಟುವುದರಲ್ಲಿ ಸಿದ್ಧಹಸ್ತರು.

ಇನ್ನೇನು ಪಂಚಮಿ ಹಬ್ಬ ಹೊಸ್ತಿಲಲ್ಲಿದೆ. ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಭಾಗದಲ್ಲಂತೂ ಈ ಹಬ್ಬದಲ್ಲಿ ಉಂಡಿಗಳದ್ದೇ ಕಾರುಬಾರು. ತಂಬಿಟ್ಟು, ಅಳ್ಳಿಟ್ಟು, ಶೇಂಗಾ ಉಂಡಿ, ಹುರಿಗಡಲೆ ಉಂಡಿ, ಗುಳ್ಳಡಕಿ ಉಂಡಿ, ಲಡಕಿ ಉಂಡಿ, ಎಳ್ಳುಂಡಿ, ಮಂಡಕ್ಕಿ ಉಂಡಿ, ರಾಜಗಿರಿ ಉಂಡಿ... ಸಾಲುಗಟ್ಟುತ್ತವೆ.

ಉಂಡಿ ಕಟ್ಟಲು ಹದವರಿತ ಬೆಲ್ಲ ಅಥವಾ ಸಕ್ಕರೆಯ ಪಾಕ ಜೊತೆಯಾದರೇನೆ ಚೆನ್ನ. ಆದರೆ ಬಹುತೇಕರಿಗೆ ಬೆಲ್ಲಕ್ಕೆ ಎಷ್ಟು ನೀರು ಹಾಕಬೇಕು, ಎಷ್ಟು ಹೊತ್ತು ಕುದಿದರೆ ಪಾಕ ಬರುತ್ತದೆ, ಯಾವ ಬಗೆಯ ಉಂಡಿಗೆ ಎಷ್ಟು ಬೆಲ್ಲ ಬೇಕು ಎನ್ನುವಂಥ ಹಲವು ಪ್ರಶ್ನೆಗಳು ಕಾಡುತ್ತವೆ. ಪಾಕದ ದೇಖರೇಖಿ ಅರಿತಿರುವ ಗೀತಾ, ಅಚ್ಚುಕಟ್ಟಾಗಿ ಪಾಕ ತೆಗೆಯುವುದನ್ನಷ್ಟೇ ಅಲ್ಲ, ಪಾಕ ತೆಗೆಯದೇ ರುಚಿಕಟ್ಟಾಗಿ ಉಂಡಿ ಕಟ್ಟುವ ಗುಟ್ಟನ್ನೂ ಬಿಟ್ಟುಕೊಟ್ಟಿದ್ದಾರೆ! 87 ಬಗೆಯ ಉಂಡಿಗಳನ್ನು ಕಟ್ಟಿದ್ದಾರೆ.

ಎಂಟು ವರ್ಷಗಳ ಹಿಂದೆ, ಎಸ್‌ಎಸ್‌ಎಲ್‌ಸಿ ಓದುತ್ತಿದ್ದ ಮಗಳ ನೆರವಿನಿಂದ ವಿಡಿಯೊ ಮಾಡಿ ಯೂಟ್ಯೂಬ್‌ಗೆ ಅವರು ಅಪ್‌ಲೋಡ್ ಮಾಡಿದ ಮೊದಲ ರೆಸಿಪಿಯೂ ಅಗಸೆ ಉಂಡಿಯದ್ದು. ವಿಜಯಪುರ ಜಿಲ್ಲೆಯವರಾದ ಗೀತಾ ಸದ್ಯಕ್ಕೆ ಮಣಿಪಾಲದಲ್ಲಿ ನೆಲಸಿದ್ದಾರೆ.

'ಈಗಿನ ಬಾಳ್ ಮಂದಿಗೆ ಉತ್ತರ ಕರ್ನಾಟಕದ ಊಟ ಅಂದ್‌ಕೂಡ್ಲೆ ಎಣ್‌ಗಾಯ್ ಪಲ್ಯ, ಜ್ವಾಳದ್ ರೊಟ್ಟಿ, ಝುಣಕ ಎಂದಿರ್ತೈತ್ರಿ. ಅದರ ಹೊರತಾಗಿ ನಮ್ ಅಡುಗೆಗಳು ಬಾಳ್ ಅದಾವು. ಅಂಥವನ್ನೆಲ್ಲ ಅಮ್ಮ, ಅಜ್ಜಿ, ಅತ್ತೆಯಿಂದ ಕಲ್ತು ಹೇಳ್ಕೊಡ್ತಿದೀನಿ. ನನ್ ಅಡುಗಿ ನೋಡಿ, ಟ್ರೈ ಮಾಡಿ ಅಮೆರಿಕ, ದುಬೈ, ಲಂಡನ್‌ನಿಂದಲೂ ಫೋಟೊ ಹಾಕ್ತಾರ್ರಿ. ಆಗ ಅಗ್ದಿ ಖುಷಿ ಆಕೇತಿ' ಎನ್ನುತ್ತಾ ನಗೆ ಚೆಲ್ಲುವರು ಗೀತಾ.

ಕಾರುಕಲ್ಲಲ್ಲಿ ಕುಟ್ಟಿ ಕುಟ್ಟಿ...

ಅವರ ಅಡುಗೆ ಮನೆಯ ಮತ್ತೊಂದು ವಿಶೇಷ ಕಾರುಕಲ್ಲು (ಕುಟ್ಟುವ ಕಲ್ಲು). ಈ ಕಲ್ಲಿನಲ್ಲಿ ಕುಟ್ಟಿ ಮಾಡಿದ ಪದಾರ್ಥದ ರುಚಿಯೇ ಬೇರೆ. ಅಜ್ಜಿಯಿಂದ ಬಳುವಳಿಯಾಗಿ ಬಂದ, 50 ವರ್ಷಗಳಿಗೂ ಹಳೆಯದಾದ ಕಾರುಕಲ್ಲು ಗೀತಾ ಅವರ ಬಹುತೇಕ ವಿಡಿಯೊಗಳಲ್ಲಿ ಕಾಣಿಸಿಕೊಳ್ಳುತ್ತದೆ. ವೀಕ್ಷಕರಿಗೂ 'ಕುಟ್ಟಾಣಿಯಲ್ಲೇ ಕುಟ್ಟಿ ಮಾಡಿ' ಎಂದು ಸಲಹೆ ನೀಡುವ ಅವರು, ಹೊಸ ಕಾರುಕಲ್ಲು ಪಳಗಿಸುವುದನ್ನೂ ಹೇಳಿಕೊಟ್ಟಿದ್ದಾರೆ. ಹಾಗೇ ಸಾಂಬಾರು, ಪಲ್ಯ ಮಾಡಲು ಮಣ್ಣಿನ ಗಡಿಗೆ ಬಳಸುವ ಗೀತಾ, ಅದರಲ್ಲಿ ಮಾಡುವುದರಿಂದ ಪಡೆಯಬಹುದಾದ ಆರೋಗ್ಯದ ಗುಟ್ಟನ್ನೂ ತಿಳಿಸಿದ್ದಾರೆ.

ಇನ್ನು ಕಬ್ಬಿಣದ ಹೆಂಚು ಪಳಗಿಸುವುದು ಸೇರಿದಂತೆ ಪಾಕಶಾಲೆಯ ಒಳ ಹೊರಗುಗಳನ್ನು ಮನಮುಟ್ಟುವ ರೀತಿಯಲ್ಲಿ ಬಿಡಿಸಿಟ್ಟಿದ್ದಾರೆ. ಸಾಬುದಾನಿ ಚೂಡಾ, ಬೆಳ್ಳುಳ್ಳಿ ಚೂಡಾ, ಬಟಾಟಿ ಚುಡ್ವಾ, ದಾವಣಗೆರೆ ನರ್ಗೀಸ್ ಮಂಡಕ್ಕಿ, ಪುದಿನಾ ಮಸಾಲ ಮಂಡಕ್ಕಿ, ಉಳ್ಳಾಗಡ್ಡಿ ಚುನಮರಿ, ಕೊಲ್ಹಾಪುರಿ ಬದಂಗ್ ಚೂಡಾ, ಬೆಳಗಾವಿ ಚುನಮರಿ ಚೂಡಾ ಹೀಗೆ 37 ಬಗೆಯ ಚೂಡಾ ರೆಸಿಪಿಗಳನ್ನು ಹೇಳಿಕೊಟ್ಟಿದ್ದಾರೆ. ಹಾಗೆಯೇ ಸಾಟಿ ಹಚ್ಚಿ ಮಾಡಿದ ಕರ್ಚಿಕಾಯಿ, ಪಡುವಲಕಾಯಿ ಎಣ್ಣೆಗಾಯಿ, ಪರಡಿ ಪಾಯಸ, ಗುದುಗಿನ ಹುಗ್ಗಿ, ಉಳಿದ ಜೋಳದ ರೊಟ್ಟಿಯಿಂದ ಮಾಡುವ ಮಜ್ಜಿಗ್ಯಾಗಿನ ರೊಟ್ಟಿ, ಬಾಂದಿಟ್ಟು, ದೀಪಾವಳಿ ಹಬ್ಬಕ್ಕೆ ಮಾಡುವ ಚೌಡೆ, ಮೆಣಸಿನಕಾಯಿ ಸಂಡಿಗೆ... ಹೀಗೆ ಇವರು ಪರಿಚಯಿಸಿರುವ ಸಾಂಪ್ರದಾಯಿಕ ರೆಸಿಪಿಗಳ ಪಟ್ಟಿಯೂ ಉದ್ದವಿದೆ.



ಗೀತಾ ಪ್ರದೀಪ್

ಸುಮಾ ಬಿ.



ಮೂಳೆ ಬಲಕ್ಕೆ ರಾಜಗಿರಿ ಉಂಡಿ

ರಾಜಗಿರಿ ಸೊಪ್ಪಿನ ಒಣಬೀಜದಿಂದ ತಯಾರಿಸುವ ಈ ಉಂಡಿ, ಉಪವಾಸ ವ್ರತದ ಸಮಯಕ್ಕೆ ಉತ್ತಮ. ರಾಮದಾನ, ಅಮರಂತ್ ಅಂತಲೂ ಕರೆಯಲಾಗುವ ಈ ಬೀಜ, ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಪ್ರಸಿದ್ಧವಾಗಿದೆ. ಪ್ರೋಟೀನ್ ಮತ್ತು ಫೈಬರ್ ಅಂಶ ಸಮೃದ್ಧವಾಗಿರುವ, ರೋಗನಿರೋಧಕ ಶಕ್ತಿ ಹೆಚ್ಚಿಸಲು, ಮೂಳೆಗಳನ್ನು ಬಲಪಡಿಸಲು ಸಹಕಾರಿಯಾಗುವ ರಾಜಗಿರಿಯಿಂದ ಉಂಡಿ ಮಾಡುವುದನ್ನು ಹೇಳಿಕೊಟ್ಟಿದ್ದಾರೆ ಗೀತಾ.

ಬೇಕಾಗುವ ಸಾಮಗ್ರಿ: 1 ಕಪ್ ರಾಜಗಿರಿ ಬೀಜ, ಅರ್ಧ ಕಪ್ ಹುರಿದ ಶೇಂಗಾ ಪುಡಿ, 1 ಕಪ್ ಬೆಲ್ಲ, 1 ಟೀ ಚಮಚ ಒಣಶುಂಠಿ ಪುಡಿ.

ಮಾಡುವ ವಿಧಾನ: ರಾಜಗಿರಿ ಬೀಜವನ್ನು ದೊಡ್ಡ ಬಾಣಲೆಯಲ್ಲಿ ಹಾಕಿ, ದೊಡ್ಡ ಉರಿಯಲ್ಲಿ ಹುರಿಯಬೇಕು. ಬೀಜ ಅರಳುತ್ತಾ ಬಂದಂತೆ ತಕ್ಷಣ ಅದನ್ನು ತೆಗೆದಿಡಬೇಕು. ಇದೇ ರೀತಿ ಸ್ವಲ್ಪ ಸ್ವಲ್ಪವೇ ಬೀಜಗಳನ್ನು ಹಾಕಿ ಹುರಿದುಕೊಳ್ಳಬೇಕು. ನಂತರ ಪಾಕ ಮಾಡಲು ಒಂದು ಬಾಣಲೆಯಲ್ಲಿ ಪುಡಿ ಮಾಡಿದ ಬೆಲ್ಲ ಹಾಕಿ ಅದಕ್ಕೆ 2-3 ದೊಡ್ಡ ಚಮಚ ನೀರು ಅಥವಾ ತುಪ್ಪ ಸೇರಿಸಬೇಕು. ಒಂದೆಳೆ ಪಾಕ ಬಂದ ತಕ್ಷಣ ಒಲೆ ಆರಿಸಿ, ಹುರಿದ ಬೀಜ, ಶೇಂಗಾ ಪುಡಿ ಮತ್ತು ಒಣಶುಂಠಿ ಪುಡಿ ಹಾಕಿ ಬೇಗ ಬೇಗ ಮಿಕ್ಸ್ ಮಾಡಬೇಕು. ಬಿಸಿಯಾಗಿ ಇರುವಾಗಲೇ ಉಂಡಿ ಕಟ್ಟಿ ಅದನ್ನು ಹುರಿದ ರಾಜಗಿರಿ ಬೀಜದ ಹುಡಿಯಲ್ಲಿ ಸ್ವಲ್ಪ ಹೊರಳಾಡಿಸಿದರೆ ಆರೋಗ್ಯಕರವಾದ, ಉತ್ತರ ಕರ್ನಾಟಕದ ವಿಶೇಷ ರಾಜಗಿರಿ ಉಂಡಿ ಸವಿಯಲು ಸಿದ್ಧ. ಗಾಳಿಯಾಡದ ಡಬ್ಬಿಯಲ್ಲಿ ಇಟ್ಟರೆ 8-10 ದಿನ ಉಪಯೋಗಿಸಬಹುದು.

ವಿಶ್ವಕಪ್ ಕಿರೀಟಕ್ಕಾಗಿ ಹಂಪಿ– ದಿವ್ಯಾ ಪೈಪೋಟಿ

ಬಟುಮಿ (ಜಾರ್ಜಿಯಾ) (ಪಿಟಿಐ): ಫಿಡೆ ಮಹಿಳಾ ಚೆಸ್ ವಿಶ್ವಕಪ್ ಇತಿಹಾಸಲ್ಲೇ ಮೊದಲ ಬಾರಿ ಭಾರತದ ಆಟಗಾರ್ತಿಯೊಬ್ಬರ ಕಿರೀಟ ಧಾರಣೆಗೆ ಮುಹೂರ್ತ ನಿಗದಿಯಾಗಿದೆ. ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಶನಿವಾರ ಆರಂಭವಾಗುವ ಫೈನಲ್‌ನಲ್ಲಿ ಯುವ ತಾರೆ ದಿವ್ಯಾ ದೇಶಮುಖ್ ಅವರನ್ನು ಎದುರಿಸಲಿದ್ದು ಈ ಹಣಾಹಣಿ ಕುತೂಹಲ ಮೂಡಿಸಿದೆ.

ವಿಶ್ವಕಪ್ ಫೈನಲ್ ತಲುಪಿದ್ದರಿಂದ ಇಬ್ಬರೂ ಆಟಗಾರ್ತಿಯರು ಮುಂದಿನ ವರ್ಷದ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆಯನ್ನೂ ಸಂಪಾದಿಸಿದ್ದಾರೆ. ಅನುಭವದ ಆಧಾರದಲ್ಲಿ 38 ವರ್ಷ ವಯಸ್ಸಿನ ಹಂಪಿ ಫೈನಲ್‌ನಲ್ಲಿ ತಮಗಿಂತ ಅರ್ಧದಷ್ಟು ವಯಸ್ಸಿನ ಆಟಗಾರ್ತಿಯ ವಿರುದ್ಧ ಗೆಲ್ಲುವ ನೆಚ್ಚಿನ ಆಟಗಾರ್ತಿ ಎನಿಸಿದ್ದಾರೆ.

ಹಂಪಿ ಅವರು ದೀರ್ಘ ಪಂದ್ಯಗಳಲ್ಲಿ ತಪ್ಪಿಲ್ಲದೇ ಆಡುವ ಸಾಮರ್ಥ್ಯ ಹೊಂದಿರುವವರು. ದಿವ್ಯಾ ಅವರದು ಅಕ್ರಮಣಕಾರಿ ಶೈಲಿಯ ಆಟ. ಹೀಗಾಗಿ ಹೋರಾಟ ನಿರೀಕ್ಷಿಸಬಹುದಾಗಿದೆ.

ಗುರುವಾರ ನಡೆದ ಸೆಮಿಫೈನಲ್‌ನ ಎರಡನೇ ಸೆಟ್ ರ್‍ಯಾಪಿಡ್‌ನ ಮೊದಲ ಆಟವನ್ನು ಚೀನಾದ ಟಿಂಗ್ಜೀ ಲೀ ಗೆದ್ದಾಗ, ಹಂಪಿ ಅವರಿಗೆ ನಂತರದ ಆಟವನ್ನು ಗೆಲ್ಲಲೇಬೇಕಾದ ಅನಿವಾರ್ಯತೆಯಿತ್ತು. ಡ್ರಾ ಆದರೂ ಅವರು ಹೊರಬೀಳುತ್ತಿದ್ದರು.




ಕೋನೇರು ಹಂಪಿ (ಎಡ) ದಿವ್ಯಾ ದೇಶಮುಖ್ ಚಿತ್ರಗಳು: ಫಿಡೆ

ಆದರೆ ಧೃತಿಗೆಡದೇ ಆಡಿ ಗೆದ್ದ ಅವರು 3–3 ಸಮಮಾಡಿಕೊಂಡರು. ನಂತರ ಅತಿವೇಗದ ನಡೆಗಳ ಅಗತ್ಯವಿರುವ ಬ್ಲಿಟ್ಜ್‌ನ ಎರಡೂ ಪಂದ್ಯ ಗೆದ್ದು ಸಂಭ್ರಮಿಸಿದ್ದರು.

19 ವರ್ಷ ವಯಸ್ಸಿನ ದಿವ್ಯಾ ಇನ್ನೊಂದು ಸೆಮಿಫೈನಲ್‌ನ ಎರಡನೇ ಕ್ಲಾಸಿಕಲ್ ಪಂದ್ಯದಲ್ಲಿ ಚೀನಾದ ಇನ್ನೊರ್ವ ಆಟಗಾರ್ತಿ ಝೊಂಗ್‌ಯಿ ತಾನ್ ಅವರನ್ನು ಸೋಲಿಸಿ ಒಂದು ದಿನ ಮೊದಲೇ ಫೈನಲ್ ತಲುಪಿದ್ದರು.

22 ವರ್ಷಗಳ ಹಿಂದೆ ಗ್ರ್ಯಾಂಡ್‌ಮಾಸ್ಟರ್ ಆಗಿದ್ದ ಹಂಪಿ, ಹಾಲಿ ವಿಶ್ವ ಮಹಿಳಾ ರ್‍ಯಾಪಿಡ್ ಚಾಂಪಿಯನ್ ಸಹ ಆಗಿದ್ದಾರೆ. ವಯಸ್ಸು ತಮಗೆ ಬರೇ ಸಂಖ್ಯೆಯಷ್ಟೇ ಎಂಬುದನ್ನು ಆಂಧ್ರದ ಆಟಗಾರ್ತಿ ಸಾಬೀತುಪಡಿಸಿದ್ದಾರೆ. ಹಲವು ವರ್ಷಗಳಿಂದ ಆಡುತ್ತಿದ್ದರೂ ಅವರ ದೃಢಸಂಕಲ್ಪ ಮತ್ತು ಛಾತಿ ಒಂದಿಷ್ಟೂ ಮಸುಕಾಗಿಲ್ಲ.

ದಿವ್ಯಾ ಈಗಾಗಲೇ ತಮಗಿಂತ ಪ್ರಬಲ ಆಟಗಾರ್ತಿಯರನ್ನು ಮಣಿಸಿ 'ಜಯಂಟ್ ಕಿಲ್ಲರ್' ಎನಿಸಿದ್ದಾರೆ. ಇವರಲ್ಲಿ ಎರಡನೇ ಶ್ರೇಯಾಂಕದ ಚೀನಾ ಆಟಗಾರ್ತಿ ಝಿನೆರ್ ಝು, ಸ್ವದೇಶದ ದ್ರೋಣವಲ್ಲಿ ಹಾರಿಕ ಒಳಗೊಂಡಿದ್ದಾರೆ. ಸೆಮಿಫೈನಲ್‌ನಲ್ಲಿ ಅವರು ಮಾಜಿ ವಿಶ್ವ ಚಾಂಪಿಯನ್, ಚೀನಾದ ಝೊಂಗ್‌ಯಿ ತಾನ್ ವಿರುದ್ಧ ಮತ್ತೊಂದು ಅಚ್ಚರಿಯ ಗೆಲುವು ಸಾಧಿಸಿದ್ದಾರೆ.

'ನಾನು ಇನ್ನೂ ಚೆನ್ನಾಗಿ ಆಡಲು ಅವಕಾಶವಿತ್ತು. ಸೆಮಿಫೈನಲ್‌ನ ಎರಡನೇ ಕ್ಲಾಸಿಕಲ್ ಆಟ ತಡವಾಗಿ (101 ನಡೆ) ಗೆಲ್ಲುವ ಮೊದಲೇ ನನಗೆ ನಿರ್ದಿಷ್ಟ ಸಂದರ್ಭವೊಂದರಲ್ಲಿ ಪಂದ್ಯ ಮುಗಿಸುವ ಅವಕಾಶ ಒದಗಿತ್ತು. ಆದರೆ ಅದನ್ನು ಗ್ರಹಿಸಲಿಲ್ಲ' ಎಂದು ಅವರು ಹೇಳಿದ್ದರು.

'ಮೊದಲ ಗೆಲುವಿನ ಅವಕಾಶ ಕೈತಪ್ಪಿದ ನಂತರ ಪಂದ್ಯ ಡ್ರಾ ಆಗಬಹುದೆಂದು ಭಾವನೆ ಮೂಡಿತು. ಆದರೆ ನನ್ನ ಅದೃಷ್ಟ ಚೆನ್ನಾಗಿತ್ತು' ಎಂದರು.

ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ, ಮಾಜಿ ವಿಶ್ವ ಚಾಂಪಿಯನ್ ಅಲೆಕ್ಸಾಂಡ್ರಾ ಕೊಸ್ಟೆನಿಯುಕ್ ಅವರ ವಿರುದ್ಧ ಗೆಲ್ಲಬೇಕಾದರೆ ಹಂಪಿ ಟೈಬ್ರೇಕರ್ ಆಡಬೇಕಾಯಿತು. ನಂತರ ಚೀನಾದ ಯುಕ್ಸಿನ್ ಸಾಂಗ್ ವಿರುದ್ಧ ಅಚ್ಚುಕಟ್ಟಾದ ಆಟವಾಡಿ ಗೆದ್ದರು. ಆದರೆ ಅವರು ತಮ್ಮ ಅತ್ಯುತ್ತಮ ಆಟವನ್ನು ಸೆಮಿಫೈನಲ್‌ಗೆ ಕಾದಿರಿಸಿದಂತೆ ಕಂಡಿತು. ಚೀನಾದ ಟಿಂಗ್ಜೀ ವಿರುದ್ಧ ರ್‍ಯಾಪಿಡ್ ಟೈಬ್ರೇಕ್ ಪಂದ್ಯಗಳ ನಂತರವೂ ಸ್ಕೋರ್ 3–3 ಸಮನಾದ ನಂತರ ಅವರು ಐದು ನಿಮಿಷಗಳ ಅವಧಿಯ ಎರಡೂ ಬ್ಲಿಟ್ಜ್ ಪಂದ್ಯಗಳಲ್ಲಿ ಎದುರಾಳಿಯನ್ನು ಸದೆಬಡಿದರು.

ಫೈನಲ್ ಮಾದರಿ: ಇತರ ಸುತ್ತುಗಳ ರೀತಿಯಲ್ಲೇ, ಫೈನಲ್‌ನಲ್ಲೂ ಮೊದಲ ಎರಡು ದಿನ (ಶನಿವಾರ ಮತ್ತು ಭಾನುವಾರ) ಸಾಂಪ್ರದಾಯಿಕ ರೀತಿಯ ಪಂದ್ಯ ನಡೆಯಲಿದೆ. ಸ್ಕೋರ್ 1–1 ಸಮಬಲವಾದಲ್ಲಿ ಮಾತ್ರ ವಿಜೇತರನ್ನು ನಿರ್ಧರಿಸಲು ಮೂರನೇ ದಿನ ಅಲ್ಪಾವಧಿಯ ಟೈಬ್ರೇಕ್ ಪಂದ್ಯಗಳನ್ನು ಆಡಬೇಕಾಗುತ್ತದೆ.

ಈ ವಿಶ್ವಕಪ್‌ನಲ್ಲಿ ಮೊದಲ ಮೂರು ಸ್ಥಾನ ಪಡೆದವರು ಮುಂದಿನ ವರ್ಷ ನಡೆಯಲಿರುವ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯುತ್ತಾರೆ.

ಸೆಮಿಫೈನಲ್‌ನಲ್ಲಿ ಸೋತ ಚೀನಾದ ಆಟಗಾರ್ತಿರಾದ ಟಿಂಗ್ಜಿ ಲೀ ಅಥವಾ ಝೊಂಗ್‌ಯಿ ತಾನ್ ಶನಿವಾರ ಮೂರನೇ ಸ್ಥಾನಕ್ಕಾಗಿ ಆಡಲಿದ್ದಾರೆ. ಗೆದ್ದ ಆಟಗಾರ್ತಿ ಕೂಡ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯಲಿದ್ದಾರೆ. ಎಂಟು ಮಂದಿಗಷ್ಟೇ ಅವಕಾಶವಿರುವ ಕ್ಯಾಂಡಿಡೇಟ್ಸ್ ಟೂರ್ನಿಯ ವಿಜೇತರು ಹಾಲಿ ವಿಶ್ವ ಮಹಿಳಾ ಚಾಂಪಿಯನ್‌ಗೆ 'ಚಾಲೆಂಜರ್' ಆಗುತ್ತಾರೆ. ಈಗ ಚೀನದ ವೆನ್ಜುನ್ ಜು ಅವರು ಹಾಲಿ ವಿಶ್ವ ಚಾಂಪಿಯನ್ ಆಗಿದ್ದಾರೆ.

ಮುಖ್ಯಾಂಶಗಳು

- ವಿಜೇತ ಆಟಗಾರ್ತಿಗೆ ₹43 ಲಕ್ಷ ಬಹುಮಾನ
- ರನ್ನರ್ ಅಪ್ ಆಟಗಾರ್ತಿ ಪಾಲಾಗಲಿದೆ ₹ 30 ಲಕ್ಷ
- ಮೂರನೇ ಸ್ಥಾನಕ್ಕಾಗಿ ಚೀನಾ ಆಟಗಾರ್ತಿಯರ ಸೆಣಸಾಟ

'ಪ್ರಶಸ್ತಿ ಭಾರತದ ಪಾಲಾಗುವುದು ಖಚಿತವಾಗಿರುವುದರಿಂದ ಇದು ಚೆಸ್ ಅಭಿಮಾನಿಗಳಿಗೆ ಅತ್ಯಂತ ಸಂಭ್ರಮದ ಗಳಿಗೆ. ಆದರೆ, ಆಟಗಾರ್ತಿಯಾಗಿ ನನಗೆ ಕಠಿಣ ಪಂದ್ಯವೂ ಎದುರಾಗಲಿದೆ. ಇಡೀ ಟೂರ್ನಿಯಲ್ಲಿ ದಿವ್ಯಾ ಅಮೋಘವಾಗಿ ಆಡಿದ್ದಾರೆ
ಕೋನೇರು ಹಂಪಿ, (ಫಿಡೆ ವೆಬ್‌ಸೈಟ್ ಸಂದರ್ಶನ)

ಜೋ ರೂಟ್ ಶತಕ ಭರಾಟೆ

ನಾಲ್ಕನೇ ಟೆಸ್ಟ್: ಭಾರತದ ಬೌಲರ್‌ಗಳ ಪರದಾಟ

• ಇಂಗ್ಲೆಂಡ್‌ಗೆ 186 ರನ್ ಮುನ್ನಡೆ

• ಸಿದ್ಧಿ ಕಿರಣ್

ಮ್ಯಾಂಚೆಸ್ಟರ್: ಇಂಗ್ಲೆಂಡ್‌ನಲ್ಲಿರುವ ಎಲ್ಲ ಪ್ರಮುಖ ಕ್ರೀಡಾಂಗಣಗಳಲ್ಲಿ ಓಲ್ಡ್ ಟ್ರಾಫರ್ಡ್‌ಗೆ ಜೋ ರೂಟ್ ಮನದಲ್ಲಿ ವಿಶೇಷ ಸ್ಥಾನವಿದೆ. ಪ್ರಥಮ ಆ್ಯಷಸ್ ಟೆಸ್ಟ್ ಸರಣಿಯ ಪಂದ್ಯವನ್ನು 1884ರಲ್ಲಿ ಆಯೋಜಿಸಿದ್ದ ಈ ಐತಿಹಾಸಿಕ ಕ್ರೀಡಾಂಗಣದಲ್ಲಿ ಯಶಸ್ವಿಯಾದವರು ಬೆರಳೆಣಿಕೆಯಷ್ಟು ಆಟಗಾರರು ಮಾತ್ರ. ಅದರಲ್ಲಿ ರೂಟ್ ಕೂಡ ಒಬ್ಬರು.

ಸೂರ್ಯಕಿರಣಗಳು ಚುಂಬಿಸಿದ ಶುಕ್ರವಾರದಂದು ಇಂಗ್ಲೆಂಡ್ ತಂಡದ ಮಾಜಿ ನಾಯಕ ರೂಟ್ ಇಲ್ಲಿ (150;248ಎ) ಅಮೋಘ ಶತಕ ದಾಖಲಿಸಿದರು. ಅದರಿಂದಾಗಿ ಆತಿಥೇಯ ತಂಡವು ಭಾರತದ ಎದುರಿನ ನಾಲ್ಕನೇ ಟೆಸ್ಟ್ ಪಂದ್ಯದ ಮೂರನೇ ದಿನದಾಟದ ಅಂತ್ಯಕ್ಕೆ 7 ವಿಕೆಟ್ 544 ರನ್ ಗಳಿಸಿದೆ. ಅದರೊಂದಿಗೆ 186 ರನ್‌ಗಳ ಮುನ್ನಡೆ ಪಡೆಯಿತು. 34 ವರ್ಷದ ರೂಟ್, ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ 38ನೇ ಶತಕ ದಾಖಲಿಸಿದರು. ಅಲ್ಲದೇ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳಲ್ಲಿ ಎರಡನೇ ಸ್ಥಾನಕ್ಕೆ ಏರಿದರು. ಅವರು ಈ ಹಾದಿಯಲ್ಲಿ ಆಸ್ಟ್ರೇಲಿಯಾದ ದಿಗ್ಗಜ ರಿಕಿ ಪಾಂಟಿಂಗ್ (13378) ಅವರನ್ನು ಮೀರಿ ನಿಂತರು. ಸಚಿನ್ ತೆಂಡೂಲ್ಕರ್ (15921) ಮೊದಲ ಸ್ಥಾನದಲ್ಲಿದ್ದಾರೆ.

ಭಾರತದ ಎದುರು ರೂಟ್ ತವರಿನ ಅಂಗಳದಲ್ಲಿ ಗಳಿಸಿದ 9ನೇ ಶತಕ ಇದಾಗಿದೆ. ಈ ಹಾದಿಯಲ್ಲಿ ಅವರು ಆಸ್ಟ್ರೇಲಿಯಾದ ದಂತಕಥೆ ಡಾನ್ ಬ್ರಾಡ್ಮನ್ ಅವರು ಇಂಗ್ಲೆಂಡ್ ಎದುರು ಗಳಿಸಿದ್ದ 8 ಶತಕಗಳ ದಾಖಲೆಯನ್ನು ಮೀರಿದರು.

ಯಾವುದೇ ಮೋಡಗಳು ಇರದ ನೀಲಿ ಆಗಸ ಮತ್ತು ಸೂರ್ಯನ ಕಿರಣಗಳ ಚಿನ್ನಾಟದಲ್ಲಿ ರೂಟ್ ಆಟ ಅರಳಿತು. ದಾಖಲೆ ನಿರ್ಮಿಸುವುದನ್ನು ಹವ್ಯಾಸವನ್ನಾಗಿಸಿಕೊಂಡಿರುವ ರೂಟ್, ದೊಡ್ಡ ಹೊಡೆತಗಳನ್ನು ಆಡುವತ್ತ ಗಮನ ನೀಡಲಿಲ್ಲ. ಆದರೆ ಸಾಂಪ್ರದಾಯಿಕ ಮತ್ತು ಸೊಗಸಾದ ಹೊಡೆತಗಳನ್ನು ಪ್ರಯೋಗಿಸುತ್ತ ಫೀಲ್ಡರ್ ಮತ್ತು ಬೌಲರ್‌ಗಳಿಗೆ ಸವಾಲೊಡ್ಡಿದರು. ತಾಳ್ಮೆ ಮತ್ತು ಏಕಾಗ್ರತೆ ಮೇಳೈಸಿದ್ದ ಅವರ ಆಟ ಅಭಿಮಾನಿಗಳ ಮನಗೆದ್ದಿತು.

ಅವರು ಮತ್ತು ಒಲಿ ಪೋಪ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 144 ರನ್ ಸೇರಿಸಿದರು. ಇದರಿಂದಾಗಿ ಊಟದ ವಿರಾಮದ ವೇಳೆಗೆ ತಂಡದ ಮೊತ್ತವು 2 ವಿಕೆಟ್‌ಗಳಿಗೆ 332 ರನ್‌ಗಳಾಗಿತ್ತು. ಈ ಹಂತದಲ್ಲಿ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಮಾಡಿದ ಬೌಲಿಂಗ್ ಬದಲಾವಣೆ, ನಿಯೋಜನೆಗಳು ಫಲ ನೀಡಲಿಲ್ಲ. ಪಿಚ್ ಕೂಡ ಬೌಲರ್‌ಗಳಿಗೆ ಹೆಚ್ಚು ನೆರವು ನೀಡುತ್ತಿರಲಿಲ್ಲ. ಬೌಲರ್‌ಗಳ ಶ್ರಮಕ್ಕೆ ಪ್ರತಿಫಲ ಸಿಗಲಿಲ್ಲ.

ಈ ಸಂದರ್ಭದಲ್ಲಿ ದಾಳಿಗಿಳಿದ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಅವರು ಪೋಪ್ (71 ರನ್) ಮತ್ತು ಹ್ಯಾರಿ ಬ್ರೂಕ್ (3 ರನ್) ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಇದರಿಂದಾಗಿ ಭಾರತ ಬಳಗದಲ್ಲಿ ಉತ್ಸಾಹ ಮರುಕಳಿಸಿತು. ಆದರೆ, ರೂಟ್ ಮತ್ತು ನಾಯಕ ಬೆನ್ ಸ್ಟೋಕ್ಸ್ ಅವರ ಆಟದ ಮುಂದೆ ಮತ್ತೆ ಬೌಲರ್‌ಗಳು ಬಸವಳಿದರು. ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ 142 ರನ್ ಸೇರಿಸಿದರು. ಸ್ಟೋಕ್ಸ್ 66 ರನ್ ಗಳಿಸಿದ್ದಾಗ ಕಾಲಿನ ಸ್ನಾಯು ಸೆಳೆತದಿಂದಾಗಿ ಮೈದಾನ ತೊರೆದರು.

ಆದರೆ ಚಹಾ ವಿರಾಮಕ್ಕೂ ಸ್ವಲ್ಪ ಮುನ್ನ ಸ್ಪಿನ್ನರ್ ರವೀಂದ್ರ ಜಡೇಜ ಬೌಲಿಂಗ್‌ನಲ್ಲಿ ಕ್ರೀಸ್‌ನಿಂದ ಮುಂದೆ ಬಂದಿದ್ದ ರೂಟ್ ಅವರನ್ನು ಧ್ರುವ ಜುರೇಲ್ ಸ್ಟಂಪ್ ಔಟ್ ಮಾಡಿದರು. ನಂತರ ಬಂದ ಜೆಮಿ ಸ್ಮಿತ್ (9) ಮತ್ತು ಕ್ರಿಸ್ ವೋಕ್ಸ್ (4) ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಈ ಹಂತದಲ್ಲಿ ಮತ್ತೆ ಬ್ಯಾಟಿಂಗ್‌ಗೆ ಇಳಿದ ಸ್ಟೋಕ್ಸ್ (ಬ್ಯಾಟಿಂಗ್ 77) ಮತ್ತು ಲಿಯಾಮ್ ಡಾಸನ್ (ಬ್ಯಾಟಿಂಗ್ 21) ನಾಲ್ಕನೇ ದಿನಕ್ಕೆ ಆಟವನ್ನು ಕಾಯ್ದಿಕೊಂಡಿದ್ದಾರೆ.

ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರಿಗೆ ಹೊಸ ಚೆಂಡಿನಲ್ಲಿ ವಿಶೇಷವಾಗಿರುವಂತದ್ದೇನೂ ಮಾಡಲಾಗಲಿಲ್ಲ. ಸಿರಾಜ್ ಲಯ ಸಾಧಿಸಲು ಕಷ್ಟಪಟ್ಟರು. ಶಾರ್ದೂಲ್ ಠಾಕೂರ್ ಮತ್ತು ಪದಾರ್ಪಣೆ ಮಾಡಿದ ಅನ್ಷುಲ್ ಕಂಬೋಜ್ ಅವರೂ ಬ್ಯಾಟರ್‌ಗಳ ಮೇಲೆ ಒತ್ತಡ ಹಾಕುವಲ್ಲಿ ವಿಫಲರಾದರು. ಲೈನ್ ಮತ್ತು ಲೆಂಗ್ತ್ ನಿರ್ವಹಿಸಲು ಪರದಾಡಿದರು. ರೂಟ್ ಮತ್ತು ಸ್ಟೋಕ್ಸ್ ಲೀಲಾಜಾಲವಾಗಿ ಆಡಿದರು.

ಈ ಅಂಗಳದ ಪಕ್ಕದಲ್ಲಿಯೇ ಇರುವ ಓಲ್ಡ್ ಟ್ರಾಫರ್ಡ್ ಫುಟ್‌ಬಾಲ್ ಕ್ರೀಡಾಂಗಣವನ್ನು 'ಕನಸುಗಳ ರಂಗಮಂದಿರ' ಎಂದು ಕರೆಯಲಾಗುತ್ತದೆ. ಈಗ ಕ್ರಿಕೆಟ್ ಮೈದಾನವನ್ನು 'ರೂಟ್ ಅವರ ಆಟದ ಮೈದಾನ' ವಾಗಿದೆ.



ಇಂಗ್ಲೆಂಡ್ ತಂಡದ ಜೋ ರೂಟ್ ಶತಕ ಸಂಭ್ರಮ
ಪಿಟಿಐ ಚಿತ್ರ

ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದವರು

ಆಟಗಾರ	ದೇಶ	ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ
ಸಚಿನ್ ತೆಂಡೂಲ್ಕರ್	ಭಾರತ	200	15,921	248*	51	68
ಜೋ ರೂಟ್	ಇಂಗ್ಲೆಂಡ್	157	13,409	262	38	66
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	168	13,378	257	41	62
ಜಾಕ್ ಕಾಲಿಸ್	ದಕ್ಷಿಣ ಆಫ್ರಿಕಾ	166	13,289	224	45	58
ರಾಹುಲ್ ದ್ರಾವಿಡ್	ಭಾರತ	164	13,288	270	36	63

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ 358 (114.1 ಓವರ್‌ಗಳಲ್ಲಿ)
ಇಂಗ್ಲೆಂಡ್ 7 ವಿಕೆಟ್‌ಗೆ 544 (135 ಓವರ್‌ಗಳಲ್ಲಿ) (ಗುರುವಾರ ಎರಡು ವಿಕೆಟ್‌ಗೆ 225)

ಪೋಪ್ ಸಿ ರಾಹುಲ್ ಬಿ ವಾಷಿಂಗ್ಟನ್ 71 (128ಎ, 4x7)
ಜೋ ರೂಟ್ ಸಿ (ಸಬ್) ಜುರೇಲ್ ಬಿ ಜಡೇಜ 150 (248ಎ, 4x14)
ಬ್ರೂಕ್ ಸ್ಟಂಪ್ (ಸಬ್) ಜುರೇಲ್ ಬಿ ವಾಷಿಂಗ್ಟನ್ 3 (12ಎ)
ಬೆನ್ ಸ್ಟೋಕ್ಸ್ ಬ್ಯಾಟಿಂಗ್ 77 (134ಎ, 4x6)
ಜೆಮಿ ಸ್ಮಿತ್ ಸಿ (ಸಬ್) ಜುರೇಲ್ ಬಿ ಬೂಮ್ರಾ 9 (19ಎ, 4x1)
ಡಾಸನ್ ಬ್ಯಾಟಿಂಗ್ 21 (52ಎ, 4x2)
ವೋಕ್ಸ್ ಬಿ ಸಿರಾಜ್ (17 ಎ)
ಇತರೆ: 31 (ಬೈ 4, ಲೆಗ್‌ಬೈ 14, ನೋಬಾಲ್ 13))
ವಿಕೆಟ್ ಪತನ: 3-341 (ಒಲಿ ಪೋಪ್, 76.1), 4-349 (ಹ್ಯಾರಿ ಬ್ರೂಕ್, 80.1), 5-499 (ಜೋ ರೂಟ್, 119.2), 6-515 (ಜೆಮಿ ಸ್ಮಿತ್, 124.1), 7-528 (ಕ್ರಿಸ್ ವೋಕ್ಸ್, 129.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 28-5-95-1, ಅನ್ಷುಲ್ ಕಂಬೋಜ್ 18-1-89-1, ಮೊಹಮ್ಮದ್ ಸಿರಾಜ್ 26-4-113-1, ಶಾರ್ದೂಲ್ ಠಾಕೂರ್ 11-0-55-0, ರವೀಂದ್ರ ಜಡೇಜ 33-0-117-2, ವಾಷಿಂಗ್ಟನ್ ಸುಂದರ್ 19-4-57-2.

ಸಂಕ್ಷಿಪ್ತ ಸುದ್ದಿ

ಚೀನಾ ಓಪನ್: ಸಾತ್ವಿಕ್–ಚಿರಾಗ್ ಜೋಡಿ ನಾಲ್ಕರ ಘಟ್ಟಕ್ಕೆ

ಚಾಂಗ್‌ಝೌ (ಚೀನಾ) (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಚೀನಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಆದರೆ, ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರ ಅಭಿಯಾನ ಅಂತ್ಯ ಕಂಡಿತು.

ಏಷ್ಯನ್ ಗೇಮ್ಸ್ ಚಾಂಪಿಯನ್ ಸಾತ್ವಿಕ್–ಚಿರಾಗ್ ಜೋಡಿಯು 21-18, 21-14ರಿಂದ ಮಲೇಷ್ಯಾದ ಒಂಗ್ ಯೂ ಸಿನ್ ಮತ್ತು ಟಿಯೊ ಈ ಯಿ ಅವರನ್ನು ಹಿಮ್ಮೆಟ್ಟಿಸಿತು. ಈ ಗೆಲುವಿನಿಂದಾಗಿ ಭಾರತದ ಆಟಗಾರರು, ಮಲೇಷ್ಯಾ ಜೋಡಿ ವಿರುದ್ಧ ಗೆಲುವಿನ ದಾಖಲೆಯನ್ನು 7–3ಕ್ಕೆ ವಿಸ್ತರಿಸಿಕೊಂಡರು.

ಹೂಡಾ ನಿರ್ಗಮನ: 17 ವರ್ಷದ ಹೂಡಾ ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ 16-21, 12-21ರಿಂದ ವಿಶ್ವದ ನಾಲ್ಕನೇ ಕ್ರಮಾಂಕದ ಆಟಗಾರ್ತಿ ಅಕಾನೆ ಯಮಗುಚಿ (ಜಪಾನ್) ಅವರಿಗೆ ಮಣಿದರು.

ವಿಶ್ವ ವಿ.ವಿ ಗೇಮ್ಸ್: ಭಾರತ ಮಿಶ್ರ ಆರ್ಚರಿ ತಂಡಕ್ಕೆ ಚಿನ್ನ

ಎಸೆನ್ (ಜರ್ಮನಿ) (ಪಿಟಿಐ): ಆರ್ಚರಿಪಟುಗಳಾದ ಪರ್ಣೀತ್ ಕೌರ್ ಮತ್ತು ಕುಶಾಲ್ ದಲಾಲ್ ಅವರನ್ನು ಒಳಗೊಂಡ ಭಾರತದ ಮಿಶ್ರ ಕಾಂಪೌಂಡ್ ತಂಡವು ಇಲ್ಲಿ ನಡೆದ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಚಿನ್ನದ ಸಾಧನೆ ಮಾಡಿತು.

ಭಾರತದ ಜೋಡಿಯು ಚಿನ್ನದ ಪದಕ ಸುತ್ತಿನಲ್ಲಿ 157-154 ರಿಂದ ದಕ್ಷಿಣ ಕೊರಿಯಾದ ಯೆಬಿನ್ ಪಾರ್ಕ್ ಮತ್ತು ಸೆಯೊಂಗ್ ಹ್ಯುನ್ ಪಾರ್ಕ್ ಅವರನ್ನು ಮಣಿಸಿತು. ಕೂಟದಲ್ಲಿ ಇದು ಭಾರತಕ್ಕೆ ದೊರೆತ ಮೊದಲ ಚಿನ್ನ. ಆರ್ಚರಿಯಲ್ಲಿ ದಕ್ಕಿದ ಮೂರನೇ ಪದಕ ಇದಾಗಿದ್ದು, ಒಟ್ಟು ಪದಕಗಳ ಸಂಖ್ಯೆ ಐದಕ್ಕೆ ಏರಿದೆ.

ದಾಖಲೆ ಉತ್ತಮಪಡಿಸಿದ ದೇವ್: ಭಾರತದ ದೇವ್ ಕುಮಾರ್ ಮೀನಾ ಅವರು ಪುರುಷರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ 5.40 ಮೀಟರ್ ಎತ್ತರ ಜಿಗಿದು ಫೈನಲ್‌ಗೆ ಅರ್ಹತೆ ಪಡೆದರು. ಅದರೊಂದಿಗೆ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮ ಪಡಿಸಿಕೊಂಡರು.

20 ವರ್ಷದ ದೇವ್, 'ಎ' ಗುಂಪಿನ ಅರ್ಹತಾ ಸುತ್ತಿನಲ್ಲಿ ಐದನೇ ಮತ್ತು ಒಟ್ಟಾರೆಯಾಗಿ ಆರನೇ ಸ್ಥಾನ ಪಡೆದರು. ಏಪ್ರಿಲ್‌ನಲ್ಲಿ (ಕೊಚ್ಚಿ) ನಡೆದ ಫೆಡರೇಷನ್ ಕಪ್‌ನಲ್ಲಿ ಅವರೇ ನಿರ್ಮಿಸಿದ್ದ (5.35 ಮೀಟರ್) ದಾಖಲೆಯನ್ನು ಸುಧಾರಿಸಿಕೊಂಡರು.

ದೇವ್ ಅವರು ಪ್ರಸಕ್ತ ಋತುವಿನಲ್ಲಿ ಮೂರನೇ ಬಾರಿ ರಾಷ್ಟ್ರೀಯ ದಾಖಲೆಯನ್ನು ಮುರಿದಂತಾಗಿದೆ. ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 5.32 ಮೀಟರ್ ಸಾಧನೆ ಮಾಡಿ, ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದಿದ್ದರು.

ಸೆಮಿಫೈನಲ್‌ಗೆ ತನ್ವಿ, ವೆನ್ನಲ

ಸೋಲೊ (ಇಂಡೊನೇಷ್ಯಾ) (ಪಿಟಿಐ): ಭಾರತದ ಯುವ ಆಟಗಾರ್ತಿಯರಾದ ತನ್ವಿ ಶರ್ಮಾ ಮತ್ತು ವೆನ್ನಲ ಕಲಗೊಟ್ಲ ಅವರು ಇಲ್ಲಿ ನಡೆಯುತ್ತಿರುವ ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಚಾಂಪಿಯನ್‌ಷಿಪ್‌ನ ಬಾಲಕಿಯರ ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದರು.



ತನ್ವಿ ಶರ್ಮಾ

ಎರಡನೇ ಶ್ರೇಯಾಂಕದ ತನ್ವಿ ಶುಕ್ರವಾರ 21-19, 21-14 ರಿಂದ ಐದನೇ ಶ್ರೇಯಾಂಕದ ಥಲಿತಾ ರಾಮಧಾನಿ ಅವರನ್ನು ಹಿಮ್ಮೆಟ್ಟಿಸಿದರು. ಅವರು ಸೆಮಿಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಯಿನ್ ಯಿ ಕ್ವಿಂಗ್ (ಚೀನಾ) ಅವರನ್ನು ಎದುರಿಸಲಿದ್ದಾರೆ. ವೆನ್ನಲ ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ 21-18, 17-21, 21-17ರಿಂದ ಥಾಯ್ಲೆಂಡ್‌ನ ಜನ್ಯಾಪಾನ್ ಮೀಪಾಂಥಾಂಗ್ ವಿರುದ್ಧ ಗೆಲುವು ಸಾಧಿಸಿದರು. ಅವರು ಸೆಮಿಫೈನಲ್‌ನಲ್ಲಿ ಚೀನಾದ ಲಿಯು ಸಿ ಯಾ ವಿರುದ್ಧ ಸೆಣಸುವರು.

ಟೆನಿಸ್: ಸುಮಿತ್ ಮುನ್ನಡೆ

ನವದೆಹಲಿ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಾಗಲ್ ಅವರು ಟ್ರ್ಯಾಂಪೆರೆ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

28 ವರ್ಷ ವಯಸ್ಸಿನ ನಾಗಲ್ ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ 6-4, 6-3ರಿಂದ ಅರ್ಜೆಂಟೀನಾದ ನಿಕೊಲಸ್ ಕಿಕ್ಕರ್ ಅವರನ್ನು ಮಣಿಸಿದರು.

ವಿಶ್ವ ಕ್ರಮಾಂಕದಲ್ಲಿ 306ನೇ ಸ್ಥಾನದಲ್ಲಿರುವ ನಾಗಲ್ ಅವರು ನಿಕೊಲಸ್ ವಿರುದ್ಧದ ಗೆಲುವಿನ ದಾಖಲೆಯನ್ನು 2–1ಕ್ಕೆ ಹೆಚ್ಚಿಸಿಕೊಂಡರು.

ಡೇವಿಸ್ ಕಪ್ ತಂಡಕ್ಕೆ ನಾಗಲ್

ನವದೆಹಲಿ (ಪಿಟಿಐ): ಭಾರತದ ಅನುಭವಿ ಆಟಗಾರ ಸುಮಿತ್ ನಾಗಲ್ ಅವರು ಎರಡು ವರ್ಷಗಳ ಬಳಿಕ ಡೇವಿಸ್ ಕಪ್ ತಂಡಕ್ಕೆ ಮರಳಿದ್ದಾರೆ. ಡಬಲ್ಸ್ ತಾರೆ ಯೂಕಿ ಭಾಂಬ್ರಿ ಅವರೂ ವಾಪಸಾಗಿದ್ದಾರೆ.

ಸ್ವಿಟ್ಜರ್ಲೆಂಡ್ ವಿರುದ್ಧದ ಪಂದ್ಯಕ್ಕೆ ಎಂಟು ಮಂದಿ ಆಟಗಾರರ ತಂಡವನ್ನು ಎಐಟಿಎ ಆಯ್ಕೆ ಸಮಿತಿ ಶುಕ್ರವಾರ ಪ್ರಕಟಿಸಿದೆ. ಸೆ.12ರಿಂದ ಸ್ಪರ್ಧೆ ನಡೆಯಲಿದೆ. ಇದರಲ್ಲಿ ವಿಜೇತ ತಂಡವು 2026ರ ಡೇವಿಸ್ ಕಪ್ ಅರ್ಹತಾ ಸುತ್ತಿಗೆ ಮುನ್ನಡೆಯಲಿದೆ. ಸೋತ ತಂಡವು ಮುಂದಿನ ವರ್ಷದ ವಿಶ್ವ ಗುಂಪು I ಪ್ಲೇ ಆಫ್‌ಗೆ ಮರಳುತ್ತದೆ.

ತಂಡ ಹೀಗಿದೆ: ಸಿಂಗಲ್ಸ್: ಸುಮಿತ್ ನಾಗಲ್, ಕರಣ್ ಸಿಂಗ್ ಮತ್ತು ಆರ್ಯನ್ ಶಾ. ಡಬಲ್ಸ್: ಯೂಕಿ ಭಾಂಬ್ರಿ ಮತ್ತು ಎನ್. ಶ್ರೀರಾಮ್ ಬಾಲಾಜಿ. ಮೀಸಲು ಆಟಗಾರರು: ದಕ್ಷಿಣೇಶ್ವರ್ ಸುರೇಶ್, ಶಶಿಕುಮಾರ್ ಮುಕುಂದ್ ಮತ್ತು ರಿತ್ವಿಕ್ ಬೊಳ್ಳಿಪಲ್ಲಿ.

ಟೇಬಲ್ ಟೆನಿಸ್: ಆಕಾಶ್‌ಗೆ ಪ್ರಶಸ್ತಿ

ಮೈಸೂರು: ಕೆ.ಜೆ.ಆಕಾಶ್ ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್‌ನ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮೈಸೂರು ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯದ ಜಿಮ್ನಾಷಿಯಂ ಹಾಲ್‌ನಲ್ಲಿ ಆಯೋಜಿಸಿರುವ ಟೂರ್ನಿಯಲ್ಲಿ ಶುಕ್ರವಾರ ನಡೆದ ಫೈನಲ್‌ನಲ್ಲಿ ಆಕಾಶ್ ಅವರು 9-11, 11-4, 11-2, 10-12, 12-10, 9-11, 11-7ರಿಂದ ಅಥರ್ವ ನವರಂಗ್ ಅವರನ್ನು ಮಣಿಸಿದರು.

17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಬೆಳಗಾವಿಯ ತನಿಷ್ಕಾ ಕಪಿಲ್ ಕಾಲಭೈರವ ಅವರು ಸುಮೇಧಾ ಕೆ.ಎಸ್.ಭಟ್ ಅವರನ್ನು 11-2, 11-3, 11-7ರಿಂದ ಸುಲಭವಾಗಿ ಸೋಲಿಸಿ ಪ್ರಶಸ್ತಿ ಗೆದ್ದರು.

ಬಾಲಕರ ವಿಭಾಗದ ಅಂತಿಮ ಹಣಾಹಣಿಯಲ್ಲಿ ಅಥರ್ವ ನವರಂಗ್ ಅವರು ಎಸ್. ಅಣ್ಣವ್ ಅವರನ್ನು 11-4, 13-11, 11-3ರಿಂದ ಮಣಿಸಿ, ಚಾಂಪಿಯನ್ ಆದರು.

ದಯಾಳ್ ವಿರುದ್ಧ ಪೋಕ್ಸೊ ಪ್ರಕರಣ

ಜೈಪುರ (ಪಿಟಿಐ): ಲೈಂಗಿಕ ಶೋಷಣೆಯ ಆರೋಪ ಎದುರಿಸುತ್ತಿರುವ ಆರ್‌ಸಿಬಿ ವೇಗದ ಬೌಲರ್ ಯಶ್ ದಯಾಳ್ ವಿರುದ್ಧ ಈಗ ಪೋಕ್ಸೊ ಪ್ರಕರಣವೂ ಸಿಲುಕಿದ್ದಾರೆ. ಅಪ್ರಾಪ್ತ ವಯಸ್ಸಿನ ತಮ್ಮ ಮೇಲೆ ಅತ್ಯಾಚಾರ ಎಸಗಿದ್ದಾರೆಂದು ಸಂತ್ರಸ್ತೆ ಜೈಪುರದ ಪೊಲೀಸ್ ಠಾಣೆಯೊಂದರಲ್ಲಿ ದಯಾಳ್ ವಿರುದ್ಧ ದೂರು ದಾಖಲಿಸಿದ್ದಾರೆ.



ಮದುವೆಯಾಗುವುದಾಗಿ ಭರವಸೆ ನೀಡಿದ್ದ ದಯಾಳ್ ತಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು ಗಾಜಿಯಾಬಾದ್‌ನ ಮಹಿಳೆಯೊಬ್ಬರು ಈ ಮೊದಲೇ ದೂರು ನೀಡಿದ್ದರು.

ಉತ್ತರ ಪ್ರದೇಶದ 27 ವರ್ಷ ವಯಸ್ಸಿನ ದಯಾಳ್ ವಿರುದ್ಧ ಪೋಕ್ಸೊ ಕಾಯ್ದೆ ಮತ್ತು ಭಾರತೀಯ ನ್ಯಾಯ ಸಂಹಿತೆಯಡಿ ಪ್ರಕರಣ ದಾಖಲಾಗಿದೆ. ಬುಧವಾರದಂದೇ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಜೈಪುರದ ಸದರ್ ಪೊಲೀಸ್ ಠಾಣೆಯ ಎಸ್‌ಎಚ್‌ಒ ಅನಿಲ್ ಜೈಮನ್ ಶುಕ್ರವಾರ ತಿಳಿಸಿದ್ದಾರೆ.

2023ರಲ್ಲಿ, ತಮಗೆ 17 ವರ್ಷವಿದ್ದಾಗ ಅವರು ಅತ್ಯಾಚಾರ ಎಸಗಿದ್ದರು. ಈ ವರ್ಷದ ಏಪ್ರಿಲ್‌ನಲ್ಲಿ ಸೀತಾಪುರ ಪ್ರದೇಶ ಹೋಟೆಲ್‌ನಲ್ಲಿ ಮತ್ತೊಮ್ಮೆ ಈ ಕೃತ್ಯ ಎಸಗಿರುವುದಾಗಿ ಸಂತ್ರಸ್ತೆ ದೂರಿನಲ್ಲಿ ತಿಳಿಸಿರುವುದಾಗಿ ಮೈಮನ್ ಹೇಳಿದ್ದಾರೆ.

ಈ ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ದಯಾಳ್ ಇದುವರೆಗೆ ಯಾವುದೇ ಹೇಳಿಕೆ ನೀಡಿಲ್ಲ.

ಭಾರತ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ವಿದಾಯ

ಕಡೂರು ಹುಡುಗಿಯ ಕ್ರಿಕೆಟ್ ಪಯಣ

• ಗಿರೀಶ ದೊಡ್ಡಮನಿ

ಬೆಂಗಳೂರು: ಭಾರತ ಮಹಿಳಾ ಕ್ರಿಕೆಟ್ ತಂಡದಲ್ಲಿ ಪ್ರತಿನಿಧಿಸಿದ್ದ ಕರ್ನಾಟಕದ ವೇದಾ ಕೃಷ್ಣಮೂರ್ತಿ ಯವರು ವೃತ್ತಿಪರ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ವೇದಾ ಅವರು ಕರ್ನಾಟಕ ಮಹಿಳಾ ಕ್ರಿಕೆಟ್ ಕ್ಷೇತ್ರದ ಪ್ರಮುಖ ಆಟಗಾರ್ತಿಯರಲ್ಲಿ ಒಬ್ಬರಾಗಿದ್ದರು.

ಬಲಗೈ ಬ್ಯಾಟರ್ ವೇದಾ, 48 ಅಂತರರಾಷ್ಟ್ರೀಯ ಏಕದಿನ ಮತ್ತು 76 ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ. ಅವರು ಸಾಮಾಜಿಕ ಜಾಲತಾಣದಲ್ಲಿ ವಿದಾಯ ಪತ್ರ ಹಾಕಿದ್ದಾರೆ.

'ದೊಡ್ಡ ಕನಸುಗಳನ್ನು ಕಾಣುತ್ತಿದ್ದ ಸಣ್ಣ ಪಟ್ಟಣದ ಹುಡುಗಿ ನಾನು. ಕಡೂರಿನಲ್ಲಿ ಇದೆಲ್ಲವೂ ಆರಂಭವಾಯಿತು. ಮೊದಲ ಸಲ ಬ್ಯಾಟ್ ಕೈಗೆತ್ತಿಕೊಂಡಾಗ ಕ್ರಿಕೆಟ್ ಪಯಣ ಇಷ್ಟು ದೀರ್ಘ ಮತ್ತು ಸುಂದರವಾಗಿರಲಿದೆ ಎಂಬ ಊಹೆಯೂ ನನಗೆ ಇರಲಿಲ್ಲ. ಚಿಕ್ಕ ಗಲ್ಲಿಗಳಿಂದ ಆರಂಭವಾದ ವಿಶ್ವದ ದೊಡ್ಡ ಕ್ರೀಡಾಂಗಣಗಳಲ್ಲಿ ಆಡುವವರೆಗೆ ಬೆಳೆದೆ. ಭಾರತ ತಂಡದ ಜೆರ್ಸಿಯನ್ನು ಹೆಮ್ಮೆಯಿಂದ ಧರಿಸಿದೆ. ಕ್ರಿಕೆಟ್ ನನಗೆ ಬಹಳಷ್ಟನ್ನು ನೀಡಿದೆ. ಕೇವಲ ವೃತ್ತಿಯಾಗಿ ಅಷ್ಟೇ ಅಲ್ಲ, ಅಸ್ತಿತ್ವ ನೀಡಿದೆ. ಸವಾಲುಗಳೊಡನೆ ದಿಟ್ಟವಾಗಿ ಹೋರಾಡುವುದನ್ನು ಕಲಿಸಿತು. ಇವತ್ತು ನಾನು ಹೃದಯ ಪೂರ್ವಕವಾಗಿ ಈ ಅಧ್ಯಾಯವನ್ನು ಮುಗಿಸುತ್ತಿದ್ದೇನೆ. ಪಾಲಕರು ಮತ್ತು ಒಡಹುಟ್ಟಿದವರು, ವಿಶೇಷವಾಗಿ ಸಹೋದರಿಗೆ ನನ್ನ ಮೊದಲ ತಂಡ ವಾಗಿದ್ದಕ್ಕೆ ಧನ್ಯವಾದಗಳು. ನನ್ನ ಸತತ ಸ್ಫೂರ್ತಿ, ಶಕ್ತಿ ಯಾಗಿದ್ದವರು ಅವರೇ. ಕೋಚ್‌ಗಳು, ನಾಯಕರು ಮತ್ತು ಪ್ರೋತ್ಸಾಹಕರಿಗೆ, ಭಾರತ ತಂಡದಲ್ಲಿ ಆಡಲು ಅವಕಾಶ ಕೊಟ್ಟು ವಿಶ್ವಾಸವಿಟ್ಟ ಬಿಸಿಸಿಐ, ಕೆಎಸ್‌ಸಿಎ, ರೈಲ್ವೆಸ್ ಮತ್ತು ಕೆಐಓಸಿ ತಂಡಗಳಿಗೆ ಧನ್ಯವಾದಗಳು. ಸಹ ಆಟಗಾರ್ತಿಯರು, ಫಿಸಿಯೊ, ಟ್ರೇನರ್, ಆಯ್ಕೆಗಾರರ ಬೆಂಬಲ ಮರೆಯಲಾಗದು. ತೆರೆಮರೆಯ ಸಿಬ್ಬಂದಿ, ಫ್ಯಾನ್ಸ್ ಸೇರಿದಂತೆ ಎಲ್ಲರಿಗೂ ಕೃತಜ್ಞತೆಗಳು ಇಷ್ಟು ವರ್ಷ ನನ್ನೊಂದಿಗೆ ಇದ್ದುದಕ್ಕಾಗಿ ಮರೆಯಲಾಗದು' ಎಂದು ಬರೆದಿದ್ದಾರೆ.



2017ರಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ ಮಹಿಳಾ ತಂಡವು ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ಜಯಿಸಿದಾಗ ವೇದಾ ಕೃಷ್ಣಮೂರ್ತಿ ಅವರನ್ನು ತಾಯಿ ಚೆಲುವಾಂಬಾ ಅವರು ಅಭಿನಂದಿಸಿದ ರೀತಿ ಪ್ರಜಾವಾಣಿ ಸಂಗ್ರಹ ಚಿತ್ರ

'ಫಾರ್ಮ್ ಕೊರತೆ ಮತ್ತು ಗಾಯದ ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸಿ ಮತ್ತೆ ತಂಡಕ್ಕೆ ಮರಳುತ್ತಿದ್ದರು. ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ, ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ ಅವರೊಂದಿಗೆ ತಂಡದಲ್ಲಿ ಆಡಿದವರು ವೇದಾ. ಆಡುವ ಮತ್ತು ಕೌಟುಂಬಿಕ ಸವಾಲುಗಳನ್ನು ದಿಟ್ಟವಾಗಿ ಎದುರಿಸಿದವರು. ಕೋವಿಡ್ ಮಹಾಮಾರಿಗೆ ಅಮ್ಮ ಮತ್ತು ಸಹೋದರಿ ಬಲಿಯಾದ ಆಘಾತದಿಂದ ಚೇತರಿಸಿಕೊಂಡ ಮಲೆನಾಡಿನ ಕಲಿಹುಡುಗಿ. ದೇಶಿ ಕ್ರಿಕೆಟ್‌ನಲ್ಲಿ ಮತ್ತು ಪ್ರೀಮಿಯರ್ ಲೀಗ್‌ನಲ್ಲಿ ಆಡಿದರು. ಟಿ.ವಿಯಲ್ಲಿ ಕನ್ನಡ ವೀಕ್ಷಕ ವಿವರಣೆಗಾರರಾದರು.

'ನಿವೃತ್ತಿ ಘೋಷಿಸಲು ಸೂಕ್ತ ಸಮಯ ಎನಿಸಿತು. ವೀಕ್ಷಕ ವಿವರಣೆಯನ್ನೂ ಮಾಡುತ್ತಿದ್ದೇನೆ. ಮುಂಬರುವ ದಿನಗಳಲ್ಲಿ ಕೋಚಿಂಗ್‌ನತ್ತ ಗಮನಹರಿಸುವ ಗುರಿ ಇದೆ. ಅದರಲ್ಲೂ 2017ರ ವಿಶ್ವಕಪ್‌ನಲ್ಲಿ ಆಡಿದ್ದು ಅವಿಸ್ಮರಣೀಯ. ಆ ಟೂರ್ನಿಯಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ (ಅರ್ಧ ಶತಕ ಗಳಿಸಿದ್ದೆ) ಮತ್ತು ಫೈನಲ್ (ಅರ್ಧಶತಕ) ನನಗೆ ಅತ್ಯಂತ ಸ್ಮರಣೀಯ. ನನ್ನ ಅಚ್ಚುಮೆಚ್ಚು ಭಾರತದ ಮಹಿಳಾ ಕ್ರಿಕೆಟ್‌ಗೆ ವಿಶ್ವಮಟ್ಟದಲ್ಲಿ ಜನಪ್ರಿಯತೆ ಗಳಿಸಿಕೊಡುವ ಗುರಿ ಸಾಧ್ಯವಾಗುತ್ತದೆ. ಆದರಲ್ಲಿ ಏನಾದರೂ ಕೊಡುಗೆ ಸಲ್ಲಿಸುವ ಬಯಕೆ ಇದೆ. ಈಗಿನ ಪೀಳಿಗೆಯ ಆಟಗಾರ್ತಿಯರಿಗೆ ಉತ್ತಮ ಅವಕಾಶಗಳಿವೆ. ಕಠಿಣ ಪರಿಶ್ರಮದಿಂದ ಯಶಸ್ಸು ಸಾಧಿಸಬೇಕು' ಎಂದು 32 ವರ್ಷದ ವೇದಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ವೇದಾ ಅವರು ಏಕದಿನ ಮಾದರಿಯಲ್ಲಿ 48 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು 829 ರನ್ ಗಳಿಸಿದ್ದಾರೆ. ಟಿ20ಯಲ್ಲಿ 76 ಪಂದ್ಯಗಳಿಂದ 875 ರನ್ ಸಂಪಾದಿಸಿದ್ದಾರೆ.

ಹಾಕಿ: ಆಸ್ಟ್ರೇಲಿಯಾ ವಿರುದ್ಧ ನಾಲ್ಕು ಸೌಹಾರ್ದ ಪಂದ್ಯ

ನವದೆಹಲಿ (ಪಿಟಿಐ): ಮುಂಬರುವ ಏಷ್ಯಾಕಪ್‌ಗೆ ಸಿದ್ಧತೆಯ ಭಾಗವಾಗಿ ಭಾರತ ಪುರುಷರ ಹಾಕಿ ತಂಡವು ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದೆ. ಆಗಸ್ಟ್ 15ರಿಂದ 21ರವರೆಗೆ ಸೌಹಾರ್ದ ಸರಣಿಯಲ್ಲಿ ನಾಲ್ಕು ಪಂದ್ಯಗಳನ್ನು ಆಡಲಿದೆ.

ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಭಾರತ ತಂಡವು ತವರಿನ ಎರಡು ಸ್ಥಾನ ಮೇಲಿರುವ ಆಸ್ಟ್ರೇಲಿಯಾ ವಿರುದ್ಧ ಆಗಸ್ಟ್ 15, 16, 19 ಮತ್ತು 21ರಂದು ಸೆಣಸಲಿದೆ. ಎಲ್ಲಾ ನಾಲ್ಕು ಪಂದ್ಯಗಳು ಪರ್ತ್‌ನಲ್ಲಿ ನಡೆಯಲಿವೆ.

ಏಷ್ಯಾಕಪ್ ಟೂರ್ನಿಯು ಬಿಹಾರದ ರಾಜ್‌ಗಿರ್‌ನಲ್ಲಿ ಆಗಸ್ಟ್ 29ರಿಂದ ಸೆಪ್ಟೆಂಬರ್ 7ರ ವರೆಗೆ ನಡೆಯಲಿದೆ. ಈ ಟೂರ್ನಿಯ ವಿಜೇತ ತಂಡವು ಮುಂದಿನ ವರ್ಷದ ಎಫ್‌ಐಎಚ್ ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯಲಿದೆ.

ಈಚೆಗೆ ಯುರೋಪ್‌ನಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಎರಡು ಬಾರಿ ಮುಖಾಮುಖಿಯಾಗಿದ್ದವು. ಆಸ್ಟ್ರೇಲಿಯಾ ಎರಡೂ ಪಂದ್ಯವನ್ನು ತಲಾ 3-2 ಅಂತರದಿಂದ ಗೆದ್ದಿತ್ತು. ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತವು 3-2ರಿಂದ ಆಸ್ಟ್ರೇಲಿಯಾ ವಿರುದ್ಧ ಚಾರಿತ್ರಿಕ ಜಯ ಸಾಧಿಸಿತ್ತು.



ಪೂರ್ವಿಕಾ
ಆಕರ್ಷಕ
ಆಫರ್ಸ್ ಮೇಳ
ಪೂರ್ವಿಕಾ ಮೊಬೈಲ್ಸ್, ಟಿವಿ, ಲ್ಯಾಪ್‌ಟಾಪ್ ಮತ್ತು ಗ್ಯಾಜೆಟ್‌ಗಳನ್ನು ಖರೀದಿಸಲು ವಿಶ್ವಾಸವಾದ ಸ್ಥಳ.
PARTICIPATE IN FEEDBACK CONTEST & GET A CHANCE TO WIN
₹1 Crore worth Gifts
Upto ₹12,000 Exchange Bonus
Daily WIN Upto ₹10,000 VOUCHERS
FREE One Time Screen Replacement
Upto ₹12,000* EXCHANGE BONUS
Upto ₹15,000* INSTANT CASHBACK
ONE RUPEE* DOWN PAYMENT
24 MONTH* NO COST EMI
STUDENT OFFER Upto ₹17,000* DISCOUNT on MacBook
10* Upto % INSTANT DISCOUNT
HDFC BANK We understand your world
SAMSUNG Galaxy Z Fold7 | Z Flip7 Galaxy AI
Available now
Get benefits worth ₹ 12000*
Buy 256GB. Get 512GB.
24 Month No Cost EMI Available
SAMSUNG Galaxy S25 5G
Upto ₹11,000* Upgrade Bonus or 24Month NO COST EMI
EMI ₹3,375
SAMSUNG Galaxy A56 5G
Upto ₹4,000 INSTANT CASHBACK or 24 Months No cost EMI
SAMSUNG Galaxy A36 5G
Upto ₹3,500* Upgrade program
Galaxy Buds Core Upto ₹1,000 OFF Worth ₹4,999*
iPhone 15 (128 GB) MRP ₹69,900 Effective Price ₹34,990* Per Day EMI ₹89*
iPhone 16 (128 GB) MRP ₹79,900 Effective Price ₹43,490* Per Day EMI ₹102*
iPhone 16 Pro (128 GB) MRP ₹1,19,900 Effective Price ₹82,900* Per Day EMI ₹157*
Upto ₹4,000* Instant Cashback on Credit Cards of ICICI Bank SBI kotak
*Effective Price after Store Discount, Exchange Value Exchange Bonus & Bank Cashback
realme
realme 15 Pro | 15
Live Real in Every Shot
Pre-Book now
Get Free Realme Buds T01 Worth ₹2,999
vivo X200 FE 5G
Upto 10% Instant Cashback
Pay ₹1,499 Get TWS
5G Lowest Price
TECNO Spark 30C 5G 4+128 GB ₹12,999 ₹7,999
Upto 90% off on Neckband Worth ₹1,999
realme C71
EMI ₹855 90% OFF on Sunglasses Worth ₹6,999
oppo A5 5G 6+128GB ₹15,499 Effective Price ₹13,999 *Including Bank Cashback
90% OFF on Calling SmartWatch Worth ₹15,999
Redmi 14C 5G
EMI ₹1,055 Upto 80% off on Personl Fan Worth ₹1,999
Redmi Note 14 5G 6+128GB ₹16,999 Effective Price ₹15,999 *Including Bank Cashback
Upto 80% OFF on TWS Worth ₹4,999
oppo Reno 14 Series 5G
Upto ₹4,500* Instant Cashback
Upto 75% Discount on Soundbar Worth ₹13,999
oppo F29 Pro 5G 8+128GB ₹27,999 Effective Price ₹23,399 *Including Bank Cashback
Upto 90% OFF on Calling SmartWatch Worth ₹16,999
realme 14x 5G 6+128GB ₹14,999 Effective Price ₹13,999 *Including Bank Cashback
Upto 80% OFF on TWS Worth ₹4,999
vivo Y400 Pro 5G
Upto ₹2,500 INSTANT CASHBACK OR ZERO DOWN* PAYMENT
ONEPLUS Nord5 5G
Upto ₹2,000 INSTANT CASHBACK or 11 Months No cost EMI
Google Pixel 9A 5G
₹49,999 Effective Price ₹46,999 *Including Bank Cashback
or 24 Month NO COST EMI
NOTHING (R) Phone 3 5G
Upto ₹15,000 Instant Cashback
Just Pay ₹1 & Get 65W adapter Worth ₹3,999
LAPTOP Starts @ ₹25,990
BUY LAPTOP & GET FREE Laptop Bag & Keyboard Mouse Combo Worth ₹3,499
₹10,000 CASHBACK *On leading Banks
ASUS SAMSUNG Lenovo DELL hp
All-in-One PC
Lenovo hp
Starts @ ₹42,990
FREE SanDisk OTG Pendrive worth ₹3,000
Upto ₹5,000 CASHBACK on Leading Banks
GAMING LAPTOP
BUY GAMING LAPTOP & GET
JUST PAY ₹999 GET Worth ₹7,999
FREE ZEBRONICS Worth ₹1,899
xiaomi LED Smart TV A Series 2024 32" inch
₹14,499 Effective Price ₹11,999
EMI ₹1,000
xiaomi LED Smart TV X Series 2025 4K Ultra HD-43"
₹28,490 Effective Price ₹24,999 *Including Bank Cashback
EMI ₹2,250
Buy SmartPhone & get
conekt Sound bar ₹13,999 ₹3,499* Discount 75%
FIRE-BOLTT Calling Smartwatch ₹16,999 ₹1,399* Discount 92%
boAt TRUE WIRELESS ₹4,999 ₹999* Discount 80%
conekt SunGlasses ₹6,999 ₹499* Discount 93%
YARR Personal Fan ₹1,999 ₹399* Discount 80%
RAPIFOLA Neckband ₹1,999 ₹199* Discount 90%
ONEASSIST
SAVE Upto ₹3,500
With 6 Month FREE Extended Warranty
With 1 Year Accidental & Liquid Damage Protection Plan for Android
T&C apply. Offer applicable for selected brand and models
SCAN QR CODE
BAJAJ FINSERV IDFC FIRST Bank HDB FINANCIAL SERVICES TVS CREDIT
ICICI Bank kotak Pine Labs
*EMI OPTIONS AVAILABLE ON SELECTED SHOWROOM ONLY
Customer Helpline : 99406 88855
Shop online @ www.poorvika.com
POORVIKA

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage, VISHWESHRAIAH LAYOUT, BDA SITES 50X80, 40X60, 30X40, 20X30 Buying/ Selling, Immediate Settlement. 9845675290 9845446826.

"BDA SITE 30X40 Banashankari 6th Stage 9th Block, South Facing, Full White, Owner - 9845088449/ 9845249799"

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BANASHANKARI 5TH Stage Mantri Alphyne Apartment Backside 30x40 N/F 40ft Road Contact Owner: 9606922132/ 8618385836

BTM Layout

SITE FOR Sale 30x40,40x60 East and North Facing and 40x60 Commercial Building For sale at BTM 2nd Stage 9945377119/9844099557

Basavanagudi

SALE PRIME PROPERTY 40X60 NEAR Doddaganapathi Temple, Basavanagudi, Dondusa Layout, Mount Joy Road, Sunkenahalli. 8197547389/ 9945514587

J P Nagar

JPNAGAR 2ND Phase 40x60, Residencial Price 26500/-Near JPnagar Club 30x40,S/W ,Corner 3.80cr Contact :9845600007

50X80 RESIDENTIAL Site 60 Feet Road & 45X80, Industrial Site For Sale at JP Nagar 9th phase: 9945377119/ 9844099557

Kanakapura Road

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

"BDA COMMERCIAL Site for sale 50x80 Kempegowda Layout 300 feet Road very near to Mysore Road. Contact: 7892224597"

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Tumkur Road

30×45 FEET, W/F, at 40 Feet Road @ Rs. 15,000.00 per Sq.Ft at Ravi Kirloskar LayOut, Adj to Prestige Jindal City. Only genuine buyers. No brokers. Contact:- 9900177430.

Vishweshwariah Layout

"50X80 EAST FACING 60 FEET ROAD NEAR PROPOSED BDA COMPLEX 6TH BLOCK VISHWESHWARAIH LAYOUT- 9845143579"

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 7411994069, 9742681666

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

AVAILABLE BDA Site Vishveshwariah Layout 3rd Block 30X40 West Facing Good Location Genuine Buyers: 7338688111

"VIDHYNIKETHAN SCHOOL near Sale 40x60 East BDA Khatha 30x40 Vishveshwaraiah Genuine Buyers Contact. 9448733456/ 7259675150"

DIRECT OWNER 30x40 East Facing Vishweshwaraiah Layout 6th Block Near BDA Complex Contact: 9980733501/ 9900131323

Doddaballapur Road

DEVANAHALI TO Doddabalapura Main Road E-Katha Bank Loan Property 3100 Sqft Sale @5250/- Per Sqft: 9342552428

Hanumanthnagar

SRINIVASNAGAR, 30X50, East Facing Site 40' Road, Prime Location 19,000/- Sft. E-Katha, Clear Document -9845000299

Kengeri

'DIRECT OWNER' 30x50 BDA N/F KENGERI UPANAGAR 30x40 BBMP E/F BANDEMATA, Clear Tittle. 8496030007/ 8310885235

Magadi Road

50X60 NORTH WEST CORNER COMMERCIAL SITE SALE BEL LAYOUT, BDA 1st STAGE, NEAR MAGADI ROAD. 8105688602.

Mysore

KHB ALLOTTED 30x40 Site at Kenchalgudu, Mysore City 46 Lakhs Clear Documents Owner Contact: 9606866368

House

K R Puram

4BR, 3.5 bathrooms independent house on corner site along with adjoining vacant site in gated community for sale on Hoodi- Ayyappanagar Main Road. No brokers. Call 9686781614/ 9448389511.

Vijayanagar

OLD-HOUSE FOR Sale Site W/F, Door N/F,1125sqft 40feet Road, Good Location, Chandra Layout, Near Water Tank, Genuine buyers 2.50Cr. Call: 9880311959

Farm House/ Land/ Resorts

Devanahalli

SALE 9250 sqft industrial DC converted land Rate 3000 sq.ft Davenahalli cargo road near aerospace industrial land 6362964507, 9972417196

Out-Station

THALLI 7 ACRES Farm Land For Sale, with 250 Mango Trees, Clear Titles, Contact: 6364751676

Magadi Road

MAGADI MAIN Road Gangapanahalli Fully Commercial 10000 Sqft Price. 2000/- Per Sqft Land Sale: 9342552428

General

SOUTH GOA plot of 1225 Square meters at 20500 if interested message 9963998895

Flat

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Agricultural Land Converted

Kanakapura Road

KANAKAPURA ROAD Gulakmale 39 Gunta Converted, & BMRD Approved Near By Cadabam's & Peripheral Ring Road 2000/- Per Sqft: 9342552428

Commercial Land

Kanakapura Road

KAGLIPURA AGRICULTURAL 6Gunta Land Sale 3200/- PSft, Opposite Napa Valley, Near Art of Living 100mtr From Kanakapur Main Road: 9342552428

Commerical

Rajajinagar

SALE COMMERCIAL 160x80 East Facing With old Building Rental Income 100ft Rd Rajajinagar Good Location Call:9611844667 8123515830

Kempegowda Layout

KEMPEGOWDA LAYOUT 1st Block, I Sector, Site No 1626, BDA Auctioned Semi-Commercial 40x39 N/W Corner. Owner- 9164644113

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

General

REQUIRED SITES or with house 40x60 50x80 80x120, 100x100 Sadashivnagra RMV 2nd Stage Judicial Layout Arkavathi Layout Manyatha. Contact. 9844092859

Multiple Locations

WANTED BDA SITES Anjanapura- Arkavathi Banashankari 6th.Stage, Vishveswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

REQUIRED BDA SITES @ Nagarbhavi, Vishweshwaraiya layout, Kempegowda layout. For Immediate Purchase any measurement. 9513955756, 9513119696.

Flat

Wilson Garden

REQUIRED 2 BHK flat old/new with lift & parking for sale within 5 km of NIMHANS, Contact Sangeetha 9342287634

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

"WE-FIX" LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

RENTAL PROPERTIES

Accommodation Available

Commercial

FOR LEASE: Begumpet Main Road. Hyderabad, Showroom Space15,000 SFT. Grade A Building, Agents Welcome, Call Ph: 9347576914.

"COMMERCIAL- SPACE FOR-RENT Gnanabharathi Layout Opp.Amma`Ashram 60'ft Road 4`floors each`3200`Sqft` +Car parking with`All Amenities. 9480180100/ 9740844500"

PUBLIC NOTICE

PUBLIC NOTICE
Notice is hereby given to the public that the following documents related to a property at D1402, Shriram Solitaire, Veerasagara Main Rd, Village, Yelahanka New Town, Bengaluru, Karnataka-560064 have been lost: Agreement for Sale and Agreement for Construction, executed in favor of Mr. Srinivas Divakarla executed on 01-10-2020. If anyone finds these documents, kindly return them to Mr. Srinivas Divakarla, EW-2, 5th Line, Nilanchal Nagar, Berhampur, Odisha 760010. **Contact: 9437094331**

BUSINESS

Business Offers

Business For Sale

CLUB LICENSES For Sale CL2, CL9, Premium Resto Pubs and Bars Sale or Rent: 9481801053

Finance

MSME LOANS Available for any startup companies,any existing companies NOTE:Also one approved loan available contact-7204995189

PROPERTY CORNER
ಕ್ಲಾಸಿಫೈಡ್ಸ್

BUILDING FOR SALE
Location - Aditya Homes-2, Yamare, Sarjapura, Bengaluru. Adjoining to Prestige city and upcoming FORUM Mall and Metro Station.
BMRDA APPROVED
Plot area - 1500 sft, Facing - EAST, Dimensions - 30' X 50', Super Builtup area- 5000 sft, G Floor:-1 studio room and Parking 3 Cars + Bikes Sump Tank - 20000 L Lift provided
1st Floor and 2nd :- Luxury Duplex House with 4 Bed Room
Total Cost :- ₹2.75 cr
Contact no. 9206206915



ತಾರಕನ್
ಕಾರ್ಮೆಲ್ ಮಂತ್ರ
ಇ–ಖಾತಾ ಪ್ಲಾಟ್‌ಗಳು
STRR
30 ಲಕ್ಷದಿಂದ ಪ್ರಾರಂಭ
90% ಬ್ಯಾಂಕ್ ಲೋನ್
ಮಾಲೂರು
9035 589 596

LAND FOR SALE
4.5 Acres of Land in Sulthan Bathery, Wayanad, Kerala, suitable for Resorts, IT Park, Residential, or Commercial Development, Strategically located along the highway. Clear legal titles and fully suitable for construction purpose.
Contact: 8590922639

Fadal Enclave
MUDA Approved Sites for Sale on KRS Road, close to Vikrant Tyres.
FULLY DEVELOPED LAYOUT
Book before 31st July to avail FREE REGISTERATION Offer
Contact : 96069 07153

JOB OPPORTUNITIES

Teachers/ Professors

REQUIRED HIGH school and middle school Teacher for English, Social and Science teacher Whatsapp 9901501185 email kenmoreschool@gmail.com

PERSONAL

Change of Name

I JAGAN, S/o: PANDHARI, R/o: 6/15, Kunchawaram, Chincholi Taluka, Gulbarga District, Pincode: 585305, Karnataka State. Do hereby affirm and embraced ISLAM and renounced Hinduism with effect from 20th day of January 2025 and changed my name to ABDUL RAHMAN, S/o: PANDHARI forever.

I, RANJITA JAIN. R/a #263/103, Albert Victor Road, 1st main road, Chamrajpet, Bangalore -560018 Have Changed My Name From RANJITA JAIN To RANJEETA RATHORE vide Affidavit Dated /25/07/2025 before Notary Mohammed Hussain .K Bangalore

I, RAJESH SHANITLAL Residing at No.1/1, 3rd Floor, Mahaveer Apartments, Opp. Ganesha Temple, Shanthinagara, Wilson Garden, Bengaluru-560027. Have Changed my Name as RAJESH KUMAR vide affidavit Dated: 24.07.2025 before Notary K.V.Mani, Bengaluru.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331